ಸಂವಾದ

ಮಾರ್ಚ್ ೨೦೦
ರೂ. ೨೦



ಧರ್ಮದ
ಹೆಣ
ಹೊತ್ತ
ಸ್ವಾಮಿಗಳು



ಪ್ರೊಫೆಸರ್
ಸಂದರ್ಶನ

ಜಗತ್ತು ಮಾರಾಟಕ್ಕಿಲ್ಲ!

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೫
ಮಾರ್ಚ್ ೨೦೦೪

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ
ಕೆ.ಪಿ. ದೊಡ್ಡಿ ಶಿವರಾಂ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು – ೫೬೦ ೦೯೧
ದೂರವಾಣಿ: ೨೩೨೮೭೯೪೩ / ೨೩೨೮೧೬೬೭

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
PHONE : 23287943, 23281667

EDITOR :
INDUDHARA HONNAPURA

ಒಳಪುಟಗಳಲ್ಲಿ...



❑ ಪತ್ರಗಳು ೩
❑ ಮೇರಾ ಭಾರತ್ ಮಹಾನ್ ೪
❑ ಅಂತರಂಗ ೫
❑ ದಲಿತತ್ವ ಮೂಲಭೂತವಾದ ಅಲ್ಲ ೬
○ ಎಸ್.ಎಸ್. ಚಂದ್ರಣ್ಣ
❑ ಜನಕಲಾ ಸರದಾರನಿಗೆ ಸಂದ ಗೌರವ ೮
○ ವೈ. ಮರಿಸ್ವಾಮಿ

❑ ಧರ್ಮದ ಹೆಣ ಹೊತ್ತ ಜಗದ್ಗುರುಗಳು ೧೦
○ ದೇವನೂರ ಮಹಾದೇವ
❑ ಜಗತ್ತು ಮಾರಾಟಕ್ಕಲ್ಲ ೧೨
○ ಡಿ.ಡೊಮಿನಿಕ್
❑ ಪ್ರೊ॥ ನಂಜುಂಡಸ್ವಾಮಿ ಸಂದರ್ಶನ ೧೬
○ ಪ್ರೊ॥ ರಹಮತ್ ತರೀಕೆರೆ
❑ ಪ್ರಧಾನಿಗೊಂದು ಪತ್ರ ೨೨
○ ಚಂದ್ರಭಾನ್ ಪ್ರಸಾದ್
❑ ಝುನ್ ಝುಲಕ್ ೨೫
○ ಕೆ.ವಿ. ಸುಬ್ಬಣ್ಣ

❑ ಮತಾಂತರ: ಕೆಲವು ವಾಸ್ತವಗಳು ೨೬
○ ಅರಫಾ ಮಂಚಿ
❑ ಮಹಿಳೆ ಮತ್ತು ಸಾರ್ವಜನಿಕ ಜೀವನ ೨೮
○ ಕೆ. ವಿದ್ಯಾ
❑ ಹೊಸ ಪುಸ್ತಕ ೩೧
❑ ದಲಿತರ ಇತಿಹಾಸ, ಸಂಸ್ಕೃತಿ, ಪರಂಪರೆ ೩೨
○ ಎಸ್.ಎಸ್. ಹಿರೇಮಠ
❑ ಶಂಕರಾಚಾರ್ಯ, ಮತಾಂತರ ಇತ್ಯಾದಿ ೩೬
○ ಸ್ವಾಮಿ ವಿವೇಕಾನಂದ
❑ ಕೊರಗರ ಮನವಿ ಪತ್ರ ೩೮
❑ ಬೋಧಿವೃಕ್ಷ:
ವಿವೇಕ, ಅನುಕಂಪ, ಪ್ರಜ್ಞೆ ೪೨
○ ವೆನೆರಬಲ್ ಎಸ್. ಧಮ್ಮಿಕ



ಕವನಗಳು :

❑ ಅಕ್ಕ ಅಲ್ಲ ೧೧
❑ ಅಪ್ಪಾ ಈ ಕಣ್ಣುಗಳ ೨೧

ಮುಖಪುಟ ಕಲೆ: ಜಾನ್ ದೇವರಾಜ್ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಆವರಿಸಿಕೊಳ್ಳುವ ಧ್ಯಾನ, ಬುದ್ಧ, ಝೆನ್

ಮಾನ್ಯರೇ,

'ಸಂವಾದ'ದ ಜನವರಿ ವಾರ್ಷಿಕ ಸಂಚಿಕೆ ಹಾಗೂ ಫೆಬ್ರವರಿ ಸಂಚಿಕೆ ಎರಡೂ ಬಂದು ತಲುಪಿವೆ. ಆಶ್ಚರ್ಯವೆಂದರೆ ಯಾರು ನನಗೆ ಕಳಿಸಿದ್ದು ಎಂಬುದೇ ನನಗೆ ಗೊತ್ತಿಲ್ಲ! ನೀವೆ ಕಳಿಸಿದ್ದೋ ಅಥವಾ ಮತ್ತಿನ್ನಾರೋ, ಅಂತೂ ನನಗೆ ಬಹಳ ದೊಡ್ಡ ಉಪಕಾರವಾಗಿದೆ; ಅತ್ಯಂತ ಒಳ್ಳೆಯ ಪತ್ರಿಕೆಯೊಂದರ ಪರಿಚಯ ನನಗಾಗಿದೆ. ಎರಡೂ ಸಂಚಿಕೆಗಳಲ್ಲಿ ಚರ್ಚಿತವಾಗಿರುವ ವಿಷಯಗಳು ನನಗೆ ಬಹಳ ಮಹತ್ವವಾದವು, ಆಪ್ತವಾದವು. ಆದುದರಿಂದ ಕಳಿಸಿದವರಿಗೆ ನಾನು ಉಪಕೃತ.

ಪತ್ರಾಗಾರ

ಧ್ಯಾನ, ಬುದ್ಧ, ಝೆನ್ ಇವು ಇತ್ತೀಚಿನ ದಿನಗಳಲ್ಲಿ ನನ್ನನ್ನು ಸಂಪೂರ್ಣವಾಗಿ ಆವರಿಸಿಕೊಂಡಿರುವ ವಿಚಾರಗಳು. ಇದಕ್ಕೆ ಸಂಬಂಧಿಸಿದಂತೆ 'ಸಂವಾದ'ದಲ್ಲಿ, 'ಸ್ಫೂರ್ತಿಧಾಮ'ದಲ್ಲಿ ನನಗೆ ಇನ್ನೂ ಹೆಚ್ಚು ಸಾಮಗ್ರಿ ಹಾಗೂ ಸ್ನೇಹಿತರು ದೊರಕುವ ಸಾಧ್ಯತೆಗಳು ಕಂಡಿರುವುದರಿಂದ ನನಗೆ ಹೆಚ್ಚು ಸಂತೋಷವಾಗಿದೆ.

ಒಂದು ಸಣ್ಣ ಸಲಹೆ-ಭಿನ್ನಹ. ಸಂಚಿಕೆಯ ಲೇಖನದ ಕೊನೆಯಲ್ಲಿ ಲೇಖಕರ ಪೂರ್ಣ ವಿಳಾಸ ಪ್ರಕಟಿಸಿದಲ್ಲಿ ಓದುಗರು ಅಗತ್ಯಬಿದ್ದಲ್ಲಿ ಅವರೊಂದಿಗೆ ಚರ್ಚಿಸಲು ಅನುಕೂಲವಾದೀತು.

ಡಾ. ಸಂಜೀವ ಕುಲಕರ್ಣಿ, ಧಾರವಾಡ

ದಲಿತರ ಮರೆಯಲಾಗದ ಮೈಲಿಗಲ್ಲು

ಮಾನ್ಯರೆ,

ನಾಡಿನಾದ್ಯಾಂತ ವಿಚಾರ ಶೂನ್ಯತೆಯು ದಲಿತರಲ್ಲಿ ಆವರಿಸಿಕೊಳ್ಳುತ್ತಿರುವ ಇಂದು, ದಲಿತರಿಗೆ ವೈಚಾರಿಕ ನೆಲೆಯೊಂದನ್ನು ಒದಗಿ ುವುದರ ಮೂಲಕ ದಲಿತರಲ್ಲಿ ಅರಿವಿನ ಆಂದೋಲನ ಪ್ರಜ್ವಲಿಸುವಲ್ಲಿ 'ಸಂವಾದ' ಒಂದು ವಿಚಾರ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ 'ಸಂವಾದ' ತನ್ನ ಜನ ಸಮುದಾಯಕ್ಕೆ ಮರೆಯಲಾಗದ ಮೈಲುಗಲ್ಲಾಗಿ ನಿಲ್ಲುವುದರಲ್ಲಿ ಯಾವ ಸಂಶಯವೂ ಇಲ್ಲ. ಇದು ನಿರಂತರವಾಗಿ ಹೀಗೆ ಮುಂದುವರಿಯಲಿ ಎಂದು 'ಸಂವಾದ' ಬಳಗದ ಅಧಮ್ಯ ಚೈತನ್ಯಕ್ಕಾಗಿ ಹಾರೈಸುತ್ತೇನೆ.

ಮರಿಯಪ್ಪ ನಟೇಕಾರ್, ಮುಂಬಯಿ

ಕಾಣಸಿಕ್ಕ ಅಪರೂಪದ ವಿಚಾರ ಮತ್ತು ವ್ಯಕ್ತಿಗಳು

ಮಾನ್ಯರೆ,

'ಸಂವಾದ' ಮಾಸಪತ್ರಿಕೆಗಳನ್ನು ಓದಿ ಆಕರ್ಷಿತನಾಗಿದ್ದೇನೆ. 'ಸಂವಾದ' ೮೦ರ ದಶಕದ 'ಪಂಚಮ', 'ಮಾನವ'ಗಳ ಪ್ರಪಂಚಕ್ಕೆ ನನ್ನನ್ನು ಕರೆದೊಯ್ಯಿತು. ಕಳೆದು ಹೋಗಿದ್ದ ವ್ಯಕ್ತಿಗಳು, ವಿಚಾರಗಳು 'ಸಂವಾದ'ದಲ್ಲಿ ಕಾಣಸಿಕ್ಕವು. ಇದಕ್ಕಾಗಿ ಇದರ ಪ್ರಕಾಶಕರಿಗೆ ಹಾಗೂ ವಿಶೇಷವಾಗಿ ಗೆಳೆಯ ಇಂದೂಧರರಿಗೆ ಕೃತಜ್ಞನಾಗಿದ್ದೇನೆ. ಮೈಸೂರಿನಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ 'ಸಂವಾದ'ಕ್ಕೆ ಚಂದಾ ಕೊಟ್ಟಿದ್ದೇನೆ. ಇನ್ನು ಮುಂದೆ ಗೌರವ ಪ್ರತಿ ಕಳುಹಿಸುವುದು ಬೇಡ. ಗೌರವ ಪ್ರತಿ ಕಳಿಸಿದ್ದಕ್ಕೆ ಕೃತಜ್ಞತೆಗಳು.

ಅಪ್ಪಾಜಿಗೌಡ, ಮೈಸೂರು

ಮೆಚ್ಚಲೇಬೇಕಾದ ವಿರೋಧಿ ಗುಣ

ಮಾನ್ಯರೇ,

ಜಾತಿ, ಮತ ಮತ್ತು ಧರ್ಮಗಳ ಅಸಮಾನತೆ ಮತ್ತು ಶೋಷಣೆಗಳ ಆಧಾರದ ಮೇಲೆ ಕಟ್ಟಿದ ಸಮಾಜದಲ್ಲಿ ಕ್ರಾಂತಿ ತರುವಲ್ಲಿ 'ಸಂವಾದ' ಮಹತ್ತರ ಪಾತ್ರ ವಹಿಸುತ್ತಿದೆ. ಪತ್ರಿಕೆಯ ಮಟ್ಟ ಇನ್ನೂ ಅಕಾಡೆಮಿಕ್ ಆಗಬೇಕು. ವೈಜ್ಞಾನಿಕ ವಿಶ್ಲೇಷಣೆ ಹೆಚ್ಚಾಗಬೇಕು.ಸಾಂಪ್ರದಾಯಿಕ, ಪಟ್ಟಭದ್ರ ಹಿತಾಸಕ್ತಿಗಳನ್ನು ಹಿಂಜರಿಯದೇ ವಿರೋಧಿಸುವ ನಿಮ್ಮ ಧೈರ್ಯವನ್ನು ಮೆಚ್ಚುತ್ತೇನೆ.

ಅಂಬಾರಾವ ಉಪಳಾಂವಕರ, ಗುಲ್ಬರ್ಗಾ

ಬುದ್ಧ ಮಾರ್ಗಕ್ಕೆ ಪ್ರೇರಣೆ

ಪ್ರಿಯ ಸಂಪಾದಕರೇ

ತಾವು ಕಳುಹಿಸಿದ 'ಸಂವಾದ' ಬಂದು ತಲುಪಿದೆ. ತುಂಬಾ ಧನ್ಯವಾದಗಳು. ಒಡೆದು ಹೋಗಿರುವ ದಲಿತರ ಮನಸ್ಸುಗಳನ್ನು ಒಂದುಗೂಡಿಸುವ ತಮ್ಮ ಪ್ರಯತ್ನ ಸ್ವಾಗತಾರ್ಹ. ದಲಿತರ ಮನಸ್ಸನ್ನು ಸೆಳೆದು ದಲಿತರಲ್ಲಿ ಪರಿವರ್ತನೆಯನ್ನು ಬೀರಿ ಬೌದ್ಧರನ್ನಾಗಿ ಮಾಡುತ್ತಿದೆ. ನಮ್ಮ 'ಸಂವಾದ' ಪತ್ರಿಕೆ ಯಶಸ್ವಿಯಾಗಲೆಂದು ಆಶಿಸುತ್ತೇನೆ.

ಶರಣಬಸು ಸಿರೂರಕರ್, ಗುಲ್ಬರ್ಗಾ

ವಿಸ್ತಾರಗೊಂಡ ಚಿಂತನಾ ಕ್ಷೇತ್ರ

ಆತ್ಮೀಯರೆ, ವಂದನೆಗಳು

'ಸಂವಾದ' ವಾರ್ಷಿಕ ವಿಶೇಷಾಂಕ ತುಂಬ ಉತ್ತಮವಾಗಿ ತಂದಿದ್ದೀರಿ. ಕನ್ನಡ ಚಿಂತನಾ ಕ್ಷೇತ್ರದಲ್ಲಿ ಸಾಮಾಜಿಕ ಸಂಘಟನೆ ಮತ್ತು ಹೋರಾಟದ ಕ್ಷೇತ್ರದಲ್ಲಿ ಇದ್ದಿದ್ದ ಒಂದು ದೊಡ್ಡ ಕೊರತೆಯನ್ನು ತಾವು 'ಸಂವಾದ'ದ ಮೂಲಕ ತುಂಬುತ್ತಿದ್ದೀರೆಂದು ಭಾವಿಸುತ್ತೇನೆ.

ಎಸ್.ಎಸ್. ಹಿರೇಮಠ, ಹರಪನಹಳ್ಳಿ

ಸಮಸಮಾಜ ನಿರ್ಮಾಣದ ಮಹಾಪ್ರಯತ್ನ

ಪ್ರಿಯ ಬಂಧು ಇಂದೂಧರ ಹೊನ್ನಾಪುರ ಅವರಿಗೆ ವಂದನೆಗಳು

ಬಹಳ ದೊಡ್ಡ ವೈಚಾರಿಕ ಆಸ್ಫೋಟಕ್ಕೆ ಕಾರಣವಾಗಿ ಕರ್ನಾಟಕ ಚರಿತ್ರೆಯಲ್ಲಿ ದಾಖಲಾಗಲಿರುವ 'ಸಂವಾದ' ಪತ್ರಿಕೆಯು ಎರಡನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂತಸದ ಸಂಗತಿ. ಜೀವವಿರೋಧೀ ಸ್ಥಾಪಿತ ರಚನೆಗಳನ್ನು ಒಡೆದು ಜೀವಪರ ವೈಚಾರಿಕ ನೆಲೆಗಳನ್ನು ನೆಲೆಗೊಳಿಸಿ ತಾವು 'ಸಂವಾದ'ದ ಮೂಲಕ ಕಟ್ಟಲೆತ್ನಿಸುವ ಸಮಸಮಾಜ ನಿರ್ಮಾಣದ ನುಹಾಪ್ರಯತ್ನದ ಹಾದಿಯಲ್ಲಿ ಕಲ್ಲು ಮುಳ್ಳುಗಳನ್ನು ತೆಗೆದು ದಾರಿ ಮಾಡಿಕೊಟ್ಟು ನೀರು ನೆರಳು ಒದಗಿಸುವ ಅಪಾರ ಹಿತೈಷಿಗಳು ನಿಮ್ಮ ಬೆನ್ನಿಗಿದ್ದಾರೆ. ನಿಮ್ಮೊಂದಿಗೆ ನಾವು ಯಾವೊತ್ತಿಗೂ ಇರುತ್ತೇವೆ.

'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೆ ಕುಗ್ಗದೆಯೆ ನುಗ್ಗಿ ನಡೆ ಮುಂದೆ'. ಎಂಬ ಕವಿವಾಣಿ ಈಗ ಸಾಕಲ್ಲವೆ?

ಪ್ರೀತಿಯಿಂದ,

ವಡ್ಡಗೆರೆ ನಾಗರಾಜಯ್ಯ, ಕುಣಿಗಲ್

ಸಂವಾದ ಚಂದಾ ವಿವರ

ಬಿಡಿ ಪ್ರತಿ ರೂ. ೨೦/-	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
೧.ವಿದ್ಯಾರ್ಥಿಗಳು/ ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
೨.ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
೩.ಸಂಘ-ಸಂಸ್ಥೆಗಳು, ಉದ್ಯಮಿಗಳಿಗೆ	ರೂ. ೨೪೦/-	ರೂ. ೬೦೦/-	ರೂ. ೧೦೦೦/-
೪.ವಿಶೇಷ ಹಿತೈಷಿ ಚಂದಾದಾರರಿಗೆ	ರೂ. ೫೦೦/-	ರೂ. ೧೫೦೦/-	ರೂ. ೨೫೦೦/-

ಅಜೀವ ಚಂದಾ ರೂ. ೫,೦೦೦/-, ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು.

ಮಾಂಸದ ಅಡುಗೆ ಮಾಡಿದ್ದಕ್ಕಾಗಿ ದಾಳಿ, ಹಲ್ಲೆ

ಮೈಸೂರು, ಫೆ.೧೯- ನಗರದ ಕುಂಬಾರ ಕೊಪ್ಪಲಿನ ಮನೆಯೊಂದರ ಮೇಲೆ ಭಜರಂಗದಳದ ಕಾರ್ಯಕರ್ತರು ದಾಳಿ ನಡೆಸಿ ಇನ್ನೊಂದು ಕೋಮಿನವರ ಮೇಲೆ ಹಲ್ಲೆ ನಡೆಸಿರುವ ಘಟನೆ ಶಿವರಾತ್ರಿಯ ದಿನ ಜರುಗಿದೆ.

ಕ್ರೈಸ್ತ ಧರ್ಮಕ್ಕೆ ಪರಿವರ್ತನೆಗೊಂಡ ರಾಜಮ್ಮ ಮತ್ತು ಕುಟುಂಬದ ಸದಸ್ಯರು ಹಲ್ಲೆಗೊಳಗಾದವರಾಗಿದ್ದು ಆರೋಪಿಗಳಿಗಾಗಿ ತೀವ್ರ ಶೋಧನೆ ನಡೆದಿದೆ.

ಶಿವರಾತ್ರಿ ಹಬ್ಬವಾಗಿದ್ದರೂ 'ಆ್ಯಶ್ ವೆಡ್ ನೆಸ್ ಡೇ' ಆಚರಿಸುವ ನೆಪದಲ್ಲಿ ಮಾಂಸಹಾರಿ ಆಹಾರ ತಯಾರಿಸಿ ಹಿಂದೂ ಧರ್ಮಿಯರ ಭಾವನೆ ಕೆಣಕಲಾಗಿದೆ ಎಂದು ಆರೋಪಿಸಿ ಈ ಕೃತ್ಯವೆಸಗಲಾಗಿದೆ ಎಂದು ಹೇಳಲಾಗಿದೆ.

ಹಲ್ಲೆಗೆ ಒಳಗಾದ ರಾಜಮ್ಮ ಆದಾಯ ತೆರಿಗೆ ಇಲಾಖೆ ನೌಕರರಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ಸಮೀಪದ ಚರ್ಚ್‌ಗೆ ಹೋಗುತ್ತಿದ್ದ ಅವರು, ೩೦ ದಿನಗಳಿಂದ ಉಪವಾಸವಿದ್ದರು. ನಿನ್ನೆ ಚರ್ಚ್‌ನಲ್ಲಿ ಪ್ರಾರ್ಥನೆ ಮುಗಿಸಿ ಮನೆಗೆ ಹಿಂತಿರುಗಿ ಆ್ಯಶ್ ವೆಡ್‌ನೆಸ್‌ಡೇ ಆಚರಣೆಗೆ ಸಿದ್ಧತೆ ನಡೆಸುತ್ತಿದ್ದಾಗ ಈ ಘಟನೆ ಜರುಗಿದೆ. ಭಜರಂಗದಳದ ಕಾರ್ಯಕರ್ತರೆನ್ನಲಾದ ನವೀನ್ ಮತ್ತು ಕುಮಾರ್ ಎಂಬುವರ ಗುಂಪು ಏಕಾಏಕಿ ಈ ಮನೆ ಮೇಲೆ ದಾಳಿ ಮಾಡಿ ಗಲಭೆ ಎಬ್ಬಿಸಿದ್ದಾರೆ ಎಂದು ಮೇಟಗಳ್ಳಿ ಪೊಲೀಸರು ತಿಳಿಸಿದ್ದಾರೆ.

(ಉದಯವಾಣಿ)

ಬಡತನದಿಂದ ಪತ್ನಿ ಮಕ್ಕಳನ್ನು ಕೊಂದ!

ಅಹಮದಾಬಾದ್, ಫೆ. ೧೦(ಪಿಟಿಐ)- ತೀವ್ರ ಬಡತನದಿಂದ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯೊಬ್ಬ ತನ್ನ ಹೆಂಡತಿ ಮತ್ತು ಮಕ್ಕಳಿಬ್ಬರನ್ನು ಕೊಂದು, ತಾನೂ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಇಲ್ಲಿನ ಸುಸಾವ್ ಗ್ರಾಮದಲ್ಲಿ ಜರುಗಿದೆ.

ಜಯಂತಿ ಚಾಮರ್ ಎಂಬಾತ ತನ್ನ ಪತ್ನಿ ಲೀಲಾ(೩೦) ಮತ್ತು ಹೆಣ್ಣು ಮಕ್ಕಳಾದ ಪರುಲ್(೬) ಹಾಗೂ ಆರು ತಿಂಗಳ ಮಗು ರಾಜು ಅವರನ್ನು ಇರಿದು ಸ್ಥಳದಲ್ಲೇ ಕೊಂದಿರುವುದಾಗಿ ಸುರೇಂದ್ರನಗರ ಜಿಲ್ಲೆಯ ಡಿಎಸ್‌ಪಿ ವಿ.ಜೆ.ಗೌತಮ್ ಇಂದು ಇಲ್ಲಿ ತಿಳಿಸಿದರು. (ಪ್ರಜಾವಾಣಿ)

ಜೈಲಿನಲ್ಲಿ ಹಣವಂತರಿಗೆ ರಾಜೋಪಚಾರ?

ತಿಪಟೂರು, ಫೆ.೧೪-ತಿಪಟೂರು ಜೈಲಿನಲ್ಲಿ ಕೆಲ ಹಣವಂತ ಕೈದಿಗಳಿಗೆ ರಾಜೋಪಚಾರ ದೊರೆಯುತ್ತಿರುವುದಾಗಿ ತಿಳಿದು ಬಂದಿದೆ.

ಬಡ ಕೈದಿಗಳ ಸಂಬಂಧಿಗಳು ಜೈಲ್‌ನ ಬಳಿ ಅವರನ್ನು ನೋಡಲು ಹೋದರೆ ಗದರಿಸಿ ಕಳುಹಿಸುವ ಸಿಬ್ಬಂದಿಗಳು ರಾತ್ರಿಯಾಗುತ್ತಿದ್ದಂತೆ ಹಣವಂತ ಕೈದಿಗಳ ಬೇಕು, ಬೇಡಗಳನ್ನು ಈಡೇರಿಸಲು ಮುಂದಾಗುತ್ತಾರೆನ್ನಲಾಗಿದೆ.

ಜೈಲ್ ಒಳಗೆ ಮದ್ಯಪಾನ, ಮಾಂಸ, ವಗೈರೆಗಳು ಯಾವ ಮುಚ್ಚುಮರೆಯಿಲ್ಲದೆ ಸರಬರಾಜಾಗುತ್ತಿದ್ದು ಇಂತಹ ಕಾರ್ಯಗಳಲ್ಲಿ ತೊಡಗಿರುವ ಸಿಬ್ಬಂದಿಗಳ ವಿರುದ್ಧ ದೂರ ನೀಡಲಾಗಿದೆ.

(ಉದಯವಾಣಿ)



ಅನಾಥ ಮಕ್ಕಳಿಗೆ ಲೈಂಗಿಕ ಕಿರುಕುಳದ ಬಳುವಳಿ

ಮಂಡ್ಯ, ಫೆ.೧೩- 'ಹುಟ್ಟಿದ್ದೀವಿ, ಬೆಳೆದಿದ್ದೀವಿ ಜಮ್ಮು ಕಾಶ್ಮೀರದಲ್ಲಿ, ಎಲ್ಲ ಕಳ್ಕೊಂಡು ಬಂದಿದ್ದೀವಿ ಕನ್ನಡಮ್ಮನಲಿ. ಕನ್ನಡ ತಾಯಿಯ ಚರಣದಲಿ' ಎಂದು ಮನಮಿಡಿಯುವಂತೆ ಹಾಡುತ್ತಾ ಇಲ್ಲಿಗೆ ಬಂದ ಲಡಾಕಿನ ಮುಗ್ಧ ಮಕ್ಕಳಿಗೆ ಆಶ್ರಯ ನೀಡಿದ ಅನಾಥಾಶ್ರಮವೇ ಅವರಿಗೆ ಕಿರುಕುಳ ನೀಡಿದ ಅಮಾನವೀಯ ಘಟನೆ ಮೇಲುಕೋಟೆಯಿಂದ ಬೆಳಕಿಗೆ ಬಂದಿದೆ.

ಕಾರ್ಗಿಲ್ ಯುದ್ಧದಿಂದ ತತ್ತರಿಸಿದ್ದ ಲಡಾಖ್‌ನ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಭಯೋತ್ಪಾದಕರ ಕೈಗೆ ಸಿಕ್ಕಿ ದಾರಿ ತಪ್ಪಬಾರದು ಎಂಬ ಮಹತ್ವಾಕಾಂಕ್ಷೆಯಿಂದ ಕೇಂದ್ರ ಸರ್ಕಾರದ ಗೃಹಖಾತೆಯ ನೆರವಿನೊಂದಿಗೆ ಹಲವಾರು ಮಕ್ಕಳನ್ನು ಕರ್ನಾಟಕದ ವಿವಿಧ ಕಡೆಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿಸಲಾಗಿದ್ದು, ಈ ಪೈಕಿ ಹತ್ತು ಮಕ್ಕಳನ್ನು ಮೇಲುಕೋಟೆಯ ಸಂರಕ್ಷಣಾ ಗ್ಲೋಬಲ್ ಸರ್ವೀಸ್ ಫೋರ್ಸ್ ಎಂಬ ಸಂಸ್ಥೆಗೆ ಎರಡು ವರ್ಷದ ಹಿಂದೆ ವಹಿಸಲಾಗಿತ್ತು.

ತದನಂತರ ಈ ಸಂಸ್ಥೆ ಸಂರಕ್ಷಣಾ ಅನಾಥಾಶ್ರಮವಾಗಿ ಮಾರ್ಪಾಡಾಯಿತು. ವಾಸ್ತವವಾಗಿ ಈ ಮಕ್ಕಳು ಅನಾಥ ಮಕ್ಕಳೇ ಅಲ್ಲ, ಆದರೂ ಅನಾಥ ಮಕ್ಕಳೆಂದು ಸಮಾಜದ ಮುಂದೆ ಬಿಂಬಿಸಿ ದಾನಿಗಳಿಂದ ಹಾಗೂ ಮಠಗಳಿಂದ ನೆರವನ್ನು ಪಡೆಯುತ್ತಿರುವ ಅನಾಥಾಶ್ರಮದಲ್ಲಿ ಮಕ್ಕಳಿಗೆ ಸಿಕ್ಕಿದ್ದು ಕಿರುಕುಳ ಎಂಬ ಬಳುವಳಿ.

ಜಮ್ಮು ಕಾಶ್ಮೀರದಲ್ಲಿ 'ಸಿಂಧೂದರ್ಶನ' ಕಾರ್ಯಕ್ರಮಕ್ಕೆ ಹೋಗಿದ್ದ ರಾಜ್ಯ ಯುವಜನ ಒಕ್ಕೂಟದ ಬೆಂಗಳೂರಿನ ಬಾಲಾಜಿ ಎಂಬುವರ ಮೂಲಕ ಈ ಮಕ್ಕಳನ್ನು ಕರ್ನಾಟಕಕ್ಕೆ ಕಳುಹಿಸಿಕೊಡಲಾಗಿತ್ತು. ಅದೇ ವೇಳೆಗೆ ಮೇಲುಕೋಟೆಯ ಜಾದುಗಾರ್ ಜಗನ್ನಾಥ್ ನೇತೃತ್ವದ ಸಂರಕ್ಷಣಾ ಗ್ಲೋಬಲ್ ಸರ್ವೀಸ್ ಫೋರ್ಸ್ ಅವರ ನೆರವಿಗೆ ಬಂತು.

ಅನಾಥ ಮಕ್ಕಳಿಗೆ ಆಶ್ರಯ ನೀಡಿ ಸಲಹಿದ ಜಾದುಗಾರ್ ಜಗನ್ನಾಥ್ ಬಗ್ಗೆ ಭಾರೀ ಪ್ರಶಂಸೆ ವ್ಯಕ್ತವಾಯಿತು. ಆದರೆ ಅಷ್ಟೇ ನೋವಿನ ಸಂಗತಿ ಈಗ ಬೆಳಕಿಗೆ ಬಂದಿದೆ.

ಮಕ್ಕಳ ಪೋಷಣೆಗೆಂದು ಅವರನ್ನು ಪ್ರವೇಶಿಸುವ ವೇಳೆಗೆ ೪೦೦೦ ರೂ.ಗಳನ್ನು ನೀಡಲಾಗಿತ್ತು. ನಂತರ ದೂರವಾಣಿ ಹಾಕಿಸಲೆಂದು ರೂ. ೩೦೦೦ ನೀಡಲಾಯಿತು. ಆಗಿಂದಾಗ್ಗೆ ದಾನಿಗಳ ಮೂಲಕವೂ ಹಣ ಕಳುಹಿಸಲಾಗುತ್ತಿತ್ತು. ಆದರೆ ಅನಾಥ ಮಕ್ಕಳ ಪೋಷಣೆಯ ಹೆಸರಲ್ಲಿ ಅಲ್ಲಿ ಆಗಿದ್ದೇ ಅನ್ಯಾಯ ಎಂಬುದು ಇದೀಗ ಮಕ್ಕಳ ಬಾಯಿಂದಲೇ ಹೊರಗೆ ಬಂದಿದೆ. (ಪ್ರಜಾವಾಣಿ)

ಮತಾಂತರಕ್ಕೆ ಕೇಶಮುಂಡನ ಶಿಕ್ಷೆ

ಕೇಂದ್ರಪಾರ, ಫೆ.೧೫-ಒರಿಸ್ಸಾ ಜಗತ್ ಸಿಂಗ್‌ಪುರ ಜಿಲ್ಲೆಯಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ೮ ಜನರ ತಲೆ ಬಲವಂತವಾಗಿ ಬೋಳಿಸಲಾಗಿದೆ.

ಹಿಂದೆಯೇ ನಾವು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದೇವೆ. ಇತ್ತೀಚೆಗೆ ಮೂವರು ನಮ್ಮ ಧರ್ಮದತ್ತ ಆಕರ್ಷಿತರಾದಾಗ ಗುಂಪೊಂದು ಬಂದು ಹಿಂದೂ ಧರ್ಮಕ್ಕೆ ಮರು ಮತಾಂತರವಾಗಬೇಕು ಎಂದು ಎಚ್ಚರಿಸಿತು. ನಂತರ ನಮ್ಮ ತಲೆ ಬೋಳಿಸಿತು ಎಂದು ಮಹಿಳೆಯೊಬ್ಬರು ಹೇಳಿದಳು.

(ವಿಜಯ ಕರ್ನಾಟಕ)

ದಲಿತ ಮಹಿಳೆಯ ಮೇಲೆ ಅತ್ಯಾಚಾರ, ಕೊಲೆ ಯತ್ನ

ಶಿವಪುರಿ, ಮಧ್ಯಪ್ರದೇಶ, ಫೆ.೧೧(ಪಿಟಿಐ)- ದಲಿತ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರ ನಡೆಸಿ ಆಕೆಗೆ ಬೆಂಕಿ ಹಚ್ಚಿದ ಪ್ರಕರಣವೊಂದು ಇಂದು ಜಿಲ್ಲೆಯ ತುಳಸಿ ನಗರ ಕಾಲೋನಿಯಿಂದ ವರದಿಯಾಗಿದೆ.

ಭಾನುವಾರದಂದು ದಲಿತ ಮಹಿಳೆ ವಾಸಿಸುತ್ತಿದ್ದ ಮನೆ ಮಾಲೀಕ ಮತ್ತು ಆತನ ಸ್ನೇಹಿತ ಆಕೆಯನ್ನು ಕೋಣೆಯೊಂದರಲ್ಲಿ ಕೂಡಿಹಾಕಿ ಅತ್ಯಾಚಾರ ಮಾಡಿದರು. ಈ ಬಗ್ಗೆ ದೂರು ನೀಡುವುದಾಗಿ ಆಕೆ ಹೇಳಿದಾಗ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯ ಸ್ಥಿತಿ ಗಂಭೀರವಾಗಿದ್ದು ಆಕೆಯನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಗಿದೆ. ಆರೋಪಿಗಳಿಬ್ಬರೂ ತಲೆ ಮರೆಸಿಕೊಂಡಿದ್ದಾರೆ.

(ಪ್ರಜಾವಾಣಿ)

ಹುಡುಗಿಯರ ಮಾರಾಟ

ಬರಾಕ್‌ಪುರ (ಪಶ್ಚಿಮ ಬಂಗಾಳ), ಜ.೩೧ (ಯುಎನ್‌ಐ)- ನೃತ್ಯ ಪ್ರದರ್ಶನದಲ್ಲಿ ಭಾಗವಹಿಸಲು ಇತ್ತೀಚೆಗೆ ಬೆಂಗಳೂರಿಗೆ ತೆರಳಿದ್ದ ರಾಜ್ಯದ ೧೭ ವರ್ಷದ ಹುಡುಗಿಯೊಬ್ಬಳನ್ನು ಅಲ್ಲಿ ಮಾರಾಟ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

(ಪ್ರಜಾವಾಣಿ)

ಸಂಪಾದಕೀಯ



ಅಂತರಂಗ

ನಂಜುಂಡಸ್ವಾಮಿಯವರ ನೆನಪಿನಲ್ಲಿ...

ಸುಮಾರು ೧೯೭೧-೭೨ ಇರಬಹುದು. ಮೈಸೂರಿನ ಸರಸ್ವತಿ ಪುರಂನ ಮೊದಲನೇ ಮುಖ್ಯರಸ್ತೆಯ ಮಿಲ್ಕ್ ಬಾರ್ ಮುಂದಿನ ಒಂದು ಟೇಬಲ್ ಮತ್ತು ನಾಲ್ಕಾರು ಕುರ್ಚಿಗಳು ಸದಾ ತುಂಬಿರುತ್ತಿದ್ದವು. ಒಂದು ಕುರ್ಚಿಯಲ್ಲಿ ಸದಾ ಸಿಗರೇಟು ಎಳೆಯುವ ಗಡ್ಡದಾರಿ-ಜುಬ್ಬದಾರಿ, ಸಣಕಲು ವ್ಯಕ್ತಿಯೊಬ್ಬ ಕುಳಿತು ನಿರರ್ಗಳವಾಗಿ ಮಾತಾಡುತ್ತಿದ್ದರು. ಸುತ್ತಾ ನಾಲ್ಕಾರು ಪಡ್ಡೆಹೈಕಳು. ಆಗಾಗ ಬರುವ ಬೈಟು ಟೀ. ಬೆಳಿಗ್ಗೆ ಮದ್ಯಾಹ್ನ ಸಂಜೆ ರಾತ್ರಿ-ಹೀಗೆ ನಿರಂತರವಾಗಿ ಈ ಬೈಟು ಟೀ ಸಮಾವೇಶ. ಮಾತು-ವಾಗ್ವಾದ ಮುಗಿಸಿ ಎದ್ದಾಗ ಏನೋ ಗೆದ್ದ ಸಮಾಧಾನ. ಮತ್ತೆ ಮಾರನೆ ದಿನ ಅದೇ ಟೇಬಲ್-ಕುರ್ಚಿ. ಅದೇ ಮಾತು-ವಾಗ್ವಾದ...

ಬಹುಶಃ ನಾನಾಗ ಪಿ.ಯು.ಸಿ. ಓದುತ್ತಿದ್ದೆ. ನಮ್ಮ ಕಾಲೇಜಿನ ನೋಟೀಸ್ ಬೋರ್ಡ್‌ನಲ್ಲಿ ಒಂದು ದಿನ ಕರಪತ್ರವೊಂದು ಕಾಣಿಸಿತು. ಅದು ಮೈಸೂರಿನಲ್ಲಿ ಆಯೋಜಿಸಿದ್ದ 'ಜಾತಿ ವಿನಾಶ ಸಮ್ಮೇಳನ' ಕರಪತ್ರ. ನನಗೆ ಅಂದು ರೋಮಾಂಚನವಾಯಿತು. ಕೀಳು ಜಾತಿಯಲ್ಲಿ ಹುಟ್ಟಿದೆನೆಂಬ ಕಾರಣಕ್ಕೆ ಸದಾ ಅವಮಾನದಿಂದ ಬೇಯುತ್ತಿದ್ದ ನನಗೆ ಆ ಕರಪತ್ರ ಆಶಾದಾಯಕವಾಗಿ ಕಂಡಿತು. ಜಾತಿ ವಿನಾಶಕ್ಕಾಗಿ ಹಾತೊರೆಯುತ್ತಿದ್ದ ನನ್ನ ಮನಸ್ಸಿಗೆ ರೆಕ್ಕೆ ಪುಕ್ಕ ಬೆಳೆಯತೊಡಗಿತು. ನಾನು ಏಕಾಂಗಿಯಲ್ಲ, ನನ್ನ ಭಾವನೆಗಳಿಗೆ ಸ್ಪಂದಿಸುವ ಜನರೂ ಇದ್ದಾರೆಂಬ ಸಮಾಧಾನವಾಗತೊಡಗಿತು. ಆ ಮೂಲಕ ಸಮಾಜವಾದಿ ಚಳವಳಿಗೆ ನನ್ನನ್ನು ನಾನು ಪೂರ್ಣವಾಗಿ ತೊಡಗಿಸಿಕೊಂಡೆ.

ಒಮ್ಮೆ ಹೀಗೆ ತೊಡಗಿಸಿಕೊಂಡ ನಂತರ ನನ್ನ ಕೀಳರಿಮೆ ಸಂಪೂರ್ಣ ದೂರವಾಗತೊಡಗಿತು. ಸ್ವಾಭಿಮಾನ-ಆತ್ಮವಿಶ್ವಾಸ ನನ್ನಲ್ಲಿ ಪುಟಿದೆದ್ದಿತು. ನಂಜುಂಡಸ್ವಾಮಿ, ರಾಮದಾಸ್, ತೇಜಸ್ವಿ, ಅನಂತಮೂರ್ತಿ, ಲಂಕೇಶ್, ದೇವನೂರ ಮಹಾದೇವ, ಆಲನಹಳ್ಳಿ ಕೃಷ್ಣ...ಲೋಹಿಯಾ, ಗಾಂಧಿ, ಅಂಬೇಡ್ಕರ್...ಹೀಗೆ ಇವರೆಲ್ಲ ನನ್ನನ್ನು ಆವರಿಸಿಕೊಂಡರು.

ನಂತರ ಎಲ್ಲವೂ ಹೋರಾಟವಾಯಿತು. ನೆಪಕ್ಕೆ ಕಾಲೇಜು, ಹಾಸ್ಟೆಲ್‌ನಲ್ಲಿ ಊಟ. ಇಡೀ ದಿನ ಚರ್ಚೆ-ಹೋರಾಟ-ಪ್ರತಿಭಟನೆ. ರಾತ್ರಿಯೆಲ್ಲಾ ಗೋಡೆ ಬರಹ. ಆಗಾಗ ಸಭೆ ಸಮಾರಂಭ. 'ಸಮಾಜವಾದಿ ಯುವಜನ ಸಭಾ'ಕ್ಕಾಗಿ ಅಲೆದಾಟ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ ಅವರ ಬಗ್ಗೆ ಬರೆಯಲು ಕುಳಿತಾಗ ನನಗೆ ಇದೆಲ್ಲಾ ನೆನಪಾಗುತ್ತಿದೆ. ನಂಜುಂಡಸ್ವಾಮಿ ಅವರು ನನಗೆ ಪರಿಚಯವಾದಾಗ ಅವರನ್ನು ಯಾರೂ ಪ್ರೊಫೆಸರ್ ಅಂತ ಕರೀತಿರಲಿಲ್ಲ. ಅವರು ಬರೀ ನಂಜುಂಡಸ್ವಾಮಿ. ಅವರ ತಲೆ ಮೇಲೆ ಹಸಿರು ಟೋಪಿ ಕೂಡ ಇರಲಿಲ್ಲ. ಆಗಾಗ ಎರಡೂ ಹೆಗಲ ಮೇಲೆ ಬೆನ್ನು ಮುಚ್ಚುವಂತೆ ಶಾಲು ಹೊದಿಯುತ್ತಿದ್ದರು. ನಿರಂತರವಾಗಿ ಚಾರ್ಮಿನಾರ್ ಸಿಗರೇಟು ಸೇದುತ್ತಿದ್ದರು. ನಮ್ಮೊಂದಿಗೆ ಹೆಚ್ಚು ಸಮಯ ಕಳೆಯುತ್ತಿದ್ದರು.

ನಾನು ಮತ್ತು ನನ್ನಂಥ ಹಲವು ಪಡ್ಡೆ ಹುಡುಗರಿಗೆ ಅವರೇ ನಿಜವಾದ ಗುರುಗಳು. ಸರಸ್ವತಿ ಪುರಂನ ಮಿಲ್ಕ್‌ಬಾರ್ ನಮ್ಮ ಅಡ್ಡೆ. ನಂಜುಂಡ ಸ್ವಾಮಿ ಅವರು ಅಲ್ಲಿ ನಮಗೆ ಇಡೀ ಜಗತ್ತನ್ನೇ ತೆರೆದಿಡುತ್ತಿದ್ದರು. ಗಾಂಧಿ, ಲೋಹಿಯಾ, ಮಾರ್ಕ್ಸ್ ಮೊದಲಾದವರ ಸಿದ್ಧಾಂತಗಳನ್ನೆಲ್ಲ ಬಿಡಿಸಿ ಬಿಡಿಸಿ ಮನದಟ್ಟು ಮಾಡುತ್ತಿದ್ದರು. ಜಾತಿ-ಧರ್ಮಗಳ ಒಳಸುಳಿಗಳನ್ನು ಬಿಚ್ಚಿ ತೋರಿಸುತ್ತಿದ್ದರು. ಸಮಾನತೆ-ಸ್ವಾಭಿಮಾನದ ಮೂಲ ಪಾಠವೇ ಅವರಾಗಿದ್ದರು. ಎಲ್ಲರೊಂದಿಗೆ ಸರಿಸಮವಾಗಿ ಕುಳಿತುಕೊಳ್ಳ ಬೇಕೆಂಬುದೇ ಅವರು ಮೊದಲು ಹೇಳುತ್ತಿದ್ದ ಪಾಠ. ಹಿಂದೂ ಧರ್ಮ, ದೇವರು, ಜಾತಿ, ಮಠಾಧಿಪತಿಗಳೆಂದರೆ ಉರಿದು ಬೀಳುತ್ತಿದ್ದರು. ದೇವರು-ಧರ್ಮವನ್ನು ತಿರಸ್ಕರಿಸಲು ಮೊದಲು ಕಲಿಸಿದವರೇ ನಂಜುಂಡ ಸ್ವಾಮಿ. ಎಲ್ಲ ನಂಬಿಕೆಗಳನ್ನು ತಿರಸ್ಕರಿಸಿ ಹೊಸದಾಗಿ ಮನುಷ್ಯ ರೂಪುಗೊಳ್ಳ ಬೇಕು ಆಗ ಅಸಮಾನತೆಯ ಜಾತಿ-ಧರ್ಮಗಳಾವುವೂ ಇರುವುದಿಲ್ಲ ಎಂಬುದು ಅವರ ವಾದವಾಗಿತ್ತು.

ಸಮಾಜವಾದಿ ಯುವಜನ ಸಭಾ-ವಿಚಾರವಾದಿ ಚಳವಳಿ, ಇಂಗ್ಲೀಷ್ ಅಳಿಸಿ-ಕನ್ನಡ ಉಳಿಸಿ, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಒಕ್ಕೂಟ-ಎಲ್ಲದರಲ್ಲೂ ನಂಜುಂಡಸ್ವಾಮಿ ಮುಂಚೂಣಿಯಲ್ಲಿರುತ್ತಿದ್ದರು. ಈ ಎಲ್ಲವೂ ಆ ಕಾಲದ ಅತ್ಯಂತ ಪ್ರಮುಖ ಸಾಂಸ್ಕೃತಿಕ-ಸಾಮಾಜಿಕ ಪರಿವರ್ತನೆಯ ಘಟನೆಗಳಾಗಿದ್ದವು. ದಸರಾ ಪ್ರತಿಭಟನೆ ಪ್ರತಿವರ್ಷದ ಸಂಪ್ರದಾಯ ವಾಗಿತ್ತು. ಯಾವ ಸ್ವಾಮೀಜಿಗಳು ಮೈಸೂರಿಗೆ ಬಂದರೂ ಪ್ರತಿಭಟನೆ ಖಾಯಂ ಆಗಿರುತ್ತಿತ್ತು. ಕಾಂಗ್ರೆಸ್ ಇಡೀ ದೇಶದ ಅವನತಿಗೆ ಕಾರಣವಾಗಿ ರುವುದರಿಂದ ಅದನ್ನು ಕಿತ್ತೆಸೆದು ಸಮಾಜವಾದಿ ಸರ್ಕಾರ ಸ್ಥಾಪಿಸಬೇಕೆಂದು ಅವರು ಯಾವಾಗಲೂ ಬಯಸುತ್ತಿದ್ದರು.

ನಂತರದ್ದು ಬೇರೆಯೇ ಆಯಿತು. ಸಮಾಜವಾದಿ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ದಲಿತ ಮಿತ್ರರಲ್ಲಿ ಸಮಾಜವಾದಿ ಚಳವಳಿಯ ಧುರೀಣರ ಬಗೆಗೆ ಅನುಮಾನಗಳು ಆರಂಭವಾದವು. ಬ್ರಾಹ್ಮಣ ವಿರೋಧಿ ವಿಚಾರಗಳಿಗೆ ಸಮಾಜವಾದಿ ಧುರೀಣರು ಸ್ಪಂದಿಸುವ ಮಟ್ಟದಲ್ಲಿ ದಲಿತ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂಬ ಅರಿವು ದಲಿತ ಮಿತ್ರರಲ್ಲಿ ಮೂಡಿತು. ಅದು ಬೆಳೆದು ದಲಿತ ಲೇಖಕ ಕಲಾವಿದರ ಬಳಗವಾಯಿತು. ದಲಿತ ಸಂಘರ್ಷ ಸಮಿತಿಯಾಯಿತು. ನಂಜುಂಡಸ್ವಾಮಿ ಅವರಿಗೆ ಈ ಬೆಳವಣಿಗೆ ಸಹ್ಯವಾಗಲಿಲ್ಲ. ಅವರು ರೈತಸಂಘ ಕಟ್ಟಿದರು. ದಲಿತ ಚಳವಳಿ ಬಗೆಗೆ ಅವರಿಗೆ ಒಳ್ಳೆಯ ಭಾವನೆ ಇರಲಿಲ್ಲ.

ಲಂಕೇಶ್ ಪ್ರಗತಿರಂಗ ಕಟ್ಟಿದರು. ಪತ್ರಿಕೆ ಮೂಲಕ ತಮ್ಮ ನಿಲುವನ್ನು ಒಪ್ಪದವರನ್ನು ಬಗ್ಗುಬಡಿಯಲು ಆರಂಭಿಸಿದರು. ನಂಜುಂಡಸ್ವಾಮಿ ಮತ್ತು ಲಂಕೇಶ್ ಪರಸ್ಪರ ಹಾವು-ಮುಂಗುಸಿಗಳಂತಾದರು. ನಂಜುಂಡಸ್ವಾಮಿ ಅವರಂತೂ ಪ್ರಗತಿರಂಗ ಮತ್ತು ದಲಿತ ಸಂಘರ್ಷ ಸಮಿತಿಗಳನ್ನು ತುಚ್ಛವಾಗಿ ಕಾಣತೊಡಗಿದರು. '೧೮%ನವರ ಚಳವಳಿಯಿಂದ ಏನಾ ಗುತ್ತೆ?' ಎಂದು ಅವರೊಮ್ಮೆ ಕೇಳಿದಾಗ ನನಗೆ ಅತ್ಯಂತ ನೋವಾಯಿತು. ಸ್ವಾಭಿಮಾನ ಸಮಾನತೆಯ ಬಗೆಗೆ ನನಗೆ ಪಾಠ ಹೇಳಿಕೊಟ್ಟ ವ್ಯಕ್ತಿಯ ಬಾಯಿಂದಲೇ ಇಂಥ ಮಾತು ಬಂದರೆ ಅರಗಿಸಿಕೊಳ್ಳುವುದಾದರೂ ಹೇಗೆ?

ಈಗ ಪ್ರಗತಿರಂಗ ಸುಮ್ಮನಾಗಿದೆ. ರೈತಸಂಘ ಒಡೆದಿದೆ. ದಲಿತ ಸಂಘರ್ಷ ಸಮಿತಿ ಚೂರುಚೂರಾಗಿದೆ. ಎಲ್ಲ ಪ್ರಗತಿಪರ ಚಳವಳಿಗಳೂ ಮುಗ್ಗರಿಸಿವೆ. ವಿಚಾರವಾದಿಗಳು ತೆಪ್ಪಗಾಗಿದ್ದಾರೆ. ಆದರೆ ಇವರೆಲ್ಲರೂ ಒಂದಾಗಿ ವಿರೋಧಿಸುತ್ತಿದ್ದ ಕೋಮುವಾದಿಗಳು ಇಡೀ ದೇಶವನ್ನು ಆವರಿಸಿ ಕೊಳ್ಳುತ್ತಿದ್ದಾರೆ. ಜಾಗತೀಕರಣ ಪಕ್ಕದಲ್ಲಿ ಬಂದು ಕೂತಿದೆ. ಅಮೆರಿಕಾ ಇಡೀ ಜಗತ್ತಿನ ಗೌಡಿಕೆ ವಹಿಸಿಕೊಂಡಿದೆ.

ಈಗ ನಾವೇನು ಮಾಡಬೇಕು? ಲಂಕೇಶ್-ನಂಜುಂಡಸ್ವಾಮಿ, ಪ್ರತಿಭೆ ಮತ್ತು ಸಂಘಟನಾ ಸಾಮರ್ಥ್ಯದ ಎರಡು ಮಹಾ ಧ್ರುವಗಳಾಗಿದ್ದರು. ಒಗ್ಗೂಡಬೇಕೆಂಬ ಭಾವ ಅವರಿಬ್ಬರಿಗೂ ಇದ್ದಿತಾದರೂ ಅವರ ಬುದ್ಧಿ 'ಧ್ರುವ'ವಾದ ಕಾರಣ ಅದು ಸಾಧ್ಯವಾಗಲಿಲ್ಲ. ದಲಿತ ಚಳವಳಿ ಈ ಇಬ್ಬರನ್ನೂ ಪೂರ್ಣವಾಗಿ ಒಪ್ಪಿಕೊಳ್ಳಲೂ ಇಲ್ಲ, ತಿರಸ್ಕರಿಸಲೂ ಇಲ್ಲ. ಇಂದು ಈ ಕ್ಷಣದಲ್ಲಿ ಕೂಡ ಈ ಶಕ್ತಿಗಳ ನಡುವೆ ಅದೇ ಪ್ರೀತಿ-ಅಂತರ ಇದೆ.

ಈಗಲಾದರೂ ಈ ಅಂತರ ಕರಗಿ ಕೇವಲ ಪ್ರೀತಿ ಉಳಿಯಯುವುದೇ? ಎಪ್ಪತ್ತರ ದಶಕದ ಕನಸುಗಳು ನನಸಾಗವುವೇ? ನನಗಂತೂ ಆಸೆ ಇನ್ನೂ ಉಳಿದಿದೆ!

○ ಇಂದೂಧರ ಹೊನ್ನಾಪುರ

ಪ್ರತಿಕ್ರಿಯೆ

ಮೂಲಭೂತವಾದ ಇಡೀ ಜಗತ್ತನ್ನೇ ಆವರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಡಬೇಕಾದ, ದಲಿತರಲ್ಲೂ ಮೂಲಭೂತವಾದದ ಒಳಸುಳಿಗಳು ಚಿಗುರುತ್ತಿರುವುದರ ಬಗೆಗೆ 'ಸಂವಾದದ ವಾರ್ಷಿಕ ವಿಶೇಷಾಂಕ'ದಲ್ಲಿ ನಾರಾಯಣ ತಿರುಮಾಲಾಪುರರವರು ಆತಂಕ ವ್ಯಕ್ತಪಡಿಸಿದ್ದರು. ದಲಿತ ಚಿಂತನೆಗೂ, ಮೂಲಭೂತವಾದಕ್ಕೂ ಸಂಬಂಧ ವೇ ಇಲ್ಲ ಎಂದು ಲೇಖಕರು ಇಲ್ಲಿ ಪ್ರಶ್ನಿಸಿದ್ದಾರೆ. ಈ ವಿಚಾರದಲ್ಲಿ 'ಸಂವಾದ' ಹೆಚ್ಚಿನ ಚರ್ಚೆಯನ್ನು ಬಯಸುತ್ತದೆ.

○ಎಸ್.ಎಸ್. ಚಂದ್ರಣ್ಣ

ದಲಿತತ್ವ ಮೂಲಭೂತವಾದ ಅಲ್ಲ

'ಸಂವಾದ' ಪತ್ರಿಕೆಯ ವಾರ್ಷಿಕ ವಿಶೇಷ ಸಂಚಿಕೆಯು ನನಗೆ ತುಂಬಾ ಮುದನೀಡಿತಾದರೂ ಅದರಲ್ಲಿನ 'ದಲಿತ ಮೂಲಭೂತವಾದ : ಒಂದು ಚಿಂತನೆ' ಎಂಬ ಲೇಖನವು ನನ್ನಲ್ಲಿ ಬಹಳ ಬೇಸರವನ್ನುಂಟು ಮಾಡಿತು. ಈ ನನ್ನ ಬೇಸರಕ್ಕೆ ನನ್ನ ಗ್ರಹಿಕೆಯಲ್ಲಿಯೇ ಲೋಪವಿದೆಯೆ? ಅಥವಾ ಇಲ್ಲವೋ ತಿಳಿಯದಾಗಿದೆ. ನನ್ನ ಬೇಸರಕ್ಕೆ ಕಾರಣವಾದ ಲೇಖನದ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರುವುದರ ಜೊತೆಯಲ್ಲಿಯೇ ಅವುಗಳನ್ನು ತಕ್ಕಮಟ್ಟಿಗೆ ವಿವೇಚಿಸಿ ನನ್ನ ಅನಿಸಿಕೆಗಳನ್ನು ಈ ಮೂಲಕ ತಿಳಿಯಪಡಿಸುತ್ತಿದ್ದೇನೆ.

ಕನ್ನಡದ ಮೊದಲ ನಿಘಂಟಿನ ಸಂಪಾದಕ ರೆವರೆಂಡ್ ಕೆಟಲ್‌ರು ಸಂಪಾದಿಸಿದ ಕನ್ನಡ-ಇಂಗ್ಲೀಷ್ ನಿಘಂಟಿನಲ್ಲಿ 'ಮೂಲಭೂತವಾದ' ಎಂಬ ಪದವಿಲ್ಲವಾದರೂ ಅದರಲ್ಲಿ ಅವನು 'ಮೂಲಭೂತ' ಮತ್ತು 'ವಾದ' ಎಂಬ ಪದಗಳ ಅರ್ಥ ಸ್ಪಷ್ಟಪಡಿಸಿದ್ದಾನೆ: 'ಮೂಲಭೂತ' ಎಂದರೆ Become the root or original -ಆಧಾರ ತತ್ವವಾಗು. ಮೂಲಸ್ವರೂಪವಾಗು, ಬುಡಮೆಟ್ಟಿ ಹೋಗುವ ಅಥವಾ ಆಗುವ ಇತ್ಯಾದಿ. 'ವಾದ' ಎಂದರೆ speaking, talking, sounding, discourse, debate, conversation controversy words ಇತ್ಯಾದಿ ಅರ್ಥಗಳಿವೆ. ಇನ್ನು ಇದೇ ನಿಘಂಟಿನಲ್ಲಿ 'ದಲಿತ' ಎಂಬ ಪದಕ್ಕೆ Burst, Split ಎಂಬ ಕ್ರಿಯಾರ್ಥಗಳು, Opened, Unfolded, blown, full-down ಎಂಬ ಗುಣವಿಷೇಷಣೆಯ ಅರ್ಥಗಳಿವೆ. ಇಲ್ಲಿ blown ಎಂದರೆ 'ಉಸಿರಿಲ್ಲ'ದವನು ಎಂದು ಅರ್ಥೈಸಬಹುದು. full-down ಎಂದರೆ 'ಪೂರ್ತಿ ಅರಳಿದ'ವನು. 'ಗಾಳಿವಾದ್ಯವನ್ನು ಊದುವ'ವನು ಎಂಬ ಅರ್ಥಗಳು ಆರೋಪಿಸಬಹುದು. ಪ್ರಗತಿಪರ-ಬಂಡಾಯ-ದಲಿತ 'ಚಳುವಳಿ'ಗಳ ಹಿನ್ನೆಲೆಯಲ್ಲಿ ನಾವು 'ದಲಿತ' ಎಂಬ ಪದದ ಅರ್ಥವನ್ನು ಕಂಡುಕೊಳ್ಳುವುದಾದರೆ ಅದು ನಾವು ಚಿಂತಿಸಿದಷ್ಟು ದ್ಯಾನಿಸಿದಷ್ಟು ವಿಸ್ತಾರವಾಗಿ ಜಾತ್ಯಾತೀತವಾಗಿ ಹಿಗ್ಗುತ್ತಾ ಹೋಗುವುದನ್ನು ನೋಡಿದರೆ ಆ ಪದದ ಸಾಂಸ್ಕೃತಿಕ ಅನಂತತೆಯ ಬಗ್ಗೆ ವಿಚಿತ್ರ ಕುತೂಹಲ ಹುಟ್ಟುತ್ತದೆ. ಇಂತಹ ಪದಗಳ ಅವ್ಯಕ್ತ ಅಮೂರ್ತ ಅರ್ಥ ಸೂಕ್ಷ್ಮತೆಯನ್ನರಿಯದೆ ನಾವು ಬೇಜವಾಬ್ದಾರಿಯಿಂದ ಬಳಸಬಾರದಲ್ಲವೆ.

'ದಲಿತ ಮೂಲಭೂತವಾದ : ಒಂದು ಚಿಂತನೆ' ಲೇಖನದಲ್ಲಿ ಈ 'ದಲಿತ ಮೂಲಭೂತವಾದ' ಎಂಬ ಪದಪುಂಜವನ್ನು 'ಹಿಂದು ಕೋಮುವಾದ' ಎಂಬುದಕ್ಕೆ ಸಮನಾಗಿ ಬಳಸಿರುವುದೇ ತಪ್ಪು ಎನಿಸುತ್ತದೆ. ಇಡೀ ಲೇಖನ ಬಿಎಸ್‌ಪಿ ಎಂಬ ರಾಜಕೀಯ ಅಧಿಕಾರದ ಆಕಾಂಕ್ಷೆಯುಳ್ಳ ಪಕ್ಷದ ಪ್ರಣೀತ ಕೆಲವು ದಲಿತರ (ಜಾತಿಮಾತ್ರದಿಂದ) ಒಡಕು ಸಂಘಟನೆಗಳ ಇತ್ತೀಚಿನ ಚಟುವಟಿಕೆಗಳ (ಅವು ಸಹ ಅವರ ಸ್ವಂತ ಪ್ರತಿಭೆಯಿಂದ ಪ್ರಣೀತ ಚಟುವಟಿಕೆಗಳಲ್ಲಿ ಹಿಂದು ಕೋಮುವಾದಿಗಳ ತೆಳುವಾದ ಅನುಕರಣೆಗಳಷ್ಟೇ) ಬಗೆಗಿನ ಅಸಹನೆಗೆ ಸಂಬಂಧಿಸಿದ ಪ್ರತಿಕ್ರಿಯೆ ಅಷ್ಟೇ?

'ದಲಿತ ಮೂಲಭೂತವಾದ' ಎಂಬ ಪದವೇ ತುಂಬಾ ಗಂಭೀರ ಸಾಂಸ್ಕೃತಿಕ ಚಿಂತನೆಗೆ ಹಚ್ಚುವಂತಹದು ಇಲ್ಲವೆ ಪ್ರೇರೇಪಿಸುವಂತಹದೆಂದೇ ನನ್ನ ಭಾವನೆ. 'ದಲಿತ' ಎಂಬ ಪದಧ್ವನಿಯಲ್ಲಿ ಜಾತ್ಯಾತೀತತೆಗಾಗಿ, ಧರ್ಮ ನಿರಪೇಕ್ಷಿತೆಗಾಗಿ ಸಮಾನ ಶೋಷಣೆರಹಿತ ಸಮಾಜಕ್ಕಾಗಿ ಮಿಡಿವ ಜೀವಧ್ವನಿಯಿದೆ ಎಂಬುದುದರಿಂದಾಗಿ ಕೇವಲ ಭ್ರಷ್ಟರಾಜಕೀಯ ಆಯಾಮಗಳುಳ್ಳ ಹಗುರವಾದ ದೃಷ್ಟಿಕೋನದಿಂದ ಬಳಸಲ್ಪಡುವ (ಇತ್ತೀಚೆಗೆ ಅದು ಹಿಂದೂ ಕೋಮುವಾದಕ್ಕೆ ಸಮಾನಾಂತರವಾಗಿ) 'ಮೂಲಭೂತವಾದ' ಎಂಬ ಪದಕ್ಕೆ 'ಗುಣ ವಿಶೇಷಣ'ವಾಗಿ ಬಳಸಿರುವುದು ಸರಿಯಲ್ಲವೆಂದೇ ನನ್ನ ವಿನಮ್ರ ಅನಿಸಿಕೆ. ಇನ್ನೂ ಮುಂದುವರೆದು 'ದಲಿತ ಮೂಲಭೂತವಾದ' ಎಂಬ ಪದವನ್ನು ಲೇಖಕರು 'Dalita Fundamentalism' ಎಂಬುಧಾಗಿ ಭಾಷಾಂತರಿಸಿದ್ದಾರೆ. ಈ 'Fundamentalism'ಇಂಗ್ಲೀಷ್ ಭಾಷೆಯ ಈ ಎಂಬ ಪದ ಅಲ್ಪಮಿತಿಯುಳ್ಳದ್ದು. ಇದು ಮೂಲತಃ ಕ್ರೈಸ್ತ ಧರ್ಮದ ಧರ್ಮ ಶಾಸ್ತ್ರ-ಬೈಬಲ್ ಪ್ರಣೀತ ವಾದಕ್ಕೆ ಸಂಬಂಧ ಪಡುತ್ತದೆ. ಅಂದರೆ ಧಾರ್ಮಿಕ ಕಂದಾಚಾರಗಳ ಅಥವಾ ಪ್ರಶ್ನಿಸಲೇಬಾರದೆಂಬ ವಾದಕ್ಕೆ ಸಂಬಂಧಿಸಿದ ಅರ್ಥವನ್ನು ದಯಪಾಲಿಸುವಂತಹದಾಗಿದೆ. ಹಾಗಾಗಿ 'ದಲಿತ-ಧರ್ಮ ಶಾಸ್ತ್ರ ಪ್ರಣೀತವಾದ' ಎಂಬುದೊಂದು ದಲಿತತ್ವದ ಹೆಸರಲ್ಲಿ ಮಾನವ ಇತಿಹಾಸದ ಗರ್ಭದಲ್ಲಿ ಇರುವುದೇ ಆದಲ್ಲಿ ಅಂತಹ ದಲಿತ 'ಮೂಲಭೂತ' ವಾದವನ್ನು ಇತರ ತತ್ವ-ಸಿದ್ಧಾಂತ-ವಾದಗಳ ಮೇಲೆ ಅಮಾನವೀಯವಾಗಿ ಹಿಂಸಾಪ್ರಚೋದನೆಯಿಂದ (ತ್ರಿಶೂಲ-ವಿತರಣೆ ಮೂಲಕ, ಮಂದಿರ-ಮಸೀದಿಗಳ ಮೂಲಕವೂ ಪ್ರಚೋದನಕಾರಿ ರಾಷ್ಟ್ರೀಯ ನಾಯಕರ ಭಾಷೆಗಳಿಂದಲೂ ಸತ್ಯ ತಿರುಚುವುದರಿಂದಲೂ, ಸುಳ್ಳನ್ನು ಹತ್ತು ಬಾರಿ ಹೇಳಿ ಸತ್ಯಗೊಳಿಸುವುದರ ಮೂಲಕವೂ) ಹೇರಲು ಪ್ರಯತ್ನಗಳು ಭರತ ಖಂಡದಲ್ಲಿ ದಲಿತರು ದಲಿತತ್ವವಾದಿಗಳು ಮಾಡಿರುವ ಉದಾಹರಣೆಗಳಿವೆಯೇ? ಇದ್ದರೆ ಅಂತಹವರ, ಅಂತಹ ಘಟನೆಗಳ ಪೂರ್ವಾಪರಗಳ ಚಿಂತನೆ ಪ್ರಸ್ತುತ ನೆಡೆದಿದೆಯೇ?

ಹಾಗೊಮ್ಮೆ (ದಲಿತ ಮೂಲಭೂತವಾದ'(?) ಎಂಬುದಿದ್ದರೆ, ದಲಿತತ್ವದ ಮೂಲ ತತ್ವಗಳ ಪ್ರತಿಪಾದನೆ ಮಾಡಿದ್ದರೆ ಅಥವಾ ಮಾಡುತ್ತಾ ಇದ್ದರೆ ಅದು ಅವೈದಿಕ ತತ್ವವಾಗಿರಬೇಕು. ಈ ನೆಲದ ತಾಯ್ತನದ ಪ್ರತಿರೂಪದ ಸಾಂಸ್ಕೃತಿಕ (ರಾಜಕೀಯದಲ್ಲಿ) ತತ್ವಚಿಂತನೆಯಾಗಿರಬೇಕು. ಈ ಭರತಖಂಡದಲ್ಲಿ ಹಿಂದುತ್ವಕ್ಕಿಂತ ಮೊದಲೇ ಅಸ್ತಿತ್ವ ಪಡೆದಿದ್ದರಬೇಕು. ಇಲ್ಲವೇ ಶಾಖ್ಯಮುನಿ-ಬುದ್ಧನಿಂದ ಪ್ರಚಾರ ಪಡೆದಿರಬೇಕು. ೧೨ನೇ ಶತಮಾನದ ಬಸವಾದಿಶರಣರ ಚಿಂತನೆಯಲ್ಲಿರಬೇಕು. ಅವದೂತರ, ಸೂಫಿಗಳ, ದಾಸರ ಜೀವನ ಪ್ರತಿಪಾದನೆಯಲ್ಲಡಗಿರಬೇಕು, ಅಂಬೇಡ್ಕರ್-ಗಾಂಧೀಜಿಯವರ ಪ್ರಾಮಾಣಿಕ ಹೋರಾಟಗಳಲ್ಲಿರಬೇಕು, ಕುವೆಂಪುರವರ ಅವೈದಿಕ ಸಾಹಿತ್ಯದಲ್ಲಡಗಿರಬೇಕು ಅಥವಾ ಗದುಗಿನ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳ ಮತ್ತು ನಿಡುಮಾಮಿಡಿ ಚನ್ನಮಲ್ಲಸ್ವಾಮಿಗಳ ಮಾತುಗಳಲ್ಲಿ, ಧ್ಯೇಯಗಳಲ್ಲಿ, ತತ್ವಾದರ್ಶಗಳಲ್ಲಿ ಮುನ್ನಡೆಯುತ್ತಿರಬೇಕು. ಇಂತಹ ಹಿನ್ನೆಲೆಯಿಂದ ಒಡಮೂಡಿ ಬರುವ ಸಮಾನತೆಯ, ಶೋಷಣಾರಹಿತ ಸಮಾಜ ನಿರ್ಮಾಣದ ಕನಸು ಕಟ್ಟುವ 'ವಾದ', ಭಾಷೆ, ಧರ್ಮ, ಜಾತಿ, ಜನಾಂಗಗಳ ಗಡಿಯ ಮೀರಿದ ವಿಶ್ವಮತ- ಮನುಜಮತ ಬೇಕೆನ್ನುವ 'ವಾದ'. ಮಾನವ ವಿರೋದಿ-ವಾದ-ಸಿದ್ಧಾಂತಗಳಿಗೆ ತತ್‌ಕ್ಷಣದ 'ಪರ್ಯಾಯ ವಾದ' ಸಿದ್ಧಾಂತಗಳನ್ನು ರೂಪಿಸುವ ಒಂದು ವ್ಯವಸ್ಥಿತ ಅಹಿಂಸಾತ್ಮಕವಾದ (ಸೌಹಾರ್ದ ಸಮಾವೇಶಗಳನ್ನು ನಡೆಸಲು ಪ್ರೇರೇಪಿಸಿದ ವಾದ) ಇಂತಹದೊಂದು ಮೂಲಭೂತವಾದ ಎಂದು ಕರೆಸಿಕೊಳ್ಳಲ್ಪಡುವುದಾದರೆ ಅದನ್ನು ನನ್ನ ಜೊತೆ ಮಾನವೀಯತೆಗೆ ಮಿಡಿಯುವ, ಸ್ಪಂದಿಸುವ ಹೃದಯಗಳ ಬೆಂಬಲವಿದೆ ಎಂದೇ ಬಾವಿಸಿದ್ದೇನೆ. ಇಂತಹ 'ವಾದ' ಮತ್ತು 'ವಾದಿ'ಗಳು ಕರ್ನಾಟಕದ

ಸಂದರ್ಭದಲ್ಲಿ ಶರಣರ, ಸೂಫಿಗಳ, ಅವದೂತರ, ಅಂಬೇಡ್ಕರ್-ಗಾಂಧೀಜಿಗಳ ತತ್ವಾದರ್ಶಗಳಲ್ಲಿ ಮೂಡಿ ಬಂದ ೮೦ರ ದಶಕದ ಸಾಂಸ್ಕೃತಿಕ, ಸಾಹಿತ್ಯಕ ಸಂಘಟನೆಗಳಲ್ಲೊಂದು 'ದಸಂಸ'. ಈ ಸಂಘಟನೆಯ ಮೂಸೆಯಲ್ಲಿ ಬೆಳೆದು ಬಂದ ದಲಿತ ಚಿಂತಕರು, ಲೇಖಕರು, ಕಲಾಕಾರರು, ಕಲಾವಿದರು ಭಾರತದ ಮತ್ಯಾವುದೇ ಸಾಂಸ್ಕೃತಿಕ ಚಳುವಳಿಯಲ್ಲಿ ಮೂಡಿ ಬಂದಿರಲಾರರು. ಅವರ ಅಹಿಂಸಾತ್ಮಕ ಹೋರಾಟ, ಅವರ ಮಾನವೀಯ ತುಡಿತಗಳಿಗೆ ಸಾಕ್ಷಿಯಾಗಿ ನಿಂತಿರುವ ಅವರ ಸಾಹಿತ್ಯಕ ಕೃತಿಗಳು, ಅವುಗಳಲ್ಲಿ ನಿತ್ಯ ಪ್ರವಹಿಸುವ, ಜೀವನಾಡಿಯಾಗಿ ಚಿಮ್ಮುವ ದಲಿತ ಪ್ರಜ್ಞೆಯನ್ನು ಕುರಿತು ಚಿಂತನೆ ಇದೆಯೇ?

ಕಳೆದ ಶತಮಾನದ ಕೊನೆಯಲ್ಲಿ ಭಗ್ನಗೊಂಡ ಬಾಬರಿ ಮಸೀದಿಯ ನಂತರದ ಪ್ರಗತಿಪರ ಚಳವಳಿಗಳ, ಅವುಗಳ ಪ್ರಭಾವಿ ಬುದ್ಧಿಜೀವಿಗಳ, ಪರಿಸರವಾದಿಗಳ, ಉದಾರವಾದಿ ಸಂತರ ಭಾಷಣಗಳನ್ನು, ಲೇಖನಗಳನ್ನು ಗಮನಿಸಿದರೆ ನಮಗರ್ಥವಾಗುತ್ತದೆ ಎಲ್ಲಾ ಪ್ರಗತಿಗಪರ ಮಾನವೀಯ ತುಡಿತಗಳ ಕೇಂದ್ರ ಬೀಜ ಅವೈದಿಕ ಕ್ಷೇತ್ರವೆಂಬುದು ಈ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತಿರುವ 'ಲಂಕೇಶ್' ಪತ್ರಿಕೆ, 'ಸಂವಾದ', 'ಅಗ್ನಿ', ನಿಯತಕಾಲಿಕೆಗಳು ಪ್ರತಿಪಾದಿಸುತ್ತಿರುವುದೇನು? ಕಳೆದ ವರ್ಷದ ಕೊನೆಯ ದಿನಗಳಲ್ಲಿ ಮಂಡ್ಯ ನಗರಕ್ಕೆ ಆಗಮಿಸಿ ದಲಿತ ಪದ ರತ್ನ ಪ್ರಶಸ್ತಿ ವಿಜೇತ ದಲಿತನೊಬ್ಬನನ್ನು ಸನ್ಮಾನಿಸಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ನಿಡುಮಾಮಿಡಿ ಚನ್ನಮಲ್ಲಸ್ವಾಮೀಜಿ ಪ್ರತಿಪಾದಿಸಿದ್ದ ಏನು ಗೊತ್ತೆ? 'ಶೂದ್ರ ಪ್ರಜ್ಞೆ ದಲಿತ ಪ್ರಜ್ಞೆಯಾಗಬೇಕು', 'ಶೂದ್ರತ್ವ ದಲಿತತ್ವವಾಗಬೇಕು'. ಇದೇ ಅಲ್ಲವೆ ದಲಿತ ಮೂಲಭೂತ ವಾದತನವೆಂದರೆ ಇವರನ್ನು ದಲಿತ ಮೂಲಭೂತವಾದಿ ಎಂದು ಕರೆಯುವುದರಲ್ಲಿ ಅಥವಾ ನಾನು ಗ್ರಹಿಸಿರುವುದಲ್ಲಿ ಲೋಪವಿದೆಯೇ?

ನನಗೆ ದಲಿತತ್ವ ಜಾತಿ ಮಾತ್ರದಿಂದ ಬರುವಂತಹದಲ್ಲ ಎನಿಸುತ್ತದೆ. ಅದು ಈ ವರ್ಣಾಶ್ರಮ ವ್ಯವಸ್ಥೆಯಲ್ಲಿ ಮನುವಾದದ ದಿಸೆಯಲ್ಲಿ ಶೋಷಣೆಗೆ ಒಳಗಾದ, ಅವೈದಿಕರೆನಿಕೊಂಡ-ಅಸ್ಪೃಶ್ಯ, ಕುರುಬ, ಕುಂಬಾರ, ಅಕ್ಕ ಸಾಲಿಗ, ಚಮ್ಮಾರ, ಬಲಿಜ, ನೇಕಾರ, ಬಜೆಂತ್ರಿ, ಬೇಡ, ಗೊಲ್ಲ ಇತ್ಯಾದಿ ಇವರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಅವಮಾನಿತರಾಗಿ ಶತ-ಮಾನಗಳಿಂದಲೂ ಕನಿಷ್ಟ ಮಾನವೀಯ ಸೌಲಭ್ಯಗಳಿಂದಲೂ ವಂಚಿತರಾದ ಶೋಷಿತರಾದ ಸಮುದಾಯಗಳ ತಾಯ್ತನದ ಮೂಲ ಸಂಸ್ಕೃತಿಯನ್ನು ಯಾವುದೇ ಭಾಷೆ, ಜನಾಂಗ, ಧರ್ಮ ಮತ್ತು ಅಧಿಕಾರಿಗಳ ಭಿನ್ನ ಭೇದವಿಲ್ಲದೆ ಮೈಗೂಡಿಸಿಕೊಂಡ ವ್ಯಕ್ತಿಯಲ್ಲಿ ಅವಿರ್ಭವಿಸಿ ಬರುವಂತಹುದಾಗಿದೆ. ಪ್ರಸುತ್ತ ಭಾರತದ ಸಾಂಸ್ಕೃತಿಕ ಸಂಘರ್ಷದ ಹಿನ್ನೆಲೆಯಲ್ಲಿ 'ಮೂಲಭೂತವಾದ' ಪದವು Negative ಆಗಿ ಬಳಕೆಯಾಗುತ್ತಿದೆ. ಆದರೆ 'ದಲಿತತ್ವ'ದ ವಿಷಯದಲ್ಲಿ ಅದೇ ಪರಿಭಾಷೆಯಲ್ಲಿ ವಿಶ್ಲೇಷಿಸುವುದು ಅಪ್ಯಾಯಮಾನವಲ್ಲವೆನಿಸುತ್ತದೆ.

ಲೇಖರು 'ಅಂಬೇಡ್ಕರ್'ರವರನ್ನು, ಅವರ ಬರವಣಿಗೆಗಳನ್ನು ದುರುಪ ಯೋಗಪಡಿಸಿಕೊಳ್ಳುತ್ತಾರೆ' ಎಂದು ಆರೋಪಿಸಿದ್ದಾರೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಬ್ಬ ಸಾರ್ವಜನಿಕ/ವ್ಯಕ್ತಿಯ ಮೇಲುಕೃತಿಗಳನ್ನು ತಿದ್ದುವುದು, ತಿರುಚುವುದು

ದಲಿತತ್ವ ಜಾತಿ ಮಾತ್ರದಿಂದ ಬರುವಂತಹದಲ್ಲ ಎನಿಸುತ್ತದೆ. ಅದು ಈ ವರ್ಣಾಶ್ರಮ ವ್ಯವಸ್ಥೆಯಲ್ಲಿ ಮನುವಾದದ ದಿಸೆಯಲ್ಲಿ ಶೋಷಣೆಗೆ ಒಳಗಾದ, ಅವೈದಿಕರೆನಿಕೊಂಡ-ಅಸ್ಪೃಶ್ಯ, ಕುರುಬ, ಕುಂಬಾರ, ಅಕ್ಕ ಸಾಲಿಗ, ಚಮ್ಮಾರ, ಬಲಿಜ, ನೇಕಾರ, ಬಜೆಂತ್ರಿ, ಬೇಡ, ಗೊಲ್ಲ ಇತ್ಯಾದಿ ಇವರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಅವ ಮಾನಿತರಾಗಿ ಶತ-ಮಾನಗಳಿಂದಲೂ ಕನಿಷ್ಟ ಮಾನವೀಯ ಸೌಲಭ್ಯಗಳಿಂದಲೂ ವಂಚಿತರಾದ ಶೋಷಿತರಾದ ಸಮುದಾಯಗಳ ತಾಯ್ತನದ ಮೂಲ ಸಂಸ್ಕೃತಿಯನ್ನು ಯಾವುದೇ ಭಾಷೆ, ಜನಾಂಗ, ಧರ್ಮ ಮತ್ತು ಅಧಿಕಾರಿಗಳ ಭಿನ್ನ ಭೇದವಿಲ್ಲದೆ ಮೈಗೂಡಿಸಿಕೊಂಡ ವ್ಯಕ್ತಿಯಲ್ಲಿ ಅವಿರ್ಭವಿಸಿ ಬರುವಂತಹುದಾಗಿದೆ. ಪ್ರಸುತ್ತ ಭಾರತದ ಸಾಂಸ್ಕೃತಿಕ ಸಂಘರ್ಷದ ಹಿನ್ನೆಲೆಯಲ್ಲಿ 'ಮೂಲಭೂತವಾದ' ಪದವು ಫೆಳಿಜಟಿರಿಜಿಡಿಳಿ ಆಗಿ ಬಳಕೆಯಾಗುತ್ತಿದೆ. ಆದರೆ 'ದಲಿತತ್ವ'ದ ವಿಷಯದಲ್ಲಿ ಅದೇ ಪರಿಭಾಷೆಯಲ್ಲಿ ವಿಶ್ಲೇಷಿಸುವುದು ಅಪ್ಯಾಯಮಾನವಲ್ಲವೆನಿಸುತ್ತದೆ.

ಇಲ್ಲವೆ ಕೃತಿಚೌರ್ಯ ಮಾಡುವುದು ಭಾರತೀಯ ಕಾನೂನಿನ ಪ್ರಕಾರ ಅಪರಾಧ ಎನಿಸುತ್ತದೆ. ತಾವುಗಳು ಅಂಥಹ ಉದಾಹರಣೆಗಳಿದ್ದರೆ, ಪುರಾವೆ ಸಹಿತ ಹಿಡಿದು ನ್ಯಾಯಾಂಗದ ಮೊರೆ ಹೋಗಿ ಆ ವ್ಯಕ್ತಿಗೆ ನ್ಯಾಯ ದೊರಕಿಸಿಕೊಡಬಹುದು. ಇನ್ನು 'ಭೀಮ ಸ್ವಾಗತ, ನಮಸ್ಕಾರ, ವಂದನೆ....' ನಂತಹ ಸ್ಲೋಗನ್‌ಗಳು ಸಮಕಾಲೀನ ಸಮಾಜೊ-ರಾಜಕೀಯ ಸಂದರ್ಭಗಳಲ್ಲಿ ಒಬ್ಬನ/ಒಂದು ಸಂಘಟನೆಯ ಅಹಿಂಸಾ ತ್ಮಕವಾದ ಪ್ರತಿರೋಧವಾಗಿ ಕಂಡುಬರುತ್ತವೆಯೇ ಹೊರತು 'ದಲಿತ ಮೂಲಭೂತ'ವಾಗಿಯಲ್ಲ, ನಿಮಗೆ ಈ ವಿಷಯಕ್ಕೆ ಸಂಬಂಧಿಸಿದ ಇತಿಹಾಸದ ಘಟನೆಗಳನ್ನು ಉದಾ ಹರಿಸುತ್ತೇನೆ: ಸ್ವಾತಂತ್ರ್ಯ ಪೂರ್ವದ ಗಾಂಧಿ ಚಳುವಳಿಯ ಗಾಂಧಿಯ ಬಗೆಗಿನ ಸ್ಲೋಗನ್‌ಗಳು ಇಂದು ಏನಾಗಿವೆ? ಅಂದು ಎಷ್ಟು ಕಾಂಗ್ರೆಸ್ ಕಾರ್ಯಕರ್ತರೆನಿಸಿಕೊಂಡವರೆಲ್ಲಾ 'ಗಾಂಧಿ'ವಾದಿಗಳಾಗಿರಲಿಲ್ಲ, ಚಳವಳಿಯ ಸಂದರ್ಭದಲ್ಲಿ ಬಲವಂತವಾಗಿ ಶಾಲೆಯ ಮಕ್ಕಳನ್ನು, ಉಪಾಧ್ಯಾಯರನ್ನು ಕರೆದೊಯ್ಯುತ್ತಿದ್ದರು. ಅವರು ಸಹಕರಿಸದೇ ಹೋದಲ್ಲಿ ಶಾಲೆಯ ಮಕ್ಕಳ, ಉಪಾಧ್ಯಾಯರನ್ನು ಥಳಿಸಿದ ಉದಾ ಹರಣೆಗಳಿವೆ. ೮೦ರ ದಶಕದ 'ದಸಂಸ'ದ ಘೋಷಣೆ ಗಳೇನಾದವು ಇಂದು? ರೈತ ಚಳವಳಿಯ 'ರೈತರ' ಬಗೆಗಿನ ಘೋಷಣೆಗಳೇನಾದವು? ಘೋಷಣೆ ಮಾತ್ರದಿಂದ ಯಾವುದನ್ನೂ ಮೂಲಭೂತವಾದವೆಂದು ಪ್ರತ್ಯೇಕಿಸಲು ಸಾಧ್ಯವಿಲ್ಲ,

ಇಷ್ಟೆಲ್ಲಾ ಆದ ಮೇಲೆ, ಬಿಎಸ್‌ಪಿ ಮತ್ತು ಅದನ್ನು ಬೆಂಬಲಿಸುವ ಕೆಲವು ಲೆಟರ್-ಹೆಡ್, ಪ್ಯಾಡ್, ದಲಿತರ ಸಂಘಟನೆಗಳ (ದಲಿತ ಸಂಘಟನೆಗಳಲ್ಲಿ) ಬಗ್ಗೆ ನನ್ನ ಅನಿಸಿಕೆ ತಿಳಿಸಲೇಬೇಕಲ್ಲವೆ? ಬಿಎಸ್‌ಪಿಯು ಉತ್ತರ ಪ್ರದೇಶದಲ್ಲಿ ರಾಜಕೀಯ ಅಧಿಕಾರದ ಆಕಾಂಕ್ಷೆಯನ್ನಿಟ್ಟುಕೊಂಡೇ ಜನ್ಮ ತಳೆದ ಅಪ್ಪಟ ಜಾತೀ ಮತಗಳ ನೆಚ್ಚುಕೊಂಡ ಪಕ್ಷ ತಂತ್ರಮೌಲ್ಯಗಳ ಪ್ರೇರಿತ ರಾಜಕೀಯ ಸಂಘಟನೆ. ಇದಕ್ಕೆ ಸಾಂಸ್ಕೃತಿಕ ಮಾನವೀಯ ಮೌಲ್ಯಗಳ ಆತ್ಮವಿಲ್ಲದ, ಮೌಲ್ಯ ರಹಿತ ದೇಹಮಾತ್ರವಾಗಿರುವ ಜಾತಿ ಮುಖ್ಯ.

ಬಿಎಸ್‌ಪಿಯನ್ನು ಬೆಂಬಲಿಸುವ ದಲಿತರ ಒಡಕು ಸಂಘಟನೆಗಳು ಮಾನವೀಯ ಮೌಲ್ಯಗಳ ನಿರೀಕ್ಷೆಯ ಚೌಕಟ್ಟಿನಲ್ಲಿ ಸಂರಚಿತವಾದ ಒಂದು ಸಾಂಸ್ಕೃತಿಕ ಚಳವಳಿಯನ್ನೇ ಸಮಾಜ ಸುಧಾರಣಾ ಚಳುವಳಿಯನ್ನಾಗಿ ಪ್ರತಿಷ್ಠಾಪಿಸಿ ಜಾತಿಗಳನ್ನೇ ಬಂಡವಾಳವಾಗಿಸಿಕೊಂಡ ರಾಜಕೀಯ ಪಕ್ಷಗಳಿಗೆ, ಭ್ರಷ್ಟ ಅಧಿಕಾರಿಶಾಹಿಗೆ ಸಿಂಹಸ್ವಪ್ನವಾದ 'ದಸಂಸ' ದಿಂದಲೇ ತಮ್ಮ ತಮ್ಮ ವೈಯಕ್ತಿಕ ಹಿತಾಸಕ್ತಿಗಳಿಂದಾಗಿ ತಮ್ಮ ತಾಯಿ ಉದರವನ್ನೇ ಸೀಳಿ ಚೇಳುಗಳಂತೆ ಸಿಡಿದು ಬಂದಿರುವ ಅಪ್ರಾಪ್ತ ರಾಜಕೀಯ ಚಿಂತನೆಗಳನ್ನು ಹೊಂದಿರುವ ಕೆಲವು ದಲಿತರ ಜಾತಿ ಸಂಘಟನೆಗಳಷ್ಟೇ!

೮೦ರ ದಶಕದ 'ದಸಂಸ' ಮುಖಂಡರುಗಳ, ಕಾರ್ಯಕರ್ತರ ಸಾಂಸ್ಕೃತಿಕ, ಸಾಮಾಜಿಕ Commitment ಗಳನ್ನು ಇವರಲ್ಲಿ ನಾವು ನೋಡಲಾಗಲಿ ಊಹಿಸಿಕೊಳ್ಳಲೂ ಅಸಾಧ್ಯದ ಮಾತು. ಪ್ರತಿ ಶೋಷಿತರ ಮನೆಗಳಲ್ಲೂ 'ದೀಪ' ಹಚ್ಚಿದವರೇ ಸ್ವತ: ಚುನಾವಣೆಯಲ್ಲಿ ನಿಂತು ಅನುಭವಿಸಿದ, ನೋವು-ದುಃಖ ಹೇಳಲಸದಳ. ಮೂಲತಃ ಒಂದು ರಾಜ್ಯ ವ್ಯವಸ್ಥೆ ಅಥವಾ ಸರ್ಕಾರ ವ್ಯವಸ್ಥೆ (ಅದು ಯಾವುದೇ ಬಗೆಯದಾಗಿರಲಿ) ಒಂದು ಭ್ರಷ್ಟ ಕೂಪ. ಚಲನಶೀಲವಿಲ್ಲದ ಸದಾ ನಿಂತು ಮಲೆತ ನೀರು. ಅಲ್ಲಿಗೆ ಎಂತಹ ಹೊಸ ನೀರು ಬಂದರೂ ನವ-ನವೀನ ಜೀವವಿರೋಧಿ ವೈರಸ್‌ಗಳ ಇಲ್ಲವೆ ಬ್ಯಾಕ್ಟೀರಿಯಾಗಳ ಉಗಮಕ್ಕೆ ಅವಕಾಶ ನೀಡುತ್ತದೆ. ಆದುದರಿಂದಲೇ ವಿಶ್ವದ ಅಸಾಮಾನ್ಯ ಚಳುವಳಿಗಳ ಮತ್ತವುಗಳ ತತ್ವ-ಸಿದ್ಧಾಂತಗಳಿಗೆ ಯಾವ 'ಗತಿ'ಯನ್ನು ಈ 'ವ್ಯವಸ್ಥೆ' ತೋರಿಸಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಿಎಸ್‌ಪಿ ಮತ್ತವರ ಬೆಂಬಲಿತ ದಲಿತರ ಸಂಘಟನೆಗಳು ಮತ್ತವುಗಳ ಹಾಗೆ ಅದೇ ದಿಕ್ಕಿಗೆ ಮುಂದಡಿ ಇಟ್ಟಿರುವವವರ ಮಿತಿಯನ್ನು ನಾವು ಅತಿ ಸುಲಭವಾಗಿ ಗ್ರಹಿಸಬಹುದಾಗಿದೆ. ದಸಂಸ, ರೈತ ಸಂಘಟನೆಯಂತಹ ಸಂಘಟನೆಗಳು ನಿರಂತರ ಚಳವಳಿಗಳಾದಾಗ ಮಾತ್ರ (ನಿತ್ಯ ಹರಿಯುವ ನದಿಗಳಂತೆ) ಸರ್ಕಾರಗಳನ್ನು ಅದರ ಭ್ರಷ್ಟತೆಯನ್ನು ಅಲುಗಾಡಿಸಬಹುದಾಗಿದೆ ಇಲ್ಲವೆ ಹಂತ-ಹಂತವಾಗಿ ಸ್ವಚ್ಛಗೊಳಿಸಬಹುದಾಗಿದೆ.

ಒಟ್ಟಾರೆಯಾಗಿ, ನನ್ನ ಅಭಿಪ್ರಾಯವೇನೆಂದರೆ, 'ದಲಿತ ಮೂಲಭೂತವಾದ' (ದಲಿತರ ಮೂಲಭೂತವಾದವಲ್ಲ, ಮೂಲಭೂತವಾದಿ ದಲಿತರಲ್ಲಿ/ಮೂಲಭೂತವಾದ ದಲಿತತ್ವ ಅಲ್ಲವೇ ಅಲ್ಲ) ಎನ್ನುವುದು ಒಂದು ಸಾಂಸ್ಕೃತಿಕ ಭಿನ್ನ ಆಯಾಮಗಳನ್ನೊಳಗೊಂಡ ಪದವಿನ್ಯಾಸವೇ ಹೊರತು ಬಿಎಸ್‌ಪಿ ಮತ್ತದರ ಬೆಂಬಲಿತ ದಲಿತರ ಪ್ರೇರಿತ ಮೂಲಭೂತವಾದವಲ್ಲ ಎಂದೇ ನನ್ನ ಅನಿಸಿಕೆ. □

ಬಸವಶ್ರೀ ಪ್ರಶಸ್ತಿ:

ಜನಕಲಾ ಸರದಾರನಿಗೆ ಸಂದ ಗೌರವ

ಗೌರವ



ಈ ಶತಮಾನ ಭಾರತ ಕಂಡ ಅದ್ಭುತ ಜನನಾಯಕ ಗದ್ದರ್. ತನ್ನ ಹಾಡು-ಕುಣಿತದಿಂತ ಶೋಷಿತ ಜನವರ್ಗಗಳನ್ನು ಜಾಗೃತಗೊಳಿಸಿ ಶೋಷಕ ವ್ಯವಸ್ಥೆಯ ವಿರುದ್ಧ ಅವರನ್ನು ಹೋರಾಟಕ್ಕೆ ಅಣಿಗೊಳಿಸುವ ಗದ್ದರ್ ನಮ್ಮ ನಡುವಿನ ಅಪರೂಪದ ಕಲಾವಿದ. ಅಸ್ಪೃಶ್ಯರ ಗುಡಿಸಲಿನಿಂದ ಸಿಡಿದು ಬಂದ ಕೋಟಿ ಕೋಟಿ ಧ್ವನಿಗಳು ಒಂದಾಗಿ ಗದ್ದರ್ ಕಂಠದಿಂದ ಹೊರಟರೆ ಸರ್ಕಾರಗಳು ನಡುಗುತ್ತವೆ, ಭೂಮಾಲಿಕರು ಕಂಗಾಲಾಗುತ್ತಾರೆ.

○ ವೈ. ಮರಿಸ್ವಾಮಿ

ಕುದುರೆಮುಖ ನ್ಯಾಷನಲ್ ಪಾರ್ಕ್ ವ್ಯಾಪ್ತಿಯಲ್ಲಿರುವ ಆದಿವಾಸಿಗಳನ್ನು ಒಡೆದೋಡಿಸುವ ಹುನ್ನಾರದ ವಿರುದ್ಧ ಅವರನ್ನು ಸಂಘಟಿಸುತ್ತಿದ್ದ ಪಾರ್ವತಿ-ಹಾಜಿಮಾರನ್ನು ನವೆಂಬರ್ ೧೭ರ ಕಗ್ಗತ್ತಲಿನಲ್ಲಿ ಎಸ್.ಪಿ. ಮುರು'ಗನ್' ನೇತೃತ್ವದ ಪಡೆ ಸುಟ್ಟುಹಾಕಿತು. ಆ ಇಬ್ಬರು ಯುವತಿಯರ ಮೈಯಿಂದ ಚಿಲ್ಲನೆ ಸಿಡಿದ ರಕ್ತದ ಗುರುತಿನ ಕಲೆ ಇನ್ನೂ ಮಾಸಿರಲಿಲ್ಲ, ಖೂನಿಗೆ ಈಡಾದ ಯುವತಿಯರು ನಕ್ಸಲೈಟ್ ರಾದುದರಿಂದ, ಅವರನ್ನು ಮುಗಿಸಿದ್ದು ಅಪರಾಧವಲ್ಲ, ಅದೊಂದು ದೊಡ್ಡ ಸಾಧನೆ ಎಂದು ಸರ್ಕಾರ ಕೊಚ್ಚಿಕೊಳ್ಳುತ್ತಿತ್ತು. ಅದೇ ಸಂದರ್ಭದಲ್ಲಿ, ಇತ್ತ ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರು ನಕ್ಸಲ್ ಚಳವಳಿಯ ಸಾಂಸ್ಕೃತಿಕ ನಾಯಕ ಗದ್ದರ್‌ರವರಿಗೆ 'ಬಸವಶ್ರೀ ಪ್ರಶಸ್ತಿ'ಯನ್ನು ಘೋಷಿಸಿಯಾಗಿತ್ತು!

ಆಗ ಕರ್ನಾಟಕದಾದ್ಯಂತ ಇದೇ ದೊಡ್ಡ ಸುದ್ದಿ. ೧೨ನೇ ಶತಮಾನದಲ್ಲಿ ಬ್ರಾಹ್ಮಣ್ಯದ ವಿರುದ್ಧ ಕಹಳೆ ಮೊಳಗಿಸಿದ್ದ ಬಸವಣ್ಣನವರ ಸಮಾನತೆಯ ಪ್ರತೀಕವಾಗಿರುವ 'ಬಸವಶ್ರೀ ಪ್ರಶಸ್ತಿ'ಯನ್ನು ಸೆಳೆದುಕೊಂಡ ಗದ್ದರ್ ಯಾರು? ಈತ ಆಂಧ್ರ ಪ್ರದೇಶದ ಲಕ್ಷ್ಮಮ್ಮ ಎನ್ನುವ ದಲಿತ ಕೂಲಿ ತಾಯಿಯ ಮಗ. ಅಸ್ಪೃಶ್ಯರ ಗುಡಿಸಲಿನಿಂದ ಸಿಡಿದೆದ್ದು ಬಂದ ಕೋಟಿ ಕೋಟಿ ದಮನಿತರ ಗಂಟಲು. ಗದ್ದರ್ ಎನ್ನುವ ಹೆಸರೇ ಶೋಷಿತರಲ್ಲಿ ಸಂಚಲನವನ್ನುಂಟು ಮಾಡುವಷ್ಟರ ಮಟ್ಟಿಗೆ ಬೆಳೆದಿರುವಾತ. ಗದ್ದರ್ ಎಂಬ ಹೆಸರಿಗೆ ಪಂಜಾಬ್ ಭಾಷೆಯಲ್ಲಿ ಕ್ರಾಂತಿ ಎಂದರ್ಥ ಎಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಇಂದು ಗದ್ದರ್ ಕ್ರಾಂತಿಯ ಸಂಕೇತ. ಇಲ್ಲಿನ ಜಾತಿ ಆರ್ಭಟ, ಭೂಮಾಲೀಕರ ಕ್ರೌರ್ಯ ಮತ್ತು ಕೋಮುವಾದಿಗಳ ಅಟ್ಟಹಾಸದ ವಿರುದ್ಧ ಒಬ್ಬ ಸಾಮಾನ್ಯ ನರಪೇತಲನನ್ನೂ ಗುಂಡಿಗೆವಾನ್ ಮಾಡಿಬಿಡುವ ಸ್ಫೂರ್ತಿಯ ಚಿಲುಮೆ.

ಗದ್ದರ್‌ರವರಿಗೆ ತಂದೆತಾಯಿಗಳಿಟ್ಟ ಹೆಸರು ವಿಠಲ್‌ರಾವ್. ಆದರೆ ನಕ್ಸಲ್ ಚಳವಳಿಯ ಹಿನ್ನೆಲೆಯಿಂದ ಬಂದ ಗದ್ದರ್ ಎನ್ನುವ ಮೂರಕ್ಷರದ ಹೆಸರು, ಬ್ರಾಹ್ಮಣ್ಯದ ಸಂಕೇತದ ವಿಠಲ್‌ರಾವ್ ಎಂಬ ಹೆಸರನ್ನು ಅಳಿಸಿಬಿಟ್ಟಿದೆ. ಆಕಾಶವಾಣಿಯಲ್ಲಿ ಉದ್ಯೋಗಿಯಾಗಿದ್ದ ಯುವಕ ವಿಠಲರಾವ್ ಲೋಕದ ಗೊಡವೆ ನನಗ್ಯಾಕೆ ಎಂದು ಆರಾಮವಾಗಿ ಇರಬಹುದಾಗಿತ್ತು. ಆದರೆ ಅವರಿಗೆ ತಮ್ಮ ನೆಮ್ಮದಿಗಿಂತ ಶೋಷಿತ ಜನಾಂಗದ ವಿಮೋಚನೆ ಮುಖ್ಯವಾಗಿತ್ತು. ತಮ್ಮ ಕೆಲಸಕ್ಕೆ ಗುಡ್‌ಬೈ ಹೇಳಿ ನಕ್ಸಲ್ ಚಳವಳಿಗೆ ದುಮುಕಿದರು. ಜನಸಾಮಾನ್ಯರೊಡನೆ ಸಾಮಾನ್ಯ ವ್ಯಕ್ತಿಯಾಗಿ ಕಾಣುವ ಗದ್ದರ್ ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಬಿಳಿಧೋತಿಯ ಕಚ್ಚೆ ಕಟ್ಟಿಕೊಂಡು, ಕಪ್ಪು ಕಂಬಳಿಯನ್ನು ಬರೀ ಮೈಮೇಲೆ ಹೊದ್ದುಕೊಂಡು, ಕೈಯಲ್ಲಿ ಕೆಂಪು ಜಂಡಾ ಹಿಡಿದು ನಿಂತರೆ-ಅದೊಂದು ಸಿಂಹಘರ್ಜನೆ. ದಮನಿತರೆಲ್ಲರ ಆಕ್ರಂದನ-ವ್ಯವಸ್ಥೆಯ ವಿರುದ್ಧ ಆಸ್ಫೋಟ. ಬಡವರ ಬವಣೆಯನ್ನು-ವಂಚಕರ ನೀಚತನವನ್ನು ಕಥೆ ಕಟ್ಟಿ ಹಾಡುವುದರಲ್ಲಿ ಗದ್ದರ್ ನಿಸ್ಸೀಮ. ಜನನಾಟ್ಯಮಂಡಳಿ ಎಂಬ ಸಾಂಸ್ಕೃತಿಕ ವೇದಿಕೆಯ ಮೂಲಕ ನಕ್ಸಲ್ ಚಳವಳಿಯ ಸಿದ್ಧಾಂತ ಮತ್ತು ಧ್ಯೇಯೋದ್ದೇಶಗಳನ್ನು ಜನತೆಗೆ ತಲುಪಿಸುವುದು ಅವರ ಪ್ರಮುಖ ಕರ್ತವ್ಯವಾಯಿತು. ತನ್ನ ವಿಶಿಷ್ಟ ಕಲೆಯ ಮೂಲಕ ಅತ್ಯಲ್ಪ ಸಮಯದಲ್ಲೇ 'ಗದ್ದರ್ ಘರ್ಜನೆ' ಆಂಧ್ರದ ಮನೆಮಾತಾಯಿತು. ಗದ್ದರ್ ಸಮ್ಮೋಹಿನಿಗೆ ಒಳಗಾಗದವರೇ ಅಪರೂಪ.

ಆಂಧ್ರ ರಾಜಕೀಯದ ದಿಗ್ಗಜರಾಗಿದ್ದ ಅನೇಕ ರಾಜಕೀಯ ನಾಯಕರು, ಸಿನಿಮಾ ನಟರು, ಲೇಖಕರು, ಪೊಲೀಸ್ ಅಧಿಕಾರಿಗಳು ಗದ್ದರ್ ಗೆಳೆತನಕ್ಕಾಗಿ ಹಂಬಲಿಸುತ್ತಿದ್ದರು. ಆದರೆ ತಾವು ನಂಬಿಕೊಂಡ ಸಿದ್ಧಾಂತ ಮತ್ತು ಚಳವಳಿಯೊಂದಿಗೆ ಎಂದೂ ರಾಜಿಗಿಳಿಯದೆ ಆಳುವ ಸರ್ಕಾರಕ್ಕೆ ಸಿಂಹಸ್ವಪ್ನವಾಗಿ ಬೆಳೆದರು. ತಮ್ಮ ಕಲೆಯನ್ನು ಬಂಡವಾಳವನ್ನಾಗಿ ಬಳಸಿಕೊಂಡು ದಂಡಕಾರಣ್ಯದಲ್ಲಿ ನಕ್ಸಲ್ ಹುಲಿಗಳು ಪ್ರಬಲವಾಗಿ ಬೆಳೆಯಲು ನೀರೆರೆದರು. ಶೋಷಿತ ತಳಸಮುದಾಯದಲ್ಲಿ ಸಂಘಟನೆಯ ವರ್ಗಹೋರಾಟಕ್ಕೆ ನೆಲೆಯೊದಗಿಸಿದರು.

ಬಾಬಾಸಾಹೇಬ್ ಅಂಬೇಡ್ಕರ್ ನಂತರದ ಅತ್ಯಂತ ಜನಪ್ರಿಯ ನಾಯಕರೆಂದರೆ ಗದ್ದರ್. ಗದ್ದರ್‌ರವರ ಜನನಾಟ್ಯ ಮಂಡಳಿಯ ಕಾರ್ಯಕ್ರಮಕ್ಕೆ ಮುತ್ತುತ್ತಿದ್ದ ಈಗಲೂ ಮುತ್ತುತ್ತಿರುವ ಜನಸಾಗರವೇ ಇದಕ್ಕೆ ಸಾಕ್ಷಿ. ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯಲ್ಲಿ ೧೯೯೧ರಲ್ಲಿ ನಡೆದ ಗದ್ದರ್‌ರವರ ಕಾರ್ಯಕ್ರಮಕ್ಕೆ ೧೫ ಲಕ್ಷದಷ್ಟು ಜನ ಸೇರಿದ್ದರು. (೧೯೫೬ರ ಅಕ್ಟೋಬರ್ ೧೪ರಂದು ಡಾ||ಬಿ.ಆರ್. ಅಂಬೇಡ್ಕರ್ ರವರು ತಮ್ಮ ಅನುಯಾಯಿಗಳೊಡನೆ ಬೌದ್ಧಧಮ್ಮ ಸ್ವೀಕರಿಸುವಾಗ ಇಷ್ಟೇ ಸಂಖ್ಯೆಯ ಜನರಿದ್ದರು.) ರೀಲ್ ಲೈಫ್‌ನ ಸಿನಿಮಾ ನಟರಿಗಿಂತ ರಿಯಲ್ ಲೈಫ್‌ನ ಗದ್ದರ್ ತೆಲುಗರ ನೆಚ್ಚಿನ ಹೀರೋ ಆಗಿ ಬೆಳೆದರು. ಬೃಹತ್ ರೂಪದಲ್ಲಿ ಬೆಳೆದ ಗದ್ದರ್ ರವರ ಜನಪ್ರಿಯತೆಯನ್ನು ಕ್ಯಾಷ್ ಮಾಡಿಕೊಳ್ಳಲು ತೆಲಗು ಚಿತ್ರರಂಗದ ರೀಲು ಬ್ರಹ್ಮರು ಮುಗಿಬಿದ್ದರು. ಗದ್ದರ್‌ರವರನ್ನು ಹೋಲುವ ಕ್ರಾಂತಿಕಾರಿ ಅಣ್ಣಂದಿರು ಸೃಷ್ಟಿಯಾಗ ತೊಡಗಿದರು. ಗದ್ದರ್ ಹಾಡುಗಳ ಶೈಲಿಯನ್ನೇ ಹೋಲುವ ಜೆರಾಕ್ಸ್ ಹಾಡುಗಳು ಬರಹತ್ತಿದವು. ಎನ್.ಟಿ.ರಾಮರಾವ್, ಅಕ್ಕಿನೇನಿ ನಾಗೇಶ್ವರ ರಾವ್, ಚಿರಂಜೀವಿಯಂಥ ಸಿನಿಮಾ ನಟರ ಚಿತ್ರಗಳನ್ನು ಮುಗಿಬಿದ್ದು ನೋಡುತ್ತಿದ್ದ ತೆಲಗರು, ಗದ್ದರ್ ವಾಸನೆಯಿರುವ ತೆಲುಗು ಚಿತ್ರಗಳನ್ನು ಹುಚ್ಚೆದ್ದು ನೋಡತೊಡಗಿದರು. ಗದ್ದರ್ ಪವಾಡದ ಮುಂದೆ ಕೋಟಿ ಬಜೆಟ್ಟಿನ ಚಿತ್ರಗಳು ಬೋರಲು ಬಿದ್ದವು. ಗದ್ದರ್ ಇಮೇಜ್ ಚಿತ್ರ ನಿರ್ಮಾಪಕರ ಗಲ್ಲಾ ಪೆಟ್ಟಿಗೆಯನ್ನು ತುಂಬುವ ಚಿನ್ನದ ಮೊಟ್ಟೆಯಂತಾಯಿತು. ಸ್ವತಹ ಗದ್ದರ್‌ರವರೇ ಕೆಲವು ಸಿನಿಮಾಗಳಿಗೆ ಹಾಡು ಬರೆದು ಕೊಟ್ಟರು. ಅದಕ್ಕಾಗಿ ಆಂಧ್ರ ಸರ್ಕಾರದ ನಂದಿ ಪ್ರಶಸ್ತಿಯೂ ಕಾಲಬುಡಕ್ಕೆ ಬಂದು ಬಿತ್ತು. ಯಾವುದೇ ಬದ್ಧತೆಯಿರದ ಸಿನಿಮಾರಂಗ ರೊಕ್ಕ ಮಾಡುವ ಒಂದು ದಂಧೆ ಎಂದರಿತು, ಅದರ ಸಾವಾಸದಿಂದಲೇ ದೂರವಾದರು.

ನಕ್ಸಲ್ ಚಳವಳಿಗೆ ದೆವ್ವದಂತೆ ಯುವಜನಾಂಗವನ್ನಾಕರ್ಷಿ ಸುವ ದೈತ್ಯಶಕ್ತಿಯಾಗಿ ಬೆಳೆದ ಗದ್ದರ್‌ರವರನ್ನು ನಿರ್ನಾಮ ಮಾಡಲು ಆಂಧ್ರ ಸರ್ಕಾರ ಇನ್ನಿಲ್ಲದ ಪ್ರಯತ್ನ ಮಾಡಿ ಸೋತಿದೆ. ಅಲ್ಲಿನ ಇಂದಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುವಿನ ಅಣತಿಯ ಮೇರೆಗೆ ಆಂಧ್ರ ಪೊಲೀಸರು ಗದ್ದರ್ ಜೀವಕ್ಕೆ ಗುಂಡಿಕ್ಕಿದಾಗಲೂ, ಗಟ್ಟಿಜೀವಿ ಗದ್ದರ್ ಬದುಕಿಬಿಟ್ಟರು. ಅವರನ್ನು ಕರೆದುಕೊಂಡು ಹೋಗಲು ಯಮರಾಜನಿಗೂ ಇಷ್ಟವಿರಲಿಲ್ಲ, ಬಹುಶಃ ಆತನೂ ಗದ್ದರ್ ಅಭಿಮಾನಿಗಳಲ್ಲೊಬ್ಬನಾಗಿರಬಹುದು. ಆಂಧ್ರ ಪೊಲೀಸರು ಹಾರಿಸಿದ ಗುಂಡುಗಳಲ್ಲಿ ಒಂದು ಈಗಲೂ ಬೆನ್ನು ಹುರಿಯ ಪಕ್ಕದಲ್ಲಿ ಉಳಿದುಬಿಟ್ಟಿದೆ. ತನ್ನ ಕಣ್ಣೆದುರೇ ಪೊಲೀಸರ ನಕಲಿ ಎನ್‌ಕೌಂಟರ್‌ನಲ್ಲಿ ಬಲಿಯಾದ ೫೦೦೦ಕ್ಕೂ ಹೆಚ್ಚು ಯುವಕ-ಯುವತಿಯರ ಹತ್ಯೆಗಳನ್ನು ಕಣ್ಣಾರೆ ಕಂಡಿರುವ ಈ ಹಿರಿಯಣ್ಣನಿಗೆ ಇದ್ಯಾವ ಲೆಕ್ಕ! ನಕಲಿ ಎನ್‌ಕೌಂಟರ್‌ಗಳಲ್ಲಿ ಅಮರರಾದವರ ಶವಗಳನ್ನು ಅವರ ತಂದೆ-ತಾಯಿಗಳಿಗೆ ಒಪ್ಪಿಸುವಂತೆ ಹಿರಿಯ ಜೀವಿ, ಕವಿ, ಚಿಂತಕ ವರವ್‌ರಾವ್ ಜೊತೆ ಆಂಧ್ರಸರ್ಕಾರದ ಜೊತೆ

ಹೋರಾಡಿದ ದಿಟ್ಟ ಗದ್ದರ್ ಮೇಲೆ ಸಾವಿಗೂ ಪ್ರೀತಿಯಿದೆ! ಅದಕ್ಕೆ ಅವರನ್ನು ಉಳಿಸಿದೆ!

ಕುಲ-ಮತ, ದೇವರು-ದಿಂಡಿರುಗಳನ್ನು ತಮ್ಮ ಮಾತುಗಳಲ್ಲಿ ತುಂಡರಿಸುವ ಗದ್ದರ್ ಒಬ್ಬ ಸಮರ್ಥ ವೈಜ್ಞಾನಿಕ ಚಿಂತಕ. ಹಾಲು ಕುಡಿದ ಗಣಪ ಯಾಕೆ ಮೂತ್ರ ಮಾಡಲಿಲ್ಲ ಎಂಬ ಅವರ ಸರಳ ವೈಜ್ಞಾನಿಕ ಪ್ರಶ್ನೆಗೆ ಸನಾತನವಾದಿಗಳ ಬಳಿ ಉತ್ತರವಿಲ್ಲ. ಕೇಂದ್ರದ ಮನುವಾದಿಗಳ ಕೃಪೆಯಿಂದ ರಾಷ್ಟ್ರಪತಿಯಾಗಿರುವ ಅಬ್ದುಲ್ ಕಲಾಮ್‌ರವರನ್ನು ಗದ್ದರ್ ಹೊಗಳುವುದು ಹೀಗೆ;

ಸಲಾಮ್ ವಾಲೇಕುಮ್

ಕಲಾಮ್ ಸಾಬ್, ಕಲಾಮ್‌ಸಾಬ್

ಬಿಜೆಪಿ ಜಾಲ್‌ಮೆ ಪಸ್‌ಗಯಾ, ಗುಲಾಮ್ ಸಾಬ್!

ಕೃಷಿಕೂಲಿ ಕಾರ್ಮಿಕರಾದ ಮಹಿಳೆಯರು ಪಡುವ ಶೋಷಣೆಯನ್ನು ವಿವರಿಸುವ ಹಾಡೊಂದನ್ನು ತಮ್ಮ ಖಾಸಾ ತಾಯಿಯ ಮೇಲೆ ರಚಿಸಿರುವ ಗದ್ದರ್;

ಕಣಗೀಲೇ ಗಿಡದಲ್ಲಿ ಲಚುಮಮ್ಮೋ, ಲಚುಮಮ್ಮೋ

ನೀನು ಕಣ್ಣೀರು ಹಾಕುವೆ ಯಾತಕಮ್ಮೋ, ಯಾತಕಮ್ಮೋ

ಎಂದು ಸಂತೈಸುತ್ತಾ ಕುಡುಗೋಲು ಮಸೆದುಕೊಂಡು ಸಂಘ ಸೇರುವಂತೆ ಆಹ್ವಾನಿಸುತ್ತಾರೆ.

ಜಾತಿ ವ್ಯವಸ್ಥೆಯಿಂದ ನಲುಗಿ ಹೋಗಿರುವ ಜನರು, ಕುಲ-ಮತಗಳ ನಡುವಿನ ಬೇಧಗಳ ಛಿದ್ರಗೊಳಿಸಿ, ಶ್ರಮ ಜೀವಿಗಳೆಲ್ಲಾ ಒಂದಾದರೆ ಸಮತಾರಾಜ್ಯ ಉದಯಿಸುತ್ತದೆ ಎನ್ನುತ್ತಾರೆ. ನೆಲದ ಒಡಲನ್ನು ಸೀಳಿ ಬೀಜ ಮೊಳಕೆಯಾಗಿ ಪುಟಿದೆದ್ದು ಬರುವುದನ್ನು ಕ್ರಾಂತಿಯ ಒಂದು ಕುರುಹು ಎಂದು ಪ್ರತಿಪಾದಿಸುತ್ತಾರೆ. ನಾಯಿಯಿಂದ ತನ್ನ ಮರಿಗಳನ್ನು ರಕ್ಷಿಸಿಕೊಳ್ಳಲು ಮೈಯ್ಯಲ್ಲಿನ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿಕೊಂಡು ರಭಸದಿಂದ ಅದರ ಮುಖಕ್ಕೆ ತನ್ನೆರಡೂ ಕಾಲುಗಳಿಂದ ಒದೆಯುವ ಕೋಳಿಯ ಪ್ರತಿಕ್ರಿಯೆಯನ್ನು ಅಸ್ತಿತ್ವದ ರಕ್ಷಣೆಗಾಗಿ ನಡೆಯುವ ಪ್ರತಿಭಟನೆ ಎನ್ನುತ್ತಾರೆ. ದೇಶದಲ್ಲಿ ಸಮಸ್ಯೆ ಇರುವುದರಿಂದಲೇ, ಅಸಮಾನತೆ-ಶೋಷಣೆ ತಾಂಡವವಾಡುತ್ತಿರುವುದರಿಂದಲೇ, ಸಮಸ್ಯೆಗೆ ಪರಿಹಾರದ ಪರ್ಯಾಯವಾಗಿ ನಕ್ಸಲ್ ಚಳವಳಿ ಮೈದಳಿದಿದೆ ಎಂದುತ್ತರಿಸುತ್ತಾರೆ. ಆದರೆ, ಎಲ್ಲರೂ ನಕ್ಸಲ್‌ವಾದ ಮತ್ತು ಅದರ ಹೋರಾಟದ ಹಾದಿಯನ್ನು ಒಪ್ಪಲೇಬೇಕೆಂಬ ಒತ್ತಾಯವಿಲ್ಲಎಂಬ ಪ್ರಬುದ್ಧತೆಯನ್ನುಮೆರೆಯುತ್ತಾರೆ.

ತಮ್ಮ ೩೫ ವರ್ಷಗಳ ಕ್ರಾಂತಿಕಾರಿ ಚಳವಳಿಯ ಹೋರಾಟದ ಬದುಕಿನಲ್ಲಿ ಪಕ್ಕದ ಕರ್ನಾಟಕದೊಂದಿಗೆ ನಿಕಟ ಸಂಬಂಧವಿಟ್ಟುಕೊಂಡಿರುವ ಗದ್ದರ್‌ರವರು, ಇಲ್ಲಿಯೂ ಅಸಂಖ್ಯಾತ ಸಂಗಾತಿಗಳನ್ನು, ಅಭಿಮಾನಿಗಳನ್ನು ಮತ್ತು ಹಿತೈಷಿಗಳನ್ನು ಹೊಂದಿದ್ದಾರೆ. ಕರ್ನಾಟಕಕ್ಕೂ-ಗದ್ದರ್‌ಗೂ ಇರುವ ಸಂಬಂಧವೆಂದರೆ, ಅದು ಕನ್ನಡ ತಾಯಿ ಮತ್ತು ತೆಲುಗು ತಾಯಿಗಿರುವ ಕರುಳಬಳ್ಳಿಯ ಸಂಬಂಧ. ಇತ್ತೀಚೆಗಿನ ವರ್ಷಗಳಲ್ಲಿ ಕರ್ನಾಟಕದ ನೆಲದಲ್ಲಿ ಕೋಮುವಾದಿಗಳು ವಿಷಬೀಜದ ಬೀಜಗಳನ್ನು ಬಿತ್ತಲು ಪ್ರಯತ್ನಿಸುತ್ತಿರುವುದರ ಬಗ್ಗೆ ವ್ಯಗ್ರಗೊಂಡು ಕೋಮುವಾದಿಗಳನ್ನು ಬಗ್ಗುಬಡಿಯಲು ಕನ್ನಡ ತಾಯಿಯ ಮಕ್ಕಳೊಂದಿಗೆ ಕೈ ಜೋಡಿಸಿದ್ದಾರೆ. ಕಳೆದ ವರ್ಷ ಡಿಸೆಂಬರ್ ೨೯ರಂದು ಚಿಕ್ಕಮಗಳೂರಿನಲ್ಲಿ ನಡೆದ ಕೋಮುಸೌಹಾರ್ದತಾ ರ್‍ಯಾಲಿಯಲ್ಲಿ ಭಾಗವಹಿಸಿ ಮಲೆನಾಡಿನಲ್ಲಿ ಜನ ಮೈಮರೆತು ಕೇಳುವಂತೆ, ಪದ ಕಟ್ಟಿ ಹಾಡಿದ ಗದ್ದರ್‌ರವರ ಪ್ರಭಾವದಿಂದ ಇಂದು ಕೋಮುವಾದಿಗಳು ನಿದ್ರೆಗೆಡುವಂತಾಗಿದೆ. ಅವರ ಪೋಷಕ ಸರ್ಕಾರ ಮತ್ತು ಪೊಲೀಸ್ ಇಲಾಖೆ ಜನರಿಂದ ಉಗಿಸಿಕೊಳ್ಳುತ್ತಿವೆ.

ಬುದ್ಧ, ಬಸವ, ಅಂಬೇಡ್ಕರ್‌ರವರ ಸಮಾನತೆಯ ಸಂಘರ್ಷದ ರಥವನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ಜನಪರ ನಾಯಕ ಗದ್ದರ್‌ರವರಿಗೆ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರು 'ಬಸವಶ್ರೀ ಪ್ರಶಸ್ತಿ' ಘೋಷಿಸಿದಾಗ ಮುಕುಳಿ ಸುಟ್ಟುಕೊಂಡ ಮಂಗ್ಯಾಗಳಂತಾಡಿದ ಕೋಮುವಾದಿಗಳು, ಅನೇಕ ಕುತಂತ್ರಗಳ ಮೂಲಕ ಪ್ರಶಸ್ತಿಯನ್ನು ಹಿಂದೆಗೆದುಕೊಳ್ಳುವಂತೆ ಒತ್ತಡ ಹೇರಿದರು. ಅದ್ಯಾವುದಕ್ಕೂ ಕೇರ್ ಮಾಡದ ಶರಣರು, ಬಸವೇಶ್ವರರು ಅಂದು ನಡೆಸಿದ ಸಾಮಾಜಿಕ ಹೋರಾಟವನ್ನು ಇಂದು ಗದ್ದರ್ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸೌಹಾರ್ದಯುತ ಸಮಾನತೆಯ ಸಮಾಜವನ್ನು ಕಟ್ಟುವ ಕಾಯಕದಲ್ಲಿ ತೊಡಗಿದವರನ್ನು ನಕ್ಸಲೈಟ್ ಇತ್ಯಾದಿ ಹೆಸರಿನಿಂದ ಮಬ್ಬುಗೊಳಿಸಲು ಸಾಧ್ಯವಿಲ್ಲ ಎಂದು ಸಮರ್ಥಿಸಿಕೊಂಡು ಬಸವ ಪರಂಪರೆಗೆ ಮೆರುಗು ನೀಡಿದರು. ಡಿಸೆಂಬರ್ ೫ರಂದು 'ಬಸವಶ್ರೀ ಪ್ರಶಸ್ತಿ'ಯನ್ನು ಆಧುನಿಕ ಬಸವಣ್ಣ ಗದ್ದರ್‌ರವರಿಗೆ ಅರ್ಪಿಸುವುದರ ಮೂಲಕ ಈ ನೆಲದಲ್ಲಿ ಚಿಗುರಬೇಕೆಂದು ಕನಸು ಕಾಣುತ್ತಿದ್ದ ಮನುವಾದಿಗಳ ಏಜೆಂಟರ ಮಂಗ್ಯಾಟಕ್ಕೆ ತಿರುಗೇಟು ನೀಡಿದರು.

ಬಸವಶ್ರೀ ಪ್ರಶಸ್ತಿಯೊಂದಿಗೆ ನೀಡಲಾಗಿದ್ದ ಒಂದು ಲಕ್ಷ ರೂಪಾಯಿಗಳ ಚೆಕ್ಕನ್ನು ಶಿವಮೊಗ್ಗದ ಕೋಮು ಸೌಹಾರ್ದತಾ ವೇದಿಕೆಗೆ ದೇಣಿಗೆಯಾಗಿ ಕೊಡುವುದರ ಮೂಲಕ ತಮಗೆ ಸಿಕ್ಕ ಗೌರವವನ್ನು ಮತ್ತಷ್ಟು ಹೆಚ್ಚಿಸಿಕೊಂಡ ಗದ್ದರ್‌ರವರು, ದಿನಾಂಕ ೨೮-೧೨-೨೦೦೩ರಂದು ಚಿಕ್ಕಮಗಳೂರಿನಲ್ಲಿ ನಡೆದ 'ಕಟ್ಟೋಣ ಸೌಹಾರ್ದ ಕರ್ನಾಟಕ' ರ್‍ಯಾಲಿಯಲ್ಲಿ ಭಾಗವಹಿಸುವುದರ ಮೂಲಕ ಮತ್ತೊಮ್ಮೆ ಕನ್ನಡ ತಾಯಿಗೆ ವಂದನೆಯನ್ನು ಸಲ್ಲಿಸಿದ್ದಾರೆ. ರ್‍ಯಾಲಿಯ ನಂತರ ಪಾರ್ವತಿ-ಹಾಜೀಮಾ ಹುತಾತ್ಮರಾದ ಗ್ರಾಮವನ್ನೊಳಗೊಂಡಂತೆ ಅನೇಕ ಸ್ಥಳಗಳಲ್ಲಿ ಸುತ್ತಾಡಿ ಕೃಷ್ಣ ಸರ್ಕಾರವನ್ನು ಜಾಲಾಡಿಸಿದ್ದಾರೆ. ಫ್ಯಾಸಿಸ್ಟ್‌ರ ಜೀವವಿರೋಧಿ ನೀತಿಯನ್ನು ಬಯಲುಗೊಳಿಸಿದ್ದಾರೆ.

ಅರೆಹುಚ್ಚ ಪ್ರವೀಣ ತೊಗಾಡಿಯಾನ ಆರಾಧಕರಾಗಿರುವ ಅಖಿಲಭಾರತ ಬ್ರಾಹ್ಮಣ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಎಳಸುಗಳು ಗದ್ದರ್ ಕರ್ನಾಟಕ ಪ್ರವೇಶಿಸದಂತೆ ತಡೆಯಬೇಕೆಂದು ಚಂಡಿ ಹಿಡಿದು ಕುಳಿತಿರುವಾಗಲೇ ದೂರದಲ್ಲಿ 'ಜಾಗೋರೇ' (ಜಾಗೃತರಾಗಿ) ಎನ್ನುವ ಧ್ವನಿ ಕೇಳಿಬರುತ್ತಿದೆ. ಆ ಕರೆಗೆ ಓಗೊಟ್ಟು ನೂರಾರು ಪಾರ್ವತಿ-ಹಾಜಿಮಾರು ಸ್ವರಸೇರಿಸುತ್ತಿದ್ದಾರೆ. ಬಹುಜನ ಶೋಷಿತರು ವಾಜಪೇಯಿ ಮತ್ತು ಕೃಷ್ಣರನ್ನು ಬೆನ್ನಟ್ಟಿಸಿಕೊಂಡು ಹೋಗಿ ಪಾರ್ಲಿಮೆಂಟ್-ವಿಧಾನಸೌಧದಿಂದ ಕಾಲುಕೀಳಿಸಲು ಗರಮ್ಮಾಗಿ, ಸಜ್ಜಾಗಿ ನಿಂತಿದ್ದಾರೆ! □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೩೨೮ ೧೬೬೭

ಜಿಜ್ಞಾಸೆ

ಯಾವುದೇ ಧರ್ಮವನ್ನು ಅಧಿಕಾರಕ್ಕೆ, ಹಣಕ್ಕೆ ದುರುಪಯೋಗಪಡಿಸಿಕೊಂಡರೆ ಏನಾಗುತ್ತದೆ? ಅದರ ಜೀವ ತೆಗೆದು ಹೆಣ ಮಾಡಿದಂತಾಗುತ್ತದೆ ಅಷ್ಟೆ. ಅದಕ್ಕೇ ನನಗೆ ಹಿಂದೂ ಸಮಾಜೋತ್ಸವ ಅಂದರೆ ಅಲ್ಲಿ ಹಿಂದೂ ಧರ್ಮಗಳ ಜೀವ ತೆಗೆದು ಹೆಣ ಮಾಡಿ ಚಟ್ಟದಲ್ಲಿ ಅಲಂಕೃತ ವಾಗಿ ಕೂರಿಸಿ ಆ ಚಟ್ಟವನ್ನು ಈ ನಾಲ್ವರು- ಪೇಜಾವರರು, ರಾಮಕೃಷ್ಣ ಸ್ವಾಮೀಜಿ, ರವಿಶಂಕರ್, ಆದಿಚುಂಚನಗಿರಿ ಸ್ವಾಮೀಜಿ- ಆ ಹೆಣ ಹೊತ್ತುಕೊಂಡು ಮೆರವಣಿಗೆ ಹೊರಟಿದ್ದಾರೆ ಎಂಬಂತೆ ಕಾಣಿಸಿತು.

(ಜನವರಿ ೪, ೨೦೦೪ರಂದು ನಡೆದ ಕರ್ನಾಟಕ ರಾಜ್ಯ ದಲಿತ ನೌಕರರ ಒಕ್ಕೂಟದ ಸಭೆಯಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗ.)

ದೇವನೂರು ಮಹಾದೇವ

ಧರ್ಮದ ಹೆಣ ಹೊತ್ತ ಜಗದ್ಗುರುಗಳು

ದಲಿತ ನೌಕರರ ಬಗ್ಗೆ ಪ್ರಚಲಿತದಲ್ಲಿರುವ ಒಂದು ಮಾತು ಹೀಗಿದೆ; 'ತನಗೆ ಏನಾದರೂ ಅನ್ಯಾಯ, ಕಷ್ಟ ಬಂದಾಗ ದಲಿತ ನೌಕರ ಅದನ್ನು ಇಡೀ ಜನಾಂಗಕ್ಕೇ ಆದ ಅನ್ಯಾಯ ಎಂಬಂತೆ ಗೋಳಾಡುತ್ತಾನೆ. ಇಲ್ಲದಿದ್ದರೆ ಸುಮ್ಮನಿರುತ್ತಾರೆ' ಅಂತ. ಈ ಮಾತಿನ ಅರ್ಥ ದಲಿತ ನೌಕರ ತಾನು, ತನ್ನ ಕುಟುಂಬ ಎಂದಾಗಿಬಿಟ್ಟ, ತಾನು ತನ್ನ ಸಮುದಾಯ ಎಂದಾಗಲಿಲ್ಲ, ಇತರರ ಮಾತು ಬೇರೆ. ಆದರೆ ಅವಮಾನ, ಬಡತನದಿಂದ ಮೈತಳೆದು ವಿದ್ಯಾವಂತನಾಗಿ ಕಣ್ಣುಬಿಟ್ಟವನು ತನ್ನ ಸಮುದಾಯದ ಕಡೆಗೆ ತಿಂಗಳಲ್ಲಿ ಕನಿಷ್ಟ ಒಂದು ದಿನವಾದರೂ ನೋಡಬೇಕಿತ್ತು. ದಲಿತ ನೌಕರರ ಕೇವಲ ಒಂದು ದಿನದ ಸಂಬಳದಲ್ಲಿ ತಾವು ಹುಟ್ಟಿ ಬಂದ ಸಮುದಾಯದ ಇಡೀ ಮಕ್ಕಳ ಶಿಕ್ಷಣ ವಹಿಸಿಕೊಳ್ಳಬಹುದಿತ್ತು, ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ಕೊರಗರು; ಈ ಭೂಮಿ ಮೇಲಿನ ಅತ್ಯಂತ ಅವಮಾನಿತರು ಅವರು. ಕೇವಲ ೨೨ ಸಾವಿರ ಇರುವ ಇವರನ್ನು ಇಡಿಯಾಗಿ ದತ್ತು ತೆಗೆದುಕೊಂಡು ಅವರ ಕಣ್ಣೀರು ಒರೆಸಬಹುದಾಗಿತ್ತು, ಈ ದಿಕ್ಕಿನಲ್ಲಿ ನಡೆಯಲಿಲ್ಲ, ಇಂಥ ಸಮಸ್ಯೆಗಳನ್ನು ದಲಿತ ನೌಕರರು ತಮ್ಮ ಸ್ವಂತದ್ದು ಅಂದು ಕೊಳ್ಳಲಿಲ್ಲ, ಸಂಘಟಿತರೂ ಆಗಲಿಲ್ಲ, ರಚನಾತ್ಮಕವೂ ಆಗಲಿಲ್ಲ.

ಇಂದು ದಲಿತ ನೌಕರರ ಒಕ್ಕೂಟ ಚಿಗುರುವ ಪ್ರಯತ್ನದಲ್ಲಿದೆ. ಇಲ್ಲಿರುವ ಬಹುತೇಕ ದಲಿತ ನೌಕರರು ದಲಿತ ಸಂಘರ್ಷ ಸಮಿತಿಯು ಹುಟ್ಟಿದ ಕಾಲದಲ್ಲಿ ಕೆಲಸಕ್ಕೆ ಸೇರಿದವರಾಗಿದ್ದು, ಈಗ ನಿವೃತ್ತಿ ಹತ್ತಿರ ನಿಂತಿದ್ದಾರೆ. ಇವರು ದಸಂಸ ಆಂದೋಲನದ ಒಡನಾಟದಲ್ಲಿದ್ದವರು ಎಂಬ ಕಾರಣಕ್ಕಾಗಿ ಸ್ವಲ್ಪ ಕಟುವಾಗೇ ಹೇಳುವ- ದಲಿತ ನೌಕರರ ಜೀವನ ಚರಿತ್ರೆಯನ್ನು ಒಂದೇ ವಾಕ್ಯದಲ್ಲಿ ಹತ್ತು ಪದಗಳಲ್ಲಿ ಬರೆಯಿರಿ ಎಂದರೆ ಏನನ್ನು ಬರೆಯಬಹುದು? 'ಬಡತನದಲ್ಲಿ ಕಷ್ಟಪಟ್ಟು ಓದಿ ವಿದ್ಯಾವಂತನಾಗಿ ಕೆಲಸಕ್ಕೆ ಸೇರಿ ಸಂಬಳ ತೆಗೆದುಕೊಂಡು ಆಮೇಲೆ ಊಟ ಮಾಡಿಕೊಂಡು ಚೆನ್ನಾಗಿ ಸತ್ತ'- ಬಹುತೇಕರು ಇಷ್ಟೆ ಅಲ್ಲವೆ? ಇದಾಗದಿರಲಿ. ನಾಳೆಯಲ್ಲ, ಇಂದಿನಿಂದಲೇ ದಲಿತ ನೌಕರರ ಒಕ್ಕೂಟ ನೊಂದವರ ಕಣ್ಣೀರು ಒರೆಸುವ ಸಂಘಟನೆಯಾಗಲಿ, ಉಳಿಯಲಿ.

ಇತ್ತೀಚೆಗೆ ದಲಿತ ಸಮುದಾಯ ತಿರುಗಿ ನೋಡುವಂಥ ಎರಡು ವಿದ್ಯಮಾನಗಳು ಜರುಗಿವೆ. ಮೊದಲನೆಯದು ದಲಿತರು ಬೌದ್ಧ ಧರ್ಮದ ಕಡೆಗೆ, ಇನ್ನೊಂದು ಹಿಂದೂ ಸಮಾಜೋತ್ಸವ. ಈ ಹಿಂದೂ ಸಮಾಜೋತ್ಸವವನ್ನು ಎಚ್ಚೆತ್ತ ಎಲ್ಲರೂ ಗುಮಾನಿಯಿಂದ ನೋಡಬೇಕಾಗಿದೆ. ಈ ಸಂಬಂಧ ಪಟ್ಟಂತೆ ಶ್ರೀ ಮುರುಘರಾಜೇಂದ್ರ ಅವರಿಗೆ ಪತ್ರ ಬರೆದಿದ್ದೆ. ಅದು ಹೀಗಿದೆ: 'ಹಿಂದೆ ಇಡೀ ಸಮಾಜವನ್ನು ಬ್ರಾಹ್ಮಣ ಮಠಗಳು ಪ್ರತಿನಿಧಿಸುತ್ತಿದ್ದವು. ಇತ್ತೀಚೆಗೆ ಮಧ್ಯಮ ಜಾತಿಗಳ ಮಠಗಳು ಪ್ರಬಲಗೊಂಡು ಬಹುಸಂಖ್ಯಾತ ಜನ ಈ ಮಠಗಳಿಗೆ ನಡೆದುಕೊಳ್ಳುತ್ತಿರುವುದರಿಂದ ಬ್ರಾಹ್ಮಣ ಮಠ ಗಳ ಅಹಂಗೆ ಪೆಟ್ಟು ಬೀಳುತ್ತಿದೆ ಅನ್ನಿಸುತ್ತಿದೆ. ಅದಕ್ಕಾಗಿ ಬ್ರಾಹ್ಮಣ ಮಠಗಳ ಅಹಂ, ಇಡೀ ಸಮಾಜವನ್ನು ತಾನು ಪ್ರತಿ ನಿಧಿಸಬೇಕೆಂಬ ಮೇಲರಿಮೆ ಹುನ್ನಾರವಾಗಿ ಭಜರಂಗದಳ, ಸಂಘ ಪರಿವಾರಕ್ಕೆ ಆಶೀರ್ವಾದ ಮಾಡುತ್ತಿರುವಂತೆ ಕಾಣುತ್ತಿದೆ. ಹಿಂದುತ್ವ ಪರಿಕಲ್ಪನೆ ಪ್ರಬಲವಾದರೆ ಭಾರತದ ನೂರಾರು ಧರ್ಮಗಳು, ಸಾವಿರಾರು ಸಂಪ್ರದಾಯಗಳು ತಂತಾನೇ ನಾಶವಾಗುವುದರಿಂದ ಮತ್ತೆ ಬ್ರಾಹ್ಮಣಶಾಹಿ ತನ್ನ ಮೇಲರಿಮೆ ಕಾಪಾಡಿಕೊಳ್ಳುವುದರ ಹವಣಿಕೆಯಾಗಿ ಇದು ನನಗೆ ಕಾಣಿಸುತ್ತಿದೆ. ಶ್ರೀ ಪೇಜಾವರರ ಚಲನವಲನ ನನಗೆ ಹೀಗೆ ಅನ್ನಿಸಲು ಕಾರಣವಾಯ್ತು'.

ನನ್ನ ಗುಮಾನಿಗೆ ಇದೂ ಕಾರಣವಾಗಿದೆ. ಆಯ್ತು, ಈ ಹಿಂದೂ ಸಮಾಜೋತ್ಸವದ ಆಳದಲ್ಲಿ ಇರುವುದಾದರೂ ಏನು? ಈ ಹಿಂದೂ ಜಾತಿ ಸಮಾಜದೊಳಗೆ ಉಣ್ಣಲ್ಲ, ಉಡಲ್ಲ, ಕೊಟ್ಟು-ತಂದು ಮಾಡಲ್ಲ, ಮಠಾಧಿಪತಿಯಂತೂ ಆ ಜಾತಿಯವರು ಬಿಟ್ಟು ಬೇರೆ ಜಾತಿಯವರು ಆಗಲ್ಲ, ಭಾರತದಲ್ಲಿ ಜಾತಿಗಳ ಒಳಗೆ ಏಕರೂಪ ಕಾನೂನು ಕಟ್ಟಳೆಗಳು ಇವೆ. ಆದರೆ ಧರ್ಮಕ್ಕಿಲ್ಲ, ಆ ಧರ್ಮದೊಳಗೆ ಊಟ, ಮದುವೆ, ಪೂಜೆ,

ಮಠಾಧಿಪತಿ ಆಗುವಲ್ಲಿ ಯಾವ ಜಾತಿಯವರೂ ಆಗಬಹುದಾದ ಏಕರೂಪತೆ ಇಲ್ಲ. ಏಕರೂಪದ ಕಾನೂನು ಬೇಕಾಗಿರುವುದು ಜಾತಿಗಳ ನಡುವೆ ತಾನೆ? ಇಲ್ಲಿ ಏಕರೂಪದ ಕಾನೂನು ಮಾಡದೆ ಮತಾಂತರ ಬೇಡ ಅನ್ನುವವರು ಹೊಟ್ಟೆಗೆ ಏನು ತಿಂತಾರೆ ನನಗಂತೂ ಅರ್ಥ ಆಗ್ತ ಇಲ್ಲ. ಜಾತಿ ಪದ್ಧತಿಯ ಮೇಲುಕೀಳುಗಳನ್ನು ಉಳಿಸಿಕೊಳ್ಳುವುದಕ್ಕೆ ದೇವರು-ಧರ್ಮವನ್ನೆ ರೌಡಿಗಳನ್ನಾಗಿಸಿ ಬಳಸಿಕೊಂಡ ಅಧಃಪತನದ ಸಮಾಜ ನಮ್ಮದು. ಈಗ ಅದೇ ದೇವರು ಧರ್ಮ ಬಳಸಿಕೊಂಡು ಅಧಿಕಾರ ಹಿಡಿಯುವ ಹುನ್ನಾರ ನಡೆಯುತ್ತಿದೆ. ಇಂಥ ಹಿಂದೂ ಸಮಾಜೋತ್ಸವ ಅದಕ್ಕೆ ವಾತಾವರಣ ನಿರ್ಮಿಸುತ್ತಿದೆ. ಪೇಜಾವರರು, ರಾಮಕೃಷ್ಣ ಆಶ್ರಮ ಸ್ವಾಮೀಜಿ, ರವಿಶಂಕರ್, ಆದಿಚುಂಚನಗಿರಿ ಸ್ವಾಮೀಜಿ ಇವರುಗಳು- ಅಧಿಕಾರಕ್ಕಾಗಿ, ಹಣಕ್ಕಾಗಿ ಧರ್ಮದೇವರು ಬಳಸಿ ಪಾಪಿಷ್ಠರಾಗಬೇಡಿ ಎಂದು ಜನ ಸಮುದಾಯಕ್ಕೆ ಹೇಳಬೇಕಾದವರು. ಆದರೆ ಇವರೇ ಮುಂದಾಳ್ತನ ವಹಿಸಿ ತಾವೇ ಪಾಪಿಷ್ಠರಾಗಿಬಿಟ್ಟರು. ಆದಿಚುಂಚನಗಿರಿ ಸ್ವಾಮೀಜಿ, ಹೊಸಬರು- ಹೋಗಲಿ, ರವಿಶಂಕರ್ ಧ್ಯಾನಿಯಂತೆ! ಅಂದರೆ ಎಲ್ಲ ಕೊಳಕಿಂದ ಅತೀತ ರಾಗಬೇಕಾದವರು. ಇವರೇಕೆ ಕೊಳಕಿಗೆ ಬಿದ್ದರು? ಎಲ್ಲಾ ಧರ್ಮಗಳ ಸತ್ವ, ಕೂಡಿಸಿದ, ಕೂಡಿಸಲು ದನದ ಮಾಂಸ ವನ್ನು ತಿಂದ ಪರಮಹಂಸರ ಪರಂಪರೆಯ ರಾಮಕೃಷ್ಣ ಆಶ್ರಮದ ಸ್ವಾಮೀಜಿಯವರು ಪರಮಹಂಸರನ್ನೆ ತಿಥಿ ಮಾಡಿಬಿಟ್ಟರು! ಹೀಗಾಗಬಾರದಿತ್ತು.

ಯಾವುದೇ ಧರ್ಮವನ್ನು ಅಧಿಕಾರಕ್ಕೆ, ಹಣಕ್ಕೆ ದುರುಪಯೋಗಪಡಿಸಿಕೊಂಡರೆ ಏನಾಗುತ್ತದೆ? ಅದರ ಜೀವ ತೆಗೆದು ಹೆಣ ಮಾಡಿದಂತಾಗುತ್ತದೆ ಅಷ್ಟೆ ಅದಕ್ಕೇ ನನಗೆ ಹಿಂದೂ ಸಮಾಜೋತ್ಸವ ಅಂದರೆ ಅಲ್ಲಿ ಹಿಂದೂ ಧರ್ಮಗಳ ಜೀವ ತೆಗೆದು ಹೆಣ ಮಾಡಿ ಚಟ್ಟದಲ್ಲಿ ಅಲಂಕೃತ ವಾಗಿ ಕೂರಿಸಿ ಆ ಚಟ್ಟವನ್ನು ಈ ನಾಲ್ವರು- ಪೇಜಾವರರು, ರಾಮಕೃಷ್ಣ ಸ್ವಾಮೀಜಿ, ರವಿಶಂಕರ್, ಆದಿಚುಂಚನಗಿರಿ ಸ್ವಾಮೀಜಿ- ಆ ಹೆಣ ಹೊತ್ತುಕೊಂಡು ಮೆರವಣಿಗೆ ಹೊರಟಿದ್ದಾರೆ ಎಂಬಂತೆ ಕಾಣಿಸಿತು.

ಇದನ್ನು ಇಲ್ಲಿ ಯಾಕೆ ಹೇಳುತ್ತಿದ್ದೇನೆ ಅಂದರೆ- ದಲಿತರು ಬುದ್ಧನನ್ನು ಮುಟ್ಟುತ್ತಿದ್ದಾರೆ. ಬುದ್ಧನನ್ನು ಅಧಿಕಾರ, ಹಣಕ್ಕೆ ಅವರಂತೆ ಧರ್ಮವನ್ನು ನಾವೂ ದುರುಪಯೋಗಿಸಿಕೊಂಡು ಪಾಪಿಷ್ಠರಾಗುವುದು ಬೇಡ ಎಂಬ ಎಚ್ಚರಿಕೆ ಸದಾ ನಮಗಿರಲಿ ಎಂಬ ಕಾರಣಕ್ಕೆ ಹೇಳುತ್ತಿದ್ದೇನೆ. ಧರ್ಮ ಬೀದಿಗೆ ಬೀಳದಿರಲಿ, ಅಂತರಂಗದೊಳಗೆ ವಾಸಿಸಲಿ. ಜೊತೆಗೆ ನಮಗೆ ತಿಳಿದಿರಲಿ-ಬುದ್ಧ, ಜೀಸಸ್, ವಚನಕಾರರು, ಪರಮಹಂಸ ಧರ್ಮದವರು ಅವರವರ ರೂಢಿಗತ ಧರ್ಮಕ್ಕೂ ಅತೀತರು. ಬುದ್ಧನಿಗೂ ಪಗೋಡಕ್ಕೂ, ಜೀಸಸ್‌ಗೂ, ಚರ್ಚ್‌ಗೂ ವಚನಕಾರರಿಗೂ ಮಠಗಳಿಗೂ, ಪರಮಹಂಸರಿಗೂ ಆಶ್ರಮಕ್ಕೂ ಸಂಬಂಧ ಕಲ್ಪಿಸಬಾರದು. ಅವರೆಲ್ಲರೂ ಸೆರೆಮಾಡಲಾಗದ ಕಾಣ್ಕೆಗಳು.

ಕೊನೆಯದಾಗಿ, ಬೌದ್ಧ ಧರ್ಮಕ್ಕೆ ಸೇರುವ ನನ್ನ ನಿಲುವು ತಿಳಿಸದಿದ್ದರೆ ಧಮ್ಮ ಸಮಿತಿಯ ಗೆಳೆಯರು ನನ್ನನ್ನು ಸುಮ್ಮನೆ ಬಿಡಲಾರರು. ಯಾವುದೇ ಧರ್ಮದ ಆಚರಣೆ, ಸಂಪ್ರದಾಯಗಳು ನನಗೆ ಒಗ್ಗದೇ ಇರಬಹುದು. ಆದರೂ ಸತ್ವದಲ್ಲಿ ನಾನೂ ನಿಮ್ಮೊಡನೆ ಹೆಜ್ಜೆ ಇಡುವೆ. □

ಅಕ್ಕ ಅಲ್ಲ

ಚಾಚುವ ಕೈಗಳಿಗೆ
ಕಾಯ್ದು ನಿಂತು
ಕದಳೀ ವನದ
ಕಲ್ಲಾದೆ.

ಹಾರಾಡುವ ಹಕ್ಕಿ
ಗೋರಿಯ ಮೇಲೆ
ನಿಂತು
ಗೋರಿಕಲ್ಲಾಯಿತ್ತು.

ಚಿಗುರಿ
ಚುಕ್ಕಿಯಾಗಬಯಸಿ
ಭುವಿಗೆ ಕಿವಿಗೊಟ್ಟು
ಆಲಿಸುವಾ ಬೇರುಗಳೂ...
ಆ ಬೇರುಗಳು ತುಯ್ಯುತ್ತಾ
ತುಯ್ಯುತ್ತಾ....
ತನುವಿಲ್ಲದಾದೆ.

○ ಮಿತಾ ದೇವನೂರು



ಸಾಮಕಾಲೀನ

ಎಲ್ಲವನ್ನು, ಎಲ್ಲರನ್ನು ಇಂದು ಪದಾರ್ಥವನ್ನಾಗಿಸಿ, ವಿಶ್ವಮಾರು ಕಟ್ಟೆಯನ್ನು ಸ್ಥಳೀಯ ಸಂತೆಯನ್ನಾಗಿ ಮಾಡಿ ಏಕರೂಪಿ ಬದುಕನ್ನು ತರುತ್ತಿರುವ 'ವಿಶ್ವ ಆರ್ಥಿಕ ವೇದಿಕೆ'ಗೆ ಸಡ್ಡು ಹೊಡೆದು ನಿಂತಿರುವುದು ವಿಶ್ವ ಸಾಮಾಜಿಕ ವೇದಿಕೆ. ಈ ವೇದಿಕೆ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಘೋಷಣೆ ಯೊಂದಿಗೆ ಕಳೆದ ತಿಂಗಳು ೧೬ ರಿಂದ ೨೧ರವರೆಗೆ ಮುಂಬೈನಲ್ಲಿ ವಿಶ್ವದ ೨೦೦ ದೇಶಗಳ ಮಿಲಿಯಗಟ್ಟಲೆ ಜನರನ್ನು ಒಂದುಗೂಡಿಸಿತ್ತು.ಅವರೆಲ್ಲರ ಹೃದಯಾಂತರಾಳದ ಆಶಯ ಒಂದೇ ಆಗಿತ್ತು: 'ಇನ್ನೊಂದು ಜಗತ್ತು ಸಾಧ್ಯ'

○ ಡಿ. ಡೊಮಿನಿಕ್

ಜಗತ್ತು ಮಾರಾಟಕ್ಕಲ್ಲ!

ಎಲ್ಲವನ್ನು, ಎಲ್ಲರನ್ನು ಇಂದು ಪದಾರ್ಥವನ್ನಾಗಿಸಿ, ವಿಶ್ವಮಾರು ಕಟ್ಟೆಯನ್ನು ಸ್ಥಳೀಯ ಸಂತೆಯನ್ನಾಗಿ ಮಾಡಿ ಏಕರೂಪಿ ಬದುಕನ್ನು ತರುತ್ತಿರುವ 'ವಿಶ್ವ ಆರ್ಥಿಕ ವೇದಿಕೆ'ಗೆ ಸಡ್ಡು ಹೊಡೆದು ನಿಂತಿರುವುದು ವಿಶ್ವ ಸಾಮಾಜಿಕ ವೇದಿಕೆ. ಈ ವೇದಿಕೆ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಘೋಷಣೆಯೊಂದಿಗೆ ಕಳೆದ ತಿಂಗಳು ೧೬ ರಿಂದ ೨೧ರವರೆಗೆ ಮುಂಬೈನಲ್ಲಿ ವಿಶ್ವದ ೨೦೦ ದೇಶಗಳ ಮಿಲಿಯಗಟ್ಟಲೆ ಜನರನ್ನು ಒಂದುಗೂಡಿಸಿತ್ತು. ನೆಸ್ಕೊ ಮೈದಾನದಲ್ಲಿ ತೆರೆದ ವೇದಿಕೆಯಲ್ಲಿ ಪ್ರಸ್ತುತ ಜಾಗತೀಕರಣದ ವಿರುದ್ಧ ಜಾರ್ಜ್‌ಬುಷ್‌ನ ವಿರುದ್ಧ ತಮ್ಮ ಘೋಷಣೆಯನ್ನು ಗಗನಕ್ಕೇರುತ್ತಿದ್ದ ಧೂಳಿನಲ್ಲಿ ಒಂದಾಗಿಸಿದ್ದರು ಜನಸಾಗರ. ಅವರಲ್ಲಿ ಒಬ್ಬರಿಗೊಬ್ಬರು ಪರಿಚಯವಿಲ್ಲದಿದ್ದರು ಅವರೆಲ್ಲರ ಹೃದಯಾಂತರಾಳದ ಆಶಯ ಒಂದೇ ಆಗಿತ್ತು : 'ಇನ್ನೊಂದು ಜಗತ್ತು ಸಾಧ್ಯ' .

ಈ ಆಶಯದ ಉತ್ಸಾಹ, ಸಡಗರ ಒಮ್ಮೆಗೆ ಆಫ್ರಿಕಾದ ದೈತ್ಯ ಶಕ್ತಿಯ ಸಂಕೇತವೆಂಬಂತೆ ಅವರ ನೃತ್ಯದೊಡನೆ ತಾರಕಕ್ಕೇರಿತು. ನೆರೆದಿದ್ದವರನ್ನೆಲ್ಲಾ ಆ ಇನ್ನೊಂದು ಜಗತ್ತು ಇಲ್ಲೆ, ಇಂದೇ ಸಾಧ್ಯವಾಗಿಬಿಟ್ಟಿತ್ತೇನೋ ಎಂಬ ಭ್ರಮೆಯನ್ನು ಕಟ್ಟಿತ್ತು. ಎಲ್ಲೆಲ್ಲೂ ಮಹಿಳೆಯರು ವಿವಿಧ ಭಂಗಿಗಳಲ್ಲಿ ಗಂಡೆದೆಯ ಕ್ರೌರ್ಯಕ್ಕೆ ಅಂತಿಮ ಗತಿಯನ್ನು ತಮ್ಮ ಲಯಬದ್ಧ ಹೆಜ್ಜೆಗಳಲ್ಲಿ ನಿರ್ಮಿಸಿದ್ದರು. ಅಸ್ಪೃಶ್ಯತೆಯ ಧೂಳನ್ನು ಜಾಡಿಸಿ ಒಗೆದಂತೆ ದಲಿತ-ಆದಿವಾಸಿಗಳ ತಮಟೆಯ ಸದ್ದು 'ನೆಮ್ಮದಿಯ ನಾಳೆ' ಇಂದೇ ಬಂದುಬಿಟ್ಟಿತ್ತೇನೋ ಎಂಬಂತೆ ಮೈಮರೆತು ಕುಣಿಯುತ್ತಿದ್ದರು. ಅತ್ತ ವೇದಿಕೆಯಲ್ಲಿ ನೋಬಲ್ ಪ್ರಶಸ್ತಿ ವಿಜೇತೆ ಶಿರಿನ್ ಇಬಾದಿ, ಲೇಖಕಿ ಅರುಂಧತಿರಾಯ್ ಮುಂತಾದವರು ಮುಂದಿನ ಆರು ದಿನಗಳ ಮುನ್ನೋಟವನ್ನು ಅಂದು ಸಂಜೆಯೇ ಮುಂಗಾಣಿಸಿದ್ದರು.

ಈ ಸಮ್ಮೇಳನದಲ್ಲಿ ಭಾಗವಹಿಸಿದ್ದವರ ನಿರೀಕ್ಷೆಗಳು ಹೇಗೆ ಪ್ರಾದೇಶಿಕ ಭಿನ್ನತೆಯನ್ನು ಚಿಮ್ಮುತ್ತಿದ್ದವೋ ಹಾಗೆಯೇ ಅವರ ಪ್ರತ್ಯಕ್ಷ ನೇರ ಹಾಜರಾತಿಯೇ ಒಂದು ಸುದ್ದಿಯನ್ನು ಭಿತ್ತರಿಸಿದ್ದವು: 'ಇನ್ನೊಂದು ಬದುಕು ಸಾಧ್ಯ' ಎಂಬ ಹೊಸ ಆಶಯವನ್ನು ಮೆಕ್ಸಿಕೋದ ಪ್ರತಿನಿಧಿಗಳಿಂದ ಹಿಡಿದು ಲ್ಯಾಟಿನ್ ಅಮೇರಿಕಾದ ಕಾರ್ಯಕರ್ತರ ತನಕ... ಎಲ್ಲರಲ್ಲೂ ಕಾಣಬಹುದಾಗಿತ್ತು. ನ್ಯೂಕ್ಲಿಯರ್ ಬಾಂಬ್‌ಗಳಿಂದ ತುಂಬಿರುವ ಈ ಜಗತ್ತು 'ಶಾಂತಿ'ಯನ್ನು ತೀವ್ರವಾಗಿ ಬಯಸಿತ್ತು. ಬಹುಶಃ ಈ ಆಂತಕವೇ ವಿಶ್ವಸಾಮಾಜಿಕ ವೇದಿಕೆಯನ್ನು ಸಾಧ್ಯವಾಗಿಸಿತ್ತೇನೋ.

ಈ ವಿಶ್ವ ಸಮ್ಮೇಳನ ಆರಂಭಗೊಂಡದ್ದು ಬ್ರೆಜಿಲ್‌ನಲ್ಲಿ. ಅಲ್ಲಿನ ಕಾರ್ಮಿಕ ಪಕ್ಷ ಜಯಭೇರಿ ಭಾರಿಸಿ ಸರ್ಕಾರ ರಚಿಸಿ, ಬಂಡವಾಳಶಾಹಿ ಜಗತ್ತಿನ ಆರ್ಭಟವನ್ನು ಹುಸಿಯಾಗಿಸಿತ್ತು. ಈ ಸನ್ನಿವೇಶದಲ್ಲಿ ಜಾಗತಿಕ ಸಮಾಜ ವೇದಿಕ (WORLD SOCIAL FORUM) ತಲೆಯೆತ್ತಿ ನಿಂತಿತು. ಜಾಗತೀಕರಣದ ವಿರುದ್ಧ ನಡೆಯುತ್ತಿರುವ ಎಲ್ಲಾ ಆಂದೋಲನಗಳಿಗೂ, ಕಾರ್ಮಿಕ ಚಳವಳಿಗಳಿಗೂ, ಎಲ್ಲಾ ಶೋಷಿತ ಜನಸಮುದಾಯಗಳಿಗೂ ಈ ವೇದಿಕ ಒಂದುಗೂಡುವ, ಚರ್ಚಿಸುವ, ಚಿಂತನೆಗಳನ್ನು ಭಿತ್ತರಿಸುವ, ವಿಶ್ವ ಪ್ರಜ್ಞೆಯ ಘನತೆಯನ್ನು ಎತ್ತಿ ಹಿಡಿಯುವ, ಎಲ್ಲರನ್ನು ಬೆಸೆಯುವ ಮತ್ತು ಸಹಕಾರ-ಸಂಪರ್ಕಗಳನ್ನು ಹೆಚ್ಚಿಸುವ ವೇದಿಕೆಯಾಯಿತು. ಟ್ರೇಡ್‌ಯೂನಿಯನ್‌ಗಳು, ಸಾಮಾಜಿಕ ಚಳವಳಿಗಳು ಮತ್ತು ಜಾಗತೀಕರಣವನ್ನು ವಿರೋಧಿಸುತ್ತಿರುವ ಹಾಗೂ ಜನ ಸಮುದಾಯಗಳಲ್ಲಿ ಭರವಸೆಯನ್ನು ತುಂಬುತ್ತಿರುವ ಎನ್‌ಜಿಒಗಳ ಮಧ್ಯೆ ಹೊಂದಾಣಿಕೆಯನ್ನು, ಸಹ ಮನೋಭಾವವನ್ನು ಪ್ರೇರೇಪಿಸುವ ಕೆಲಸವನ್ನು ಈ ವೇದಿಕ ಎತ್ತಿಕೊಂಡಿತು. ಹೀಗೆ ಎಲ್ಲಾ ಪ್ರಗತಿಪರ ಸಮಾನ ಮನಸ್ಕ ಶಕ್ತಿ-ಸಂಘಟನೆ-ಒಕ್ಕೂಟಗಳ ಮಧ್ಯೆ ಒಂದು 'ಸಂವಾದ'ವನ್ನು

ಏರ್ಪಡಿಸುವ ಮಹತ್ವದ ಉದ್ದೇಶ ಈ ವೇದಿಕೆಯದ್ದು. ಈ ವೇದಿಕೆ ಬಹುತ್ವ, ವೈವಿಧ್ಯಮಯ, ವೈರುಧ್ಯವನ್ನು ಮೀರಿದ, ಸರ್ಕಾರೇತರ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರದ, ವಿಕೇಂದ್ರಿತ ನೆಲೆಯ ಸಂರಚನೆಯನ್ನು ಒಳಗೊಂಡಿದೆ. ಆದ್ದರಿಂದ ಈ ವೇದಿಕೆಯಲ್ಲಿ ಸ್ಥಳೀಯ ಗುಂಪುಗಳಿಂದ ಹಿಡಿದು ಅಂತರಾಷ್ಟ್ರೀಯ ಮಟ್ಟದ ಪ್ರಾತಿನಿಧ್ಯವನ್ನು ಹೊಂದಿರುವ ಗುಂಪುಗಳು ಸಮಾನವಾಗಿ ಭಾಗವಹಿಸುತ್ತವೆ. ಯಾವುದೇ ರೀತಿಯ ಮಾನವ ಹಕ್ಕುಗಳ ಉಲ್ಲಂಘನೆ, ಲಿಂಗೀಯ-ಜನಾಂಗೀಯ ತಾರತಮ್ಯ, ದೌರ್ಜನ್ಯವನ್ನು ಅದು ವಿರೋಧಿಸುತ್ತದೆ. ಇಂತಹ ಆಶ್ಚರ್ಯಗಳನ್ನು ಹೊತ್ತ ಈ ವೇದಿಕೆ ಜನವರಿ-ಫೆಬ್ರವರಿ ೨೦೦೧-೨೦೦೩ರಲ್ಲಿ ಬ್ರೆಜಿಲ್‌ನ ಪೋರ್ಟ್ ಅಲೆಗೆರೆ ನಗರದಲ್ಲಿ ತನ್ನ ಮೊದಲ ಮೂರು ಕೂಟಗಳನ್ನು ನಡೆಸಿತು. ತದ ನಂತರದಲ್ಲಿ ಅದು ಸುಮಾರು ೨೦೦ ದೇಶಗಳಲ್ಲಿ ತನ್ನ ನೆಲೆಯನ್ನು ಕಂಡುಕೊಂಡು ಜಾಗತೀಕರಣ ಮತ್ತು ಯುದ್ಧದ ವಿರುದ್ಧ ತನ್ನ ನಿಲುವನ್ನು ಎತ್ತಿ ಹಿಡಿಯಿತು. ಇದರ ಮೇರೆಗೆ ಕಳೆದ ವರ್ಷ ಹೈದ್ರಾಬಾದಿನಲ್ಲಿ 'ಏಶಿಯಾ ಸೋಷಿಯಲ್ ಫೋರಂ' ಸಮ್ಮೇಳನ ನಡೆದು, ಈ ವರ್ಷ ಮುಂಬಾಯಿಯಲ್ಲಿ ಜನವರಿ ೧೬ರಿಂದ ೨೧ರವರೆಗೆ ನಡೆಯಿತು. ಇದರ ಮತ್ತೊಂದು ಭಾಗವೇ 'ಅಂತರಾಷ್ಟ್ರೀಯ ಯುವ ಮೇಳ'. ಇದು ತನ್ನ ಪ್ರತ್ಯೇಕ ಯುವಶಕ್ತಿಯ ಐಡೆಂಟಿಟಿಯನ್ನು ಉಳಿಸಿಕೊಳ್ಳಲು ಪ್ರತ್ಯೇಕ ಜಾಗದಲ್ಲಿ ಪ್ರತಿ ವರ್ಷವೂ ನಡೆಯುತ್ತದೆ. ಆದರೂ ಇದರ ಎಲ್ಲಾ ಗುರಿಗಳೂ ಸಹ 'WSF'ನ ಗುರಿಗಳೇ ಆಗಿವೆ. ಆದ್ದರಿಂದ ೨೦೦೪ 'International youth camp' ಡಬ್ಲ್ಯುಸ್‌ಎಫ್‌ಗೆ ಪರ್ಯಾಯವಾಗಿ ಡಾನ್‌ಬಾಸ್ಕೊ ಮೈದಾನದಲ್ಲಿ ಅದೇ ದಿನಾಂಕದಂದು ಆರಂಭವಾಯಿತು. ಜಗತ್ತಿನಾದ್ಯಂತ ನಿರುದ್ಯೋಗ, ಕಮ್ಮಿ ವೇತನ, ಸಾರ್ವತ್ರಿಕ ಶಿಕ್ಷಣದ ನಾಶ, ಜನಾಂಗೀಯತೆ, ಲಿಂಗೀಯತೆ, ಮತಾಂಧತೆ, ಮಿಲಿಟರಿ ದೌರ್ಜನ್ಯ ಮುಂತಾದ ಶೋಷಣೆಗಳಿಂದ ನೊಂದ 'ಯುವಜನ' ತಮ್ಮ ಹೋರಾಟದ ಕಹಳೆಯನ್ನು ತಮ್ಮದೇ ವೇದಿಕೆಯಡಿ ಘೋಷಿಸುತ್ತಿದ್ದಾರೆ. ಯಜಮಾನ್ಯವನ್ನು ಸ್ಥಾಪಿಸುತ್ತಿರುವ ಬಂಡವಾಳಶಾಹಿ ಹುನ್ನಾರಗಳ ವಿರುದ್ಧ ತಮ್ಮ ಧ್ವನಿ ಎತ್ತುತ್ತಿರುವುದನ್ನು ಈ ವೇದಿಕೆಯೇ 'ಅಂತರಾಷ್ಟ್ರೀಯ ಯುವ ವೇದಿಕೆ' ಇದಕ್ಕೆ ಪ್ರತ್ಯೇಕ ಅಸ್ತಿತ್ವ 'ವಿಶ್ವ ಸಾಮಾಜಿಕ ವೇದಿಕೆಯಡಿ' ಕಲ್ಪಿಸಿಕೊಡಲಾಗಿದೆ.

ಈ ಎರಡೂ ಕಾರ್ಯಕ್ರಮಗಳಲ್ಲಿ ಕಾರ್ಮಿಕರು, ರೈತರು, ಮೂಲನಿವಾಸಿಗಳು, ದಲಿತರು, ಮಹಿಳೆಯರು, ಎಲ್ಲಾ ಅಲ್ಪ ಸಂಖ್ಯಾತರು, ವಲಸಿಗರು, ನಿರಾಶ್ರಿತರು, ಮಾನವ ಹಕ್ಕುಗಳ ಸಂಘಟನೆಗಳ ಕಾರ್ಯಕರ್ತರು, ವಿದ್ಯಾರ್ಥಿಗಳು, ವಿದ್ವಾಂಸರು, ಕಲಾಕಾರರು, ಕುಶಲಕರ್ಮಿಗಳು, ಮಾಧ್ಯಮ ವ್ಯಕ್ತಿಗಳು... ಇತ್ಯಾದಿ ಎಲ್ಲಾ ರಂಗಗಳಿಂದ ಜನಪ್ರತಿನಿಧಿಗಳು ಈ ಸಮಾವೇಶಗಳಲ್ಲಿ ಭಾಗವಹಿಸಿದ್ದರು.

ಇನ್ನು, ನನ್ನ ಸ್ನೇಹಿತರೊಂದಿಗೆ ಭಾಗವಹಿಸಿದ ಕೆಲವು ಚರ್ಚೆಗಳು, ನೋಡಿದ ಸಾಕ್ಷ್ಯಚಿತ್ರಗಳು ಮತ್ತು ಘಟನೆಗಳ ಮೂಲಕ ವಿಶ್ವ ಸಾಮಾಜಿಕ ವೇದಿಕೆಯ ಬಹುರೂಪಿ ಮುಖಗಳನ್ನು ಅನಾವರಣಗೊಳಿಸಲು ಪ್ರಯತ್ನಿಸುತ್ತೇನೆ. ಸಮ್ಮೇಳನ ಪ್ರಮುಖ ದ್ವಾರದಲ್ಲಿ ಸೆಕ್ಯುರಿಟಿ ವ್ಯವಸ್ಥೆ ತುಂಬಾ ಕಟ್ಟುನಿಟ್ಟಾಗಿತ್ತು. ಪೊಲೀಸ್ ಅಲ್ಲಲ್ಲೇ ಪವಡಿಸಿದ್ದರು. ನನ್ನೊಡನೆ ಸಾಗುತ್ತಿದ್ದ ನನ್ನ ಸ್ನೇಹಿತನ ಗಮನ ಒಂದೆಡೆ ನಾಟಿತ್ತು... ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್ ಗೊಂಬೆಯೊಂದರ ತಿಕಕ್ಕೆ ಕಡ್ಡಿಯೊಂದನ್ನು ತೂರಿಸಿ ಖುಷಿ ಪಡುತ್ತಿದ್ದ. ಪಕ್ಕ ನಿಂತಿದ್ದ ಪೇದೆ ಅದನ್ನು ತಮಾಷೆಯಿಂದ ನೋಡುತ್ತಿದ್ದ. ನನ್ನ ಸ್ನೇಹಿತನಿಗೆ ವಿಚಿತ್ರವೆನಿಸಿತು. ಅದನ್ನು ನನಗೆ ಹೇಳುತ್ತಾ ಪೊಲೀಸರನ್ನು ಟೀಕಿಸಿ ನಗುತ್ತಿದ್ದ. ನನಗೂ ನಗು ತಡೆಯಲಾಗಲಿಲ್ಲ. ಹೀಗಿರುವಲ್ಲಿ ಮಾರನೆ ದಿನ ಪುಸ್ತಕ ಪ್ರದರ್ಶನ ಮಳಿಗೆಗಳಿಗೆ ಭೇಟಿಯಿತ್ತಾಗಲೇ ನಮಗೆ ಆ ಗೊಂಬೆಯ ವಿಚಿತ್ರ ಅರ್ಥವಾದದ್ದು. ಎಡಪಂಥೀಯ ಪುಸ್ತಕಗಳ ಮಾರಾಟ ಮಳಿಗೆಯೊಂದರಲ್ಲಿ ಅಮೇರಿಕ ಅಧ್ಯಕ್ಷ ಜಾರ್ಜ್ ಬುಷ್‌ನ ಸುಂದರ ಗೊಂಬೆಯೊಂದಿತ್ತು. ಸೂಟುಧಾರಿಯಾದ ಆ ಗೊಂಬೆ ಅರ್ಧ ಮಲಗಿದ ಭಂಗಿಯಲ್ಲಿದ್ದು ಧರಿಸಿದ ಪ್ಯಾಂಟ್ ಅರ್ಧ ತೆರೆದಿತ್ತು. ಎರಡು ಪಿರ್ರೆಗಳ ಮಧ್ಯೆ ಕಿರು ಬೆರಳು ಗಾತ್ರದ ತೂತು ಇತ್ತು. ಈ ತೂತಲ್ಲೇ ಪೊಲೀಸ್ ಕಡ್ಡಿ ತುರುಕಿದ್ದು, ನಮಗೆ ನಗು ತಡೆಯಲಾಗಲಿಲ್ಲ. ನಕ್ಕು ಸುಸ್ತಾದ ಮೇಲೆ ಆ ಗೊಂಬೆಯನ್ನು ಖರೀದಿಸಲು ನಿಶ್ಚಯಿಸಿ, ಎಷ್ಟೆಂದು ಕೇಳಿದೆವು. ೩೦೦/- ರೂ.ಗಳೆಂದಾಗ ಒಮ್ಮೆಗೇ ನಾನು, 'ಜಾರ್ಜ್‌ಬುಷ್ ತಿಕಾನೂ ಸಹ ದುಬಾರಿ' ಎಂದು ಕಿರುಚಿದ್ದೆ. ಪುನಃ ನಕ್ಕು ಮುಂದೆ ಸಾಗಿದ್ದೆವು. ಈ ಇಡೀ ಮೈದಾನದ ತುಂಬಾ ಅಮೇರಿಕಾದ ವಿರುದ್ಧ ಜಾರ್ಜ್‌ಬುಷ್‌ನ ವಿರುದ್ಧ ಬ್ಯಾನರ್‌ಗಳು, ಪೋಸ್ಟರ್ ಗಳು ಮತ್ತು ಕಸಪಟ್ಟಿಗೆಗಳು ರಾರಾಜಿಸುತ್ತಿದ್ದವು. ಕಸದ ಬುಟ್ಟಿಯ ಸುತ್ತಲು ಜಾರ್ಜ್‌ಬುಷ್‌ನ ಪೋಸ್ಟರಿದ್ದು, ಅದರಡಿ ಈ ಬರಹವಿತ್ತು: 'ಇಲ್ಲಿ ಉಗುಳಿ'. ಹೀಗೆ ಸಾವಿರಾರು ಕಡೆ ಜಗತ್ತಿನ ಪ್ರಸ್ತುತ ಸ್ಥಿತಿಗತಿಗಳು, ಅನ್ಯಾಯದ ವಿರುದ್ಧ ಘೋಷಣೆಗಳು, ಯುದ್ಧ-ಸಾಮ್ರಾಜ್ಯಶಾಹಿ ವಿರುದ್ಧ ಮೆರವಣಿಗೆಗಳು ಸಮಾವೇಶದ ಮುಖ್ಯ ಬೀದಿಗಳಲ್ಲೆಲ್ಲಾ ನಡೆಯುತ್ತಿದ್ದವು.

ಹೀಗೆ ಎಲ್ಲವನ್ನು ವೀಕ್ಷಿಸುತ್ತಾ ಒಂದು ಸೆಮಿನಾರ್‌ಗೆ ಬಂದೆವು. ಅಲ್ಲಿ ಯುದ್ಧದ ಹಿಂಸೆಯಿಂದ ಆಗುವ ಪರಿಣಾಮಗಳನ್ನು ಸ್ವತಃ ಅನುಭವಿಸಿದ್ದವರು ಹಂಚಿಕೊಳ್ಳುತ್ತಿದ್ದರು.

ದಲಿತ ಸಮುದಾಯಗಳು ಮತ್ತು ವಿಶ್ವ ಸಾಮಾಜಿಕ ವೇದಿಕೆ

ಕಳೆದ ತಿಂಗಳು ನಡೆದ WSFಮಹಾಸಮ್ಮೇಳನದಲ್ಲಿ ದಲಿತ ಜನಾಂದೋಲನಗಳಿಂದ ಜನರೆಷ್ಟು ಭಾಗವಹಿಸಿದ್ದರು ಎಂಬ ಪ್ರಶ್ನೆಗೆ ನಿಖರವಾಗಿ ಉತ್ತರ ಹೇಳುವುದು ಕಷ್ಟ. ಖಂಡಿತವಾಗಿಯು ದಕ್ಷಿಣ ಭಾರತದ ಮಟ್ಟದಲ್ಲಿ ಅನೇಕ ಸಂಘಟನೆಗಳಿಂದ ನೂರಾರು ದಲಿತರು ಮತ್ತು ಆದಿವಾಸಿಗಳು ಪಾಲ್ಗೊಂಡಿದ್ದರು. ಅದರಲ್ಲೂ ತಮಿಳ್ನಾಡು ಮತ್ತು ಆಂಧ್ರ ಪ್ರದೇಶಗಳಿಂದ ಅನೇಕ ಮಂದಿ ಭಾಗವಹಿಸಿದ್ದರು. ಆದರೆ ಕರ್ನಾಟಕದಿಂದ ಭಾಗವಹಿಸಿದ್ದವರು ಕಮ್ಮಿಯೆಂದೇ ಹೇಳಬೇಕು. ಇದಕ್ಕೆ ಮುಖ್ಯ ಕಾರಣಗಳನ್ನು ಹುಡುಕುವಾಗ ಎದ್ದು ಕಾಣುವ ಬಹುಮುಖ್ಯ ಸಂಗತಿಯೆಂದರೆ ದಲಿತ ಚಳವಳಿ ನಾಯಕರುಗಳಿಗೆ 'ಮಾಹಿತಿ' ದೊರೆಯದಿರುವುದು, ಅಥವಾ ಜಾಗತಿಕ ಮಟ್ಟದ ಈ ಸಮಾವೇಶದಲ್ಲಿ 'ಮಾಹಿತಿ' ಅವರಿಗೆ ಸಿಗದಂತೆ ಮಾಡಿರುವುದು. ಎರಡನೆಯದಾಗಿ, WSFನ ಬಗ್ಗೆ ಸಾಮಾನ್ಯವಾಗಿ ಹರಡಿರುವ ಮಿಥ್ಯಾಂಶಗಳು ಉದಾಹರಣೆಗೆ ಈ ಸಮಾವೇಶ ಕೇವಲ ಎನ್‌ಜಿಓಗಳದ್ದು ಎನ್ನುವುದು. ಇದು ಸುಳ್ಳು. ಇದರಲ್ಲಿ ಜನ ಸಂಘಟನೆಗಳು, ವಿಶ್ವದಾದ್ಯಂತ ಹರಡಿರುವ ಚಳವಳಿ ಪ್ರತಿನಿಧಿಗಳು, ಟ್ರೇಡ್ ಯೂನಿಯನ್‌ಗಳು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳು ಸಹ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇಲ್ಲಿ ನಾಗರಿಕ ಸಮಾಜದ ಒಂದು ಭಾಗ ಎನ್‌ಜಿಓಗಳಷ್ಟೆ. ಮೂರನೆಯದಾಗಿ, ಡಿಎಸ್‌ಎಸ್ ನಂತಹ ಜನಚಳವಳಿಗಳು ಮುಂಬೈ ಪ್ರತಿರೋಧ-೦೪ಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿ WSFನನ್ನು ವಿರೋಧಿಸಿವೆಯೇ? ಈ ಪ್ರಶ್ನೆಗೆ ನಿಖರವಾದ ಉತ್ತರ ಸಿಗುತ್ತದೆ. ಏಕೆಂದರೆ 'ಮುಂಬೈ ಪ್ರತಿರೋಧ-೦೪'ಕ್ಕೆ ಬೆಂಬಲ ವ್ಯಕ್ತಪಡಿಸಿರುವ ಸಂಘಟನೆಗಳು ಅಖಿಲ ಭಾರತ ಮಟ್ಟದಲ್ಲಿ ಸುಮಾರು ೨೧ ಸಂಘಟನೆಗಳು ಅವುಗಳಲ್ಲಿ ದಲಿತ ಸಂಘಟನೆಗಳು ಇಲ್ಲವೆಂದೇ ಹೇಳಬೇಕು.

ಅತೀ ಮುಖ್ಯ ಕಾರಣವೆಂದರೆ ಮೊದಲನೆಯ ಕಾರಣವೆಂದು ತೋರುತ್ತದೆ: ಮಾಹಿತಿಯ ಕೊರತೆ. ಈ ಮಾಹಿತಿಯನ್ನು ಗುಟ್ಟಾಗಿಸುವಲ್ಲಿ ಕೆಲವು ಎನ್‌ಜಿಓಗಳು ಪ್ರಮುಖ ಪಾತ್ರ ವಹಿಸಿವೆ ಎಂಬುದನ್ನು ಅಲ್ಲಗೆಳೆಯಲಾಗದು. ಡರ್ಬನ್‌ನಲ್ಲಿ ನಡೆದ 'ವಿಶ್ವ ಜನಾಂಗ' ಸಮಾವೇಶದ ಸಂದರ್ಭದಲ್ಲೂ ಡಿಎಸ್‌ಎಸ್‌ಗೆ ಮಾಹಿತಿಯನ್ನು ನೀಡದೆ ಇದ್ದುದ್ದರಲ್ಲಿ ಕೆಲವು ದಲಿತ ಕ್ರೈಸ್ತರು ನಡೆಸುತ್ತಿರುವ ಎನ್‌ಜಿಓಗಳು ಪ್ರಮುಖ ಪಾತ್ರವನ್ನು ವಹಿಸಿದ್ದವು. ಹೀಗೆ ಮಾಡುವುದರಲ್ಲಿ ದಲಿತರಿಗಾಗಿ ಹರಿದು ಬರುವ ಹಣವನ್ನು ಕಬಳಿಸುವ ಹುನ್ನಾರವೂ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಸಮಾವೇಶಗಳಲ್ಲಿ ದಲಿತ ಸಮುದಾಯ ಗಳನ್ನು ಪ್ರತಿನಿಧಿಸುವವರು ಮುಖ್ಯವಾಗಿ ಈ ದಲಿತ ಕ್ರೈಸ್ತರು ನಡೆಸುತ್ತಿರುವ ಎನ್‌ಜಿಓಗಳೇ ಆಗಿವೆ. ಆದ್ದರಿಂದ, ಇನ್ನು ಮುಂದೆಯಾದರೂ ಎಚ್ಚೆತ್ತುಕೊಂಡು, ಡಿಎಸ್‌ಎಸ್‌ನಂತಹ ಸಂಘಟನೆಗಳು 'ದಲಿತ ಸಂಸ್ಥೆ'ಗಳನ್ನು ಸ್ಥಾಪಿಸುವುದರಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕ ಸಾಧಿಸುವುದನ್ನು ಮಾಡಬೇಕಾಗುತ್ತದೆ. ಹಾಗೆಯೇ ಸ್ಥಳೀಯವಾಗಿ ಸ್ಥಳೀಯ ಸಮಸ್ಯೆಗಳಲ್ಲೇ ಮುಳುಗಿಹೋಗುವಾಗ, ಆ ಸಮಸ್ಯೆಗಳನ್ನು ಅಂತರಾಷ್ಟ್ರೀಯಗೊಳಿಸುವಲ್ಲಿ ದಲಿತ ನಾಯಕತ್ವ ಸೋತಿದೆಯೇನೋ ಅನ್ನಿಸುತ್ತದೆ. ಆದ್ದರಿಂದ, ಕರ್ನಾಟಕದ ಸಂದರ್ಭ ಕ್ರಿಯಾಶೀಲವಾಗಿರುವ ಎನ್‌ಜಿಓ ನೆಟ್‌ವರ್ಕ್ಸ್‌ಗಳೊಡನೆ 'CRITICAL'ಆದ ಸಂವಾದ ಏರ್ಪಟ್ಟು ಕೂಡಲೇ ಪರಿಸ್ಥಿತಿಯನ್ನು ಅರ್ಥೈಸಬೇಕಾಗಿದೆ.

ಇಲ್ಲವಾದಲ್ಲಿ ತಳಮಟ್ಟದಲ್ಲಿ ದಲಿತ ಸಮುದಾಯಗಳು ಮತ್ತಷ್ಟು ಅನ್ಯಾಯಕ್ಕೊಳಗಾಗುವ ಅಪಾಯವಿರುವುದಂತೂ ಸತ್ಯ.

ಪ್ರಸ್ತುತ ಆಫ್ರಿಕಾದ ಒಂದು ದೇಶವಾದ ವಿಗಾಂಡದಲ್ಲಿ ನಡೆಯುತ್ತಿರುವ ಅಂತಃಕಲಹದ ಬಗ್ಗೆ ಮಾತನಾಡುತ್ತಿದ್ದ ಮಹಿಳೆಯೊಬ್ಬಳು ತನ್ನ ಅನುಭವವನ್ನು ವಿವರಿಸುತ್ತಿದ್ದಳು. ಆಕೆ ಒಬ್ಬ ಟೀಚರ್, ಆಕೆ ತರಗತಿಯಲ್ಲಿ ನಿರತವಾಗಿದ್ದಾಗ ಆಕೆಯನ್ನು ಮತ್ತು ೧೫ ಮಂದಿ ವಿದ್ಯಾರ್ಥಿಗಳನ್ನು ಅಪಹರಿಸಿದ ಸೈನಿಕರು, ಆಕೆಯ ಮೇಲೆ ಮೂರು ಸಲ ಸಾಮೂಹಿಕ ಅತ್ಯಾಚಾರ ಎಸಗುತ್ತಾರೆ. ಅನಂತರ ವಿದ್ಯಾರ್ಥಿಯೋರ್ವನನ್ನು ಎಳೆದು ತಂದು, ತಮ್ಮ 'ವಿರೋಧಿಯೊಬ್ಬನನ್ನು ಕೊಲ್ಲಲು ಬಂದೂಕನ್ನು ಕೊಡುತ್ತಾರೆ. ಆ ಹುಡುಗ ಅಸಹಾಯಕನಾಗಿ ನಿಂತಾಗ, ಆ ವಿರೋಧಿಯನ್ನು ಕೊಂದು, ಆತನ ರಕ್ತವನ್ನು ಬಕೆಟೊಂದರಲ್ಲಿ ತುಂಬಿ, ಅದರಲ್ಲಿ ಆ ಹುಡುಗನ ಕೈತೊಳೆದು, ಅದನ್ನು ಕುಡಿಯುವಂತೆ ಮಾಡಿದ್ದು ಎಂತಹವರ ಎದೆಯನ್ನು ನಡುಗಿಸುವಂತಿತ್ತು. ಇಂತಹ ಹಿಂಸಾತ್ಮಕ ಕ್ರಿಯೆಗಳಲ್ಲಿ ಬಲಿಪಶುಗಳಾಗುತ್ತಿರುವ ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ 'ನ್ಯಾಯ' ಒದಗಿಸುವವರು ಯಾರು? ಇಂತಹ ಬಹುರೂಪಿ ಹಿಂಸೆಗಳು ಎಲ್ಲಾ ಕಡೆ ಇವೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ನಡೆಯುತ್ತಿವೆ. ಅಂತಹ ಎಲ್ಲಾ ಜನ ಒಂದೇ ವೇದಿಕೆಯಾಗಿ ಬಂದು ಅರ್ಥೈಸಲು ಪ್ರಯತ್ನಿಸುತ್ತಿದ್ದದ್ದು ನಿರಾಶ ಬದುಕಿನಲ್ಲಿ 'ಭರವಸೆ'ಯನ್ನು ತುಂಬುತ್ತಿತ್ತು. ಇಂತಹ ಚರ್ಚೆಗಳಿಂದ ಹಿಡಿದು ಸೌತ್ ಈಸ್ಟ್ ಏಶಿಯಾದಲ್ಲಿ ಕಾಣಿಸಿಕೊಂಡ ಕರೆನ್ಸಿ ಅಪಮೌಲೀಕರಣದ ಬಿಕ್ಕಟ್ಟಿನ ತನಕ ನೂರಾರು-ಸಾವಿರಾರು ಸೆಮಿನಾರುಗಳು ಒಮ್ಮೆಗೆ ನಡೆಯುತ್ತಿದ್ದವು. ವಿದೇಶಿ ಬಂಡವಾಳದ ಹೂಡಿಕೆ ಅಭಿವೃದ್ಧಿಗೆ ಅಗತ್ಯವೇ ಅಥವಾ ಹೂಡಿಕೆಯ ಹೆಸರಿನಲ್ಲಿ ಸ್ಥಳೀಯ ಕೌಶಲ್ಯ ಮತ್ತು ಸಂಪನ್ಮೂಲಗಳನ್ನು ದೋಚುವುದೇ ಎಂಬ ಬಗ್ಗೆಯು ಸಹ ಚರ್ಚೆ ನಡೆದಿತ್ತು. ಹೀಗೆ ಬೌದ್ಧಿಕ ಕಸರತ್ತು ಒಂದೆಡೆಯಾದರೆ, ಅದನ್ನು ಪ್ರಾಕ್ಟಿಕಲ್ ಆಗಿ ಕಾರ್ಯರೂಪಕ್ಕಿಳಿಸುವ ತಂತ್ರಗಳನ್ನು ಅಲ್ಲಿ ಹೆಣೆಯಲಾಗುತ್ತಿತ್ತು. (ಮುಂದಿನ ಲೇಖನಗಳಲ್ಲಿ ಕೆಲವು ಬಹುಮುಖ್ಯ ಸಂಗತಿಗಳನ್ನು ಚರ್ಚಿಸಲು ಪ್ರಯತ್ನಿಸಲಾಗುವುದು.)

ಇನ್ನು ಸಾಂಸ್ಕೃತಿಕವಾಗಿ ನಮ್ಮನ್ನು ದಿವಾಳಿಯಾಗಿಸುತ್ತಿರುವ ಮಾಧ್ಯಮಗಳಲ್ಲಿ ಒಂದಾದ, ಸಿನೇಮಾದ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಬೇಕು. ಮಾರುಕಟ್ಟೆಪ್ರೇರಿತ 'ವ್ಯಕ್ತಿ ಸಾಧನೆಯೇ ಪರಮ ಶ್ರೇಷ್ಠ ಮಾದರಿ' ಎಂಬುದನ್ನು ಎಲ್ಲಾ ಸಿನೇಮಾಗಳಲ್ಲಿ ಕಾಣಬಹುದು. ಆದರೆ ಇಂತಹದ್ದನ್ನು ಪ್ರಶ್ನಿಸುವ, ಭಿನ್ನ ವ್ಯಕ್ತಿತ್ವದ ಮಾದರಿಗಳ ಹುಡುಕಾಟದಲ್ಲಿ ತೊಡಗಿರುವ ಹಲವರು ಸಾಕ್ಷ್ಯಚಿತ್ರಗಳನ್ನು ತಯಾರಿಸಿ, ಅವುಗಳ ಮೂಲಕ ಸಾಮಾಜಿಕ ಬಿಕ್ಕಟ್ಟನ್ನು ತೋರಿಸಲು ಪ್ರಯತ್ನಿಸಿರುವುದು ನಿಜಕ್ಕೂ ಶ್ಲಾಘನೀಯ. WSFನಲ್ಲಿ ಎರಡು ಕಡೆ ಇಂಥ ಸಾಕ್ಷ್ಯಚಿತ್ರ ಪ್ರದರ್ಶನ ದಿನವೂ ನಡೆಯುತ್ತಿತ್ತು. ಅವುಗಳಲ್ಲಿ ಎರಡು ಸಾಕ್ಷ್ಯಚಿತ್ರಗಳು ಜನರ ಗಮನ ಸೆಳೆದಿದ್ದವು. ಒಂದನೆಯದು ದಿ ಕಿಲ್ಲಿಂಗ್ ಝೋನ್. ಕೆನಾಡಾ ದೇಶದಲ್ಲಿ ಭೂತಳದಲ್ಲಿರುವ ತೈಲ ನಿಕ್ಷೇಪಗಳನ್ನು ಹೊರ ತೆಗೆಯುವಾಗ ಆಗುತ್ತಿರುವ ಪರಿಸರ ದುಷ್ಪರಿಣಾಮಗಳನ್ನು ಕುರಿತದ್ದಾಗಿತ್ತು. ಖಾಸಗೀಕರಣದ ಕ್ರೌರ್ಯ ಅಲ್ಲಿ ಎದ್ದು ಕಾಣುತ್ತಿತ್ತು. ಕಾಡುಗಳಲ್ಲಿ ವಾಸಿಸುತ್ತಿದ್ದ ಮೂಲನಿವಾಸಿಗಳ ಬದುಕು ತೈಲ ತೆಗೆಯುವ ಕೊಳವೆ ಬಾವಿಗಳ ತಾಣ ಎತ್ತಂಗಡಿಯಾಗುತ್ತಿತ್ತಲ್ಲದೆ, ನದಿ ನೀರು ಕಲುಷಿತಗೊಂಡು, ಕುಡಿಯುವ ನೀರಿಗೂ ಹಾಹಾಕಾರ, ನೀರಿನಲ್ಲಿ ಮೀನು ಸತ್ತು... ಒಟ್ಟಾರೆ ಅಲ್ಪ ಲಾಭಕ್ಕಾಗಿ ಎಲ್ಲವನ್ನು ಶಾಶ್ವತ ಸಾವಿಗೆ ಒಳಪಡಿಸುವ ಹುನ್ನಾರಗಳು ನಿಲ್ಲುವುದು ಯಾವಾಗ? ಎಂಬ ಪ್ರಶ್ನೆ ಆ ಸಾಕ್ಷ್ಯಚಿತ್ರದಲ್ಲಿ ಎದ್ದು ಕಾಣುವ ಸಂಗತಿಯಾಗಿತ್ತು. ಎರಡನೆಯ ಸಾಕ್ಷ್ಯಚಿತ್ರ ದಿ ಲೀಚ್ ಆ್ಯಂಡ್ ಅರ್ತ್‌ವರ್ಮ್ (The Leach and the Earth worm) ಈ ಸಾಕ್ಷ್ಯಚಿತ್ರದ ಹೆಸರೇ ಸಾಂಕೇತಿಕವಾಗಿದೆ. ಜಿಗಣೆ ಮತ್ತು ಎರೆಹುಳು. ಆಧುನಿಕತೆಯೊಳಗಿರುವ ರಕ್ತಪಿಪಾಸುತನ ಮತ್ತು ವಿಮೋಚನಾ ಶಕ್ತಿಗಳೆರಡರ ಮುಖಾಮುಖಿ ಈ ಚಿತ್ರದ ತಿರುಳು. ದುಡಿಯುವ ಜನ ಎರೆಹುಳುವಿನಂತೆ ಮತ್ತೊಂದಾಗಿ, ಇನ್ನೊಂದಾಗಿ ಬದುಕಿನ ಪ್ರೀತಿಯನ್ನು ಉಳಿಸಿಕೊಳ್ಳಲು ಹೆಣಗುವ ಪರಿ ಒಂದೆಡೆಯಾದರೆ, ಜಿಗಣೆಯಂತೆ ರಕ್ತ ಹೀರುವ ಬಂಡವಾಳಶಾಹಿ ಜಗತ್ತು ಜಾಗತೀಕರಣವನ್ನು ಒತ್ತಾಯದ ಮೇರೆಗೆ ಜನರ ಮೇಲೆ ಹೇರುವ ಪರಿ ಮತ್ತೊಂದೆಡೆ. ಈ ಚಿತ್ರ ಸೂಕ್ಷ್ಮ ಒಳನೋಟಗಳನ್ನು ಒಳಗೊಂಡಿತ್ತು.

ಹಾಗೆಯೇ ಮತ್ತೊಂದು ಸಾಂಸ್ಕೃತಿಕ ಮಾಧ್ಯಮ ಬೀದಿ ನಾಟಕ. ತೆರೆದೆಡೆಗಳಲ್ಲಿ ಏಕಕಾಲಕ್ಕೆ ಹಲವಾರು ಭಾಷೆಗಳಲ್ಲಿ ಹಲವಾರು ಬೀದಿನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಒಂದೆಡೆ ಕ್ರಾಂತಿಕಾರ ನಾಟಕಕಾರ ಬ್ರೆಕ್ಟ್‌ನ ಹೆಸರಿನ ತೆರೆದ ರಂಗಸಜ್ಜಿಕೆಯಲ್ಲಿ ಮಲೇಶಿಯಾದ ತಂಡವೊಂದು ಲಿಂಗೀಯ ಸಮಾನತೆ, ಹೆಣ್ಣಿನ ಲೈಂಗಿಕ ಹಕ್ಕುಗಳು ಮತ್ತು ಅಲ್ಪಸಂಖ್ಯಾತ ಲೈಂಗಿಕ ವ್ಯಕ್ತಿಗಳ ಹಕ್ಕುಗಳ ಬಗ್ಗೆ ಒಂದು 'ನೃತ್ಯರೂಪಕ' ನಾಟಕವನ್ನು ಪ್ರದರ್ಶಿಸಿತ್ತು. ಕಿಕ್ಕಿರಿದು ಜನ ಅಂದು ಅಲ್ಲಿ ಸೇರಿದ್ದರು. ಅತ್ತ ಪಾಶ್ಚಾತ್ಯವೂ ಅಲ್ಲದ, ಇತ್ತ ಶಾಸ್ತ್ರೀಯವೂ ಅಲ್ಲದ ಮಧ್ಯದ ಯಾವುದೋ ಒಂದು ಶೈಲಿಯ ಆ ನೃತ್ಯ ರೂಪಕ ಅಂದು ನಮ್ಮೆಲ್ಲರನ್ನು ರೋಮಾಂಚನಗೊಳಿಸಿತ್ತಲ್ಲದೆ, ಅಂತರಂಗವನ್ನು ಕಲಕಿತ್ತು ಹೌದು. ಆ ನಾಟಕದಲ್ಲಿ ಸೂತ್ರಧಾರಿಯದ್ದು ಅಥವಾ ನಿರ್ವಾಹಕಳ ಪಾತ್ರ ಒಂದೆಡೆಯಾದರೆ, ಪ್ರಧಾನ ಪಾತ್ರವಹಿಸಿದ್ದ ಇನ್ನೊಬ್ಬಳು ಹೆಣ್ಣು. ಆಕೆ ಏಡ್ಸ್‌ರೋಗಿ; ಈಕೆಯ ಅಭಿನಯ ಬದುಕಿನೊಳಗಿನ ಕ್ರೌರ್ಯವನ್ನು ಮೆಟ್ಟಿ ನಿಂತು, ಕೊನೆಯಲ್ಲಿ ಸಾಂಕೇತಿಕವಾಗಿ ತೊಟ್ಟ ಬಟ್ಟೆಗಳನ್ನು ರಂಗ ಸಜ್ಜಿಕೆಯಲ್ಲೇ ಕಳಚಿ ಎಸೆಯುವ ಆಕೆಯ ಅಭಿನಯ ಮಾನವೀಯತೆಯ ಶ್ರೇಷ್ಠ ಅಭಿವ್ಯಕ್ತಿಯಾಗಿತ್ತು. ಅದೇ ವಿಮೋಚನೆಯ ರೂಪಕವೂ ಆಗಿತ್ತು. ಪ್ರದರ್ಶನದ ಕೊನೆಯಲ್ಲಿ ಪ್ರೇಕ್ಷಕ ಹೃದಯಗಳನ್ನು ಆಕೆ ತೇವಗೊಳಿಸಿದ್ದಳಲ್ಲದೆ, ಪ್ರೇಕ್ಷಕರ ಪ್ರಶಂಸೆಯಲ್ಲಿ ಆಕೆಯು ಸಹ ಪುಳಕಿತಳಾಗಿ ಆನಂದದ ಕಣ್ಣೀರನ್ನರಿಸಿದ್ದಳು. ಹಾಗೆಯೇ ನಿರ್ವಾಹಕಳಾಗಿದ್ದವಳ ಹಾಡು ಕೇವಲ ಹಾಡಾಗಿರದೆ ಆಕೆಯ 'ಕೋಜಾ' ಬದುಕಿನ ಸೌಂದರ್ಯ ಮತ್ತು ಹಿಂಸೆ ಎರಡನ್ನೂ ಹೊರಗೆ ಹಾಕಿತ್ತು. ಹಾಡಿನ ಮೂಲಕ ಜಾಗೃತಿಯನ್ನು ಹರಡುತ್ತಿತ್ತಲ್ಲದೆ, ಪುರುಷಪ್ರವೃತ್ತಿಗೆ ಸವಾಲನ್ನು ಎಸೆಗಿತ್ತು. 'ಪ್ರೇಕ್ಷಕರಲ್ಲಿ ನಿಜವಾದ ಗಂಡಸು ಇದ್ದಾರೆಯೇ?' ಎನ್ನುವ ಆಕೆಯ ಪ್ರಶ್ನೆಗೆ ಒಬ್ಬ 'ಕೈ' ಎತ್ತಿದ್ದ. ಆತನನ್ನು ಅಂದು ರಾತ್ರಿ ತನ್ನೊಡನಿರಲು ಆಕೆ (ಕೋಜಾ) ಆಹ್ವಾನಿಸಿದ್ದಳು. ಆತ ಹೌದೆನ್ನುವಾಗ, 'ನಿನ್ನ ತಾಯಿ ಎದುರೆ ಕೂಡಿ ಕೊಳ್ಳೋಣವೇ?' ಎನ್ನುವಾಗ ಪುರುಷ ಜಗತ್ತಿಗೆ ಆಕೆ ಮತ್ತೊಂದು ಸಾಧ್ಯತೆಯನ್ನು ತೋರಿದ್ದಳು. ನನಗಂತೂ ಅಂದಿನ ಈ ನೃತ್ಯ ರೂಪಕ ಸ್ಮರಣೀಯ.

ಸಾಮಾಜಿಕ ಬದಲಾವಣೆಯ ಹೊಣೆಗಾರಿಕೆ ಯಾರದ್ದು? ಶೋಷಿತರದ್ದೆ? ಅಥವಾ ಶೋಷಕರದ್ದೇ? ಅಥವಾ ವಿಶ್ವದ ಪ್ರಜೆಯಾಗುವತ್ತ ದಾಪುಗಾಲಿಟ್ಟಿರುವ ನಾಗರಿಕ ಸಮಾಜದ್ದೇ? ಉತ್ತರ ಸುಲಭವಲ್ಲ. ಬುಡಮಟ್ಟದಲ್ಲಿ ದಮನಿತ ಸಮುದಾಯಗಳು ತಮಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸುವಾಗ ಪ್ರಜಾಪ್ರಭುತ್ವದ ಮಾದರಿಯಲ್ಲಿ ಸಾಗಬೇಕೆ ಅಥವಾ ಮಿಲಿಟೆಂಟ್ ಮಾದರಿಯಲ್ಲಿ 'ಶಸ್ತ್ರ' ಕೈಗೆತ್ತಿಕೊಳ್ಳಬೇಕೆ? ಯಾವುದೇ ತಂತ್ರಗಾರಕೆಯನ್ನು ಎತ್ತಿಕೊಂಡಾಗಲೂ ಮೇಲಿನ ಪ್ರಶ್ನೆಯನ್ನು ಉತ್ತರಿಸಲೇ ಬೇಕಾಗುತ್ತದೆ. ಇಲ್ಲಿ ವಿಮೋಚನೆ ಎನ್ನುವುದು ಕೇವಲ ಬಡಜನರಿಗೆ ಮಾತ್ರ ಅಲ್ಲ, ಶ್ರೀಮಂತರಿಗೂ ವಿಮೋಚನೆ ಬೇಕು. ಆದರೆ ಶ್ರೀಮಂತರ ವರ್ಗ ಎಸಗಿರುವ ಕ್ರೌರ್ಯಗಳಿಗೆ ಶಿಕ್ಷೆಯಾಗಲೇಬೇಕಿದೆ. 'ನಾಗರಿಕ ಸಮಾಜ' ಎರಡೂ ವರ್ಗಗಳನ್ನು ಪ್ರತಿನಿಧಿಸಲು ಸಾಧ್ಯವಿಲ್ಲ.

WSFನಲ್ಲಿ ಭಿನ್ನ ಭಿನ್ನ ಪ್ರದರ್ಶನಗಳಲ್ಲದೇ, ಬೌದ್ಧಿಕ ಚರ್ಚೆಗಳು ಸಾವಿರಾರು ನಡೆದಿದ್ದವು. ಹೀಗಿರುವಲ್ಲಿ WSF ಎಲ್ಲವೂ ಚೆನ್ನಾಗಿತ್ತು ಎಂಬ ಭಾವನೆ ಈ ಲೇಖನದ ಮೊದಲಿಂದಲೂ ಕಾಣಿಸಿರಬಹುದು. ಆದರೆ ಹಾಗೇನಿಲ್ಲ. ಅದರೊಳಗೂ ಸಹ ಅಧಿಕಾರದ ದುರಾಸೆ, ಸಾಮ್ರಾಜ್ಯಶಾಹಿ ಪ್ರಾಯೋಜಕತ್ವ ಎನ್‌ಜಿಓಗಳ ನೈತಿಕತೆಯ ಪ್ರದರ್ಶನ, Spondered and Sponsorerಗಳಿಬ್ಬರ ಮೇಳ ಈ ಸಮಾವೇಶದಲ್ಲಿ ಇತ್ತು. ಇದೊಂದು ಜಾತ್ರೆ. ಬಿಡುಗಡೆ ಕಾರ್ಯಕ್ರಮಗಳೇನು WSFನ ಅಜೆಂಡಾದಲ್ಲಿ ಇಲ್ಲ. ಕ್ರಾಂತಿಯ ಭಾವನಾ ಜಗತ್ತು ಜನರನ್ನು ದಿಕ್ಕು ತಪ್ಪಿಸುತ್ತವೆ ಎನ್ನುವ ಆರೋಪಗಳೆಲ್ಲವುಗಳ ಮಧ್ಯೆ, ಈ ಸಮಾವೇಶಕ್ಕೆ ತಗಲುವ ವೆಚ್ಚದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಂದಲೇ ಎತ್ತಲಾಗಿತ್ತು ಎನ್ನುವುದೂ ಸಹ WSFನೊಳಗೇ ಇರುವ ದ್ವಂದ್ವಾತ್ಮಕತೆಯನ್ನು ತೋರುತ್ತದೆ. ಇದನ್ನು ಪ್ರತಿಭಟಿಸಲೆಂಬಂತೆ 'ಮುಂಬೈ ಪ್ರತಿರೋಧ-೨೦೦೪' ಸಮಾವೇಶವೂ ಸಹ ಜನವರಿ ೧೭ರಿಂದ ೨೦ರವರೆಗೆ WSFನ ಎದುರು ಮೈದಾನದಲ್ಲೇ ನಡೆದಿತ್ತು.

ಹೀಗೆ WSFನಲ್ಲಿ ಭಿನ್ನ ಭಿನ್ನ ಪ್ರದರ್ಶನಗಳಲ್ಲದೇ, ಬೌದ್ಧಿಕ ಚರ್ಚೆಗಳು ಸಾವಿರಾರು ನಡೆದಿದ್ದವು. ಹೀಗಿರುವಲ್ಲಿ WSF ಎಲ್ಲವೂ ಚೆನ್ನಾಗಿತ್ತು ಎಂಬ ಭಾವನೆ ಈ ಲೇಖನದ ಮೊದಲಿಂದಲೂ ಕಾಣಿಸಿರಬಹುದು. ಆದರೆ ಹಾಗೇನಿಲ್ಲ. ಅದರೊಳಗೂ ಸಹ ಅಧಿಕಾರದ ದುರಾಸೆ, ಸಾಮ್ರಾಜ್ಯಶಾಹಿ ಪ್ರಾಯೋಜಕತ್ವ, ಎನ್‌ಜಿಓಗಳ ನೈತಿಕತೆಯ ಪ್ರದರ್ಶನ, Spondered and Sponsorerಗಳಿಬ್ಬರ ಮೇಳ ಈ ಸಮಾವೇಶದಲ್ಲಿ ಇತ್ತು. ಇದೊಂದು ಜಾತ್ರೆ. ಬಿಡುಗಡೆ ಕಾರ್ಯಕ್ರಮಗಳೇನು WSFನ ಅಜೆಂಡಾದಲ್ಲಿ ಇಲ್ಲ. ಕ್ರಾಂತಿಯ ಭಾವನಾ ಜಗತ್ತು ಜನರನ್ನು ದಿಕ್ಕು ತಪ್ಪಿಸುತ್ತವೆ ಎನ್ನುವ ಆರೋಪಗಳೆಲ್ಲವುಗಳ ಮಧ್ಯೆ, ಈ ಸಮಾವೇಶಕ್ಕೆ ತಗಲುವ ವೆಚ್ಚದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಂದಲೇ ಎತ್ತಲಾಗಿತ್ತು ಎನ್ನುವುದೂ ಸಹ WSFನೊಳಗೇ ಇರುವ ದ್ವಂದ್ವಾತ್ಮಕತೆಯನ್ನು ತೋರುತ್ತದೆ. ಇದನ್ನು ಪ್ರತಿಭಟಿಸಲೆಂಬಂತೆ 'ಮುಂಬೈ ಪ್ರತಿರೋಧ-೨೦೦೪' ಸಮಾವೇಶವೂ ಸಹ ಜನವರಿ ೧೭ರಿಂದ ೨೦ರವರೆಗೆ WSFನ ಎದುರು ಮೈದಾನದಲ್ಲೇ ನಡೆದಿತ್ತು. ಉದ್ಘಾಟನೆ ಕ್ರಾಂತಿಕವಿ ಗದ್ದರ್‌ರವರಿಂದಲೇ ಆಗಿತ್ತಲ್ಲದೆ, ಅಲ್ಲಿನ ಚರ್ಚೆಗಳೆಲ್ಲವೂ ತೀವ್ರವಾದ 'ಐಡಿಯಾಲಾಜಿಕಲ್' ನೆಲೆಯಲ್ಲೇ ನಡೆದಿದ್ದವು. ವ್ಯವಸ್ಥೆಯ ಏರ್ಪಾಡಿನಲ್ಲಿ ಸ್ವಲ್ಪ ಗೊಂದಲವಿದ್ದರೂ ನಿಲುವುಗಳಲ್ಲಿ ಗೊಂದಲವಿರಲಿಲ್ಲ. ಇಲ್ಲಿನ ಜನರ 'ದೇಹ'ಗಳಿಗೂ WSFನಲ್ಲಿ ಭಾಗವಹಿಸಿದ್ದ 'ದೇಹ'ಗಳಿಗೂ ವ್ಯತ್ಯಾಸ ಎದ್ದು ಕಾಣುತ್ತಿತ್ತು. WSF ಸಿವಿಲ್ ಸೊಸೈಟಿಯ ಮಧ್ಯಮವರ್ಗದ ಅಭಿವ್ಯಕ್ತಿಯೆಂದೇ ಹೇಳಬೇಕು. ಇದರ ರೂಪವೇ ವಿಶ್ವಸಾಮಾಜಿಕ ವೇದಿಕೆ. ಇದನ್ನು ವಿರೋಧಿಸಿಯೇ ಮುಂಬೈ ಪ್ರತಿರೋಧ-೨೦೦೪ ವೇದಿಕೆಯು ಅಸ್ತಿತ್ವಕ್ಕೆ ಬಂದಿತ್ತು. ಸುಮಾರು ೨೧ ಸಂಘಟನೆಗಳು ಇದರಲ್ಲಿ ಪಾಲ್ಗೊಂಡಿದ್ದವು. ಕರ್ನಾಟಕ ವಿಮೋಚನಾ ರಂಗವೂ ಸಹ ಇದರ ಸಂಘಟಕರಲ್ಲಿ ಒಬ್ಬರು.

ಇಲ್ಲಿ ಮುಖ್ಯವಾದ ಪ್ರಶ್ನೆಯೊಂದಿದೆ: ಸಾಮಾಜಿಕ ಬದಲಾವಣೆಯ ಹೊಣೆಗಾರಿಕೆ ಯಾರದ್ದು? ಶೋಷಿತರದ್ದೆ? ಅಥವಾ ಶೋಷಕರದ್ದೇ? ಅಥವಾ ವಿಶ್ವದ ಪ್ರಜೆಯಾಗುವತ್ತ ದಾಪುಗಾಲಿಟ್ಟಿರುವ ನಾಗರಿಕ ಸಮಾಜದ್ದೇ? ಉತ್ತರ ಸುಲಭವಲ್ಲ. ಬುಡಮಟ್ಟದಲ್ಲಿ ದಮನಿತ ಸಮುದಾಯಗಳು ತಮಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸುವಾಗ ಪ್ರಜಾಪ್ರಭುತ್ವದ ಮಾದರಿಯಲ್ಲಿ ಸಾಗಬೇಕೆ ಅಥವಾ ಮಿಲಿಟೆಂಟ್ ಮಾದರಿಯಲ್ಲಿ 'ಶಸ್ತ್ರ' ಕೈಗೆತ್ತಿಕೊಳ್ಳಬೇಕೆ? ಯಾವುದೇ ತಂತ್ರಗಾರಿಕೆಯನ್ನು ಎತ್ತಿಕೊಂಡಾಗಲೂ ಮೇಲಿನ ಪ್ರಶ್ನೆಯನ್ನು ಉತ್ತರಿಸಲೇ ಬೇಕಾಗುತ್ತದೆ. ಇಲ್ಲಿ ವಿಮೋಚನೆ ಎನ್ನುವುದು ಕೇವಲ ಬಡಜನರಿಗೆ ಮಾತ್ರ ಅಲ್ಲ. ಶ್ರೀಮಂತರಿಗೂ ವಿಮೋಚನೆ ಬೇಕು. ಆದರೆ ಶ್ರೀಮಂತರ ವರ್ಗ ಎಸಗಿರುವ ಕ್ರೌರ್ಯಗಳಿಗೆ ಶಿಕ್ಷೆಯಾಗಲೇಬೇಕಿದೆ. 'ನಾಗರಿಕ ಸಮಾಜ' ಎರಡೂ ವರ್ಗಗಳನ್ನು ಪ್ರತಿನಿಧಿಸಲು ಸಾಧ್ಯವಿಲ್ಲ. ಹೀಗಿರುವಾಗಲೂ ಈ ಸೂಕ್ಷ್ಮಗಳನ್ನು ಅರಿತು ಪೂರ್ಣಾವಧಿ ಕಾರ್ಯಕರ್ತರನ್ನು ಮಾದರಿಯಾಗಿಟ್ಟುಕೊಳ್ಳುವಾಗಲೇ ಅಲ್ಪಾವದಿಯ ಕಾರ್ಯಕರ್ತರೂ ಸಹ ಸಾಕಷ್ಟಿದ್ದಾರೆ. ಅವರಿಗೂ ಒಂದು ವೇದಿಕೆಯ ಅವಶ್ಯಕತೆ ಇದೆ ತಾನೇ?

ಒಟ್ಟಾರೆ, ವರ್ತಮಾನದಲ್ಲಿ ಜನಾಂದೋಲನಗಳು, ಭಿನ್ನ ಭಿನ್ನ ರೂಪಗಳಲ್ಲಿ ಮರುಸಂಘಟಿತಗೊಳ್ಳುತ್ತಿವೆ ಎಂಬ ಸಕಾರಾತ್ಮಕ ಆಶಯ ನನ್ನ ಮುಂಬೈ ೨೦೦೪ರ ಅನುಭವವಾಗಿತ್ತೆಂದರೆ ಅತಿಶಯವೇನೂ ಅಲ್ಲ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಹುಟ್ಟಿದ್ದು ಫ್ಯೂಡಲ್ ಕುಟುಂಬದಲ್ಲಿ ಬೆಳೆದದ್ದು ಸಮಾಜವಾದಿಯಾಗಿ

ನೆನಪು

ಪ್ರೊ. ನಂಜುಂಡಸ್ವಾಮಿ ಅವರು (೧೯೩೬) ನಾಡಿನ ಬಹುದೊಡ್ಡ ಚಿಂತಕರು. ಹೋರಾಟಗಾರರು. ೭೦ರ ದಶಕದ ಎಲ್ಲಾ ಜನಪರ ಚಳವಳಿಗಳಿಗೆ ಪ್ರೇರಕ ಶಕ್ತಿಯಾಗಿ ನಿಂತವರು. ೮೦ರ ದಶಕದಲ್ಲಿ ರೈತ ಸಂಘವನ್ನು ಕಟ್ಟಿ ಆಳುವವರ ಗುಂಡಿಗೆಯನ್ನು ನಡುಗಿಸಿದವರು. ಜಾಗತಿಕ ಮಟ್ಟದಲ್ಲಿ ರೈತರ ಹಿತಕ್ಕಾಗಿ ಹೋರಾಡಿದವರು. ಈಚೆಗೆ ನಿಧನರಾದ ಅವರ ನೆನಪಿಗಾಗಿ ೨೭-೦೧-೦೩ರಂದು ನಡೆಸಿದ ಸಂದರ್ಶನವನ್ನು ಪುನರ್ ಮುದ್ರಿಸುತ್ತಿದ್ದೇವೆ.

ಸೌಜನ್ಯ : ಕನ್ನಡ ಅಧ್ಯಯನ, ಕನ್ನಡ ವಿವಿ.

ಸಂದರ್ಶನ:
ಪ್ರೊ॥ ರಹಮತ್ ತರೀಕೆರೆ

ಪ್ರ. ನೀವು ದೊಡ್ಡ ಫ್ಯೂಡಲ್ ಕುಟುಂಬದಿಂದ ಬಂದವರು ಅಂತ ಕೇಳಿದ್ದೇನೆ. ನಿಮ್ಮ ತಂದೆಯವರು ಏನಾಗಿದ್ದರು ಸಾರ್?

ಉ. ನಮ್ಮ ತಂದೆಯವರು ಮಹಾಂತದೇವರು ಅಂತ, ಮೊದಲನೇ ಪೀಳಿಗೆ ವಕೀಲರು. ೨೬ ವರ್ಷ ಶಾಸಕರಾಗಿದ್ದರು. ಮೈಸೂರು ಜಿಲ್ಲೆಯಲ್ಲಿ, ಮತ್ತೆ 'ಫ್ಯೂಡಲ್' ಅಂತ ಶಬ್ದ ಉಪಯೋಗಿಸಿದಿರಲ್ಲ, ಅದು ಕೇವಲ ಆಸ್ತಿಗೆ ಸಂಬಂಧಪಟ್ಟಂತೆ ಅನ್ವಯಿಸುತ್ತೆ. ನಮ್ಮ ತಾತನಿಗೆ ಸಾವಿರ ಎಕರೆ ಮೇಲಿತ್ತು ಭೂಮಿ. ಆಕಾರಣ ನಾನು ಹುಟ್ತಾನೇ ಒಬ್ಬ ಶಾಸಕನ ಮಗ ಮತ್ತು ಫ್ಯೂಡಲ್ ಲಾರ್ಡನ ಮೊಮ್ಮಗ. (ನಗು) ಆಸ್ತಿ ದೃಷ್ಟಿಯಿಂದ ಫ್ಯೂಡಲ್ ಅಂತ ಕರೀಬಹುದೇ ಹೊರತು, ತಾತನ ವಿಚಾರಗಳು ತಂದೆಯ ವಿಚಾರಗಳು ಈ ಆಧಾರದ ಮೇಲೆ ಫ್ಯೂಡಲ್ ಅಂತ ಕರೆಯಕ್ಕೆ ಸಾಧ್ಯಾನೇ ಇಲ್ಲ, ಕಾರಣ, ನಮ್ಮ ಆ ಭಾಗದ ಜನ ಮೂಲತಃ ಉತ್ತರ ಕರ್ನಾಟಕದಿಂದ ಬಂದವರು. ಕಲ್ಯಾಣಕ್ರಾಂತಿ ಆದ ನಂತರ ಅಲ್ಲಿ ಗೊಂದಲಗಳಿದ್ದಾಗ ಬಂದವರು ಅಂತ ದಾಖಲೆಗಳಿವೆ. ಬಂದು ಗ್ರಾಮಸ್ಥಾಪನೆ ಮಾಡಿದರು, ಮಾಡರಹಳ್ಳಿ ಅಂತ, ಟಿ. ನರಸೀಪುರ ತಾಲೂಕಲ್ಲಿ, ಅದು ಎಲ್ಲ ಕಪ್ಪು ಮಣ್ಣಿನ ಪ್ರದೇಶ. ಅಲ್ಲೇ ಬಂದು ಗ್ರಾಮಸ್ಥಾಪನೆ ಮಾಡೋಕೆ ಕಾರಣ, ಅವರ ವ್ಯವಸಾಯದ ಅಭ್ಯಾಸಗಳು, ಬೆಳೆ ಪದ್ಧತಿ. ಅವರು ಯಾವ ಮಣ್ಣಿಗೆ ಹೋಗಿದ್ರು ಅವೆಲ್ಲಾನೂ ಸಂಬಂಧ ಉಂಟು. ಉತ್ತರ ಕರ್ನಾಟಕದಲ್ಲಿನ ಬೆಳೆಗಳನ್ನು ನಮ್ಮ ಗ್ರಾಮದಲ್ಲಿ ನೀರಾವರಿ ಆಗೋಕೂ ಮುಂಚೆ ನಾನೇ ನೋಡಿದ್ದೀನಿ. ಅದೇ ಬಿಳಿಜೋಳ, ಕಡ್ಲೆ, ಕುಸುಬಿ, ದನಿಯಾ, ಹತ್ತಿ ಕಬ್ಬು-ಕಪ್‌ಮಣ್ಣಲ್ಲಿ ಏನೇನು ಬೆಳಿತಾರೆ, ಅವನ್ನೆಲ್ಲ ಬೆಳೀತಾಯಿದ್ರು. ಆದಕಾರಣ ಆ ಕಾಲದಲ್ಲಿ, ಎಷ್ಟು ವರ್ಷನೋ ಅದು ಗೊತ್ತಿಲ್ಲ, ನಮ್ಮ ತಾತ ಕಟ್ಟಿದ ಮನೇನೆ ಸುಮಾರು ೨೦೦ ವರ್ಷದ್ದು ಇದೆ ಹಳ್ಳೀಲಿ. ಅದಕ್ಕಿಂತ ಎಷ್ಟು ವರ್ಷ ಹಿಂದೆ ಬಂದವರೋ ಗೊತ್ತಿಲ್ಲ. ಆ ಕಾರಣ ಭೂಮಿ ಯಾರಿಗೆ ಬೇಕಾದರೂ ಲಭ್ಯ ಇತ್ತು. ಆಗ ಭೂಮಿ ಕಷ್ಟದ ಆಸ್ತಿ ಆಗಿರಲಿಲ್ಲ. ಆ ಒಂದು ದೃಷ್ಟಿಯಿಂದ ಫ್ಯೂಡಲ್ ಅಂತ ಕಾಣಿಸಬಹುದು. ಅಷ್ಟೇ ಹೊರತು, ಅವರು ಯಾವ ರೀತಿ ಜೀವನ ನಡೆಸಿದರು ಏನು ವಿಚಾರ ಇಟ್ಟುಕೊಂಡಿದ್ರು ಇದನ್ನೆಲ್ಲ ನೋಡಿದರೆ, ಇನ್ನೂ ಶರಣ ಚಳವಳಿಯ ಅಂಶಗಳು ಅವರಲ್ಲಿದ್ದವು ಅಂತ ಅನಿಸುತ್ತೆ....

ಪ್ರ. ಶರಣ ಚಳವಳಿಯ ಅಂಶಗಳು ಅಂದರೆ?

ಉ. ಅಂದರೆ, ಹಳ್ಳಿ ಒಳಗಿನ ಸಂಬಂಧಗಳು, ಮತ್ತೆ ಜಾತಿ ಪದ್ಧತಿ ಬಗ್ಗೆ ಇದ್ದಂತಹ ಅವರ ಧೋರಣೆಗಳು, ಮತ್ತೆ ಈ ವ್ಯವಸ್ಥೆ ಬಗ್ಗೆ ಇದ್ದಂತಹ ಸಿಟ್ಟುಗಳು, ಹಳ್ಳಿ ಒಳಗೇನೆ ನಡೆಯೋವಂಥ ಕುತಂತ್ರಗಳನ್ನು ನಾಶ ಮಾಡೋವಂಥ ಘಟನೆಗಳು ಇವೆಲ್ಲಾನು.

ಪ್ರ. ಇವೆಲ್ಲ ನೈತಿಕ ಉದಾರವಾದಿ ಗುಣಗಳೊ ಅಥವಾ ಚಳವಳಿಯಿಂದ ಬಂದಂತಹವಾಗಿದ್ದವೋ?

ಉ. ಒಂದು ಚಳವಳಿಯ ಭಾಗವಾದ ಮೇಲೆ, ವ್ಯಕ್ತಿಯ ಗುಣಗಳು ಚಳವಳಿಗೆ ವರ್ಗಾವಣೆಯಾಗೋದು, ಚಳವಳಿಯ ಗುಣಗಳು ವ್ಯಕ್ತಿಗೆ ವರ್ಗಾವಣೆಯಾಗೋದು ನಿರಂತರವಾಗಿ ನಡೀತಾ ಇರ್ತದೆ. ಅದರ ಆಧಾರದ ಮೇಲೆ ಚಳವಳಿ ಯಶಸ್ಸುಗಳಿಸೋದು ಅಥವಾ ಸೋಲೋದು ಅವಲಂಬಿತವಾಗಿರುತ್ತೆ. ಆ ಕಾರಣಾನೇ ಒಂದು ಚಾರಿತ್ರ್ಯದ ದೃಢತೆ ಚಳವಳಿಯಲ್ಲಿರೋ ವ್ಯಕ್ತಿಗಳಲ್ಲೂ ಇರೋದು ಬಹಳ ಮುಖ್ಯ. ಅದನ್ನ ಕಳಕೊಂಡಂಥವರು ಹೆಚ್ಚಿಗೆ ಸಂಖ್ಯೆ ಆದಾಗ ಆ ಚಳವಳಿ ನಾಶವಾಗಿ ಹೋಗುತ್ತೆ.

ಪ್ರ. ತಂದೆಯವರು ಶಾಸಕರಾಗಿದ್ದರು ಅಂದಿರಿ. ಯಾವ ಪಕ್ಷವನ್ನು ಅವರು ಪ್ರತಿನಿಧಿಸ್ತಿದ್ರು?

ಉ. ಸ್ವಾತಂತ್ರ್ಯ ಬರೋಕು ಮುಂಚೆ ಜಸ್ಟೀಸ್ ಪಾರ್ಟಿ ಅಂತ ಒಂದು ರಚನೆ ಆಗಿತ್ತು ತಮಿಳುನಾಡಿನಲ್ಲಿ ಮತ್ತು ಕರ್ನಾಟಕದಲ್ಲಿ, ಅದನ್ನು ನಾನ್ ಬ್ರಾಹ್ಮಿನ್ ಮೂಮೆಂಟ್ ಅಂತ ಕರೀತಾರೆ. ತಮಿಳು ನಾಡಲ್ಲೂ ಬಹಳ ಶಕ್ತಿಯುತವಾಗಿ ಸಂಘಟನೆ ಆಗಿತ್ತು. ಸರಕಾರವೂ ರಚನೆ ಮಾಡಿತ್ತು. ಅದೇ ಒಂದು ಚಳವಳಿ ಕರ್ನಾಟಕದಲ್ಲಿ ನಡೀತಾ ಇತ್ತು. ಹಳೇ ಮೈಸೂರಿನಲ್ಲೂ ನಡೀತಾ ಇತ್ತು, ಮಹಾರಾಜರ ಕಾಲದಲ್ಲೂ ನಡೀತಾ ಇತ್ತು. ಆ ಕಾರಣಾನೇ ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೊದಲನೇ ಬಾರಿಗೆ ಮೀಸಲಾತಿ ಜಾರಿಗೆ ತಂದಾಗ, ಆಗಲೂನೂ ನಮ್ಮ ತಂದೆಯವರು ಆ ಚಳವಳಿಯ ಭಾಗವಾಗಿದ್ದರು.

ಪ್ರ. ಮಾಡರಹಳ್ಳಿಯ ಯಾವ ನೆನಪುಗಳು ನಿಮಗೆ ಈಗಲೂ ಇವೆ?

ಉ. ಇಲ್ಲ, ನಾನು ಹುಟ್ಟಿದ್ದೇ ಮೈಸೂರು ಸಿಟಿನಲ್ಲಿ. ಅಷ್ಟೊತ್ತಿಗಾಗಲೇ ನಮ್ಮ ತಂದೆಯವರು ವಕೀಲರಾಗಿದ್ದರು. ಶಾಸಕರಾಗಿದ್ದರು. ಮೈಸೂರಲ್ಲಿ ವಾಸ ಮಾಡ್ತಾ ಇದ್ದೆವು. ಆದರೂ ರಜಾ ಬಂದಾಗಲೆಲ್ಲಾ ನಮ್ಮ ತಂದೆ ಹಳ್ಳಿಗೆ ಕರಕೊಂಡು ಹೋಗೋರು. ಜಮೀನೆಲ್ಲಾ ಸುತ್ತಾಡಾದು ಮಾಡ್ತಾ ಇದ್ದೆವು. ಅಷ್ಟೆ ಸಂಪರ್ಕ.

ಪ್ರ. ನೀವು ಕಾನೂನುಶಾಸ್ತ್ರ ಓದಿದಿರಿ. ತಂದೆಯವರ ಒತ್ತಡಾನಾ?

ಉ. ನಾನು ಮೂಲತಃ ವಿಜ್ಞಾನದ ವಿದ್ಯಾರ್ಥಿ. ಅದರಲ್ಲೂ ಜೈವಿಕ ಶಾಸ್ತ್ರಗಳ, ನ್ಯಾಚುರಲ್ ಸೈನ್ಸಸ್ ಏನು ಕರೀತಾರೆ ಅದರ, ವಿದ್ಯಾರ್ಥಿ. ನನ್ನ ಮೊದಲನೇ ಡಿಗ್ರಿ ವಿಜ್ಞಾನಾನೇ. ಅನಂತರ ತಂದೆಯವರ ಆಸೆಗೆ ಸ್ವಲ್ಪ ತಲೆಬಾಗಿ ಓದೋದಕ್ಕೆ ಶುರು ಮಾಡಿದ್ದು.

ಪ್ರ. ಕಾಲೇಜಿನಲ್ಲಿ ನಿಮ್ಮ ಗುರುಗಳು ಯಾರು?

ಉ. ಅಂಥ ಹೇಳಿಕೊಳ್ಳುವಂಥ ಪ್ರಿಯವಾದ ಗುರುಗಳು ದುರ ದೃಷ್ಟವಶಾತ್ ನಮಗೆ ಯಾರೂ ಸಿಗಲಿಲ್ಲ. ಅವರೆಲ್ಲ ಪಕ್ಕದ ಮಹಾರಾಜ ಕಾಲೇಜಲ್ಲಿ ಇದ್ದರು. ಕುವೆಂಪು ಆವಾಗ ಅಸಿಸ್ಟೆಂಟ್ ಪ್ರೊಫೆಸರ್ ಅಲ್ಲಿ, ಆಗಲೇ ದೊಡ್ಡ ಹೆಸರು ಪಡೆದಿದ್ದರು. ಮತ್ತೆ ಅವರ ಸಭೆಗಳಿಗೆ ತಪ್ಪದೇನೇ ಹಾಜರಾಗುತ್ತಿದ್ದೆ.

ಪ್ರ. ೧೯೫೦ರ ದಶಕದ ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದ ಚಟುವಟಿಕೆಗಳಲ್ಲಿ ನಿಮ್ಮ ಹೆಸರ ಜತೆ ತೇಜಸ್ವಿ ಲಂಕೇಶ,ಅನಂತಮೂರ್ತಿ, ಅಡಿಗರು, ಕಡಿದಾಳು ಶಾಮಣ್ಣ-ಹೀಗೆ ಅನೇಕ ಹೆಸರುಗಳ ಪ್ರಸ್ತಾಪವಾಗುತ್ತವೆ. ತೇಜಸ್ವಿಯವರ ಜತೆ ನಿಮ್ಮ ಒಡನಾಟ ಬಹಳ ಹೆಚ್ಚು. ಇಬ್ಬರೂ ರೈತರ ಬಗ್ಗೆ ಚಿಂತೆ ಮಾಡಿಕೊಂಡು ಬಂದೋರು. ನೀವು ರೈತಾಪಿ ಚಿಂತನೆಗೆ ಹೊರಳಲು ಏನು ಕಾರಣ?

ಉ. ನನಗೂ ತೇಜಸ್ವಿಗೂ ಪರಿಚಯ ಸುಮಾರು ೧೯೬೦ನೇ ಇಸ್ವಿಯಿಂದ. ಅಷ್ಟೊತ್ತಿಗಾಗಲೇ ನಾನು ಎಲ್‌ಎಲ್‌ಎಂ ಮುಗಿಸಿದ್ದೆ ಕರ್ನಾಟಕ ವಿ.ವಿ.ಯಿಂದ. ಮುಗಿಸಿ ಜರ್ಮನಿಗೆ ಹೋಗಿಬಿಟ್ಟೆ ೪ ವರ್ಷ. ಅಲ್ಲಿಂದ ವಾಪಾಸು ಬರೋವಾಗಲೇನೆ ರೈತ ಸಂಘಟನೆ ಮಾಡಬೇಕು, ವ್ಯವಸಾಯನೇ ಮಾಡಬೇಕು ಅಂತಲೇ ತೀರ್ಮಾನ ಮಾಡಿಕೊಂಡು ಬಂದಿದ್ದು. ಅಷ್ಟರಲ್ಲಿ ತೇಜಸ್ವಿಯವರು ವ್ಯವಸಾಯ ಶುರುಮಾಡಿದ್ದರು. ಮತ್ತೆ ಸುಂದರೇಶ್, ನಮ್ಮ ರೈತಸಂಘದ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದಾರಲ್ಲ ಅವರೂ ವ್ಯವಸಾಯ ಶುರುಮಾಡಿದರು. ೧೯೬೫ರಲ್ಲಿ ನಾನು ವ್ಯವಸಾಯ ಶುರುಮಾಡಿದೆ.

ಪ್ರ. ನೀವು ಮೂಲತಃ ಕಾನೂನಿನ ವಿದ್ಯಾರ್ಥಿ. ಈ ರೈತಪರ ಚಿಂತನೆಗೆ ಜರ್ಮನಿಯಲ್ಲಿ ಹೇಗೆ ಪ್ರೇರಣೆ ಸಿಕ್ತು?

ಉ. ಹೌದು, ಕಾನೂನಲ್ಲಿ ನಾನು ಇಂಟರ್‌ನ್ಯಾಷನಲ್ ಲಾ ಅಂಡ್ ನ್ಯಾಷನಲ್ ರಿಲೇಶನ್ಸ್ ಅಧ್ಯಯನ ಮಾಡಿದೋನು. ಅದರಲ್ಲಿ ಸಾಮ್ರಾಜ್ಯಶಾಹಿ ಮಾಡ್ತಾ ಇರೋ ಜಾಗತಿಕ ಶೋಷಣೆ, ಇವೆಲ್ಲ ಸ್ಪಷ್ಟವಾಗಿ ಗೊತ್ತಾಗ್ತಲಿಕ್ಕೆ ಶುರುವಾಯಿತು. ಆಮೇಲೆ ಸ್ವಾತಂತ್ರ್ಯ ಬಂದ ಮೇಲೂ ಯಾವ ರೀತಿ ಕಾಲೋನಿಯಲಿಜಂ ಮುಂದುವರಿಸೋದರಲ್ಲಿ ಬಿಳಿ ರಾಷ್ಟ್ರಗಳು ಯಶಸ್ವಿಯಾಗಿದಾವೆ ಅನ್ನೋದು ಗೊತ್ತಾಯಿತು.

ಪ್ರ. ಜರ್ಮನಿ ಕೂಡ ಒಂದು ಬಿಳಿರಾಷ್ಟ್ರವೆ. ಅಲ್ಲಿನ ಕಾನೂನು ಪಠ್ಯಕ್ರಮದಲ್ಲಿ ಇವೆಲ್ಲ ಇದ್ದವಾ?

ಉ. ಯುಸೀ, ಇಂಟರ್‌ನ್ಯಾಷನಲ್ ಲಾದಲ್ಲಿ ಜರ್ಮನಿ ಪಠ್ಯಕ್ರಮ ಅಂತ ಏನಿಲ್ಲ. ಎಲ್ಲಾ ದೇಶದಲ್ಲೂ ಒಂದೇ ಪಠ್ಯಕ್ರಮ ಇರಬೇಕಾಗುತ್ತೆ. ಜತೆಗೆ ನನ್ನ ಸುತ್ತ ಇದ್ದ ವಾತಾವರಣ ಕೂಡ ಇದಕ್ಕೆ ಕಾರಣವಾಯಿತು. ಹೇಳಿದೆನಲ್ಲ, ನಾನು ಯಾವ ಬ್ರಾಹ್ಮಣೇತರ ಚಳವಳಿ ನಡೀತಿದ್ದಂತಹ ವಾತಾವರಣದಲ್ಲಿ ಹುಟ್ಟಿದೆ ಅಂತ. ಆನಂತರ ಸ್ವಾತಂತ್ರ್ಯ ಬಂದ ಮೇಲೆ, ಕಿಸಾನ್ ಮಜದೂರ್ ಪ್ರಜಾಪಾರ್ಟಿ ಸದಸ್ಯರು ನಮ್ಮ ತಂದೆ. ಆನಂತರ ಅದು ಪ್ರಜಾ ಸೋಶಲಿಸ್ಟ್ ಪಾರ್ಟಿ ಆಯಿತು. ಆಗಲೂ ನಮ್ಮ ತಂದೆ ಆ ಪಾರ್ಟಿ ಸದಸ್ಯರು. ಹಾಗಾಗಿ ಸಮಾಜವಾದಿ ವಾತಾವರಣದಲ್ಲೆ ಬೆಳೆದೆ.

ಪ್ರ. ವಿದ್ಯಾಭ್ಯಾಸಕ್ಕೆ ಸಾಮಾನ್ಯವಾಗಿ ಇಂಗ್ಲೆಂಡಿಗೆ ಹೋಗ್ತಾರೆ. ಆದರೆ ನೀವು ಜರ್ಮನಿ ಆರಿಸಿಕೊಂಡಿರಿ!

ಉ. ಇಲ್ಲ, ವಿದ್ಯಾಭ್ಯಾಸಕ್ಕೆ ಅಂತ ಹೋಗಿದ್ದು ಜರ್ಮನಿ, ಫ್ರಾನ್ಸ್ ಮತ್ತು ಹಾಲೆಂಡ್‌ಗೆ. ಬ್ರಿಟೀಷರು ಮಾಡಿದಂಥ ಕೆಲಸಗಳೆಲ್ಲ ಗೊತ್ತಿದ್ದರಿಂದ ನನಗೆ ಇಂಗ್ಲೆಂಡ್ ಹೋಗಲಿಕ್ಕೆ ಮನಸ್ಸೇ ಇರಲಿಲ್ಲ. ಇನ್ನುವರೆಗೂ ನಾನು ಹೋಗಿಲ್ಲ. ಇಂಗ್ಲೆಂಡೂ ನನ್ನನ್ನು ಕರೆಸ್ಕೊಂಡಿಲ್ಲ (ನಗು).

ಪ್ರ. ನೀವು ಭಾರತ ಮತ್ತು ಯುರೋಪ್ ಎರಡೂ ಪರಿಸರಗಳಲ್ಲಿ ಕಲಿತಿದ್ದೀರಿ. ಎರಡೂ ಕಡೆ ಶಿಕ್ಷಣದ ವಿಷಯದಲ್ಲಿ ಎದ್ದುಕಾಣೋ ಫರಕು ಯಾವುದು ಅನ್ನಿಸುತ್ತೆ ಸಾರ್?

ಉ. ಮುಖ್ಯವಾಗಿ ಅಧ್ಯಯನದ ವಿಧಾನ ಮತ್ತೆ ಶಿಕ್ಷಣ ಸ್ವಾತಂತ್ರ್ಯ, ಆ ಒಂದು ವೈಚಾರಿಕ ಮುಕ್ತತೆ. ಅದ್ಯಾವುದೂ ಇಲ್ಲಿ ಕಾಣಲ್ಲ. ಜೊತೆಗೆ ಇದಕ್ಕೆ ಬೇರೆ ಸಾಮಾಜಿಕ ವ್ಯವಸ್ಥೆಗಳು ಕಾರಣ ಆಗ್ತಾವೆ. ಯೂರೋಪಿನಲ್ಲಿ ಸಾಮಾಜಿಕ ಭದ್ರತೆ ಎಷ್ಟರಮಟ್ಟಿಗೆ ಇದೆ ಅಂದರೆ, ಈ ವೈಚಾರಿಕ ಸ್ವಾತಂತ್ರ್ಯಕ್ಕೆ ಸಂಪೂರ್ಣ ಪೂರಕವಾದಂಥ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ. ಇಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಸೇರಿದ ಕೂಡಲೇ ಗುಲಾಮ ಮನೋಭಾವನೆ ಶುರುವಾಗಿ ಬಿಡುತ್ತೆ. ಮುಂದಿನ ಉದ್ಯೋಗದ ಯೋಚನೆ, ಕೆರಿಯರ್ ಯೋಚನೆ ಇತ್ಯಾದಿಗಳು ಬಂದು ವಿದ್ಯಾರ್ಥಿಗಳು ಅರ್ಧ ವ್ಯಕ್ತಿತ್ವಾನೇ ವಕ್ರಗೊಳಿಸಿಕೊಂಡು ಬಿಡುತಾರೆ.

ಪ್ರ. ಒಂದು ನಾಗರೀಕ ಸಮಾಜದಲ್ಲಿ ಪ್ರಜೆಗಳಿಗೆ ಇರುವ ಸಾಮಾಜಿಕ ಆರ್ಥಿಕ ಭದ್ರತೆಯೆ ಅವರ ವೈಚಾರಿಕ ಸ್ವಾತಂತ್ರ್ಯಕ್ಕೆ ಕಾರಣವಾಗುತ್ತೆ ಅಂತ ಹೇಳ್ತಾ ಇದೀರಾ?

ಉ. ನಿಜವಾಗಲೂ.

ಪ್ರ. ನಿಮ್ಮ ಅನೇಕ ಚಿಂತನೆಗಳಿಗೆ ಲೋಹಿಯಾ ಪ್ರೇರಣೆಯಿದೆ. ಅವರ ಚಿಂತನೆಗಳ ಸಂಪರ್ಕ ನಿಮಗೆ ಯಾವಾಗ ಬಂದಿತು?

ಉ. ತಮಾಷೆ ಹೇಳತೀನಿ. ನಾನು ಯುರೋಪಿನಲ್ಲಿದ್ದಾಗ ೪ ವರ್ಷ ಸ್ವತ ಚಿಂತನೆ ಮಾಡಿದೆ. ಅಲ್ಲಿಯವರೆಗೂ ನಾನು ಲೋಹಿಯಾನ ಓದಿರಲಿಲ್ಲ. ಬೇರೆ ಲಿಟರೇಚರ್ ನರೇಂದ್ರದೇವ ಅವರದೂ ಇವರದೂ ಮನೆಗೆ ಬರ್ತಾ ಇತ್ತು. ಆದರೆ ನಾನೇನು ಚಿಂತನೆಗಳನ್ನ ನಡೆಸಿದ್ದೆ ದೇಶದ ರಾಜಕೀಯದ ಬಗ್ಗೆ ಇರಲಿ, ಅಂತರಾಷ್ಟ್ರೀಯ ರಾಜಕೀಯದ ಬಗ್ಗೆ ಇರಲಿ, ಇಂಡಿಯಾಕ್ಕೆ ಬಂದ ನಂತರ ಎಲ್ಲಾ ರಾಜಕೀಯ ಪಕ್ಷಗಳನ್ನು ನೋಡಿ ಇನ್ನೂ ಆಯ್ಕೆ ಮಾಡೋ ಸ್ಥಿತಿಯಲ್ಲಿ ಇರೋವಾಗಲೇನೆ, ಲೋಹಿಯಾರ 'ಮಾರ್ಕ್ಸ್ ಗಾಂಧಿ ಅಂಡ್ ಸೋಶಿಯಲಿಜಂ' ಪುಸ್ತಕ ನನ್ನ ಕೈಗೆ ಸಿಕ್ತು. ಅದನ್ನು ಓದೋಕೆ ಶುರುಮಾಡಿದಾಗ, ಏನು ನಾನೇ ಬರದಂಗೆ ಕಾಣಸ್ತಾ ಇತ್ತು! ನಾನು ಆಲೋಚನೆ ಮಾಡಿದ ವಿಚಾರಗಳೆಲ್ಲಾ ಅಲ್ಲೇ ಇತ್ತು. ಆನಂತರ ಆಯ್ಕೆ ಮಾಡೋ ಸಮಸ್ಯೇನೆ ಬರ್ಲಿಲ್ಲ. ನೇರ ಸಮಾಜವಾದಿ ಪಕ್ಷ ಸೇರಿದ್ದು, ಸಮಾಜವಾದಿ ಯುವಜನ ಸಭಾ ರಾಜ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡೋದಿಕ್ಕೆ ಒಪ್ಪಿಗೆ ಕೊಟ್ಟಿದ್ದು, ಎಲ್ಲಾ ನಡೀತಾ ಬಂತು.

ಪ್ರ. ಲೋಹಿಯಾ ಚಿಂತನೆಯಲ್ಲಿ ನಿಮಗೆ ಸೆಳೆದ ಮುಖ್ಯ ಸಂಗತಿ ಯಾವುದು?

ಉ. ಅತ್ಯಂತ ಹೆಚ್ಚು ಆಕರ್ಷಕವಾಗಿದ್ದು ಅವರು ಉಪಯೋಗಿಸೋ ಭಾಷೆ ಮತ್ತು ಶೈಲಿ. ಅದು ನನ್ನ ಶೈಲಿನೇ. ಆ ಕಾರಣಕ್ಕೆ ಆಕರ್ಷಕ ಆಯಿತೋ ಏನೋ? ಆ ಶಾರ್ಪನೆಸ್ ಇದೆಯಲ್ಲ ದಟ್ಸ್ ವಾಟ್ ಆ್ಯಟ್ರಾಕ್ಟೆಡ್ ಮಿ. ಅಂಡ್ ದೆನ್ ಹಿಸ್ ಕನ್‌ಸಿಸ್ಟೆನ್ಸಿ ಇನ್ ಪಾಲಿಟಿಕ್ಸ್. ಗಾಂಧೀಜಿ ನಂತರ ಅದೇ ದಿಕ್ಕಿನಲ್ಲಿ ಇನ್ನೂ ಹೆಚ್ಚು ವೈಜ್ಞಾನಿಕವಾಗಿ ಆಲೋಚನೆ ಮಾಡಿದಂಥ ಏಕೈಕ ಚಿಂತಕ ಇವತ್ತಿಗೂ ಇಂಡಿಯಾದಲ್ಲಿ ಅಥವಾ ಜಗತ್ತಿನಲ್ಲೇ ಅವರೊಬ್ಬರೆ.

ಪ್ರ. ಈಗಿನ ಭಾರತದ ಮತ್ತು ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ಲೋಹಿಯಾ ಚಿಂತನೆ ಯಾವ ತರಹ ಪ್ರಸ್ತುತ ಅಂತ ಭಾವಿಸ್ತೀರಿ?

ಉ. ಹೇಳ್ತೀನಿ. ಈಗ ೪-೫ ದಿವಸದಲ್ಲಿ ಅವರದೊಂದು ಲೇಖನ ಎಲ್ಲೋ ಹುಡುಕ್ತಾ ಸಿಕ್ತು ಕೈಗೆ. 'ಎಕನಾಮಿಕ್ಸ್ ಆಫ್ಟರ್ ಮಾರ್ಕ್ಸ್' ಅಂತ. ನಮ್ಮ ಸ್ನೇಹಿತರು ಅದನ್ನೇ ಪ್ರತ್ಯೇಕವಾಗಿ ಪ್ರಕಟಣೆ ಮಾಡಿದಾರೆ. ಮತ್ತೆ ಓದೋಣ ಅಂತ ಶುರು ಮಾಡಿದೆ. ಏನಾಗುತ್ತೆ ಲೋಹಿಯಾ ಬರೆದಿರೋದು, ದಿನನಿತ್ಯ ಓದಬಹುದು ತಾವು. ಒಂದು ಹೊಸದು ಕಾಣ್ತಾ ಇರುತ್ತೆ ಅಲ್ಲಿ. ಇವತ್ತು ಏನು ಜಾಗತೀಕರಣ ಆಗ್ತಾ ಇದೆ, ಅಮೆರಿಕನ್ ಕ್ಯಾಪಿಟಲಿಜಂ ತಾನು ಉಳಿಯಬೇಕಾದರೆ ಏನನ್ನ ಮಾಡ್ಬೇಕಾಗಿದೆ, ಅದನ್ನು ಲೋಹಿಯಾ ೪೨ನೇ ಇಸವಿಯಲ್ಲಿ ಬರೆದಿದ್ದಾರೆ. ಅವರು ೪೨ನೇ ಇಸವಿಯಲ್ಲಿ ಏನ್ ಬರದರೋ ಅದನ್ನ ಅಮೆರಿಕ ಈಗ ಮಾಡ್ತಾ ಇದೆ.

ಪ್ರ. ಇಷ್ಟೊಂದು ಮುಂಗಾಣ್ಕೆಯುಳ್ಳ ರಾಜಕೀಯ ತತ್ವಶಾಸ್ತ್ರವನ್ನು ಲೋಹಿಯಾ ರಚಿಸಿದರು. ಆದರೆ ಭಾರತದಲ್ಲಿ ಅವರ ಚಿಂತನೆಯನ್ನು ಅನುಸರಿಸುವ ಸಮಾಜವಾದಿ ರಾಜಕಾರಣ ಯಾಕೆ ಒಂದು ಪರ್ಯಾಯ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಲಿಲ್ಲ?

ಉ. (ಕೊಂಚ ದೀರ್ಘಾಲೋಚನೆ ಮಾಡಿ) ಸೀ, ಕ್ಯಾರೆಕ್ಟರ್ ಅಂಡ್ ಕಂಡಕ್ಟ್, ನಡೆ ಮತ್ತು ಗುಣ, ಲೋಹಿಯಾ ಸಿದ್ಧಾಂತದ ಒಂದು ಭಾಗ. ಇವನ್ನು ಲೋಹಿಯಾ ಮೀನ್ಸ್ ಅಂಡ್ ಎಂಡ್ಸ್‌ಗೆ ಲಿಂಕ್ ಮಾಡಿ ಸಿದ್ಧಾಂತ ನಿರೂಪಿಸ್ತಾರೆ. ಅವರ ಜೊತೆ ಕೆಲಸ ಮಾಡ್ತಾ

ಇದ್ದವರಲ್ಲಿ ಈ ಅಂಶಗಳನ್ನು ಮೈಗೂಡಿಸಿಕೊಳ್ಳೋದರಲ್ಲಿ ಸೋತೋರೇ ಜಾಸ್ತಿ ಜಾರ್ಜ್ ಫರ್ನಾಂಡೀಸ್ ಅವರಿಂದ ಹಿಡಿದು ನಮ್ಮ ಕರ್ನಾಟಕದ ಇವತ್ತಿನ ಅನೇಕ ಸಮಾಜವಾದಿ ರಾಜಕಾರಣಿಗಳವರೆಗೆ, ಲೋಹಿಯಾ ಮೀನ್ಸ್ ಅಂಡ್ ಎಂಡ್ಸ್ ಸಂಬಂಧವನ್ನ ಟೈಂ ಬಗ್ಗೆನೂ ಲಿಂಕ್ ಮಾಡ್ತಾ ಇದ್ದರು. ಟೈಂ ಈಸ್ ನಾಟ್ ಜಸ್ಟ್ ಎ ಮೂಮೆಂಟ್. ಇಟ್ ಈಜ್ ಆಲ್ಸೋ ಎಟರ್ನಿಟಿ. ಎವ್ವರಿ ಮೂಮೆಂಟ್ ಈಜ್ ಎಟರ್ನಿಟಿ ಅಂದಾಗ, ನೀವು ಇವತ್ತು ಸುಳ್ಳು ಹೇಳಿ ನಾಳೆ ಸತ್ಯ ಸ್ಥಾಪನೆ ಮಾಡ್ತೀನಿ ಅನ್ನೋಕೆ ಆಗೋಲ್ಲ.

ಪ್ರ. ಲೋಹಿಯಾ ಇಂಡಿಯಾದ ಕಮ್ಯುನಿಸ್ಟರ ಮೇಲೆ ಕ್ರಿಟಿಕಲ್ ಆಗಿದ್ದರು. ಇದನ್ನ ನೀವು ಹೇಗೆ ವಿಶ್ಲೇಷಿಸ್ತೀರಿ?

ಉ. ಆಲ್ಸೋ ಅಕಾರ್ಡಿಂಗ್ ಟು ಲೋಹಿಯಾ, ದಿ ಗ್ರೇಟೆಸ್ಟ್ ಮಿಸ್ಟೇಕ್ ಮಾರ್ಕ್ಸ್ ಡಿಡ್ ವಾಜ್, ಅಕ್ಸೆಪ್ಟಿಂಗ್ ದಿ ಕ್ಯಾಪಿಟಲಿಸ್ಟ್ ಟೆಕ್ನಿಕ್ಸ್ ಆಫ್ ಪ್ರೊಡಕ್ಶನ್ ಅಂಡ್ ದಿ ಕ್ಯಾಪಿಟಲಿಸ್ಟಿಕ್ ಮೋಡ್ ಆಫ್ ಪ್ರೊಡಕ್ಶನ್, ಆ್ಯಜ್ ಆ್ಯನ್ ಐಡಿಯಲ್ ಮೋಡ್ ಆಫ್ ಪ್ರೊಡಕ್ಶನ್. ಲೋಹಿಯಾ ಅವರು ಹೇಳೋದು, ಇದನ್ನ ಒಪ್ಪೋಕೆ ಮಾರ್ಕ್ಸ್‌ನ ಮನಸು ಯಾಕೆ ತಯಾರಾಯ್ತು ಅಂದ್ರೆ, ಬಿಕಾಸ್ ಹಿ ವಾಸ್ ಆಲ್ಸೋ ಯುರೋಪಿಯನ್. ಐವುಡ್ ಸೇ ದಟ್ ವಾಜ್ ದಿ ಬಿಗ್ಗೆಸ್ಟ್ ವೀಕ್‌ನೆಸ್. ಇವತ್ತು ಜಾಗತೀಕರಣದ ವಿರುದ್ಧ ಯುರೋಪಿನಲ್ಲಿ ಏನು ಜನಾಂದೋಲನಗಳು ನಡೀತಾ ಇವೆ. ಅಲ್ಲೂನು ಇದನ್ನು ಕಾಣಬಹುದು ಅಂತ. ದಿ ಸೇಮ್ ಯುರೋಪಿಯನ್ ಮೂಮೆಂಟ್ಸ್ ಹೂ ವಓರ್ ಅಪೋಸಿಂಗ್ ಗ್ಲೋಬಲೈಜೇಶನ್ ಅಲಾಂಗ್ ವಿತ್ ಅಸ್, ಎಕ್ಸಿಬಿಟ್ಸ್ ದಟ್ ಕೈಂಡ್ ಆಫ್ ವೀಕ್‌ನೆಸ್ ಅಕೇಶನಲಿ. ಅದೇ ಕಾರಣಕ್ಕೆ ಹೈದ್ರಾಬಾದ್‌ದಲ್ಲಿ ಮೊನ್ನೆ ಆಯಿತಲ್ಲ ಏಶಿಯನ್ ಸೋಶೋಯಲ್ ಫೋರಂ, ಅದಕ್ಕೆ ನಾನು ಹೋಗಲಿಲ್ಲ. ಹೋದ ವರ್ಷ ವರ್ಲ್ಡ್ ಸೋಶಿಯಲ್ ಫೋರಂ ಆಯ್ತು ಬ್ರೆಜಿಲ್‌ನಲ್ಲಿ. ಅಲ್ಲೂ ಭಾಷಣ ಮಾಡಬೇಕಿತ್ತು. ನಾನು ಹೋಗಲಿಲ್ಲ. ಅದಕ್ಕೆ ಕಾರಣ ಏನಂತಂದರೆ, ವರ್ಲ್ಡ್ ಸೋಶಿಯಲ್ ಫೋರಂಗೆ ಯಾರು ಸಂಚಾಲಕರು ಅಂತ ಇದ್ದಾರೆ, ಆ ಸಂಚಾಲಕರು ಕ್ಯೂಬಾದ ಅಧ್ಯಕ್ಷ ಫೀಡಲ್ ಕ್ಯಾಸ್ಟ್ರೋಗೆ ಬ್ರೆಜಿಲ್ ಸಮಾವೇಶಕ್ಕೆ ಆಹ್ವಾನ ಕೊಡೋದಕ್ಕೆ ವಿರೋಧ ಮಾಡಿದರು. ಅವರು ಹೇಳಿದ್ದು ಕ್ಯಾಸ್ಟ್ರೋಗೆ ಕರೆದರೆ ಜಾಗತೀಕರಣ ವಿರೋಧಿ ಚಳವಳಿಯಲ್ಲಿ ಒಡಕು ಬರುತ್ತೆ. ನಾನಂದೆ- 'ಕರೀದೇ ಇದ್ದರೂ ಒಡಕು ಬರುತ್ತೆ. ಆ ಕಾರಣಕ್ಕೆ ನಾನು ಬರಲ್ಲ'. ಈಗ ಇದೇ ೨೬-೩೦ಕ್ಕೆ ಅಲ್ಲಿ ನಡೀತಾ ಇದೆ ಅಲ್ಲಿ. ನಾನು ಇರಬೇಕಿತ್ತಲ್ಲಿ. ನಾನು ಬರಲ್ಲ ಅಂದೆ. ಮುಂದಿನ ವರ್ಷ ಇಂಡಿಯಾದಲ್ಲಿ ವರ್ಲ್ಡ್ ಸೋಶಿಯಲ್ ಫೋರಂ ನಡೀಬೇಕು ಅಂತ ತೀರ್ಮಾನ ಮಾಡಿದಾರೆ. ಇಲ್ಲಿ ನಡೀಬೇಕು ಅನ್ನೋದಾದರೆ, ಇಲ್ಲಿಗೆ ಫೀಡಲ್ ಕ್ಯಾಸ್ಟ್ರೋ ಬಂದು ಉದ್ಘಾಟನೆ ಮಾಡೋದು ಅಂತ ಸಂಚಾಲನಾ ಸಮಿತಿ ತೀರ್ಮಾನ ಮಾಡಿದರೆ, ನಾನು ಬರ್ತೀನಿ ಅಂತ ಹೇಳಿದೀನಿ.

ಪ್ರ. ಈ ಒಂದು ನಿರ್ದಿಷ್ಟ ಅಂಶದ ಮೇಲೆ ನೀವು ಯಾಕೆ ಒತ್ತಾಯ ಮಾಡ್ತಾ ಇದೀರಿ?

ಉ. ಸೀ, ಬಿಕಾಸ್ ಆ ಆರ್ಗನೈಜರ್ಸ್ ಏನಿದಾರೆ, ಯುರೋಪಿನ ಕೆಲವು ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವರ್ಲ್ಡ್ ಸೋಶಿಯಲ್ ಫೋರಂನ ಸಂಚಾಲಕರು, ಅವರು ಅಮೆರಿಕನ್ ಕ್ಯಾಪಿಟಲಿಜಂ ಬಗ್ಗೆನೂ ಬಹಳ ಒಂದು ಸಾಫ್ಟ್‌ಲೈನ್ ತಗೋತಾರೆ. ಈವನ್ ದೆ ಗೋಟು ದಿ ಎಕ್ಸ್‌ಟೆಂಡ್ ದಟ್ ಆ್ಯಂಟಿ ಜಾರ್ಜ್‌ಬುಷ್ ಅಂತಾರೆ. ಇಂಥಾವೆಲ್ಲ ಮಾತಾಡೋರ ಜೊತೆಗೆ ಏನೂಂತ ಚಳವಳಿ ಮಾಡ್ತೀರಿ?

ಪ್ರ. ಮಾರ್ಕ್ಸ್‌ವಾದವು ಯೂರೋಪಿನ ಒಂದು ಚಾರಿತ್ರಿಕ ಸಂದರ್ಭದಲ್ಲಿ ಹುಟ್ಟಿಕೊಂಡಿತು. ಅದರಲ್ಲಿ ಕಾಲದೇಶ ಸನ್ನಿವೇಶಕ್ಕೆ ಅನುಸಾರವಾದ ಕೆಲವು ತತ್ವಗಳಿವೆ. ಅದು ಬೇರೆ ಬೇರೆ ದೇಶದ ಸಮಾಜಗಳ ಸಂದರ್ಭಗಳ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕು ಅಂತ ನಿರೀಕ್ಷಿಸೋಕೆ ಸಾಧ್ಯವಿಲ್ಲ. ಯಾವುದೇ ತತ್ವಕ್ಕೂ ಅಂತಹ ಸರ್ವಕಾಲೀನ ಶಕ್ತಿಯಿರೋಲ್ಲ. ವಾಸ್ತವ ಏನೆಂದರೆ, ಯಾವುದೇ ತತ್ವಚಿಂತನೆಯನ್ನು ನಮ್ಮ ಚಾರಿತ್ರಿಕ ಸಂದರ್ಭಕ್ಕೆ ನಾವು ಹೇಗೆ ಪರಿವರ್ತಿಸಿ ಬಳಸ್ತೇವೆ ಹಾಗೂ ಅದನ್ನಿಟ್ಟುಕೊಂಡು ನಮ್ಮ ವರ್ತಮಾನದ ಪರಿಸರವನ್ನು ಮುಖಾಮುಖಿ ಮಾಡುತ್ತೇವೆ ಅನ್ನುವುದು. ಲೋಹಿಯಾ ಸಮಾಜವಾದವು ಮಾರ್ಕ್ಸ್‌ವಾದವನ್ನು ವಿಮರ್ಶೆ ಮಾಡತಾ ಇರುವಾಗ ಎತ್ತುವ ಮುಖ್ಯ ಪ್ರಶ್ನೆ ಯಾವುದು?

ಉ. ಇಂಡಿಯನ್ ಮಾರ್ಕ್ಸಿಸ್ಟ್ ಪರ್ ಜಸ್ಟ್ ಇಮಿಟೇಟರ್ಸ್ ಆಫ್ ರಶಿಯನ್, ಕಮ್ಯುನಿಸಂ ಆರ್ ಚೈನೀಸ್ ಕಮ್ಯುನಿಸಂ. ಇವತ್ತಿಗೂನೂ ಈ ಭಾರತದ ಕಮ್ಯುನಿಸ್ಟ್ ಚಳವಳಿ ಕೇಂದ್ರೀಕರಣವನ್ನು ವಿರೋಧ ಮಾಡಿಲ್ಲ, ಸೆಂಟ್ರಲೈಜೆಶನ್ಸ್ ಇನ್ ಎವರ್ರಿ ಥಿಂಗ್, ಅದನ್ನು ವಿರೋಧ ಮಾಡಿಲ್ಲ, ಕ್ಯಾಪಿಟಲಿಸ್ಟ್ ಮೋಡ್ ಆಫ್ ಪ್ರೊಡಕ್ಷನನ್ನ ವಿರೋಧ ಮಾಡಿಲ್ಲ, ಸೋಷಿಯಲೈಜೇಶನ್ಸ್ ಆಫ್ ಇಂಡಸ್ಟ್ರೀಸ್ ಬಗ್ಗೆ ಹೋರಾಟ ಮಾಡಿಲ್ಲ.

ಪ್ರ. ಇಂಡಿಯನ್ ಕಮ್ಯುನಿಸಂ ಅನ್ನ ನೀವು ಒಂದು ಬಗೆಯ ಬೀಸುಗ್ರಹಿಕೆಯಲ್ಲಿ ನೋಡ್‌ತಾ ಇದೀರಾ ಅಂತ ಅನುಮಾನ. ಭಾರತದಲ್ಲಿ ಅನೇಕ ಸೈದ್ಧಾಂತಿಕ ನೆಲೆಯ ಕಮ್ಯುನಿಸ್ಟ್ ಚಳವಳಿಗಳಿದಾವೆ.

ಉ. ಅವಕ್ಕೂ ಇದು ಅನ್ವಯಿಸುತ್ತೆ. ಈವನ್ ಫಾರ್ ದಿ ಪೀಪಲ್ಸ್ ವಾರ್ ಗ್ರೂಪ್. ಆಂಧ್ರಪ್ರದೇಶದಲ್ಲಿ ೧೯೭೨ರಿಂದ ಈಚೆಗೆ ನಾನು ಅವರೇ ಕರೆದ ಬಹಳ ಸಭೆಗೆ ಹೋಗಿದೀನಿ. ಅವರು ಇಂಟ್ರನಲ್ ಕಾಂಟ್ರಡಿಕ್ಷನ್ ಅಂತ ಮಾತಾಡ್ತಾರೆ. ವಾಟ್ ಈಜ್ ದಿ ಸೀರಿಯಸ್ ಮೋಸ್ಟ್ ಕಾಂಗ್ರಡಿಕ್ಷನ್ ನೌ? ಹೂ ಈಜ್ ದಿ ಮೋಸ್ಟ್ ಸಿರಿಯಸ್ ಎನಿಮಿ ನೌ? ನಾನು ಕೇಳಿದೆ. ನೀವು ನಿಮ್ಮ ಪೊಲೀಸ್ ಸ್ಟೇಶನ್ಸ್‌ಗೆ ಬಾಂಬ್ ಹಾಕ್ತೀರಿ. ನಮ್ಮ ತಹಶೀಲ್ದಾರ್ ಕಛೇರಿಗೆ ಬಾಂಬ್ ಹಾಗ್ತೀರಿ. ವೈ ನಾಟ್ ಯು ಎಕ್ಸ್‌ಪ್ಲೋಡ್ ಮಲ್ಟಿ ನ್ಯಾಷನಲ್ ಕಾರ್ಪೊರೇಶನ್ಸ್? ಎಲ್ಲೋ ಒಂದು ಕೋಕಾ-ಕೋಲಾ ಬಾಟಲಿಂಗ್ ಯೂನಿಟ್ಟನ್ನ ಈಚೆಗೆ ಧ್ವಂಸ ಮಾಡಿದರೆ ಹೊರತು, ದೊಡ್ಡದೊಡ್ಡದನ್ನ ಎಕ್ಸ್‌ಪ್ಲೋಡ್ ಮಾಡಿ ಆಮೇಲೆ ಈ ಚಿಲ್ಲರೆ ಇಂಟರ್ನಲ್ ಕಾಂಟ್ರಡಿಕ್ಷನ್ ನಾವು ವಿಚಾರಿಸ್ಕಬಹುದು. ಅದನ್ನು ಮಾಡಾಕೆ ತಯಾರಿಲ್ಲ, ಈವನ್ ಸಿಪಿಎಂ ಗೌರ್ನಮೆಂಟ್ ಇನ್ ಕಲ್ಕತ್ತಾ ಅದು ಗ್ಲೋಬಲೈಜೇಶನ್ನ ಸಂಪೂರ್ಣ ವಿರೋಧ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ ಇನ್ನು ಅದರ ಬದಲು ಜ್ಯೋತಿಬಸುಗೆ ಉತ್ತರಾಧಿಕಾರಿ ಅನ್ನೋವಂಥ ಸೋಮನಾಥ ಚಟರ್ಜಿ ಸೀನಿಯರ್ ಮೋಸ್ಟ್ ಮೆಂಬರ್ ಆಫ್ ಪಾರ್ಲಿಮೆಂಟ್, ಅವರನ್ನು ಒಂದು ಕಾರ್ಪೋರೇಷನ್ನಿಗೆ ಅಧ್ಯಕ್ಷ ಮಾಡಿದಾರೆ. ಆ ಕಾರ್ಪೋರೇಷನ್ ಕೆಲಸ ಅಟ್ರಾಕ್ಟಿಂಗ್ ಫಾರೀನ್ ಕ್ಯಾಪಿಟಲ್. ಇಂಥ ಒಂದು ಹಳಿತಪ್ಪಿದ ವಿಚಾರದ ಮೇಲೆ ಕಮ್ಯೂನಿಸ್ಟ್ ಚಳವಳಿ ನಡೆದಿರೋದು ಇಂಡಿಯಾದಲ್ಲಿ.

ಪ್ರ. ಕಮ್ಯುನಿಸಂ ಕುರಿತು ಲೋಹಿಯಾ ಅವರ ನಿಲುವುಗಳು, ಅವರ ಕಾಲದ ಭಾರತದ ಕಮ್ಯುನಿಸ್ಟರ ನಿಲುವುಗಳನ್ನು ತೀವ್ರವಾಗಿ ವಿರೋಧಿಸುತ್ತ ರೂಪಿಸಿ ಕೊಂಡಂತಹವು. ವಾಸ್ತವವಾಗಿ ಅವನ್ನು ಕಮ್ಯುನಿಸಂ ವಿರೋಧಿಯಾದವು ಎಂದು ಕರೆಯಬಾರದು ಎಂಬ ವ್ಯಾಖ್ಯಾನಗಳಿವೆ.

ಉ. ನೋನೋ. ಲೋಹಿಯಾನ ಸರಿಯಾಗಿ ಅರ್ಥಮಾಡಿಕೊಳ್ಳದೇನೆ ಮಾಡಿರುವ ವ್ಯಾಖ್ಯಾನವಿದು. ಅವರು 'ಎಕನಾಮಿಕ್ಸ್ ಆಫ್ಟರ್ ಮಾರ್ಕ್ಸ್' ಅನ್ನೋ ಪ್ರಬಂಧ ಬರೆದಾಗ ಅವರ ಮನಸಲ್ಲಿ ಡಾಂಗೆ, ನಂಬೂದರಿ ಪಾದ್ ಇವರು ಯಾರೂ ಇರಲಿಲ್ಲ.

ಪ್ರ. ನೀವು ಯುವಜನ ಸಭಾ ಶುರುಮಾಡಿದಾಗ ಲೋಹಿಯಾವಾದಕ್ಕೂ ಆಗಿನ ಕರ್ನಾಟಕದ ಸಾಮಾಜಿಕ, ರಾಜಕೀಯ ಪರಿಸ್ಥಿತಿಗೂ ಏರ್ಪಟ್ಟ ಸಂಬಂಧ ಯಾವ ತರಹ ಇತ್ತು?

ಉ. ನಾವು ಯುವಜನ ಸಭಾ ಪ್ರಾರಂಭ ಮಾಡಿದಾಗ ಲೋಹಿಯಾ ವಿಚಾರಗಳನ್ನು ಯುವಜನತೆ ಮತ್ತು ಬುದ್ಧಿಜೀವಿಗಳು ಯಾವ ರೀತಿ ಸ್ವೀಕರಿಸಿದರು ಅಂತ ನೋಡಿದರೆ, ಆಗಲೇ ಕಾಲ ಪಕ್ವವಾಗಿತ್ತು. ಆಕ್ಚುವಲಿ ನಾವು ಚಟುವಟಿಕೆ ಹೆಚ್ಚಿಗೆ ಮಾಡಿದ್ದು ೧೯೬೮ರ ನಂತರ, ಲೋಹಿಯಾ ಅವರು ತೀರಿಕೊಂಡ ಮೇಲೆ. ಆದರೆ ೧೯೬೭ರ ಹೊತ್ತಿಗೆ ಏಳು ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳು ತೆಗೆದುಹಾಕಿ ಕಾಂಗ್ರೆಸ್ಸೇತರ ಸರಕಾರಗಳು ರಚನೆಯಾಗಿದ್ದವು. ಲೋಹಿಯಾ ಅವರ ಒಂದು ಸೂಚನೆ ಮೇರೆಗೆ ನಡೀತಾ ಇತ್ತು ಆ ಕೆಲಸ. ಮತ್ತೆ ಕೇಂದ್ರದಲ್ಲಿ ಕೂಡ ಕಾಂಗ್ರೆಸ್ಸನ್ನು ತೆಗೆಯುವಂತಹ ಒಂದು ಯೋಜನೆ ಪಕ್ವವಾಗಿತ್ತು. ದುರದೃಷ್ಟವಶಾತ್ ಲೋಹಿಯಾ ೧೯೬೭ರಲ್ಲಿ ತೀರಿಕೊಂಡರು. ಅಷ್ಟೊತ್ತಿಗಾಗಲೇ ದೇಶದ ತುಂಬಾ 'ನಾನ್ ಕಾಂಗ್ರೆಸ್ಸಿಸಂ' ಒಂದು ವಿಚಾರವಾಗಿ ಸಾರ್ವತ್ರಿಕವಾಗಿ ಸ್ವೀಕಾರವಾಗಿತ್ತು. ಅಂಥ ಕಾಲದಲ್ಲಿ ನಾವು ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ ಶುರುಮಾಡಿದ್ದು.

ಪ್ರ. ಕರ್ನಾಟಕದ ಲೋಹಿಯಾವಾದಿ ರಾಜಕಾರಣಿಗಳು ಸಾಹಿತ್ಯ ಪ್ರೇಮಿಗಳು, ಕುವೆಂಪು ಅಭಿಮಾನಿಗಳು. ಕುವೆಂಪು ಕೂಡ ಒಂದು ಬಗೆಯ ಸಮಾಜವಾದಿ ದರ್ಶನವನ್ನು ತಮ್ಮ ಕೃತಿಗಳಲ್ಲಿ ಪ್ರಕಟಿಸುತ್ತಿದ್ದವರು. ಲೋಹಿಯಾ ಹಾಗೂ ಕುವೆಂಪು ಇವರಿಬ್ಬರಲ್ಲಿ ಯಾವ ಬಗೆಯ ಸಾಮ್ಯ ಹಾಗೂ ಭಿನ್ನತೆ ಕಾಣ್ತೀರಿ?

ಉ. ಅಷ್ಟೊಂದು ವಿವರವಾಗಿ ನಾವು ಹೋಲಿಕೆ ಮಾಡಕೆ ಸಾಧ್ಯ ಇಲ್ಲದಿದ್ದರೂನೂ,

ಸ್ಥೂಲವಾಗಿ ನೋಡಿದಾಗ ಹೋಲಿಕೆಗಳು ಜಾಸ್ತಿ ಇವೆ. ಅದರಲ್ಲೂ ಮಾತೃಭಾಷೆ ಬಗ್ಗೆ ಇರಬಹುದು, ಜಾತಿ ಪದ್ಧತಿ ಬಗ್ಗೆ ಇರಬಹುದು, ರೈತನ ಬಗ್ಗೆ ಅಥವಾ ಆಸ್ತಿ ವ್ಯವಸ್ಥೆ ಬಗ್ಗೆ ಇರಬಹುದು, ವೈದಿಕ ಶಾಹಿ ಬಗ್ಗೆ ಇರಬಹುದು. ಕುವೆಂಪು ಲೋಹಿಯಾ ಅವರಷ್ಟು ವಿವರವಾಗಿ ಈ ಸಮಸ್ಯೆಗಳ ಬಗ್ಗೆ ಬರೆಯದಿದ್ದರೂನೂ ಇಬ್ಬರಲ್ಲೂ ಬಹಳ ಹೋಲಿಕೆಗಳು ಇದ್ದವು.

ಪ್ರ. **ನೀವು ತೇಜಸ್ವಿ, ಲಂಕೇಶ್, ಅನಂತಮೂರ್ತಿ, ಸುಂದರೇಶ್, ಕಡಿದಾಳು ಶಾಮಣ್ಣ ಗೋಪಾಲಗೌಡರು, ಕೋಣಂದೂರು ಲಿಂಗಪ್ಪ-ಹೀಗೆ ನಿಮ್ಮ ಗುಂಪನ್ನು ನೆನೆಸಿಕೊಂಡರೆ ಮುಖ್ಯವಾಗಿ ಅದೊಂದು ಬುದ್ಧಿಜೀವಿಗಳ ಗುಂಪಾಗಿತ್ತು. ಬಹುಶಃ ಅಡಿಗರೂ ಮೊದಲು ಅಲ್ಲಿದ್ದರು. ಅಂತ ಕಾಣುತ್ತೆ ನಿಮ್ಮನ್ನು ಒಂದು ಕೇಂದ್ರಕ್ಕೆ ತಂದಿದ್ದು ನಿಮ್ಮಲ್ಲಿ ಇದ್ದ ಸಾಹಿತ್ಯಾಸಕ್ತಿಯೋ ಅಥವಾ ರಾಜಕೀಯ ವಿಚಾರಧಾರೆಯೋ?**

ಉ. ವಿಚಾರವೇ ನಮ್ಮನ್ನು ಕೂಡಿಸಿದ್ದು, ಆದರೆ ನಿಜವಾಗಿ ವಿಚಾರ ಆಧಾರದ ಮೇಲೆ ಕೂಡಿದಂಥ ಹೆಸರುಗಳನ್ನು ನೀವು ಪ್ರತ್ಯೇಕಿಸಬಹುದು. ಪ್ರಾಮಾಣಿಕವಾಗಿ ವಿಚಾರದ ಮೇಲೆ ಕೂಡದೇ ಇದ್ದಂತಹ ಅಥವಾ ಕೂಡಿದ್ದಂಗೆ ತೋರಿಸಿಕೊಂಡ ವ್ಯಕ್ತಿಗಳನ್ನು ಪ್ರತ್ಯೇಕಿಸಬಹುದು. ನೀವು ಹೇಳಿದಿರಿ ಅಡಿಗ, ಅನಂತಮೂರ್ತಿ ಅಂತ. ಪ್ರಜಾ ಪ್ರಭುತ್ವ ವನ್ನೇ ವಿರೋಧ ಮಾಡಿದಂತಹ ಅಡಿಗರ ಹಲವಾರು ಲೇಖನಗಳು ಇವೆ. ನಂತರ ಜನಸಂಘದ ಅಭ್ಯರ್ಥಿಯಾದಾಗ, ಅದಕ್ಕೂ ಮುಂಚೆ ಅವರು ಬರೆದಂಥ ಲೇಖನಗಳು ಅಡಿಗರ ನಿಜವಾದ ವ್ಯಕ್ತಿತ್ವ ತೋರಿಸುತ್ತವೆ. ಮತ್ತೆ ಅನಂತಮೂರ್ತಿ ಕಾಲ ಕಾಲಕ್ಕೆ ಹೊಂದಿಕೊಳ್ಳೋವಂಥ ಹೇಳಿಕೆಗಳನ್ನು ಕೊಟ್ಟಿದ್ದನ್ನು ನೋಡಿದರೆ, ಇವರ ವ್ಯಕ್ತಿತ್ವಾನೂ ಏನೂ ಅಂತ ಗೊತ್ತಾಗುತ್ತೆ. ದಟ್ಸ್‌ವೇರ್, ಲ್ಯಾಕ್ಸ್ ದಿ ಕನ್‌ಸಿಸ್ಟೆನ್ಸಿ ಇನ್ ಕ್ಯಾರೆಕ್ಟರ್, ವಿಚೀಸ್ ವೆರಿ ಇಂಪಾರ್ಟೆಂಟ್ ಫಾರ್ ಎನಿ ಸೋಷಿಯಲಿಸ್ಟ್ ಫಾರ್ ಎನಿ ಮೂವ್ ಮೆಂಟ್, ಆರ್ ಫಾರ್ ಎನಿ ಪರ್ಸನ್ಸ್ ಹೂ ವಾಂಟ್ಸ್ ಎ ಸೋಷಿಯಲ್ ಟ್ರಾನ್ಸ್‌ಫರ್ಸ್,

ಪ್ರ. **ಈ ಲ್ಯಾಕ್ ಆಫ್ ದಿ ಕನ್‌ಸಿಸ್ಟೆನ್ಸಿ ಇನ್ ಕ್ಯಾರೆಕ್ಟರ್‌ಗೆ ಕಾರಣಗಳು, ಆ ಕಾಲದ ರಾಜಕೀಯ ಸಾಮಾಜಿಕ ಪರಿಸ್ಥಿತಿಗಳಲ್ಲೇ ಇದ್ದವೋ ಅಥವಾ ರಾಜಕೀಯ ಚಿಂತನೆ ಯಾಗಿ ಲೋಹಿಯಾವಾದದಲ್ಲೂ ಇದ್ದವೊ?**

ಉ. ಲೋಹಿಯಾ ವಾದದಲ್ಲೇ ಇದ್ದವು ಅಂತ ನಾನು ನಂಬಲ್ಲ. ಸೀ, ಎಲ್ಲರೂ ಬಿಟ್ಟು ಹೋದ ಮೇಲೆ ನಮ್ಮ ರೈತ ಚಳವಳಿ ಅಂತ ಕರೆಯೋನು ನಾನು. ಈ ಚಳವಳಿ ಬಹಳ ಪ್ರಬಲವಾಗೆ ಸಂಘಟನೆ ಆಯಿತು. ಆಗತಾ ಇದೆ. ಎಷ್ಟೇ ಮಧ್ಯೆ ಮಧ್ಯೆ ತಲೆನೋವು ಬಂದರೂನೂ ಇವತ್ತಿಗೂ ಆಗತಾ ಇದೆ. ಇನ್ನೂ ಪ್ರಬಲವಾಗಿ ಆಗುತ್ತೆ.

ಪ್ರ. **ಲೋಹಿಯಾ ಪ್ರತಿಪಾದಿಸುತ್ತಿದ್ದ ಸರಳತೆ ನೈತಿಕತೆಗಳನ್ನ ಬಹಳ ತೀವ್ರವಾಗಿ ಮೊದಲ ಹಂತದಲ್ಲಿ ಬದಕ್ತಾ ಇದ್ದಂತಹ ಗೋಪಾಲಗೌಡರು, ಲೋಹಿಯಾವಾದ ಸೃಷ್ಟಿಸಿದ ಒಳ್ಳೇ ಜನನಾಯಕರಲ್ಲಿ ಒಬ್ಬರು. ಆದರೆ ಅವರು ಕರ್ನಾಟಕದ ರಾಜಕಾರಣದಲ್ಲಿ ಕೊನೆ ಕೊನೆಗೆ ತಮ್ಮ ಪ್ರಭಾವವನ್ನು ಉಳಿಸಿಕೊಳ್ಳೋಕೆ ಆಗಲಿಲ್ಲ. ಸಮಸ್ಯೆ ನಿಜವಾಗಿ ಎಲ್ಲಿತ್ತು?**

ಉ. ಇಲ್ಲ, ಗೋಪಾಲಗೌಡ್ರ ಬಗ್ಗೆ ಬಹಳ ಹತ್ತಿರದಿಂದ ಪರಿಚಯ ಇರೋರು, ಅವರ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾರೆ. ಒಂದೇ ಒಂದು ದೊಡ್ಡಗುಣ ಅವರಲ್ಲಿದ್ದದ್ದು ಅಂದರೆ, ಒಂದು ಚಳವಳಿಗೆ ಜೀವನದುದ್ದಕ್ಕೂ ಅಂಟಿಕೊಂಡಿದ್ದು. ಇದರ ಹೊರತು, ಅವರು ಕೊನೇ ಒಂದು ಹತ್ತು ವರ್ಷ ಕರ್ನಾಟಕದಲ್ಲಿ ಸಂಘಟನೆ ಪ್ರಯತ್ನಗಳನ್ನೇ ಮಾಡಲಿಲ್ಲ. ಹಿ ವಾಸ್ ನಾಟ್ ಎ ಗುಡ್ ಆರ್ಗನೈಜರ್ ಅಟಾಲ್. ಅದಕ್ಕೆ ಅವರ ವೈಯಕ್ತಿಯ ದೌರ್ಬಲ್ಯಗಳು ಕಾರಣ ಇರಬಹುದು. ಆ ಕಾರಣವೇ 'ಗೋಪಾಲಗೌಡರ ಬಗ್ಗೆ ಪುಸ್ತಕ ಪ್ರಕಟಣೆ ಮಾಡ್ತಾ ಇದೀವಿ, ಲೇಖನ ಬರೀರಿ' ಅಂದ್ರೆ, ನಾನು ಬರೆಯೋಲ್ಲ, ನಾನು ಬರೆದರೆ ಪ್ರಾಮಾಣಿಕವಾಗಿ ಬರೀಬೇಕಾಗುತ್ತೆ.ಅದು ಕಹಿಯಾಗಿರುತ್ತೆ. ಈ ಕಹಿ ಸೇರಸೋದು ಬ್ಯಾಡ ಅಂತ್ಹೇಳಿ ನಾನು ಬರೀಲಿಲ್ಲ.

ಪ್ರ. **ಸಾಹಿತ್ಯದಲ್ಲಿ ನಿಮ್ಮ ಆಯ್ಕೆ ಕೇಳತೀನಿ. ನಿಮ್ಮ ಪ್ರಿಯವಾದ ಲೇಖಕ ಯಾರು?**

ಉ. ಯೋಚನೆ ಮಾಡದೇನೆ ಹೇಳಬಹುದು. ಕುವೆಂಪು ಅಂತ. ಕುವೆಂಪು ಮಟ್ಟಕ್ಕೆ ಏರುವಂಥ ಲೇಖಕ ಇನ್ನೂ ಹುಟ್ಟಿಲ್ಲ ಅಂತ ನನಗನ್ನಿಸುತ್ತೆ.

ಪ್ರ. **ಸಾಹಿತ್ಯ ವಿಮರ್ಶಕರಿಗೆ ಇದೇ ಪ್ರಶ್ನೆ ಕೇಳಿದರೆ, ಅವರದೇ ಆದ ಆಯ್ಕೆ, ಅದಕ್ಕೆ ಅವರದೇ ಆದ ಕಾರಣ ಇರುತ್ತೆ. ಒಬ್ಬ ಚಳವಳಿಗಾರರಾಗಿ ನಿಮಗೆ ಕುವೆಂಪು ಯಾಕೆ ಮುಖ್ಯ ಅನಿಸ್ತಾರೆ?**

ಉ. ಅವರ ಸಾಮಾಜಿಕ ಕಳಕಳಿ, ಅವರ ವೈಚಾರಿಕ ವೈಶಾಲ್ಯತೆ, ಮತ್ತೆ ಸಾಹಿತ್ಯಕ್ಕೂ ಒಂದು ಉದ್ದೇಶ ಅಂತ ಇರುತ್ತಲ್ಲ, ಆ ಉದ್ದೇಶಗಳ ಸ್ಪಷ್ಟತೆ, ಅದು ಒಬ್ಬ ಸಾಹಿತಿಯ ಸಾಮಾಜಿಕ ಪಾತ್ರ ಅಂತ ಏನಂತೀವಿ ಅದನ್ನೆಲ್ಲ ಸಂಪೂರ್ಣ ಭರ್ತಿ ಮಾಡೋವಂಥ ವ್ಯಕ್ತಿತ್ವ ಅವರದು. ಅದರ್ ವೈಸ್ ಎ ರೈಟರ್ ಬಿಕಮ್ಸ್ ಇರ್ರೆಲವಂಟ್. ಸೀ, ಕುವೆಂಪು ಬಿಕಮ್ಸ್ ರಿಲವಂಟ್ ಇವನ್ ಟುಡೇ, ಬಿಕಾಸ್ ಆಫ್ ದೀಸ್ ಫ್ಯಾಕ್ಟರ್ಸ್.

ಪ್ರ. **ನಿಮ್ಮ ಗೆಳೆಯರಾದಂತಹ ತೇಜಸ್ವಿ ಬಗ್ಗೆ ಕೇಳತಾ ಇದೇನೆ. ಎಂತಹ ಬರಹಗಾರ ಅವರು?**

ಉ. ತನ್ನ ಸುತ್ತಮುತ್ತ ಇರೋ ಸಮಸ್ಯೆಗಳ ಬಗ್ಗೆ ಬಹಳ ಸ್ಪಷ್ಟತೆ ಇರೋವಂಥ ಒಬ್ಬ ಲೇಖಕ. ಅದನ್ನು ಹಾಸ್ಯದ ರೂಪದಲ್ಲಿ ಹೇಳಿರಬಹುದು. ಕೆಲವು ಸಾರಿ ಗಂಭೀರವಾಗಿ ಹೇಳಿರಬಹುದು. ಆದರೆ ಎ ರೈಟರ್ ವಿತ್ ಟೋಟಲ್ ಕ್ಲಾರಿಟಿ ಆನ್ ಇಶ್ಯೂಸ್. ಈಚೆಗೆ ಅವರು ಜಾಗತೀಕರಣ ಬಗ್ಗೆ ಸಡಿಲವಾಗಿ ಒಂದೆರಡು ಹೇಳಿಕೆ ಕೊಟ್ಟಿದ್ದು ಬಿಟ್ರೆ, ಯಾವುದೇ ವಿಷಯದ ಬಗ್ಗೆ ಸಡಿಲವಾಗಿ ಹೇಳಿಕೆ ಕೊಟ್ಟಿದ್ದು ನನಗೆ ಕಾಣಿಸಲಿಲ್ಲ. ಅವು ಜಾಗತೀಕರಣದ ಬಗ್ಗೆ ಹೇಳುವಾಗಲೂನೂ, ಅದರ ನಡುವೆ ರೈತರ ಬಗ್ಗೆ ಚರ್ಚೆ ಬಂದಾಗ, ಒಂದು ಮಾತ್ ಹೇಳಿದ್ದರು– 'ರೈತ ಯಾಕೆ ಆತ್ಮಹತ್ಯೆ ಮಾಡ್ಕೋಬೇಕು. ಸರಕಾರಗಳೇ ಆತ್ಮಹತ್ಯೆ ಮಾಡ್ಕೋಬೇಕು' ಅಂತ. ಇನ್‌ಫ್ಯಾಕ್ಟ್ ದಟ್ ಹ್ಯಾಸ್ ಬಿಕಮ್ ದಿ ಸ್ಲೋಗನ್ ಆಫ್ ಅವರ್ ರ‍್ಯಾಲಿ ಟುಮಾರೋ. ಸರಕಾರಗಳು ಅಂತ ಹೇಳಿಲ್ಲ ಅವರು, ಯಾರು ಸಾಲ ಕೊಟ್ಟಿದ್ದಾರೋ ಅವರೇ ಆತ್ಮಹತ್ಯೆ ಮಾಡ್ಕೋಬೇಕು ಅಂತ ಹೇಳಿದ್ದಾರೆ. ಇದು ಅತ್ಯಂತ ಸ್ಪಷ್ಟವಾದ ವಿಚಾರ.

ಪ್ರ. **ತೇಜಸ್ವಿ ಗ್ಲೋಬಲೈಜೇಶನ್ ಬಗ್ಗೆ ಹಗುರವಾಗಿ ಯಾವುದೋ ಒಂದು ಮೂಡಿನಲ್ಲಿ ಹೇಳಿಕೆ ಮಾಡಿದರು ಅಂತ ನನಗೆ ಅನಿಸ್ತಾ ಇಲ್ಲ. ಅವರನ್ನ ಓದ್ತಾ ಇರೋ ನನಗೆ ಜಾಗತೀಕರಣವನ್ನ ಅವರು ಆಧುನಿಕತೆ ಅಂತ ಅರ್ಥಮಾಡಿಕೊಳ್ತಿದ್ದಾರಾ ಅಂತ ಸಂಶಯ.**

ಉ. ನೋ. ಅದೇ ಬರೋದು ತಾಪತ್ರಯ. ಜಾಗತೀಕರಣಕ್ಕೆ ಕಾರಣ ಆಗಿರೋವಹಂತಹ ಒಪ್ಪಂದ ಪತ್ರ ಅಥವಾ ಟ್ರೀಟಿನಲ್ಲಿ ಇರೋವಂಥ ಎಲ್ಲಾ ಅಂಶಗಳನ್ನು ಸಂಪೂರ್ಣವಾಗಿ

ಅಧ್ಯಯನ ಮಾಡಿದರೇನೇ ಜಾಗತೀಕರಣದ ಬಗ್ಗೆ ಸ್ಪಷ್ಟತೆ ಬರೋದು. ಆ ಕೆಲಸಾನ ನಮ್ಮ ದೇಶದಲ್ಲಿ ಮಾಡಿರೋರು ಬಹಳಾ ಕಡಿಮೆ. ಉದಾಹರಣೆಗೆ ಡಬ್ಲ್ಯೂಟಿಒ ಟ್ರೀಟಿ. ಅದು ಸುಮಾರು ೫೬೦ ಪುಟ ಇದೆ. ಅದು ಇಂಗ್ಲಿಷಿನಲ್ಲಿ ಕಬ್ಬಿಣದ ಕಡಲೆ ಭಾಷೆ. ವೈದಿಕ ಭಾಷೆ ತರಹ ಅನ್ನಬಹುದು. ಅದನ್ನ ಸಂಪೂರ್ಣ ಅರ್ಥಮಾಡಿಕೊಂಡು ಅಭಿಪ್ರಾಯ ವ್ಯಕ್ತಪಡಿಸಿರೋರು ಬಹಳ ಕಡಿಮೆ. ಸರಕಾರಿ ಮಟ್ಟದಲ್ಲೂ ನಾವು ಸಂಬಳ ಕೊಟ್ಟು ಇಟ್ಟುಕೊಂಡಿರೋ ಅರ್ಥಶಾಸ್ತ್ರಜ್ಞರೂ ಈ ಕೆಲಸ ಮಾಡಿಲ್ಲ, ಹಾಗಾಗಿ ತಪ್ಪುಗಳಾಗ್ತವೆ. ನನಗೆ ಅನ್ನಿಸೋದು ತೇಜಸ್ವೀನೂ ಓದಿಲ್ಲ ಅಂತ. ಓದಿದ್ದರೆ ಅವರು ಆ ಅಭಿಪ್ರಾಯ ಹೇಳ್ತಿರಲಿಲ್ಲ.

ಪ್ರ. **ತೇಜಸ್ವಿ ಲಂಕೇಶ್, ಅನಂತಮೂರ್ತಿ ಮುಂತಾದ ನಮ್ಮ ಲೇಖಕರು ಸಮಾಜಶಾಸ್ತ್ರಜ್ಞರ ಕೆಲಸಾನೂ ಮಾಡಿಕೊಂಡು ಬಂದಿದ್ದಾರೆ. ಆದರೆ ಇವರು ಅಂತರಾಷ್ಟ್ರೀಯ ರಾಜಕಾರಣದ ವಿಷಯ ಬಂದಾಗ, ಒಂದು ಬಗೆಯ ಅಮಾಯಕ ಹೇಳಿಕೆಗಳನ್ನ ಗ್ರಹಿಕೆಗಳನ್ನ ಕೊಡೋದು ಕಾಣ್ತದೆ. ಇದಕ್ಕೆ ಕಾರಣ ಅಧ್ಯಯನದ ಕಾರಣನಾ?**

ಉ. ನಿಜ. ಚಳವಳಿಗಳ ಜತೆ ಸಂಬಂಧ ದೂರವಾದಾಗ ಹೀಗಾಗುತ್ತೆ. ಅವರು ಸ್ವತಃ ಅಧ್ಯಯನ ಮಾಡೋಲ್ಲ ಅಥವಾ ಅಧ್ಯಯನ ಮಾಡಿರೋವಂಥ ಚಳವಳಿಗಳಲ್ಲಿ ಸಂಬಂಧಾನೂ ಇಟ್ಟುಕೊಳ್ಳೋಲ್ಲ. ಅದರಿಂದಾಗುವ ತಪ್ಪುಗಳು ಇವು.

ಪ್ರ. **ಒಬ್ಬ ಚಳವಳಿಗಾರನಾಗಿ ಕನ್ನಡದ ಒಟ್ಟಾರೆ ಲೇಖಕ ಬುದ್ಧಿಜೀವಿಗಳು ನಮ್ಮ ಸಮಾಜದ ಜತೆ ಹಾಗೂ ವ್ಯವಸ್ಥೆಯ ಜತೆ ಇರಿಸಿಕೊಂಡಿರೋ ಸಂಬಂಧಗಳನ್ನು ಹ್ಯಾಗೆ ವಿಶ್ಲೇಷಣೆ ಮಾಡ್ತೀರಿ?**

ಉ. ಕರ್ನಾಟಕದ ಲೇಖಕರುಗಳಲ್ಲಿ ಒಂದು ಅನ್ ಡಿಸೈರೆಬಲ್ ಟ್ರೆಂಡ್ ಅಂತೀವಲ್ಲ, ಅಪೇಕ್ಷಣೀಯವಲ್ಲದಂಥ ಒಂದು ನಡತೆ, ಅದು ಕಾಣಿಸಿಕೊಳ್ಳೋದಿಕ್ಕೆ ಶುರುವಾಗಿದೆ. ಚಳವಳಿಗಳಿಗೂ ಅವರಿಗೂ ನಡುವೆ ಕಂದರ ಪ್ರಾರಂಭವಾಗಿದೆ. ಇದು ಕೆಲವು ಚಳವಳಿಗಳು ಕ್ಷೀಣ ಆಗಲಿಕ್ಕೂ ಕಾರಣ ಆಗಿದೆ. ಇದಕ್ಕೆ ಮುಖ್ಯ ಕಾರಣ, ವ್ಯವಸ್ಥೆ ಜೊತೆ ಹೊಂದಾಣಿಕೆ. ಉದಾಹರಣೆಗೆ ದಲಿತ ಚಳವಳಿ ನಾಶವಾಗೋದಕ್ಕೆ ಕಾರಣ ವ್ಯವಸ್ಥೆ ಜೊತೆ ಹೊಂದಾಣಿಕೆ. ಪವರ್ ಪಾಲಿಟಿಕ್ಸ್ ಬಗ್ಗೆ, ರಾಜಕೀಯ ಪಕ್ಷಗಳ ಬಗ್ಗೆ ಸ್ಪಷ್ಟವಾದಂಥ ಒಂದು ನಿಲುವು ತಾಳದೇ ಇರೋದು, ನಮ್ಮ ಬುದ್ಧಿಜೀವಿಗಳು ಮಾಡ್ತಾ ಇರೋದು, ಬೇರೆ ದೇಶದ ಬುದ್ಧಿಜೀವಿಗಳಿಗೆ ಹೋಲಿಸಿದರೆ, ಜನಾಂದೋಲನಗಳಲ್ಲಿ ಭಾಗವಹಿಸದೇ ಇರೋದು. ಒಂದು ಸಾರಿ ಡಾ. ಎಚ್. ನರಸಿಂಹಯ್ಯನವರು ಬಹಳ ದೊಡ್ಡ ಭಾಷಣ ಮಾಡಿದರು ಜಾಗತೀಕರಣದ ವಿರುದ್ಧ. ಎಚ್. ನರಸಿಂಹಯ್ಯ ಗಾಂಧಿವಾದಿ ಅಂತಲೇ ಬರೀತಾರೆ ಇವತ್ತಿಗೂ. ಆನಂತರ ನಾನು ಮಾತಾಡೋದಿತ್ತು. ಅವರ ಎದುರಿಗೇನೇ ಹೇಳಿದೆ: 'ಯಾಕೆ ನಮ್ಮ ದೇಶದ ಬುದ್ಧಿಜೀವಿಗಳಿಗೂ, ಬೇರೆ ದೇಶದ ಬುದ್ಧಿಜೀವಿಗಳಿಗೂ ವ್ಯತ್ಯಾಸ ಬರುತ್ತೆ? ಬರ್ಟ್ರಂಡ್ ರಸೆಲ್ ಸಾಯೋಕೆ ಮುಂಚೆ ಇಂಗ್ಲೆಂಡಿನ ರಸ್ತೆಗಳಲ್ಲಿ ಚಳವಳಿ ಮಾಡಿದರು, ವಿಯಟ್ನಾಂ ವಾರ್ ವಿರುದ್ಧ ನಮ್ಮ ದೇಶದ ಬುದ್ಧಿಜೀವಿಗಳಿಗೆ ಏನಾಗಿದೆ'? ನರಸಿಂಹಯ್ಯನವರು ಇಷ್ಟೊಂದು ಮಾತಾಡ್ತಾರೆ. ಅವರು ಜಾಗತೀಕರಣದ ವಿರುದ್ಧ ನಡೀತಾ ಇರೋ ಚಳವಳಿಗಳಲ್ಲಿ ಭಾಗವಹಿಸಬೇಕು. 'ಇಲ್ಲ ನನ್ನಿಂದ ಭಾಗವಹಿಸೋಕೆ ಆಗಲ್ಲ'. ಸೀ, ಈ ಧೋರಣೆಯಿದ್ದಾಗ ಕಂದರ ತನ್ನಿಂದ ತಾನೇ ಸೃಷ್ಟಿಯಾಗುತ್ತೆ. ಆ ತಪ್ಪು ಮಾಡಬಾರದು ಅಂತ ನಮ್ಮ ಬುದ್ಧಿಜೀವಿಗಳಿಗೆ ವಿನಂತಿ ಮಾಡ್ಕೋಬಹುದೇನೊ ಈ ಸಂದರ್ಭದಲ್ಲಿ.

ಹುಟ್ಟಿಸಿದ ದೇವ ಹುಲ್ಲು ಮೇಯಿಸುವನೆಂದು
ಹಾಲು ಕುಡಿಸದಿದ್ದರೆ ಮಗು ಬದುಕುವುದೇನಯ್ಯ?
ಬೆಟ್ಟದ ಮೇಲಣ ಮರಕೆ ನೀರೆರೆದವರಾರೆಂದು
ಕೈಕಟ್ಟಿ ಕುಳಿತರೆ ಕೈತೋಟ ಉಳಿಯುವುದೇನಯ್ಯ?
ಕಲ್ಲುಪೊಟರೆಯೊಳಗೆ ಕಪ್ಪೆಗೆ ಅನ್ನವಿಟ್ಟವರಾರೆಂದು
ದನಗಳಿಗೆ ಮೇವನುಣಿಸದಿದ್ದರೆ ಬದುಕಬಲ್ಲವೇನಯ್ಯ?
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ದೈವ ಪ್ರಯತ್ನಕ್ಕಿಂತ ಅಧಿಕ ಪ್ರಯತ್ನ ಮಾನವನದು ನೋಡಯ್ಯ!

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು

ಪ್ರ. **ಕರ್ನಾಟಕದಲ್ಲಿ ಎಂಬತ್ತರ ದಶಕದಲ್ಲಿ ಹುಟ್ಟಿದ ಬಂಡಾಯ ಸಾಹಿತ್ಯ ಚಳವಳಿ, ದಲಿತ ಚಳವಳಿ, ಭಾಷಾ ಚಳವಳಿ, ಆನಂತರ ಬಂದ ರೈತಚಳವಳಿ ಇವೆಲ್ಲ ಈಗ ಒಂದು ಬಗೆಯಲ್ಲಿ ಛಿದ್ರ ಆಗಿವೆ. ಇದಕ್ಕೆ ಕಾರಣ ಈ ಚಳವಳಿಯ ತಾತ್ವಿಕ ಸ್ವರೂಪದಲ್ಲಿ ಇದೆಯೋ ಅಥವಾ ದೇಶದ ರಾಜಕೀಯ ಪರಿಸರದಲ್ಲಿದೆಯೋ?**

ಉ. ನೀವು ಹೇಳಿದ ಹಾಗೆ ಬಂಡಾಯ ಚಳವಳಿ ಡಿಸಿಂಟಿಗ್ರೇಟ್ ಆಗಿರಬಹುದು. ದಲಿತ ಚಳವಳಿ ಡಿಸಿಂಟಿಗ್ರೇಟ್ ಆಗಿರಬಹುದು. ರೈತ ಚಳವಳಿ ಮಾತ್ರ ಆಗಿಲ್ಲ. ೪ ಸಾರಿ ಅದಕ್ಕೆ ಸ್ವಲ್ಪ ತಲೆನೋವುಗಳು ಬಂದರೂನೂ ಡಿಸಿಂಟಿಗ್ರೇಟಂತೂ ಆಗಿಲ್ಲ. ಸಣ್ಣಸಣ್ಣ ಗುಂಪುಗಳು ತಮ್ಮ ಸ್ವಾರ್ಥಸಾಧನೆಗಾಗಿ ಆಚೆ ಹೋಗಿವೆ. ಇದು ಪ್ರತಿ ವರ್ಷಕ್ಕೊಮ್ಮೆ ಅದೂ ಚುನಾವಣೆಗೆ ಪೂರ್ವಭಾವಿಯಾಗಿ ಹೀಗಾಗುತ್ತೆ. ಇನ್ನೂ ಎರಡು ವರ್ಷಕ್ಕೆ ಮುಂದಿನ ಚುನಾವಣೆ ವೇಳೆಗೆ, ಐದನೇ ಗುಂಪು ಆಚೆ ಹೋಗಬಹುದು. ಕೆಲವು ವ್ಯಕ್ತಿಗಳು ಆಚೆ ಹೋಗಬಹುದು. ಆದರೆ ರೈತ ಚಳವಳೀನ ಗಟ್ಟಿಯಾಗಿ ಇಟ್ಟಿರೋದು ಒಳಗೆ ಇರೋವಂಥ ಕಾರ್ಯಕರ್ತರು. ಅವರಿಗೆ ಇರೋವಂಥ ವೈಚಾರಿಕ ಸ್ಪಷ್ಟತೆ, ಸಂಘಟನಾತ್ಮಕ ನಿಲುವು, ನಮ್ಮ ಇವತ್ತಿನ ರಾಜಕೀಯ ಪಕ್ಷಗಳ ಬಗ್ಗೆ ಇರೋವಂಥ ಸ್ಪಷ್ಟ ನಿಲುವು, ಬೇರೆ ನೀವ್ಹೇಳಿದಂಥ ಚಳವಳಿಗಳಿಗೆ ಇಲ್ಲ. ಬಂಡಾಯ ಸಾಹಿತಿಗಳಿಗೆ ರಾಜಕೀಯ ಪಕ್ಷಗಳ ಬಗ್ಗೆ ಸ್ಪಷ್ಟವಾದ ನಿಲುವು ಇದೆಯಾ? ಒಂದು ಸಂಘಟನೆಯಾಗಿ ದಲಿತ ಚಳವಳಿನಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಸ್ಪಷ್ಟ ನಿಲುವು ಇದೆಯಾ?

ಪ್ರ. **ಪವರ್‌ಪಾಲಿಟಿಕ್ಸ್‌ನ ಬಗ್ಗೆ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳೋದು ಬೇರೆ, ಪವರ್ ಪಾಲಿಟಿಕ್ಸ್‌ನಲ್ಲಿ ನೇರವಾಗಿ ಧುಮುಕುವುದು ಬೇರೆ. ನೀವು ಚುನಾವಣೆಗೆ ನಿಂತಿದ್ರಿ. ಗೆದ್ರಿ, ಸೋತಿರಿ. ಚಳವಳಿಗಳು ಜನಾಭಿಪ್ರಾಯ ರೂಪಿಸುವ ಕೆಲಸವನ್ನು ಮಾಡ್ತಾ ಒತ್ತಡದ ಗುಂಪುಗಳಾಗಿ ಪ್ರಭುತ್ವಗಳನ್ನು ನಿಯಂತ್ರಿಸಬಲ್ಲ ಜನಾಂದೋಲನಗಳಾಗಿ ಇರುವುದು ಈ ಹೊತ್ತಲ್ಲಿ ಹೆಚ್ಚು ಅಗತ್ಯ ಅನಿಸೋದಿಲ್ಲವಾ?**

ಉ. ನೋ. ನಾಟ್ ನೆಸೆಸರಿಲಿ. ಯಾವುದೇ ಒಂದು ಆಂದೋಲನ ಆದರೂನೂ ಜನಾಭಿಪ್ರಾಯ ರೂಪಿಸೋವಂಥ ಒಂದು ಚಳವಳಿ ನಡೀತಾನೆ ಇರಬೇಕು. ಅದರ ಜೊತೆಗೆ ಅಧಿಕಾರ ಗ್ರಹಣಾನೂ ಒಂದು ಮುಖ್ಯ ಭಾಗ. ಅಧಿಕಾರ ಗ್ರಹಣ ಇಲ್ಲದೆ ಯಾವುದೇ ಚಳವಳಿ ತನ್ನ ಆಶೋತ್ತರಗಳನ್ನು ಸಂಪೂರ್ಣವಾಗಿ ಈಡೇರಿಸಿಕೊಳ್ಳೋದು ಅಸಾಧ್ಯ. ಆದರೆ ಅಧಿಕಾರ ಗ್ರಹಣ ಯಾವ ರೀತಿ ಮಾಡಬೇಕು. ಇದು ಮುಖ್ಯ ಪ್ರಶ್ನೆ. ಕನ್ನಡ ಚಳವಳಿಯವರಿಗೆ ನಾನು ಇದೇ ಮಾತು ಹೇಳಿದ್ದೆ. ಕಾಲಕಾಲಕ್ಕೆ ನೀವು ಯಾವುದೇ ಪಕ್ಷದ ಸರಕಾರ ಇದ್ದರೂನೂ ಹೊಂದಾಣಿಕೆ ಮಾಡಿಕೊಳ್ಳೋದು, ಆ ಸರಕಾರದಲ್ಲಿ ಕೆಲವು ಹುದ್ದೆಗಳಿಗೆ ಪ್ರಯತ್ನ ಮಾಡೋದು, ಇದನ್ನು ಎಷ್ಟು ಕಾಲ ಮಾಡ್ತೀರಿ? ಇದನ್ನು ಬಿಟ್ಟು ನೀವೇ ಒಂದು ರಾಜಕೀಯ ಶಕ್ತಿಯಾಗಿ ಉಳಿದಿದ್ದರೆ ಕನ್ನಡ ಸ್ಥಿತಿ ಬೇರೇನೆ ಆಗ್ತಿತ್ತು.

ಪ್ರ. **ಚಳವಳಿಗಳು ಹಾಲಿ ಇರುವ ರಾಜಕೀಯ ಸಮೀಕರಣದಲ್ಲಿ ತಮ್ಮ ಆಶಯ ಹೇಗೆ ಈಡೇರಿಸಿಕೊಳ್ಳೋದು ಅಂತ ಯೋಚನೆ ಮಾಡದೆ, ತಾವೇ ಪರ್ಯಾಯ ರಾಜಕೀಯ ಶಕ್ತಿಯಾಗುವುದು ಹೇಗೆ ಅಂತ ಯೋಚನೆ ಮಾಡದೆ, ತಾವೇ ಪರ್ಯಾಯ ರಾಜಕೀಯ ಶಕ್ತಿಯಾಗುವುದು ಹೇಗೆ ಎಂಬ ಚಿಂತನೆ ಮಾಡುವುದು ಮುಖ್ಯ ಅಂತಾದರೆ, ಈಗಿರುವ ಚುನಾವಣಾ ರಾಜಕೀಯದ ಮಾದರಿಯನ್ನು ಒಪ್ಪಿಕೊಂಡೇ ಈ ರಾಜಕೀಯ ಪರ್ಯಾಯವನ್ನು ಮಾಡಬೇಕು ಅಂತ ಆಯಿತಲ್ಲವಾ?**

ಉ. ಹೌದು, ಮೂಲಭೂತ ಪ್ರಶ್ನೆ, ಪಾರ್ಲಿಮೆಂಟರಿ ಡೆಮಾಕ್ರಸಿಯ ಬಗ್ಗೆ ನಿಮಗೆ ವಿಶ್ವಾಸ ಇದೆಯೋ ಇಲ್ಲವೋ ಅನ್ನೋದು. ಸಂಸದೀಯ ಪ್ರಜಾಪ್ರಭುತ್ವಾನ ಇದೇ ಅತ್ಯುತ್ತಮ ಮಾರ್ಗ ಅಂತ ಒಪ್ಪದ ಮೇಲೆ, ಅದನ್ನ ಗುಣಾತ್ಮಕವಾಗಿ ಹ್ಯಾಗೆ ಬದಲಾವಣೆ ಮಾಡಬೇಕು? ಬದಲಾಗಿ ಈ ಸಂಸದೀಯ ಪ್ರಜಾಪ್ರಭುತ್ವಾನ ಹಾಳಗೆಡವತಾ ಇರೋ

ರಾಜಕೀಯ ಪಕ್ಷಗಳ ಜತೆ ಹೊಂದಾಣಿಕೆ ಮಾಡಿಕೊಂಡು ಈ ಚಳವಳಿಗಳು ಹಾಳಾಗ್ತಾ ಇವೆಯೋ ಇಲ್ಲವೋ? ರೈತ ಚಳವಳಿ ಮಾಡ್ತಾ ಇರೋ ಕೆಲಸಾನೆ ಇದು. ಪ್ರಜಾ ಪ್ರಭುತ್ವದಲ್ಲಿ ಮತದಾರ ಯಾವ ರೀತಿ ಗುಣಮುಖವಾಗಿ ಪರಿವರ್ತನೆ ಆಗಬೇಕು? ಇದನ್ನ ಪ್ರತಿ ಸಭೆನಲ್ಲಿ ಪ್ರತಿನಿತ್ಯ ನಾವು ಮಾತಾಡ್ತಾ ಇದೀವಿ ಜನರ ಜೊತೆ. ಆ ಮೂಲಕ ನಾವು ಸಂಸದೀಯ ಪ್ರಜಾಪ್ರಭುತ್ವವನ್ನು ಗುಣಾತ್ಮಕವಾಗಿ ಬದಲಾವಣೆನೂ ಮಾಡಬಹುದು, ಜೊತೆಗೆ ಅಧಿಕಾರ ಗ್ರಹಣಾನೂ ಮಾಡಬಹುದು.

ಪ್ರ. **ರಾಜಕೀಯ ಪರ್ಯಾಯವನ್ನು ಸೃಷ್ಟಿ ಮಾಡೋಕೆ ನೀವು ಹೇಳ್‌ತಾ ಇರೋ ದಾರಿಯನ್ನು ನಂಬೋದಾದರೆ, ಈ ಕೆಲಸವನ್ನು ಯಾವುದೋ ಒಂದು ಚಳವಳಿ, ಉದಾಹರಣೆಗೆ ರೈತ ಚಳವಳಿ, ಕೈಲಿಂದ ಮಾತ್ರ ಮಾಡೋಕಾಗುತ್ತಾ ಅಥವಾ ಎಲ್ಲ ಜನಪರ ಚಳವಳಿಗಳು ಸೇರಿ ಈ ಕೆಲಸ ಮಾಡುವಂಥದ್ದಾ?**

ಉ. ಇಲ್ಲ ಸಮಾನ ದೃಷ್ಟಿಕೋನ ಇರೋವಂಥ ಜನಾಂದೋಲನಗಳ ಜೊತೆ ಕೈ ಜೋಡಿಸುವ ಮೂಲಕ ಈ ಕೆಲಸ ಸುಲಭ ಆಗುತ್ತೆ. ನಾವು ತಯಾರಿದೀವಿ ಕೈ ಜೋಡಿಸೋದಿಕ್ಕೆ, ಆ ಗುಣಗಳು ಇರೋವಂಥ ಆಂದೋಲನಗಳು ನಮ್ಮ ಮುಂದೆ ಕಾಣಿಸ್ತಾ ಇಲ್ಲ ಕರ್ನಾಟಕದಲ್ಲಿ.

ಪ್ರ. **ಹೀಗೆ ಸಮಾನ ಮನಸ್ಕ ಆಂದೋಲನಗಳನ್ನ ಒಂದು ಕೇಂದ್ರಕ್ಕೆ ತರೋಕೆ ಬೇಕಾದ ನಾಯಕತ್ವ ಇರೋ ವ್ಯಕ್ತಿಗಳ ಅಗತ್ಯಾನೂ ಇರುತ್ತೆ. ಆದರೆ ಅನೇಕ ಸಲ ನಿಮ್ಮ ಹಠಮಾರಿತನದಿಂದ ಇಂತಹ ಕೆಲಸಗಳು ಸಾಧ್ಯವಾಗುತಾ ಇಲ್ಲ ಅಂತ ಕೇಳಿದ್ದೇನೆ.**

ಉ. ಹೌದು ನಾನು ಹಠಮಾರಿ, ಆದರೆ ಚಟಮಾರಿ ಅಲ್ಲ. ಚಟಮಾರಿ ಅಲ್ಲದ ಕಾರಣಕ್ಕೇ ನಾನು ಹಠಮಾರಿ ತರಹ ಕಾಣಿಸ್ತೀನಿ. ಒಬ್ಬ ಚಳವಳಿಗಾರನಲ್ಲಿ ಇರಬೇಕಾದದ್ದು ಅತ್ಯಂತ ಮುಖ್ಯವಾದ ಗುಣ ಹಠ. ಚಟ ಅಲ್ಲ. ರೈತ ಚಳವಳಿಯಿಂದ ಚಟವಾದಿಗಳು ಆಚೆ ಹೋಗಿದಾರೆ. ನಾನು ಯಾವ ಚಳವಳಿನಲ್ಲಿ ಇದೀನೋ, ಅಲ್ಲಿ ಚಟವಾದಿಗಳಿಗೆ ಅವಕಾಶವಿಲ್ಲ. ಹಠವಾದಿಗಳಿಗೆ ಇದೆ. ಆಚೆ ಹೋದವರು ನನ್ನನ್ನು ಹಠವಾದಿ ಅಂತಾರೆ, ಸರ್ವಾಧಿಕಾರಿ ಅಂತಾರೆ. ಹೌದು ನಾನು ಸರ್ವಾಧಿಕಾರಿ. ಯಾವುದರ ಬಗ್ಗೆ? ಶಿಸ್ತಿನ ಬಗ್ಗೆ ಚಾರಿತ್ರ್ಯದ ಬಗ್ಗೆ. ಈ ಗುಣಗಳು ಇರಬೇಕೊ ಬೇಡವೋ?

ಪ್ರ. **ನಿಮ್ಮ ಪ್ರಕಾರ ಜನಪರ ಚಳವಳಿಗಳು ಒಂದು ರಾಜಕೀಯ ಪರ್ಯಾಯದತ್ತ ಹೋಗಬೇಕಾದರೆ ಮಾಡಬೇಕಾದ ಮೊದಲ ಕೆಲಸ ಯಾವುದು?**

ಉ. ಮೊದಲು ವೈಚಾರಿಕ ಸ್ಪಷ್ಟತೆ, ವೈಚಾರಿಕ ಹೊಂದಾಣಿಕೆ ಆಗಬೇಕು. ಅನಂತರ ಅದರ ಆಧಾರದ ಮೇಲೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಎರಡುಮೂರು ವರ್ಷ ಸತತ ಕೆಲಸ ಮಾಡಿದರೆ, ನಾವು ಕರ್ನಾಟಕದ ಪ್ರಜಾಪ್ರಭುತ್ವಾನ ಗುಣಾತ್ಮಕವಾಗಿ ಬದಲಾವಣೆ ಮಾಡಬಹುದು. ಅಷ್ಟು ಪ್ರಭಾವ ಬೀರಬಲ್ಲಂತಹ ಬುದ್ಧಿ ಜೀವಿಗಳ ಒಂದು ದೊಡ್ಡ ಸಂಖ್ಯೆ ಕರ್ನಾಟಕದಲ್ಲಿದೆ. ಆದರೆ ಈ ಕೆಲಸಾನ ಅವರು ಕೈಗೆ ತಗೊಂಡಿಲ್ಲ. ಇವತ್ತಿಗೂ ಎಲ್ಲರೂ ಈ ಒಂದು ವೈಚಾರಿಕ ಸ್ಪಷ್ಟತೆಯಿಂದ ಕೈ ಜೋಡಿಸಿದರೆ, ಆರೋಗ್ಯಕರವಾದಂತಹ ಪರ್ಯಾಯ ವ್ಯವಸ್ಥೆಯನ್ನ ನಾವು ಕರ್ನಾಟಕಕ್ಕೆ ಕೊಡಬಹುದು. ಆ ವಿಶ್ವಾಸ ನನಗಿದೆ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

ಅಪ್ಪಾ ಈ ಕಣ್ಣುಗಳ

ಗಡಿಯಾರದಡಿಯಲ್ಲಡಗಿದ
ಹಲ್ಲಿ ಕೊಲ್ಲುವುದು ಸುಲಭವಲ್ಲ
ದೊಣ್ಣೆ ಭರ್ಜಿಗಳು ಹೊಂದುವುದಿಲ್ಲ
ಪೊರಕೆಯಿಂದ ಹೊಡೆದರೆ
ತೊಂದರೆ;
ಏಟು ಗಡಿಯಾರಕ್ಕೆ
ಕಾಲ ನಿಂತು ಮುಳ್ಳು ಕೈಗೆ
ಏಟು ತಗುಲದಿದ್ದರು ಹಲ್ಲಿಗೆ
ಮೋಟು ಬಾಲ ನಿಮಗೆ,
ಆ ಮೋಟು ಬಾಲ ನಿಮ್ಮ ಜೀವದ ಹಾಗೆ

ಆಸೆ!
ಕೊಲ್ಲುವ ಆಸೆ.
ಮತ್ತೆ ಹೊರಡುತ್ತೀರಿ
ಜಾಹಿರಾತಿನಸ್ತ್ರ ಸಹಕಾರಿ
ಸಾವಿನ ಪ್ರೀತಿಗೆ ವಿಷವಿಕ್ಕುತ್ತೀರಿ

ಮರೆತು ಹೋಗುತ್ತದೆ
ವಿಷ, ಹಲ್ಲಿ,
ಹಲ್ಲಿ ಬೀಳುತ್ತದೆ ಕೆಳಗೆ
ನಿಮ್ಮ ಉಣ್ಣುವ ತಟ್ಟೆಯೊಳಗೆ

ಕೊಲ್ಲುವುದು ಸುಲಭವಲ್ಲ

ನಾನು ಹೀಗಲ್ಲ
ಹಲ್ಲಿ ಅಪಚ್ಚಿಯಾಗಿ
ಗೋಡೆ ಕಿಸುರಾದರೆ ಬೇಸರವಿಲ್ಲ

ಖುಷಿ ಗೋಡೆಗೊಂದು ಕಲಾಕೃತಿ

ಬೀಸುತ್ತೇನೆ
ಅದು ಕೆಟ್ಟುಹೋದ ಗಡಿಯಾರ ಭಯವಿಲ್ಲ
ಕೀಟದಾಟದ ಹಲ್ಲಿ,
ಗೋಡೆ ಅಪ್ಪಿಮುದ್ದಾಡುವ ಹಲ್ಲಿ,
ನನ್ನ ಹೊಡೆತಕ್ಕೆ
ಇಟ್ಟಾಡುತ್ತವೆ ಕಣ್ಣುಗಳ....

ಕೂಸು ಕೂಗುತ್ತದೆ
ಅಪ್ಪಾ ಆ ಕಣ್ಣುಗಳ
ಈ ಕಣ್ಣುಗಳಿಂದ ಈ ನೋಡಲಾಗುವುದಿಲ್ಲ

ನಾನು
ನನ್ನ ಕೊಲ್ಲುವ ಕಲೆ
ಎಲ್ಲ....

○ ಕೃಷ್ಣಮೂರ್ತಿ ಬಿಳಿಗೆರೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಗೌರವಾನ್ವಿತ ಶ್ರೀ ಅಟಲ್ ಬಿಹಾರಿ ವಾಜಪೇಯಿ,
ಭಾರತದ ಪ್ರಧಾನಮಂತ್ರಿ ನವದೆಹಲಿ.

ಸರ್,

ಭಾರತದ ಖಾಸಗಿ ರಂಗದಲ್ಲಿ 'ಮೀಸಲಾತಿ' ದಲಿತರ ಹಕ್ಕೆಂಬ ನಿಮ್ಮ ಕ್ರಾಂತಿಕಾರಕ ಹೇಳಿಕೆಗಾಗಿ ದಲಿತ್ ಡೈರಿ ನಿಮ್ಮನ್ನು ವಂದಿಸುತ್ತದೆ. ದಲಿತ್ ಡೈರಿಯು ಮೂರು ವರ್ಷಗಳ ಹಿಂದೆಯೇ ಈ ವಿಚಾರವನ್ನು ಮಂಡಿಸಿತ್ತು. ಆದರೆ ಇಷ್ಟು ಬೇಗನೆ ಈ ವಿಚಾರವನ್ನು ಭಾರತದ ಪ್ರಧಾನವಂತ್ರಿಯವರು ಅನುಮೋದಿಸುತ್ತಾರೆಂದು ನಾವ್ಯಾರೂ ನಂಬಿರಲಿಲ್ಲ. ದಲಿತರಿಗೆ ನಿರಾಶೆಯಾಗಿದ್ದರೂ, ೨೦೦೩ನೇ ವರ್ಷಕ್ಕೆ ಎಂಥ ಅದ್ಭುತವಾದ ಬೀಳ್ಕೊಡುಗೆ! ನಮ್ಮ ಹೃದಯ ತುಂಬಿದ ಧನ್ಯವಾದಗಳು ನಿಮಗೆ.

ಶಿಮ್ಲಾ ಸಮ್ಮೇಳದಲ್ಲೂ ಸೋನಿಯಾ ಗಾಂಧಿ ಇಂಥಹುದೇ ಹೇಳಿಕೆಗಳನ್ನು ನೀಡಿದ್ದರು. ಖಾಸಗೀಕರಣದ ವಿದ್ಯಮಾನವು ದಲಿತರಲ್ಲಿ ನಿರಾಶೆ ಮತ್ತು ಭಯವನ್ನು ತುಂಬುತ್ತಿರುವಾಗ, ಭಾರತವೆನ್ನುವ

ಪ್ರಧಾನಿಗೊಂದು ಪತ್ರ :
ವಂದನೆಗಳು, ಪ್ರಧಾನಿಯವರೇ, ಆದರೆ...

ಗಣರಾಜ್ಯದ ಆಶೋತ್ತರಗಳಿಗೆ ಸ್ಪಂದಿಸುವಂಥ ಇಂಥ ಘಟನಾವಳಿಗಳು ನೆಮ್ಮದಿಯ ಸಂಗತಿಗಳಾಗಿವೆ. ಭಾರತ ಅಸ್ಪೃಶ್ಯತೆಯೆಂಬ ಸಂಗತಿಯನ್ನು ಹುಟ್ಟು ಹಾಕಿತ್ತಲ್ಲದೆ, ಆದಿವಾಸಿಗಳ ಅಧೀನಕ್ಕೂ ಕಾರಣವಾಗಿತ್ತು. ಈಗದು ತನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದೆ. ಮಂಡಲ್ ದೈತ್ಯನ ಬಿರುಗಾಳಿಗೆ ಭಾರತದ ರಾಜಕಾರಣ ನಿರ್ಲಿಪ್ತವಾಗಿಬಿಟ್ಟಿತೇನೋ ಎನ್ನುವಾಗ ತಟ್ಟನೆ ಎಚ್ಚರಗೊಂಡಂತೆ ಕಾಣುತ್ತಿದೆ.

ಕೆಲವು ದಿನಗಳ ಹಿಂದೆ, ಪಾಕಿಸ್ತಾನದೊಂದಿಗೆ ಶಾಂತಿಯ ನಿಮ್ಮ ನಿರ್ಧಾರ ನಿಮ್ಮನ್ನು (ಒಂದು ವಿಶ್ಲೇಷಣೆಯ ಪ್ರಕಾರ), ಪಂಡಿತ್ ನೆಹರೂರವರೊಡನೆ ಸಮೀಕರಿಸಿತ್ತು. ಆದರೆ, ದಲಿತ ಚರಿತ್ರೆಯು ನಿಮ್ಮನ್ನು ೭೦ರ ದಶಕದ ಇಂದಿರಮ್ಮನಿಗೆ ಹೋಲಿಸಲು ಬಯಸುತ್ತದೆ. ಏಕೆಂದರೆ ಆ ದಶಕ ದಲಿತರಿಗೆ ಸುವರ್ಣದಾಯಕವಾಗಿತ್ತು.

ಮಾನ್ಯರೆ, ನೀವು ಅಂಥ ಹೊಗಳಿಕೆಯನ್ನು ಬಯಸುತ್ತೀರೆಂದೇನೂ ಅಲ್ಲ. ಆದರೆ ಚರಿತ್ರೆ ಅಂಥ ತಿರುವನ್ನು ತರುತ್ತಿರುತ್ತಿದೆಯಾದ್ದರಿಂದ ವ್ಯಕ್ತಿಗಳು ಸಹ ಆ ಚಾರಿತ್ರಿಕ ಚಲನೆಯ ವಿಕಾಸದಲ್ಲಿ ನೆಲೆಯೂರಬೇಕಾಗುತ್ತದೆ. ದಲಿತರು ಎಂದಿಗಿಂತಲೂ ಇಂದು ಹೆಚ್ಚು ಪ್ರತ್ಯೇಕಗೊಂಡಿದ್ದಾರೆ. ಹಾಗೂ ಅವರ ಹಕ್ಕುಗಳು ಎಂದಿಗಿಂತಲೂ ಇಂದು ಉಲ್ಲಂಘನೆಗೊಳಪಡುತ್ತಿವೆ. ಭಾರತದಲ್ಲಿ ಇವತ್ತಿನ ತನಕ ದಲಿತರ ಪಾಲೆಂದರೆ ಸರ್ಕಾರಿ ಉದ್ಯೋಗಗಳು ಮಾತ್ರ. ದಲಿತ ಚಳವಳಿಗಳು ಅಥವಾ ಸರ್ಕಾರಗಳು ಹೊರತರುವ ದಲಿತ ಪರ ನೀತಿಗಳು 'ಮೀಸಲಾತಿ' ಸುತ್ತಲಷ್ಟೇ ಇರುತ್ತದೆ. ಮೀಸಲಾತಿ ನೀತಿಯು ಅಭಿವ್ಯಕ್ತ ಮಧ್ಯಮವರ್ಗದ ದಲಿತರಿಗಷ್ಟೇ ಅವಕಾಶ ಕಲ್ಪಿಸಿತು. ಆದರೆ ಅದೇ ಸಂದರ್ಭದಲ್ಲಿ ಅದೊಂದು ಬಂಧಿಖಾನೆಯಾಗಿ ಜ್ಞಾನೋದಯಗೊಂಡ ದಲಿತ ಮನಸ್ಸನ್ನು ಸಹ ವಿಮೋಚನಗೊಳ್ಳದಂತೆ ತಡೆಯಿತು.

ಸರ್, ಉದ್ಯೋಗ ಮೀಸಲಾತಿಗಳು ಪರಿಮಿತ ಪಾತ್ರವನ್ನು ಹೊಂದಿದೆ. ಉದಾಹರಣೆಗೆ, ಸರ್ಕಾರದಡಿಯಲ್ಲಿರುವ ಒಟ್ಟು ಉದ್ಯೋಗ ೧.೯೫ ಕೋಟಿ ಮತ್ತು ೦.೮೭ ಕೋಟಿಯು ಸಂಘಟಿತ ಖಾಸಗಿವಲಯದಲ್ಲಿದೆ ಅಥವಾ ಒಟ್ಟು ಸೇರಿಸಿದಾಗ ಸುಮಾರು ೦೨.೮೧ ಕೋಟಿ ಆಗುತ್ತದೆ. ಇದನ್ನು ಸರಿಯಾಗಿ ಅನುಷ್ಠಾನಗೊಳಿಸಿದರೆ ದಲಿತರ ಪಾಲಿನ ಉದ್ಯೋಗಗಳು ಸುಮಾರು ೬೪ ಲಕ್ಷ.

ಈಗಾಗಲೇ ಸರ್ಕಾರದ ಪ್ರಕಾರ ಸುಮಾರು ೧೮ ಶೇಕಡಾ ದಲಿತರು ಇದ್ದಾರೆ. ಇತರ ಮಿಲಿಯಗಟ್ಟಲೆ ದಲಿತರು ಎಲ್ಲಿಗೆ ಹೋಗಬೇಕು? ಬರೀ ಉದ್ಯೋಗವೊಂದರಿಂದಲೇ ದಲಿತರು ಭಾರತದ ಆರ್ಥಿಕತೆಯ ಪಾಲುದಾರರಾಗಲು ಸಾಧ್ಯವಿಲ್ಲ. ದಲಿತರು ಆರ್ಥಿಕತೆಯಲ್ಲಿ ತಮ್ಮ ಪಾಲನ್ನು ಪಡೆಯದಿದ್ದಲ್ಲಿ ಹೊಸ ಆರ್ಥಿಕ ಪದ್ಧತಿಯು ಸಾಮಾಜಿಕ ಬಲವನ್ನು ಕಳೆದುಕೊಳ್ಳುತ್ತದೆ. ಈ ಮೂಲಕ ಸಾಮಾಜಿಕ ವಿಮುಖತೆಗೆ ಒಳಗಾಗಬೇಕಾಗುತ್ತದೆ.

ಸರ್, ಖಾಸಗಿ ವಲಯದ ಪರೋಕ್ಷ ಉದ್ಯೋಗವು ಪ್ರತ್ಯಕ್ಷ ಉದ್ಯೋಗಕ್ಕಿಂತ ಸಾವಿರ ಪಾಲು ಹೆಚ್ಚಿನದಾಗಿದೆ. ಉದಾಹರಣೆಗೆ, ಹಿಂದೂಸ್ತಾನ್ ಲಿವರ್‌ನ ಘಟಕವೊಂದು ಐನೂರು ಜನರಿಗೆ ಉದ್ಯೋಗ ನೀಡಬಹುದು. ಆದರೆ ಕಚ್ಚಾವಸ್ತುಗಳನ್ನು ಒದಗಿಸುವುದರಿಂದ ಹಿಡಿದು, ಘಟಕದ ಇತರ ಸರಕುಗಳು ಮತ್ತು ಸೇವೆಗಳು ಸುಸೂತ್ರವಾಗಿ ನಡೆಯಲು, ವಿತರಕರಾಗಿ, ವ್ಯಾಪಾರಿಗಳಾಗಿ, ಮಾರಾಟಗಾರರಾಗಿ ಐದು ಲಕ್ಷ ಜನರು ಒಳಗೊಂಡಿರುತ್ತಾರೆ. ಆದ್ದರಿಂದ ಪ್ರತ್ಯಕ್ಷ ಉದ್ಯೋಗದ ಸಂದರ್ಭದಲ್ಲಿ, ದಲಿತರು ಸುಮಾರು ನೂರು ಸ್ಥಾನಗಳನ್ನು ಕಾನೂನು ಸಮ್ಮತವಾಗಿ ಪಡೆಯುತ್ತಾರೆ.

ಆದರೆ, ಅಪ್ರತ್ಯಕ್ಷ ವರ್ಗದಲ್ಲಿ ಸುಮಾರು ನೂರು ಸಾವಿರ ಸ್ಥಾನಗಳನ್ನು ಕಾನೂನು ಸಮ್ಮತವಾಗಿ ಪಡೆಯಬಹುದು. ಇದಕ್ಕಿಂತಲೂ, ವ್ಯಾಪಾರದಲ್ಲಂತೂ ಅತ್ಯಧಿಕ ಬಂಡವಾಳವಿರುವುದರಿಂದ ದಲಿತರು ಆರ್ಥಿಕತೆಯಲ್ಲಿ ನೇರ ಪಾಲುದಾರರಾಗಬಹುದು. ಆದ್ದರಿಂದ, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತದ ಆರ್ಥಿಕತೆಯಲ್ಲಿ ಸರಬರಾಜು/ವಿತರಣೆ ಇತ್ಯಾದಿಯಲ್ಲಿ ದಲಿತರ ಪಾಲು ಖಾಸಗಿ ವಲಯದಲ್ಲಿರುವ ಕೆಲವೇ ಸಾವಿರ ಉದ್ಯೋಗಗಳಿಗಿಂತ ಹೆಚ್ಚು ನಿರ್ಣಾಯಕವಾದುದು. ಸರ್, ಪ್ರತ್ಯಕ್ಷ ಉದ್ಯೋಗಳನ್ನು ಒಳಗೊಂಡಿರುವ ಮೊದಲನೆಯದಕ್ಕಿಂತ ನಂತರದ ವರ್ಗದಲ್ಲಿ ಒಮ್ಮತಗಳಿಸಲು ಸುಲಭವಾಗುತ್ತದೆ.

ಉದಾಹರಣೆಗೆ, ದೆಹಲಿಯ ತಾಜ್ ಪ್ಯಾಲೇಸ್ ಹೋಟೆಲ್‌ನ ಒಂದು ಸಬೂಬು ನೀಡಬಹುದು. 'ಹೋಟೆಲ್ ಉದ್ಯಮದಲ್ಲಿ ಉಚ್ಛಾರಣೆ ಎನ್ನುವುದಕ್ಕೆ ಮುಖ್ಯ ಸಂಗತಿಯಾಗುತ್ತದೆ'. ಹಾಗೆಯೇ ರಿಲಯನ್ಸ್ ಸಮೂಹವು ಅಂಥದೇ ಸಬೂಬನ್ನು ನೀಡಬಹುದು. ಆದರೆ, ೪೨೧ ಕೊಠಡಿಗಳನ್ನೊಂದಿರುವ ತಾಜ್ ಪ್ಯಾಲೇಸ್ ದಿನವೂ ಅನೇಕ ಔತಣಕೂಟಗಳು ನಡೆಯುತ್ತಿರುವುದರಿಂದ ದಿನವೂ ಸುಮಾರು ಸಾವಿರ ಕೆ.ಜಿ ತರಕಾರಿಗಳನ್ನು, ಐನೂರು ಕೆ.ಜಿ. ಹಾಲು ಮತ್ತು ಐನೂರು ಕೋಳಿಗಳು ಮತ್ತು ಸಾವಿರ ಮೊಟ್ಟೆಗಳನ್ನು ಖರೀಧಿಸುತ್ತಿದೆ. ಅಂಥ ವಸ್ತುಗಳನ್ನು ಸರಬರಾಜು ಮಾಡುವಲ್ಲಿ ಉಚ್ಛಾರಣೆಯ ಅಗತ್ಯತೆಯೇನು?

ಈರುಳ್ಳಿ/ಆಲೂಗಡ್ಡೆ, ಬೆಳ್ಳುಳ್ಳಿ, ಹಸಿಕೋಸು, ಶುಂಠಿ, ಟೊಮೆಟೊ, ಮೂಲಂಗಿ, ಬೀನ್ಸ್, ಕೋಳಿಗಳು, ಮೊಟ್ಟೆ ಮಾಂಸ, ಮೀನು, ಹಾಲು- ಇವುಗಳ ಸರಬರಾಜುದಾರರಾಗಿ ಹದಿನೈದು ಮಂದಿ ದಲಿತರನ್ನು

ರಾಜ್ಯಾಂಗವು ದುರ್ಬಲ ಮತ್ತು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ, ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯೊಂದಿಗೆ ಪೋಷಿಸತಕ್ಕದ್ದು ಎಂದು ಸಂವಿಧಾನದ ಪ್ರಸ್ತಾವನೆಯ ಆರಂಭದ ಸಾಲುಗಳಲ್ಲಿ ಹೇಳಲಾಗಿದೆ. ಆದರೆ ಸರ್ಕಾರ ಈ ನೀತಿಗೆ ಅನುಗುಣವಾಗಿ ನಡೆಯುತ್ತಿಲ್ಲ. ಕೇವಲ ಶೈಕ್ಷಣಿಕ ಮತ್ತು ರಾಜಕೀಯ ಅವಕಾಶಗಳನ್ನು ಮಾತ್ರ ದಲಿತರಿಗೆ ನೀಡಲಾಗುತ್ತಿದ್ದು ಆರ್ಥಿಕ ಕ್ಷೇತ್ರದ ಅವಕಾಶಗಳನ್ನು ನಿರಾಕರಿಸಲಾಗಿದೆ. ಅದಕ್ಕಾಗಿ ದಲಿತ್ ಡೈವರ್ಸಿಟಿ ಇಂದಿನ ಅಗತ್ಯವಾಗಿದೆ.

ಅನುವಾದ: ವಿದ್ಯಾ ಕಿಲ್ಲೂರು



> **ಹಿಂದೂಸ್ತಾನ್ ಲಿವರ್‌ನ ಘಟಕವೊಂದು ಐನೂರು ಜನರಿಗೆ ಉದ್ಯೋಗ ನೀಡಬಹುದು. ಆದರೆ ಕಚ್ಚಾವಸ್ತುಗಳನ್ನು ಒದಗಿಸುವುದರಿಂದ ಹಿಡಿದು, ಘಟಕದ ಇತರ ಸರಕುಗಳು ಮತ್ತು ಸೇವೆಗಳು ಸುಸೂತ್ರವಾಗಿ ನಡೆಯಲು, ವಿತರಕರಾಗಿ, ವ್ಯಾಪಾರಿಗಳಾಗಿ, ಮಾರಾಟಗಾರರಾಗಿ ಐದು ಲಕ್ಷ ಜನರು ಒಳಗೊಂಡಿರುತ್ತಾರೆ. ಆದ್ದರಿಂದ ಪ್ರತ್ಯಕ್ಷ ಉದ್ಯೋಗದ ಸಂದರ್ಭದಲ್ಲಿ, ದಲಿತರು ಸುಮಾರು ನೂರು ಸ್ಥಾನಗಳನ್ನು ಕಾನೂನು ಸಮ್ಮತವಾಗಿ ಪಡೆಯುತ್ತಾರೆ. ಆದರೆ, ಅಪ್ರತ್ಯಕ್ಷ ವರ್ಗದಲ್ಲಿ, ಸುಮಾರು ನೂರು ಸಾವಿರ ಸ್ಥಾನಗಳನ್ನು ಕಾನೂನು ಸಮ್ಮತವಾಗಿ ಪಡೆಯಬಹುದು. ಇದಕ್ಕಿಂತಲೂ, ವ್ಯಾಪಾರದಲ್ಲಂತೂ ಅತ್ಯಧಿಕ ಬಂಡವಾಳವಿರುವುದರಿಂದ ದಲಿತರು ಆರ್ಥಿಕತೆಯಲ್ಲಿ ನೇರ ಪಾಲುದಾರರಾಗಬಹುದು.**

ನೇಮಿಸಿಕೊಳ್ಳುವಂತೆ ಸರ್ಕಾರ ಒತ್ತಾಯಿಸಿದಲ್ಲಿ ಪಿವೊನ್ ವರ್ಗದ ಉದ್ಯೋಗಗಳನ್ನೇ ನೀಡಲಾಗುವುದರಿಂದ ಶೀಘ್ರವಾಗಿ ದ್ವಿಚಕ್ರವಾಹನ ಓಡಾಟವೂ ಹೆಚ್ಚಾಗುತ್ತದೆ. ದೆಹಲಿಯಲ್ಲಿ ಇಪ್ಪತ್ತೈದು ಸ್ಟಾರ್ ಹೋಟೆಲ್‌ಗಳು ಮತ್ತು ಡಜನ್‌ನಷ್ಟು ದೊಡ್ಡ ಕ್ಲಬ್‌ಗಳಿವೆ. ಎಂದರೆ ಪ್ರಧಾನಮಂತ್ರಿ ಕಚೇರಿಯಿಂದ ಒಂದು ಸಣ್ಣ ಪ್ರಯತ್ನವಾದರೂ ಸಾಕು. ದೆಹಲಿಯಲ್ಲಿ ಸುಮಾರು ಸಾವಿರಗಟ್ಟಲೆ ದಲಿತರು ವ್ಯಾಪಾರದಲ್ಲಿ ಪಾಲ್ಗೊಳ್ಳುತ್ತಾರೆ. ಇಡೀ ಖಾಸಗಿ ಉದ್ಯಮವನ್ನು ಪರಿಗಣನೆಗೆ ತೆಗೆದುಕೊಂಡರೆ, ಸರ್ಕಾರದ ಮೇಲೆ ಅಥವಾ ಖಾಸಗಿ ಕೈಗಾರಿಕೆಗಳ ಮೇಲೆ ಯಾವುದೇ ಹಣಕಾಸಿನ ಹೊರೆ ಬೀಳಿಸದೆಯೇ ಸುಮಾರು ಒಂದು ಲಕ್ಷ ದಲಿತರು ಖಾಸಗೀಕರಣಗೊಂಡ ಆರ್ಥಿಕತೆಯಲ್ಲಿ ಭಾಗಿದಾರರಾಗುತ್ತಾರೆ.

ಸರ್. ಸರಬರಾಜು/ವ್ಯಾಪಾರಿ/ಗುತ್ತಿಗೆ ವೈವಿಧ್ಯತೆ ತತ್ವವನ್ನು ಅಳವಡಿಸುವುದರಿಂದ ಭಾರತೀಯ ಆರ್ಥಿಕತೆಯಲ್ಲಿ ಅಸ್ಪೃಶ್ಯರು/ಆದಿವಾಸಿಗಳನ್ನು ಪಾಲುದಾರರನ್ನಾಗಿ ನೀವು ಮಾಡಬಹುದು. ಇದು ಗಣರಾಜ್ಯಕ್ಕಾಗಿ ರೂಪಿಸಿದ ಸಂವಿಧಾನದ ಪ್ರಸ್ತಾವನೆಯ ಉದ್ದೇಶವನ್ನು ಪೂರೈಸಿದಂತಾಗುತ್ತದೆ.

ಸರ್, ನೀವು ನಿಮ್ಮ ಪ್ರತಿಷ್ಠೆಯನ್ನು ಬದಿಗಿಟ್ಟು ಪಾಕಿಸ್ತಾನದೊಂದಿಗೆ ಶಾಂತಿ ಸಾಧಿಸುವುದಾದರೆ, ನನ್ನ ಮನಸ್ಸಿಗನ್ನಿಸುವುದೆಂದರೆ ಅದೊಂದು ರಾಷ್ಟ್ರಕ್ಕಿಂತ ಸಣ್ಣ ಶಿಬಿರದಂತಾಗುತ್ತದೆಯಷ್ಟೇ. ಭಾರತದ ಸಾಮಾಜಿಕ ಭವಿಷ್ಯವನ್ನು ನೀವ್ಯಾಕೆ ಮರುರೂಪಿಸಬಾರದು. ದಲಿತರು-ದಲಿತೇತರರ ಇಬ್ಭಾಗದಿಂದಲೇ ದಲಿತರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಇದು ನಿಲ್ಲಲೇಬೇಕು. ಭಾರತದ ಆರ್ಥಿಕತೆ, ಸಿನೆಮಾ, ಸಂಗೀತ ಹಾಗೂ ಮಾಧ್ಯಮಗಳು ಸೇರಿದಂತೆ ಸಂಸ್ಥೆಗಳಲ್ಲಿ ದಲಿತರು ಪಾಲ್ಗೊಳ್ಳುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸುವಂತೆ ಮಾಡಬಹುದು.

ಎಷ್ಟು ಸರಳ : ದಲಿತ ವೈವಿಧ್ಯತೆಯ ನಿಗಮ

ಸನ್ಮಾನ್ಯ ಪ್ರಧಾನಮಂತ್ರಿಯವರೇ,

'ಜಗತ್ತು ಹಸಿವೆ, ಭಯದಿಂದ ಜೀವಿಸುತ್ತಿದೆ. ಆದರೆ ಪಂಡಿತ ಜವಾಹಾರ್‌ಲಾಲ್ ನೆಹರೂ ನಮ್ಮನ್ನು ಎಂದೆಂದಿಗೂ ಅಗಲಿ ಹೋಗಿದ್ದಾರೆ'. ಸಂಸತ್ತಿನಲ್ಲಿ ಅವರ ಸಾವಿಗಾಗಿ ಸಂತಾಪ ಸೂಚಿಸುವಾಗ ನೀವು ಇದನ್ನು ಹೇಳಿದ್ದೀರಿ. ನಾವು ಸಹ ಅಂಥದೇ ಒಂದು ಪ್ರಮುಖ ಘಟನೆಯನ್ನು ಪದೇ ಪದೇ ಹೇಳುತ್ತಿರುತ್ತೇವೆ. ಪಂಡಿತ್ ಜವಾಹಾರ್‌ಲಾಲ್ ನೆಹರೂರವರು ಡಿಸೆಂಬರ್ ೧೩, ೧೯೪೬ರಂದು ಸಂವಿಧಾನ ಸಮಿತಿಯ ಉದ್ದೇಶಿತ ನಿರ್ಣಾಯಕ ಠರಾವುಗಳನ್ನು ಮಂಡಿಸಿದಾಗ ಅವು ಅಂಬೇಡ್ಕರ್‌ರವರ ಅಂತಿಮ ವಿವೇಚನೆ ಮೇರೆಗೆ ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಒಳಗೊಳ್ಳುವಂತೆ ಅನುಮೋದಿಸಲಾಯಿತು.

ಮಾನ್ಯರೆ, ಸಂವಿಧಾನದ ಪ್ರಸ್ತಾವನೆಯ ಆರಂಭ ಸಾಲುಗಳನ್ನು ನಿಮ್ಮ ನೆನಪಿಗೆ ತರುವುದಾದರೆ, 'ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರೆಯುವಂತೆ ಮಾಡಲು' ಎಂದು ಹೇಳಲಾಗಿದೆ.

ಲೋಕಸಭೆಯಲ್ಲಿ ನ್ಯಾಯದ ಪ್ರಶ್ನೆ ಮುಖ್ಯವಾದಾಗ, ಭಾರತೀಯ ಸಾಮಾಜಿಕ ಬದುಕು ನ್ಯಾಯದ ನಿಯಮಗಳ ಮೇಲೆ ಇಲ್ಲವೆಂಬುದನ್ನು ಒಪ್ಪಿಕೊಂಡಿತು. ಸಂವಿಧಾನದ ಮುಖ್ಯ ಭಾಗವು ಹೇಳುವುದೇನೆಂದರೆ, 'ರಾಜ್ಯಾಂಗವು ದುರ್ಬಲ ಮತ್ತು ವಿಶೇಷವಾಗಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಜನರ ಶೈಕ್ಷಣಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯೊಂದಿಗೆ ಪೋಷಿಸತಕ್ಕದ್ದು'.

ನಾನು ವಿನಯದಿಂದ ಹೇಳುವುದೇನೆಂದರೆ ದಲಿತ ವಿಚಾರಧಾರೆಯ ಮೇಲೆ ಯಾವುದೇ ಪ್ರಶ್ನೆ ಬಂದಾಗಲೂ ಅದು 'ಸಾಮಾಜಿಕ ಮತ್ತು ಉದ್ಯೋಗಗಳ' ಸಂಗತಿಗಳ ಮೇಲೆ ಅಗತ್ಯವಾಗಿ ನೆಲೆಯೂರಿರುತ್ತದೆ. ಕೆಲವೊಮ್ಮೆ ಅದು 'ರಾಜಕೀಯ ಹಕ್ಕುಗಳಿಗೆ' ವಿಸ್ತರಿಸಿಕೊಳ್ಳಬಹುದು. ಭಾರತೀಯ ಆರ್ಥಿಕತೆಯಲ್ಲಿ ದಲಿತರ ಪಾಲ್ಗೊಳ್ಳುವಿಕೆ ಎಂದೂ ಪ್ರಶ್ನೆಯಾಗುವುದಿಲ್ಲ ಹಾಗೂ ಶಿಕ್ಷಣವಂತೂ ಅತೀ ನಿರ್ಲಕ್ಷ್ಯಕ್ಕೊಳಗಾದ ಸಂಗತಿಯಾಗಿದೆ. ಬಹುಸಂಖ್ಯಾತ ದಲಿತರು ಇಂದಿಗೂ ಅನಕ್ಷರಸ್ಥರಾಗಿದ್ದಾರೆ. ಹಿರಿಯ ಪ್ರಾಥಮಿಕ ಶಾಲೆ ಸೇರುವ ಮೊದಲೇ ಶೇ. ೭೦ಕ್ಕಿಂತಲೂ ಹೆಚ್ಚು ಎಸ್‌ಸಿ/ಎಸ್‌ಟಿ ಮಕ್ಕಳು ಶಾಲೆಯನ್ನು ಬಿಟ್ಟುಬಿಡುತ್ತಾರೆ. ಡಿಸೆಂಬರ್ ೧೯, ೨೦೦೩ರ ಎಸ್‌ಸಿ/ಎಸ್‌ಟಿ ಎಂ.ಪಿಗಳ ಸರ್ವಪಕ್ಷ ಸಭೆಯ ನಿಮ್ಮ ಕಾಳಜಿಯನ್ನು ನಾವು ಬಹುವಾಗಿ ಹಂಚಿಕೊಳ್ಳುತ್ತೇವೆ. ನಿಮ್ಮ ಪರಿಗಣಿತ ದೃಷ್ಟಿಯಲ್ಲಿ ೧) ಮೀಸಲಾತಿಯೆನ್ನುವುದು ಒಂದು ತಾತ್ಕಾಲಿಕ ವ್ಯವಸ್ಥೆಯಷ್ಟೆ ೨) ಖಾಸಗಿ ರಂಗವು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ, ಅದು ಸಮಾಜದ ಅಗತ್ಯಗಳಿಗೆ ಸ್ಪಂದಿಸಲೇಬೇಕಾಗುತ್ತದೆ. ೩) ಖಾಸಗಿ ರಂಗದಲ್ಲಿ ದಲಿತರ ಹಕ್ಕುಗಳು ಜಾರಿಯಾಗಿಸುವ ವಾತಾವರಣವೇ ಇಲ್ಲವಾಗಿದೆ.

ನಾವೂ ಸಹ 'ಉದ್ಯೋಗ ವ್ಯವಸ್ಥೆ'ಯೂ ಜಾತಿ ಪದ್ಧತಿಗಿಂತ ಹೆಚ್ಚಾಗಿ ಜೀವಿಸಬಾರದೆಂಬುದನ್ನು ನಂಬುತ್ತೇವೆ. ಹಾಗೆಯೇ ಖಾಸಗಿ ರಂಗ ಸಮಾಜದ ಅಗತ್ಯಗಳಿಗೆ ವಿಮುಖವಾಗಿರಲು ಸಾಧ್ಯವಿಲ್ಲವೆಂಬುದನ್ನು ನಾವು ಪೂರ್ಣವಾಗಿ ಸಮ್ಮತಿಸುತ್ತೇವೆ. ಮಾಧ್ಯಮ, ಶಿಕ್ಷಣರಂಗ ಮತ್ತು ಪಾರ್ಲಿಮೆಂಟ್-ಇವೆಲ್ಲ ಕೈಜೋಡಿಸಿದಲ್ಲಿ ಮಾತ್ರ ಒಂದು ವಾತಾವರಣ ಸೃಷ್ಟಿಸಲು ಸಾಧ್ಯವಾಗುತ್ತದೆ. ಮಾಧ್ಯಮ ಮತ್ತು ಶೈಕ್ಷಣಿಕ ರಂಗವು, ದಲಿತ ಪ್ರಶ್ನೆಗೆ ಪಾರ್ಲಿಮೆಂಟಿಗಿಂತ ಹೆಚ್ಚು ವಿರೋಧಿಗಳಾಗಿರುವುದರಿಂದ ಇದು ದೂರದ ಸಾಧ್ಯತೆಯೇ ಸರಿ. ಮಿಸ್ಟರ್ ಲಿಂಗ್ಡೋನ ವಿವರಣೆಯು ರಾಜಕಾರಣಿಗಳಿಗಿಂತ ಹೆಚ್ಚಾಗಿ ಮಾಧ್ಯಮ ವ್ಯಕ್ತಿಗಳಿಗೆ ಅನ್ವಯಿಸುವಂತದ್ದು.

'ಸಂವಿಧಾನದ ಆದರ್ಶ'ಗಳನ್ನು ನೀವು ಮಾತನ್ನಾಡುವುದನ್ನು ಕೇಳಿದಾಗ ನಮಗೆ ಸಂತಸಮಿಶ್ರಿತ ಅಚ್ಚರಿ ಎನಿಸುತ್ತದೆ. ಯಾಕೆಂದರೆ ಇಂದು ಅನೇಕ ಜನ ಸಂವಿಧಾನದ ಆದರ್ಶಗಳನ್ನು ಬಿಡಿ, ಯಾವುದೇ ಆದರ್ಶಗಳನ್ನು ಮಾತನ್ನಾಡುವಂತಿಲ್ಲ, ಮಾಧ್ಯಮದವರಿಗೆ ಸಂವಿಧಾನವೆಂದರೆ ಬೆದರಿಕೆ. ಶೈಕ್ಷಣಿಕ ರಂಗವಂತೂ ಸಂವಿಧಾನವನ್ನು ದೂಷಿಸುತ್ತದೆ. ಭಾರತದ ಹ್ಯಾಬಿಟಾಟ್ ಕೇಂದ್ರ, ಭಾರತ ಅಂತರರಾಷ್ಟ್ರೀಯ ಕೇಂದ್ರ ಅಥವಾ ಮಂಡಿ ಹೌಸ್‌ಗಳೇ ಆದರ್ಶಗಳಾಗಿದ್ದು ಸುರಕ್ಷಿತ ತಾಣಗಳೆಂದು ನೋಡಲಾಗುತ್ತಿದೆ... ಆದರ್ಶಗಳಿಲ್ಲದೆ ಕೆಲವು ಜನ ಜೀವಿಸಿದರೆ, ಮತ್ತೆ ಕೆಲವರು ತಾವು ಏಕೆ ಹುಟ್ಟಿದ್ದೇವೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳದೆ ಸಾಯುತ್ತಾರೆ.

ಮಾನ್ಯರೆ, ಚರಿತ್ರೆ ತನ್ನದೇ ಹಾದಿಯನ್ನು ಆಯ್ದುಕೊಂಡರೂ ವ್ಯಕ್ತಿಗಳು ಮಾತ್ರ ಆ ಚರಿತ್ರೆಯ ಚಕ್ರವನ್ನು ಮುನ್ನಡೆಸುತ್ತಾರೆ. ಚರಿತ್ರೆ ವ್ಯಕ್ತಿಗಳನ್ನು ಒಂದು ಕಾರ್ಯಕ್ಕಾಗಿ ಆಯ್ದುಕೊಳ್ಳುವುದಿಲ್ಲ, ಚರಿತ್ರೆಯ ಮನೋಧರ್ಮವನ್ನು ಅರಿತ ವ್ಯಕ್ತಿಗಳು ಚರಿತ್ರೆಯ ಮಾಸ್ಟರ್‌ಗಳಾಗುತ್ತಾರೆ. ಚರಿತ್ರೆಯು ಪಂಡಿತ್ ನೆಹರೂರವರನ್ನು ಆಯ್ಕೆ ಮಾಡಿಲ್ಲ, ಪಂಡಿತ್ ನೆಹರೂರವರು ಚರಿತ್ರೆಯ ಕರೆಗೆ ಓಗೊಟ್ಟರು.

ಮಾನ್ಯ ಪ್ರಧಾನಮಂತ್ರಿಯವರೇ,

ಪಂಡಿತ್ ನೆಹರೂವಿನಂತೆ ನೀವೂ ಸಹ ಅದೇ ಚರಿತ್ರೆಯ ಸಂದರ್ಭದಲ್ಲಿದ್ದೀರಿ. ಆತ ಜಮೀನ್ದಾರಿಯನ್ನು ರದ್ದುಪಡಿಸಿ ಓಬಿಸಿಗಳನ್ನು ವಿಮುಕ್ತಗೊಳಿಸಿದ. ಆದ್ದರಿಂದ ಭಾರತದ ಆಸ್ತಿ ಸಂಬಂಧಗಳಲ್ಲಿ ಒಂದು ದೊಡ್ಡ ಬದಲಾವಣೆ ಕಾರಣವಾಗಿ ಭಾರತೀಯ ಆರ್ಥಿಕತೆಯಲ್ಲಿ ದಲಿತರನ್ನು ಭಾಗಿಗಳನ್ನಾಗಿಸ

ಬಹುದು. ಇದಕ್ಕೆ ಯಾವುದೇ ಖಾಸಗಿರಂಗದ, ಶಿಕ್ಷಣರಂಗದ ಅಥವಾ ಮಾಧ್ಯಮದ ದಯಾಪರತೆಯ ಅವಶ್ಯಕತೆಯಿಲ್ಲ.

ಕೇಂದ್ರ ಸರ್ಕಾರವು ಸರಕುಗಳ ಮತ್ತು ಸೇವೆಗಳ ಅತ್ಯಂತ ದೊಡ್ಡ ಗ್ರಾಹಕವಾಗಿದೆ. ಅತೀ ಕೈಗಾರೀಕೃತ, ವ್ಯಾಪಾರಿ ಮಳಿಗೆಗಳು ರಾಜ್ಯದೊಂದಿಗೆ ವ್ಯಾಪಾರ ಮಾಡುವ ಮೂಲಕ ಸಂಪತ್ತನ್ನು ಸಂಗ್ರಹಿಸುತ್ತದೆ. ಒಂದು ಸಣ್ಣ ಸಚಿವ ಸಂಪುಟದ ತೀರ್ಮಾನದಿಂದ ಸರಬರಾಜು/ವ್ಯಾಪಾರದ ವೈವಿಧ್ಯತೆಯನ್ನು ಅನುಷ್ಠಾನಗೊಳಿಸುವ ಅಧಿಕಾರಗಳನ್ನು ಹೊಂದಿರುವ 'ಎಸ್‌ಸಿ/ಎಸ್‌ಟಿ ವೈವಿಧ್ಯತೆ ನಿಗಮ'ವನ್ನು ಸ್ಥಾಪಿಸಬಹುದು. ಈ ಮೂಲಕ ಭಾರತದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿದಂತಾಗುತ್ತದೆ. ಇದು ಜಮೀನ್ದಾರಿ ರದ್ದತಿಯಂತೆ ಚಾರಿತ್ರಿಕವಾಗಿ ಮಹತ್ವಪೂರ್ಣವಾಗಿರುತ್ತದೆ. ಆದರೆ ಈ ಸಂದರ್ಭದಲ್ಲಿ ಚರಿತ್ರೆಯಿಂದ ನಿಂದನೆಗೊಳಗಾದವರು ಫಲಾನುಭವಿಗಳಾಗಿದ್ದಾರೆ. ಈಗಾಗಲೇ ತೈಲ ಕಂಪನಿಗಳು ದಲಿತರಿಗೆ ಪೆಟ್ರೋಲ್/ಡೀಸೆಲ್, ಎಲ್‌ಪಿಜಿ ಡೀಲರ್‌ಶಿಪ್‌ಗೆ ೨೨.೫% ಮೀಸಲಿಟ್ಟಿರುವುದರಲ್ಲಿ ಯಾವುದೇ ಕಾನೂನಿನ ತೊಡಕಿಲ್ಲ. ಪೆನ್, ಪೆನ್ಸಿಲ್, ಡಸ್ಟರ್, ಇಲೆಕ್ಟ್ರಿಕಲ್ ಸಲಕರಣೆ, ಪೀಠೋಪಕರಣವನ್ನು ಸರಬರಾಜು ಮಾಡುವುದರಿಂದಲೇ ಮಿಲಿಯಗಟ್ಟಲೆ ದಲಿತರು ಬಂಡವಾಳ ಮಾರುಕಟ್ಟೆಯನ್ನು ಪ್ರವೇಶಿಸುತ್ತಾರೆ. ಕೇಂದ್ರ ಲೋಕೋಪಯೋಗಿ ಇಲಾಖೆಯು ದಲಿತರಿಗೆ ಸಣ್ಣ ಗುತ್ತಿಗೆಗಳನ್ನು ನೀಡಲು ನಿರ್ಧರಿಸಿದರೆ, ನೂರಾರು ದಲಿತರು ಆರ್ಥಿಕತೆಯಲ್ಲಿ ಪಾಲುದಾರರಾಗುತ್ತಾರೆ. ಒಂದು ಸಾರಾಯಿ ಅಂಗಡಿ ನಡೆಸಲು ಅಥವಾ ವಾಹನ ಪಾರ್ಕುಮಾಡುವ ಸ್ಟ್ಯಾಂಡ್‌ಗಳನ್ನು ನಡೆಸಲು ಯಾವ ಅರ್ಹತೆ ಬೇಕು? ಒಂದು ವರ್ಷದಲ್ಲಿ ದ್ವಿಚಕ್ರವಾಹನ ಮಾಲೀಕನು ಹೊಂಡಾ ಸಿಟಿ ಕಾರ್‌ನಷ್ಟು ಏರುತ್ತಾನಲ್ಲವೆ? ಇದಕ್ಕೆಲ್ಲ ಸರ್ಕಾರ ಯಾವುದೇ ವೆಚ್ಚ ಮಾಡಬೇಕಿಲ್ಲ.

ಮಾನ್ಯ ಪ್ರಧಾನಮಂತ್ರಿಯವರೇ, ಆಗ್ರಾ ದಲಿತರ ಬಗೆಗಿನ ನನ್ನ ಅನುಭವಗಳನ್ನು ಮತ್ತೆ ನೆನಪಿಸಿಕೊಳ್ಳುತ್ತೇನೆ. ನನ್ನ ಆಗ್ರಾ ಭೇಟಿಯಲ್ಲಿ ಮಹಲುಗಳಂತಿರುವ ಕೆಲವು ದಲಿತ ಮನೆಗಳನ್ನು ನೋಡಿದ್ದೇನೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅವರು ಬ್ರಿಟಿಷ್ ಸೈನ್ಯಕ್ಕೆ ಬೂಟುಗಳು ಮತ್ತು ಬೆಲ್ಟ್‌ಗಳನ್ನು ಒದಗಿಸುತ್ತಿದ್ದರು. ತುಂಬಾ ಹಣ ಹರಿದುಬಂದಾಗ, ದಲಿತ ಉತ್ಪಾದಕರು, ಘಟಕಗಳನ್ನು ಸ್ಥಾಪಿಸಿಕೊಂಡ ದಲ್ಲಾಳಿಗಳಿಗೆ ಸರಬರಾಜುದಾರರಾಗಿ ಪರಿವರ್ತಿತರಾದರು. ಈಗ ದಲಿತರು ಕಚ್ಚಾ ಚರ್ಮವನ್ನು ಸರಬರಾಜು ಮಾಡುವವರು.

ದಲಿತ ಸಮಸ್ಯೆಯ ಬಗ್ಗೆ ಒಮ್ಮತ ಸಾಧ್ಯವೇ?

ಡಿಸೆಂಬರ್ ೧೯, ೨೦೦೩ರಲ್ಲಿ ಎಸ್‌ಸಿ/ಎಸ್‌ಟಿ ಸಂಸತ್ಸದಸ್ಯರ ವೇದಿಕೆಯಲ್ಲಿ ಪ್ರಧಾನಮಂತ್ರಿಯವರು ಭಾಷಣ ಮಾಡುತ್ತಾ ಖಾಸಗಿ ರಂಗಕ್ಕೆ ಎಸ್‌ಸಿ/ಎಸ್‌ಟಿಗಳು ಪ್ರವೇಶಿಸುವುದಕ್ಕೆ ಸರಿಯಾದ ವಾತಾವರಣ ಬೇಕು ಎಂದಿದ್ದರು. ಸಾಮಾನ್ಯವಾಗಿ, ವಿರೋಧಪಕ್ಷದ ನಾಯಕರು ಮತ್ತು ಪ್ರಧಾನಮಂತ್ರಿಯವರು ಈ ನಿರ್ದಿಷ್ಟ ವಿಷಯದ ಬಗ್ಗೆ ಸಮ್ಮತಿಸಿದರೆ, ಒಮ್ಮತವನ್ನು ಸಾಧಿಸಲಾಗಿದೆಯೆಂದು ಭಾವಿಸಬಹುದು. ಸೋನಿಯಾಗಾಂಧಿ ತನ್ನ ಶಿಮ್ಲಾ ನಿರ್ಧಾರದಲ್ಲಿ ಖಾಸಗಿ ರಂಗದಲ್ಲಿ ದಲಿತರ ಪಾವಿನ ಬಗ್ಗೆ ಮಾತನಾಡಿದ್ದರು. ಈಗ ಪ್ರಧಾನಮಂತ್ರಿಯವರು ಇದೇ ವಿಷಯದ ಬಗ್ಗೆ ಮಾತನಾಡಿದ್ದಾರೆ. ಆದರೂ ಒಮ್ಮತವು ಮಾತ್ರ ಸಾಧ್ಯವಾಗಲೇ ಇಲ್ಲ.

ಕೇಂದ್ರ ಸರ್ಕಾರವು ಸರಕುಗಳ ಮತ್ತು ಸೇವೆಗಳ ಅತ್ಯಂತ ದೊಡ್ಡ ಗ್ರಾಹಕವಾಗಿದೆ. ಅತೀ ಕೈಗಾರೀಕೃತ, ವ್ಯಾಪಾರಿ ಮಳಿಗೆಗಳು ರಾಜ್ಯದೊಂದಿಗೆ ವ್ಯಾಪಾರ ಮಾಡುವ ಮೂಲಕ ಸಂಪತ್ತನ್ನು ಸಂಗ್ರಹಿಸುತ್ತದೆ. ಒಂದು ಸಣ್ಣ ಸಚಿವ ಸಂಪುಟದ ತೀರ್ಮಾನದಿಂದ ಸರಬರಾಜು/ವ್ಯಾಪಾರದ ವೈವಿಧ್ಯತೆಯನ್ನು ಅನುಷ್ಠಾನಗೊಳಿಸುವ ಅಧಿಕಾರಗಳನ್ನು ಹೊಂದಿರುವ 'ಎಸ್‌ಸಿ/ಎಸ್‌ಟಿ ವೈವಿಧ್ಯತೆ ನಿಗಮ'ವನ್ನು ಸ್ಥಾಪಿಸಬಹುದು. ಈ ಮೂಲಕ ಭಾರತದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿದಂತಾಗುತ್ತದೆ. ಇದು ಜಮೀನ್ದಾರಿ ರದ್ದತಿಯಂತೆ ಚಾರಿತ್ರಿಕವಾಗಿ ಮಹತ್ವಪೂರ್ಣವಾಗಿರುತ್ತದೆ.

ಮಂಡಲ್ ಪೂರ್ವದ ಭಾರತದಲ್ಲಿ ದಲಿತ ಹಕ್ಕುಗಳ ಬಗ್ಗೆ ಒಂದು ರೀತಿಯ ಒಮ್ಮತವಿತ್ತು. ಇದು, ದಲಿತ ಸಿದ್ಧಾಂತಿ ಡಿ. ಶ್ಯಾಮಬಾಬು ಪ್ರಕಾರ, ಮಂಡಲ್ ಆಯೋಗದಿಂದ ಮುರಿದುಬಿತ್ತು. ಹೆಚ್ಚಿನ ರಾಜಕೀಯ ಪಕ್ಷಗಳು, ಕನಿಷ್ಠ ಸಿದ್ಧಾಂತದ ನೆಲೆಯಲ್ಲಿ ಒಪ್ಪಿಕೊಂಡಿದ್ದವು. ಸಮಾಜವು ಕೂಡಾ ಇದರೊಂದಿಗೆ ರಾಜೀ ಮಾಡಿಕೊಂಡಿತ್ತು. ಉದ್ಯಮಪತಿಗಳು ಪಿಸುಮಾತಿನಲ್ಲಿ ವಿರೋಧಿಸುತ್ತಿದ್ದರು. ಮಾಧ್ಯಮಗಳು ಮಾತ್ರ 'ಅಸಮರ್ಥ' ಜನರು ಭಾರತೀಯ ಅಧಿಕಾರಶಾಹಿಯನ್ನು ಅದಕ್ಷವನ್ನಾಗಿ ಮಾಡಿದೆ ಎಂದು ಆಗಿಂದಾಗ್ಗೆ ಅಣಕಮಾಡುತ್ತಿದ್ದವು. ಅಧಿಕಾರಶಾಹಿಯನ್ನು ಪ್ರವೇಶಿಸಿದ ಬರೀ ಹತ್ತು ಶೇಕಡಾ ಎಸ್‌ಸಿ/ಎಸ್‌ಟಿಗಳು ಉಳಿದ ತೊಂಬತ್ತು ಶೇಕಡಾ ಜನರನ್ನು ಅಸಮರ್ಥಗೊಳಿಸುವುದೆಂದರೆ ಅವರ ದಕ್ಷತೆಯನ್ನು ಮೆಚ್ಚಲೇಬೇಕಾಗುತ್ತದೆ. ಮಂಡಲ್ ನಂತರ ರಾಜಕಾರಣವು ದಲಿತ ಸಮಸ್ಯೆಯ ಬಗ್ಗೆ ಅಸಡ್ಡೆ ತಾಳಿತು. ಸಮಾಜ ಮತ್ತು ಮಾಧ್ಯಮವು ಮತ್ತಷ್ಟು ಕಿಡಿಕಾರತೊಡಗಿದವು. ಈ ಸಲ ಪಕ್ಷಗಳೇ ದಲಿತರನ್ನು ಮತ್ತು ಖಾಸಗಿ ರಂಗವನ್ನು ಸೇರಿಸಿಕೊಂಡಿವೆ. ಮಾಧ್ಯಮಗಳು ಖಾಸಗಿ ರಂಗ ಮತ್ತು ರಾಜ್ಯದಿಂದ ಬರುವ ಜಾಹೀರಾತಿನ ಆದಾಯದಿಂದ ಬದುಕುತ್ತಿದೆ. ಖಾಸಗಿರಂಗ ಮತ್ತು ಮಾಧ್ಯಮದ ದಿಗಿಲುಟ್ಟಿಸುವ ಒಕ್ಕೂಟವನ್ನು ದಲಿತರು ಎದುರಿಸಬೇಕಾಗುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಪೊಲೀಸ್ ವ್ಯವಸ್ಥೆಯನ್ನು ವಿಸ್ತರಿಸಲಷ್ಟೇ ರಾಜ್ಯಾಂಗವು ಅವಶ್ಯಕತೆಯಿದೆಯೆಂದು ಭಾರತದ ಖಾಸಗಿ ರಂಗವು ಬಯಸುತ್ತದೆ. ಅವರಿಗೆ ರಾಜ್ಯಾಂಗವು ಅತೀ ದೊಡ್ಡ ಸೈನ್ಯಶಕ್ತಿಗಳನ್ನು ಪೋಷಿಸಬೇಕಾಗಿಲ್ಲ. ವಿಶ್ವ ಭ್ರಾತೃತ್ವ ಭಾವನೆಯನ್ನುಂಟು ಮಾಡಿದರೆ ಸಾಕು. ರಾಜ್ಯಾಂಗದ ಸಾರ್ವಭೌಮತ್ವದ ಪರಿಕಲ್ಪನೆಯು ಮಾರುಕಟ್ಟೆಯ ವಿರುದ್ಧವಿರುವುದರಿಂದ, ಖಾಸಗಿ ವಲಯಕ್ಕೆ ಒಂದು ಅವಕಾಶ ಸಿಕ್ಕಿದಲ್ಲಿ ಇಡೀ ಭಾರತವನ್ನೇ ಕಡಿಮೆ ಬೆಲೆಗೆ ಮಾರಿಕೊಳ್ಳಲು ಹೇಸಲಾರರು. ಭಾರತದ ಖಾಸಗಿ ರಂಗವು ಯಾವುದೇ ಸಾಮಾಜಿಕ ಹೊಣೆಗಾರಿಕೆಯ ಬಗ್ಗೆ ಯೋಚಿಸುತ್ತಿಲ್ಲ. ಸಾಮಾಜಿಕ ಆದೇಶವನ್ನು ಪರಿವರ್ತಿಸುವ ಹೊಣೆಗಾರಿಕೆ ಮಾತ್ರ ಬೇಕು. ದುರಾಸೆ ಮಾತ್ರ ಖಾಸಗಿ ರಂಗವನ್ನು ಸಾಮಾಜಿಕವಾಗಿ ಸರಿದಾರಿಗೆ ತರಬಹುದೇನೋ. ಕೈಗಾರಿಕೆಗಳನ್ನು ಹೊರತುಪಡಿಸಿ ರಾಜ್ಯಾಂಗವೇ ತೆರಿಗೆ ಪಾವತಿಸುವುದರಿಂದ, ಖಾಸಗಿ ರಂಗವು ಮೊದಲಿಗೆ ದಲಿತರಿಗೆ ವೈವಿಧ್ಯತೆಯನ್ನು ನೀಡಲು ಮುಂದಾಗಬೇಕಿತ್ತು.

ಪ್ರಧಾನಮಂತ್ರಿಯವರು ಮಾತನಾಡಿದ ವಿಷಯದ ಬಗ್ಗೆ ಮಾಧ್ಯಮ, ಶಿಕ್ಷಣರಂಗ ಮತ್ತು ಸಂಸತ್ತು ಒಟ್ಟಾಗಿ ವಾತಾವರಣವನ್ನು ಸೃಷ್ಟಿಸಬಹುದು. ಎನ್‌ಡಿಎ ಸರ್ಕಾರವು ವೈವಿಧ್ಯತೆಯ ಬಗ್ಗೆ ಕಾಂಗ್ರೆಸ್ ಸಹಕಾರವನ್ನು ಬಯಸಿದರೆ, ಕಾಂಗ್ರೆಸ್ ಒಪ್ಪಬಹುದು. ಇತರೇ ರಾಜಕೀಯ ಪಕ್ಷಗಳು ಅದನ್ನು ಒಪ್ಪಿಕೊಳ್ಳುತ್ತವೆ. ರಾಜಕಾರಣಿಗಳ ಬಗ್ಗೆ ಅನೇಕ ಕೆಟ್ಟ ಅಭಿಪ್ರಾಯಗಳು ಇದ್ದಾಗಲೂ ಕೂಡಾ, ಅವರು ಭವಿಷ್ಯತ್ತಿನತ್ತ ಮುನ್ನೋಟ ಹೊಂದಿದವರಾಗಿದ್ದಾರೆ. ಚುನಾವಣಾ ಪ್ರಜಾಪ್ರಭುತ್ವವು ಅವರನ್ನು ಸಾಮಾಜಿಕವಾಗಿ ಹೆಚ್ಚು ದಕ್ಷರಾಗಿರುವಂತೆ ಒತ್ತಡ ಹೇರುತ್ತಿದೆ. ಶಿಕ್ಷಣರಂಗ ಮತ್ತು ಮಾಧ್ಯಮವು ದ್ವಿಜರಿಗೆ ಕೊನೆಯದಾದ ಜಾರುಬಂಡೆಯಾಗಿದೆ. ಈ ಮೂಲಕ ವೈವಿಧ್ಯತೆ ಬೆದರಿಕೆಯನ್ನುಂಟುಮಾಡುತ್ತಿದೆ. ಶಿಕ್ಷಣರಂಗ ಮತ್ತು ಮಾಧ್ಯಮದಲ್ಲಿರುವ ನೇಮಕಾತಿ ನೀತಿಯು ಅತ್ಯಂತ ಅಪ್ರಜಾಸತ್ತಾತ್ಮಕವಾದುದು. ವಿಶೇಷವಾಗಿ ಮಾಧ್ಯಮವು, ಭಾರತದಲ್ಲಿರುವ ಯಾವುದೇ ವೃತ್ತಿಗಿಂತ ಹೆಚ್ಚು ತಾಲಿಬಾನ್ ಮನಸ್ಸಿನದಾಗಿದೆ. ನೇಮಕಾತಿ ಸಂದರ್ಭದಲ್ಲಿ ಅಭ್ಯರ್ಥಿಯ ಸ್ವ-ವಿವರವು ಆತನ ತಂದೆತಾಯಿಯ ಸ್ವ-ವಿವರಕ್ಕಿಂತ ಕಡಿಮೆ ಮಹತ್ವ ಹೊಂದಿರುತ್ತದೆ. ಅದಕ್ಕಿಂತಲೂ ಹೆಚ್ಚಾಗಿ, ಪ್ರತಿಯೊಬ್ಬನು ಆಕ್ಸ್‌ಫರ್ಡ್‌ದಿಂದ ಪದವಿಗಳನ್ನು ಪಡೆದ ಚಂದನ್ ಮಿತ್ರ ಅಥವಾ ಸಾಗರಿಕಾ ಘೋಷ್ ಆಗಲು ಸಾಧ್ಯವಿಲ್ಲ. ಹೆಚ್ಚಿನ ಮಾಧ್ಯಮ ವ್ಯಕ್ತಿಗಳು ನಾಗರಿಕ ಸೇವೆಯಿಂದ ಹೊರಬಿದ್ದವರಷ್ಟೆ. ಆದ್ದರಿಂದಲೇ ಯಶಸ್ವಿಯಾದ ವರಿಗಿಂತ ವಿಫಲಗೊಂಡವರೇ ಹೆಚ್ಚಾಗಿ ಅರ್ಹತೆಯ ಬಗ್ಗೆ ಮಾತನಾಡುವವರು.

ಆದ್ದರಿಂದ, ಖಾಸಗಿರಂಗದಲ್ಲಿ ದಲಿತರ ಪ್ರವೇಶಕ್ಕಾಗಿ ಧನಾತ್ಮಕ ವಾತಾವರಣವನ್ನು ನಿರ್ಮಿಸುವಲ್ಲಿ ಮಾಧ್ಯಮ ಅಥವಾ ಶಿಕ್ಷಣರಂಗದ ಸಹಕಾರವನ್ನು ಬಯಸುವುದು ನಿರರ್ಥಕವೆನಿಸುತ್ತದೆ. ಭಾರತೀಯ ಉದ್ಯಮಪತಿಗಳನ್ನು ರಾಜ್ಯಾಂಗದ ಬಲಿಪಶುಗಳು ಇಲ್ಲವೇ ಅವರು ಮುನ್ನೋಟದಿಂದಾಗಿ ಅತ್ಯಂತ ದೊಡ್ಡ ಉದ್ಯಮಗಳನ್ನು ಕಟ್ಟಿದವರೆಂದು ಬಿಂಬಿಸುತ್ತಿದೆ. ಭಾರತೀಯ ಕೈಗಾರಿಕೆಗಳ ನಾಯಕರನ್ನು ತೆರಿಗೆ ಕಳ್ಳತನಕ್ಕಾಗಿ ಅಥವಾ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಅವರು ತೆಗೆದುಕೊಂಡ ಬೃಹತ್ ಮೊತ್ತದ ಸಾಲಗಳನ್ನು ಪಾವತಿ ಮಾಡದಿದ್ದುದಕ್ಕಾಗಿ ಟಿವಿ ಚಾನೆಲ್‌ಗಳಲ್ಲಿ ಎಷ್ಟು ಬಾರಿ ಹಿಂಸಿಸಲಾಗಿತ್ತು. ಭಾರತೀಯ ಉದ್ಯಮಪತಿಗಳ ದಿಗಿಲುಟ್ಟಿಸುವ ಕೃತಕತೆ ಮತ್ತು ಪದ್ಧತಿಗಳ ಬಗ್ಗೆ ಟಿವಿ ಚಾನೆಲ್‌ಗಳು ಅಥವಾ ಪತ್ರಿಕೆಗಳು ಅಣಕಿಸಬೇಕೆಂದು ನಾವೇನೂ ಬಯಸುವುದಿಲ್ಲ. ಆದರೆ, ಗಣರಾಜ್ಯದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುವುದಕ್ಕಾಗಿ

(೨೨ ಪುಟಕ್ಕೆ)

ಝೆನ್

ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಬೆಕ್ಕನ್ನು ಬದುಕಿಸಲಿಲ್ಲ

ಆ ವಿಹಾರದಲ್ಲಿ, ಪೂರ್ವಶಾಲೆಯ ಭಿಕ್ಷುಗಳದ್ದೊಂದು ಗುಂಪು ಹಾಗೂ ಪಶ್ಚಿಮಶಾಲೆಯ ಭಿಕ್ಷುಗಳದ್ದೊಂದು ಗುಂಪು- ಹೀಗೆ ಎರಡು ಗುಂಪುಗಳಿದ್ದವು. ವಿಹಾರದಲ್ಲಿ ಹಿಂದಿನಿಂದ ಬಂದ ಒಂದು ಬೆಕ್ಕು ಇತ್ತು. ಅದು ಯಾವ ಗುಂಪಿಗೆ ಸೇರಿದ್ದು ಎಂಬ ಬಗ್ಗೆ ವಿವಾದ ಹುಟ್ಟಿತು. ಎರಡು ಗುಂಪಿನವರೂ ಅದು ತಮಗೇ ಸೇರತಕ್ಕದ್ದೆಂದು ವಾದಿಸತೊಡಗಿದರು. ಗುರು ನನ್‌ಸೆನ್ ಇದನ್ನು ತೀರ್ಮಾನ ಮಾಡ ಬೇಕಾಯ್ತು.

ನನ್‌ಸೆನ್, ಭಿಕ್ಷುಗಳೆಲ್ಲರನ್ನೂ ಕರೆದ. ಅವರ ಎದುರು, ಕೈಯಲ್ಲಿ ಬೆಕ್ಕನ್ನು ಹಿಡಿದು ಅದನ್ನು ಮೇಲಕ್ಕೆತ್ತಿ ಗಾಳಿಯಲ್ಲಿ ತೂಗುತ್ತ 'ಇಕೋ ನೋಡಿ. ಈ ಬೆಕ್ಕನ್ನು ಉಳಿಸಬೇಕೆಂದಿದ್ದರೆ ಯಾರಾದರೂ ಒಂದು ಶುಭಶಬ್ದ ಹೇಳಿ' ಎಂದ.

ಯಾರೂ ತುಟಿಯೊಡೆಯಲಿಲ್ಲ. ನನ್‌ಸೆನ್, ಒಳಗೆ ಹೋಗಿ ಒಂದು ಹರಿತವಾದ ಕತ್ತಿಯನ್ನು ತೆಗೆದುಕೊಂಡು ಬಂದು, ಅವರೆಲ್ಲರ ಎದುರಿಗೇ ಬೆಕ್ಕನ್ನು ಎರಡು ಹೋಳಾಗಿ ಸೀಳಿದ. ಒಂದೊಂದು ಭಾಗವನ್ನು ಒಂದೊಂದು ಗುಂಪಿಗೆ ಹಂಚಿಕೊಟ್ಟ.

ಆ ರಾತ್ರಿ, ಜೊಶು ವಿಹಾರಕ್ಕೆ ಹಿಂದಿರುಗಿದಾಗ, ನನ್‌ಸೆನ್, ಆತನಿಗೆ ನಡೆದ ಕಥೆಯನ್ನು ಹೇಳಿದ. ಜೊಶು ಮಾತೇ ಆಡಲಿಲ್ಲ, ತನ್ನ ಪಾದುಕೆಗಳನ್ನೆತ್ತಿಕೊಂಡು, ಅವನ್ನು ಹುಷಾರಾಗಿ ತೋಲ ತಪ್ಪದ ಹಾಗೆ ತನ್ನ ತಲೆಯಮೇಲಿಟ್ಟುಕೊಂಡು ನಡೆದುಬಿಟ್ಟ.

ನನ್‌ಸೆನ್, ಎಲ್ಲರಿಗೂ ಕೇಳಿಸುವಂತೆ ದೊಡ್ಡದಾಗಿ ಹೇಳಿಕೊಂಡ-'ಜೋಶು ಇದ್ದಿದ್ದರೆ ಬೆಕ್ಕನ್ನು ಬದುಕಿಸುತ್ತಿದ್ದ'.

ವಸ್ತುಬೋಧೆ

ಬೋಧಿಧರ್ಮ, ತಾನು ಆಯ್ಕೆ ಮಾಡಿದಂಥ ಉತ್ತರಾಧಿಕಾರಿಗೆ ತನ್ನ ಕಾಷಾಯ ವಸ್ತ್ರವನ್ನೂ ಭಿಕ್ಷಾ ಪಾತ್ರೆಯನ್ನೂ ಬಿಟ್ಟುಹೋದ. ಆದಾದ ಮೇಲೆ, ಅದೇ ರೀತಿಯಲ್ಲಿ ಪ್ರತಿಯೊಬ್ಬ ಗುರುಪಿತೃವೂ ತಾನು ತನ್ನ ಜ್ಞಾನ ದೃಷ್ಟಿಯಿಂದ ಯಾರನ್ನು ತನ್ನ ಉತ್ತರಾಧಿ ಕಾರಿಯನ್ನಾಗಿ ಆಯ್ಕೆ ಮಾಡುತ್ತಿದ್ದನೋ ಅವನಿಗೆ ಆ ವಸ್ತುಗಳನ್ನು ಕೊಟ್ಟುಬಿಡುತ್ತಿದ್ದ. ಹಾಗೆ ಬಂದವರಲ್ಲಿ ಐದನೆಯವನೇ ಗುನಿನ್. ಆತ, ತಮ್ಮ ಪಂಥದ ತತ್ವವನ್ನು ಯಾವನು ಅತ್ಯುತ್ತಮ ಕವಿತೆಯಲ್ಲಿ ಅಭಿವ್ಯಕ್ತಗೊಳಿಸುತ್ತಾನೋ ಅವನೇ ನನ್ನ ಉತ್ತರಾಧಿಕಾರಿ ಎಂದು ಘೋಷಿಸಿದ. ಅದೇ ವಿಹಾರದಲ್ಲಿ ಮುಖ್ಯ ಭಿಕ್ಷುವಾಗಿದ್ದವನು ಭಾರೀ ಪಂಡಿತ. ಆತ, ಕುಂಚ ಮತ್ತು ಮಸಿಯನ್ನು ತೆಗೆದುಕೊಂಡು ತನ್ನ ಅಂದವಾದ ಅಕ್ಷರಗಳಲ್ಲಿ ಹೀಗೆ ಬರೆದಿಟ್ಟ:

> ದೇಹವನ್ನವುದೊಂದು ಬೋಧಿವೃಕ್ಷ
> ಆತ್ಮವೆಂಬುದು ಹೊಳೆವ ಕನ್ನಡಿ ಸಮಕ್ಷ
> ಅಧ್ಯಯನವೇ ಶೌಚಕರ್ಮ, ಶೌಜದ ವಿನಾ
> ಕನ್ನಡಿಯ ಬಿಂಬವೇ ಮಸುಕು ಮಲಿನ.

ಆ ಮುಖ್ಯ ಭಿಕ್ಷುವಿನ ಜೊತೆ ಸ್ಪರ್ಧಿಸಿ ಕವಿತೆ ರಚಿಸಲು ಮತ್ತಾರೂ ಮುಂದಾಗಲಿಲ್ಲ. ಆದರೆ, ಆ ವಿಹಾರದಲ್ಲಿ ಅಡುಗೆ ಮಾಡಿಕೊಂಡಿದ್ದು ನಗಣ್ಯನಾಗಿದ್ದ ಯೆನೊ ಎಂಬಾತ, ಅವತ್ತು ಸಂಜೆ ಅಲ್ಲಿ ಹಾದುಹೋಗುವಾಗ ಅಲ್ಲೇ ತೂಗುತ್ತಿದ್ದ ಈ ಕವಿತೆಯನ್ನು ನೋಡಿದ. ಓದಿದವನೇ ಹತ್ತಿರದಲ್ಲಿ ಬಿದ್ದುಕೊಂಡಿದ್ದ ಕುಂಚವನ್ನೆತ್ತಿಕೊಂಡು ತನ್ನ ಹರುಕು ಅಕ್ಷರಗಳಲ್ಲೇ ಅದರ ಕೆಳಗೆ ಮತ್ತೊಂದು ಕವಿತೆಯನ್ನು ಬರೆದಿಟ್ಟ- ಹೀಗೆ:

> ಬೋಧಿಯೆನ್ನುವುದು ವೃಕ್ಷವಲ್ಲ ಅಲ್ಲ
> ಹೊಳೆವ ಕನ್ನಡಿಯೆಂಬುದಿಲ್ಲವೇ ಇಲ್ಲ
> ಎಲ್ಲವಕ್ಕೂ ಆದಿ ಶೂನ್ಯವಾಗಿರುವಾಗ
> ಮಾಲಿನ್ಯ ಕವಿಯುವುದು ಯಾವ ಜಾಗ?

ಅವತ್ತು ರಾತ್ರಿ ಗುನಿನ್, ಯೆನೋನನ್ನು ಕರೆದು, 'ನಿನ್ನ ಕವಿತೆ ಓದಿದ್ದೇನೆ, ನಿನ್ನನ್ನೇ ನನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದ್ದೇನೆ. ಇಗೋ, ನನ್ನ ಕಾಷಾಯವಸ್ತ್ರ ಮತ್ತು ಭಿಕ್ಷಾಪಾತ್ರೆ. ಇಲ್ಲಿ ಅಪಾಯವಿದೆ. ಇವತ್ತು ರಾತ್ರಿಯೇ ಈ ವಿಹಾರ ಬಿಟ್ಟು ಹೊರಟುಬಿಡು' ಎಂದು ಕಾಷಾಯವಸ್ತ್ರ ಭಿಕ್ಷಾಪಾತ್ರೆಗಳನ್ನು ಕೊಟ್ಟು ಹೇಳಿದ.

ಬೆಳಗಾದ ಮೇಲೆ ಮುಖ್ಯಭಿಕ್ಷುವಿಗೆ ಸುದ್ದಿ ತಿಳಿಯಿತು. ಕೂಡಲೇ ಆತ ಯೆನೊ ಹಿಡಿದ ದಾರಿಯನ್ನು ಹಿಡಿದು ಧಾವಿಸಿದ ಮಧ್ಯಾಹ್ನದ ಹೊತ್ತಿಗೆ ಆತನನ್ನು ಸಂಧಿಸಿದ. ತತ್‌ಕ್ಷಣ, ಮಾತೇ ಆಡದೆ ಆತನ ಕೈಗಳಿಂದ ಕಾಷಾಯವಸ್ತ್ರ ಭಿಕ್ಷಾಪಾತ್ರೆಗಳನ್ನು ಕಿತ್ತುಕೊಳ್ಳಲು ಯತ್ನಿಸಿದ.

ಯೆನೊ ಅವೆರಡನ್ನೂ ದಾರಿ ಬದಿಯ ಒಂದು ಬಂಡೆಯ ಮೇಲೆ ತೆಗೆದಿಟ್ಟು ಹೇಳಿದ- 'ಈ ವಸ್ತುಗಳೇ ಬೇಕಿದ್ದರೆ, ತೊಂದರೆಯಿಲ್ಲ ತೆಗೆದುಕೋ'.

ಭಿಕ್ಷು ಆತುರಾತುರವಾಗಿ ಅವುಗಳ ಕಡೆ ಕೈಚಾಚಿದ. ಆದರೆ ಅಲ್ಲಿಂದ ಅವುಗಳನ್ನು ಎತ್ತಿಕೊಳ್ಳಲು ಮಾತ್ರ ಆತನಿಗೆ ಸಾಧ್ಯವಾಗಲಿಲ್ಲ. ಅವು ಅಲ್ಲಿ ಬೆಟ್ಟದಷ್ಟು ಭಾರವಾಗಿ ಕೂತುಬಿಟ್ಟಿದ್ದವು.

ಭಿಕ್ಷು ಸೋತು ಹೇಳಿದ-'ನನ್ನನ್ನು ಕ್ಷಮಿಸು. ನನಗೆ ನಿಜವಾಗಿ ಬೋಧೆಬೇಕು. ವಸ್ತು ಬೇಡ.'

ಯೆನೊ ಹೇಳಿದ-

'ಇದು ನನ್ನದು ಎಂಬ ಯೋಚನೆ ಕೊನೆಗೊಳ್ಳಬೇಕು; ಇದು ನನ್ನದಲ್ಲ ಎಂಬ ಯೋಚನೆ ಕೊನೆಗೊಳ್ಳಬೇಕು. ಈಗ ಹೇಳು, ನೀನು ಎಲ್ಲಿದ್ದೀಯೆ? ಮತ್ತು ಹೇಳು, ನಿನ್ನ ತಂದೆತಾಯಿಗಳು ಹುಟ್ಟುವುದಕ್ಕೆ ಮುಂಚೆ ನಿನ್ನ ಮುಖ ಹೇಗಿತ್ತು?'

ಪಾದುಕೆಯ ಬೆರಗು

ಅನೇಕ ಝೆನ್ ಗುರುಗಳು, ತಮ್ಮ ಶಿಷ್ಯರಿಗೆ ಈ ಐತಿಹ್ಯ ಹೇಳುತ್ತಿದ್ದರು-

ಬೋಧಿಧರ್ಮ ತೀರಿಕೊಂಡ. ಅವನ ಸಮಾಧಿ ಯಾಯಿತು. ಅದಾಗಿ ಕೆಲವು ದಿನಕ್ಕೆ ಯಾರೋ ಹೇಳಿದರು. 'ಆತ ಪರ್ವತಪ್ರಾಂತದಲ್ಲಿ ಕೈಯಲ್ಲಿ ಒಂದೇ ಪಾದುಕೆ ಹೊತ್ತು ಭಾರತಕ್ಕೆ ಅಭಿಮುಖವಾಗಿ ನಡೆಯುತ್ತಿದ್ದುದನ್ನು ಕಂಡೆ' ಅಂತ. ಶಿಷ್ಯರಿಗೆಲ್ಲ ಆಶ್ಚರ್ಯವಾಯ್ತು. ನಿಜವನ್ನು ಪರೀಕ್ಷೆ ಮಾಡಲಿಕ್ಕಾಗಿ ಅವರು, ಆತನ ಸಮಾಧಿಯನ್ನು ಅಗೆದು ನೋಡಿದರು. ಅಲ್ಲಿ ಒಂದು ಪಾದುಕೆ ಮಾತ್ರ ಇತ್ತು. ಮತ್ತೇನೂ ಇರಲಿಲ್ಲ.

ಉಳಿಸಿಕೊಳ್ಳಬೇಕೆನ್ನುವುದೇ ಇದರ ಒಳಗುಟ್ಟು. ತಮ್ಮ ಲಾಭಕ್ಕಾಗಿ ಜಾತಿ ವ್ಯವಸ್ಥೆಯನ್ನು ಪ್ರಸ್ತುತಪಡಿಸಿದವರಿಗೆ, ಅದು ಅದರ ದೌರ್ಬಲ್ಯಗಳಿಂದ ಕುಸಿಯುತ್ತಿರುವ ಕಾರಣದಿಂದ ಹೇಗಾದರೂ ಅದನ್ನು ಉಳಿಸಿಕೊಳ್ಳಲೇಬೇಕಾದ ಔಚಿತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ. ಹೆತ್ತವರ ಕಾರಣದಿಂದ ಶೂದ್ರರಾದವರು, ದಲಿತರಾದವರು ಅದಕ್ಕಿಂತ ಬೇರೆ ಯಾವುದಕ್ಕೂ ತೆರೆದುಕೊಳ್ಳಬಾರದೆನ್ನುವ ಅದೃಶ್ಯ ತಾಕೀತು ಇದರಲ್ಲಿ ವ್ಯಕ್ತವಾಗುತ್ತದೆ.

ಹುಟ್ಟು ವ್ಯಕ್ತಿಯ ಮತವನ್ನು ನಿರ್ಣಯಿಸುವುದಿಲ್ಲ, ಬದಲಾಗಿ ನೀಡುತ್ತದೆಯೆನ್ನುವುದು ಹಗಲಿನಷ್ಟೇ ಸತ್ಯ. ನಿಜಕ್ಕೂ ಹುಟ್ಟನ್ನು ಪ್ರಕೃತಿ ಕ್ರಮವೆಂದು ನಾವು ನಂಬಿದ್ದೇವೆ. ವೀರ್ಯಬಿಂದು ಪಿಂಡವಾಗುವುದರಲ್ಲಿ ಅಥವಾ ಮಗುವಿನ ರೂಪದಲ್ಲಿ ತಾಯಿ ಹಡೆಯುವುದರಲ್ಲಿ ಕೂಡಾ ಅದರ ಎಲ್ಲಾ ಬೆಳವಣಿಗೆಯಲ್ಲಿ ತಾಯಿಗೆ ನಿಯಂತ್ರಣ ಹೊಂದಲು ಸಾಧ್ಯವಾಗುವುದಿಲ್ಲ. ಹಾಗೆಯೇ ಮಗುವಿನ ಲಿಂಗವನ್ನು ಅದರ ಹುಟ್ಟಿನ ಕ್ರಿಯೆಯಲ್ಲಿ ಸಾಂಕೇತಿಕವಾಗಿ ಪಾಲ್ಗೊಂಡ ಮನುಷ್ಯರಿಂದ ನಿರ್ಣಯಿಸಲೂ ಸಾಧ್ಯವಾಗುವುದಿಲ್ಲ. ಅಂದರೆ ಮನುಷ್ಯನ ಕೈಮೀರಿದ ಹುಟ್ಟಿನ ನಿಯಂತ್ರಣವನ್ನು ಪ್ರಕೃತಿ ವಹಿಸಿಕೊಳ್ಳುತ್ತದೆ ಎನ್ನುವಾಗ ಮಗುವು ಸಹಜವಾಗಿ ಪ್ರಕೃತಿ ಧರ್ಮದಲ್ಲಿ ಹುಟ್ಟುತ್ತದೆ. (ಪ್ರಕೃತಿ ಎಂದರೆ ಮಾನವನಿಂದ ನಿರ್ಮಿಸಲಾಗದ ಸೃಷ್ಟಿ)

ಹಾಗಿರುವಾಗ ಮಗುವಿನ ಮತವನ್ನು ತಂದೆ ತಾಯಿಗಳೊಂದಿಗೆ ತಾಳೆ ಹಾಕುವುದು ಅಸಮಂಜಸವಾಗುತ್ತದೆ. ಯಾಕೆಂದರೆ ಅವರು ಪ್ರಕೃತಿ ಧರ್ಮವನ್ನು ಆಚರಿಸದಿದ್ದರೆ? ಹೆತ್ತವರೆನ್ನಿಸಿಕೊಂಡವರು ತಾವು ನಂಬಿಕೊಂಡ ತಮ್ಮ ಆಚಾರ ಸಂಸ್ಕಾರಗಳಿಂದ ಮಗುವನ್ನು ಬೆಳೆಸಬಹುದಾದರೂ ಅದು ಮೂಲ ಧರ್ಮವಾಗುವುದು ಹೇಗೆ? ಅದನ್ನು ಮೂಲಧರ್ಮವೆಂದು ಕಲ್ಪಿಸಿಕೊಂಡರೂ ಅಲ್ಲಿ ಅದೃಶ್ಯ ಮತಾಂತರ ನಡೆದಿರುತ್ತದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಹಾಗಾದರೆ ಮತಾಂತರ ಹುಟ್ಟಿನಷ್ಟೇ ವಾಸ್ತವಿಕವಾಗಿದೆಯೆಂದು ಒಪ್ಪಿಕೊಳ್ಳಬೇಕು. ಜತೆಗೆ ನಾಗರಿಕತೆಯೊಂದಿಗೆ ಮತಾಂತರ ಬೆಳೆದಿದೆಯೆಂದು ತಿಳಿಯಬೇಕು. ಜತೆಗೆ ಆ ಮಗು ಬುದ್ಧಿ ಬಲಿತು ವಿವೇಚನಾ ಶಕ್ತಿಯನ್ನು ಗಳಿಸಿಕೊಂಡಾಗ ಹೆತ್ತವರ ಮತ ಗೊಡ್ಡು ಸಂಪ್ರದಾಯವೆಂದು ಅನ್ನಿಸಿ, ಸತ್ಯವನ್ನು ಅರಸುತ್ತ ಬೇರೊಂದು ಧರ್ಮದಲ್ಲಿ ಭವಿಷ್ಯವನ್ನು ಕಂಡುಕೊಂಡಾಗಲೂ ವಿರೋಧಿಸದೆ ಒಪ್ಪಿಕೊಳ್ಳಬೇಕು ಮತ್ತು ಆಗಲೂ ಅವನು ಅವಲಂಬಿಸಿದ ಧರ್ಮದಲ್ಲಿ ಗುರುತಿಸದೇ ಹೆತ್ತವರ ಧರ್ಮದಲ್ಲೇ ಇದ್ದಾನೆಂದು ವಾದಿಸುವುದು ಎಷ್ಟು ತರ್ಕರಹಿತವೋ ಅಷ್ಟೇ ಉದ್ಧಟತನವಾಗಿದೆ. ಆದ್ದರಿಂದ ಬದುಕಿನ ಹಾದಿಯಲ್ಲಿ ಯಾವುದನ್ನು ವ್ಯಕ್ತಿ ಸತ್ಯವೆಂದು ಒಪ್ಪಿ ಕೊಂಡನೋ ಅದೇ ಅವನ ಮತವಾಗಿದೆ. ಈ ನಿಟ್ಟಿನಲ್ಲಿ ಮತಾಂತರಕ್ಕೆ ವ್ಯಕ್ತಿಯ ಅಸ್ತಿತ್ವದಷ್ಟೇ ಪ್ರಾಮುಖ್ಯತೆಯಿದೆ.

ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ಮತಾಂತರವು ಮೂಲಭೂತ ಅಧಿಕಾರವಲ್ಲ ಎಂಬ ವಿಶ್ಲೇಷಣೆಯನ್ನು ನೀಡಿತು. (೨೦೦೩ ಸೆಪ್ಟೆಂಬರ್ ೨) ಆದರೆ ಮತಾಂತರವನ್ನು ರೂಢಿಯಲ್ಲಿರುವ ವಾಸ್ತವಿಕತೆಯೆನ್ನುವುದನ್ನು ಅದೇ ನ್ಯಾಯಾಲಯಕ್ಕೂ ನಿರಾಕರಿಸಲು ಸಾಧ್ಯವಾಗದು. ಹಾಗೆಂದು ಒಂದು ವೇಳೆ ವ್ಯಾಖ್ಯಾನಿಸುವುದಾದರೆ ಸತ್ಯವನ್ನು ಗುರುತಿಸಲಾಗಿಲ್ಲ ಎನ್ನಬೇಕಾಗುತ್ತದೆ. ಸಂವಿಧಾನದ ದೃಷ್ಟಿಯಲ್ಲಿ ವ್ಯಕ್ತಿ ಎಲ್ಲಾ ಸೌಲಭ್ಯಗಳೊಂದಿಗೆ, ಹೊಂದಿ ಬದುಕುವುದು ಆತನ ಮೂಲಭೂತ ಹಕ್ಕುಗಳಲ್ಲೊಂದು ಎಂದೆನಿಸಿದೆ. ತಾನು ಹೊಂದುವ ಮತವು ವ್ಯಕ್ತಿಯ

ಮತಾಂತರ : ಕೆಲವು ವಾಸ್ತವಗಳು

ವಿಶ್ಲೇಷಣೆ

ಹುಟ್ಟು ವ್ಯಕ್ತಿಯ ಮತವನ್ನು ನಿರ್ಣಯಿಸುವುದಿಲ್ಲ. ಬದಲಾಗಿ ಮತ ಹುಟ್ಟಿನಿಂದ ಪ್ರಾಪ್ತವಾಗುತ್ತದೆ. ಆದರೆ ಯಾರೇ ಒಬ್ಬ ವ್ಯಕ್ತಿ ಬುದ್ಧಿಪೂರ್ವಕವಾಗಿ ತನಗೆ ಬೇಕಾದ ಮತವನ್ನು ಆಯ್ದುಕೊಳ್ಳುವ ಪದ್ಧತಿ ನಮ್ಮಲ್ಲಿ ಇಲ್ಲ. ಹಾಗಾಗಿ ಹುಟ್ಟು ವ್ಯಕ್ತಿಯ ಮತದ ಆಯ್ಕೆಯ ಪ್ರಜ್ಞೆಯನ್ನು ಮರೆಸಿಬಿಡುತ್ತದೆ. ಬುದ್ಧಿಪೂರ್ವಕವಾಗಿ ವ್ಯಕ್ತಿಯೊಬ್ಬ ಹುಟ್ಟಿನಿಂದ ಪ್ರಾಪ್ತವಾಗಿಲ್ಲದ ಮತವೊಂದನ್ನು ಆಯ್ಕೆಮಾಡಿಕೊಂಡಾಗ ವಿವಾದಗಳು ಆರಂಭವಾಗುತ್ತವೆ. ಮತಾಂತರ ಕುರಿತ ಕೆಲವು ಚಿಂತನೆಗಳು ಇಲ್ಲಿವೆ.

❍ ಅರಫಾ ಮಂಚಿ

ಮತಾಂತರದ ಕುರಿತು ಹೊಸ ಗುಲ್ಲೊಂದನ್ನು ವ್ಯವಸ್ಥಿತವಾಗಿ ಹುಟ್ಟುಹಾಕಿ ಆಕರ್ಷಕಗೊಳಿಸಲಾಗಿದೆ. ಈ ಹೊಸದರಲ್ಲಿ ಮತಾಂತರದ ಸಿಂಧುತ್ವವನ್ನೇ ಪ್ರಶ್ನಿಸಿ ಅದರ ಅಸ್ತಿತ್ವಕ್ಕೆ ಸವಾಲೆಸೆಯಲಾಗಿದೆ. ಅಂದರೆ ಅದಕ್ಕೆ ಶಾಸ್ತ್ರ ಪರಂಪರೆ, ಸಂಪ್ರದಾಯ ಅಥವಾ ಕಾನೂನಿನಲ್ಲಿ ಅವಕಾಶವೆಲ್ಲಿದೆಯೆಂದು ಕೇಳಿ ಮರು ಚಿಂತನೆಗೆ ಕರೆ ಕೊಡಲಾಗಿದೆ. ಮತವೆನ್ನುವುದು ಆಯಾ ವ್ಯಕ್ತಿಗಳಿಗೆ ಸಂಬಂಧಿಸಿದ ತೀರಾ ವೈಯಕ್ತಿಕ ವಿಚಾರವೆಂದು ಸಂವಿಧಾನ ಉಲ್ಲೇಖಿಸಿವೆ. ಅಂತಹ ಖಾಸಗಿ ವಿಚಾರವೊಂದರ (ಮತಾಂತರ ಕೂಡಾ) ಅಗತ್ಯತೆಯನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಇದನ್ನು ಚರ್ಚಿಸುವ ಮುಂಚೆ ಈ ವಿಚಾರವನ್ನು ಗಮನಿಸೋಣ. ಯಾವುದೇ ನಾಗರಿಕತೆಯಲ್ಲಿ ಮತಗಳು ನೀಡಿರುವ ಕೊಡುಗೆಯಷ್ಟೇ ಮತಾಂತರಗಳೂ ಪ್ರಮುಖ ಪಾತ್ರವಹಿಸಿರುವ ವಿಶ್ವಮಾನ್ಯ ಐತಿಹಾಸಿಕ ಸತ್ಯವನ್ನು ನೆನಪಿಸಿಕೊಳ್ಳೋಣ. ವಿಶ್ವವೆನ್ನುವಾಗ ಭಾರತ ಕೂಡಾ ಇದಕ್ಕೆ ಹೊರತಾಗಿಲ್ಲ.

ಸೌದಿಯಲ್ಲಿ ಇಟಲಿಯ ರಾಯಭಾರಿಯಾಗಿದ್ದ ತೋರ್ಕೋಟೋ ಕಾರ್ಡ್‌ಲಿ ೨೦೦೨ ನವೆಂಬರ್ ೨೪ರಂದು ಇಸ್ಲಾಮ್ ಸ್ವೀಕರಿಸುತ್ತಾ 'ಮತವೆನ್ನುವುದು ಸಂಪೂರ್ಣ ಮನುಷ್ಯ ಮತ್ತು ದೇವನ ನಡುವಿನ ವೈಯಕ್ತಿಕ ವಿಚಾರವಾಗಿದೆ. ಅದರಲ್ಲಿ ಮತ್ತಾರಿಗೂ ಪ್ರವೇಶವಿಲ್ಲ' ಎಂದಿದ್ದರು. ನಿಜಕ್ಕೂ ಮತಾಂತರದ ಕುರಿತು ಅಪಸ್ವರವೆಬ್ಬಿಸುವವರಿಗೆ ಕಾರ್ಡ್‌ಲೀಯ ಮಾತುಗಳು ಮನನೀಯವಾಗಿದೆ. ಮನುಷ್ಯ ತನ್ನ ಆಧ್ಯಾತ್ಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಸ್ವಯಂ ಆಯ್ದುಕೊಳ್ಳುತ್ತಾನೆ. ಅದರಲ್ಲಿ ಯಾರೇ ಹಸ್ತಕ್ಷೇಪಿಸಿದರೂ ವ್ಯಕ್ತಿಯ ಮೂಲಭೂತ ಹಕ್ಕನ್ನೇ ಕಸಿದಂತಾಗುತ್ತದೆ.

ಕೆಲವರ ದೃಷ್ಟಿಯಲ್ಲಿ ಮತಗಳಿಗೆ ಮಹತ್ವವೇನಿಲ್ಲ. ಹಾಗಿದ್ದರೂ ರಾಷ್ಟ್ರದ ಜನರ ನಡುವೆ ಸಾಮರಸ್ಯವನ್ನು ಕೆಡಿಸುತ್ತದೆಂದು ಮತಾಂತರವನ್ನು ಈ ಜನರು ವಿರೋಧಿಸುತ್ತಾರೆ. ಇನ್ನು ಕೆಲವರ ದೃಷ್ಟಿಯಲ್ಲಿ ಮತವನ್ನು ಹುಟ್ಟು ನಿರ್ಧರಿಸುತ್ತದೆ. ಅಂದರೆ ಹೆತ್ತವರು ಅನುಸರಿಸುತ್ತಿರುವ ಮತಗಳೇ ಅವ(ಳ)ನದ್ದು. ಅವನಿ(ಳಿ)ಗೆ ಆಯ್ಕೆಗಳಿಲ್ಲ. ಪರಂಪರೆಯೇ ಅವನ(ಳ)ನ್ನು ಆಯ್ಕೆ ಮಾಡಿರುತ್ತದೆ. ಅಂದರೆ ಹಿಂದು ತಂದೆ ತಾಯಿಗಳಿಗೆ ಹುಟ್ಟಿದ ವ್ಯಕ್ತಿ ಯಾವುದೇ ಬೇರೆ ಮತಗಳನ್ನು ಅನುಸರಿಸಿದ ನಂತರವೂ ಅವನು(ಳು) ಹಿಂದುವೆನ್ನುವ ವಾದವನ್ನು ಮುಂಡಿದಲಾಗುತ್ತಿದೆ. ಹೇಗೆ ಹೆತ್ತ ತಂದೆ ತಾಯಿಗಳನ್ನು ಬದಲಿಸಲಾಗದೋ ಹಾಗೆಯೇ ವ್ಯಕ್ತಿಗೆ ಮತ ಕೂಡಾ ಬದಲಿಸಲಾಗದ ವಸ್ತುವೆಂಬ ವಿಶ್ಲೇಷಣೆ ನೀಡಲಾಗುತ್ತಿದೆ. ಅಂದರೆ ಇದನ್ನು ಈ ವಿಚಾರದಲ್ಲಿ ಒಳಿತು-ಕೆಡುಕು, ಗುಣಾವಗುಣಗಳನ್ನು ಚರ್ಚಿಸುವ, ವಿವೇಚಿಸುವ ಸ್ವಾತಂತ್ರ್ಯವನ್ನು ವ್ಯಕ್ತಿಯಿಂದ ಕಸಿದುಕೊಳ್ಳುವ ಸ್ಪಷ್ಟ ಸಂಚು ಎನ್ನಬೇಕು. ವ್ಯಕ್ತಿಯನ್ನು ಯಥಾಸ್ಥಿತಿಯಲ್ಲಿ

ಸೌಕರ್ಯಕ್ಕಾಗಿ ಇದೆ. ಆದ್ದರಿಂದ ಮತಾಂತರವೂ ಆತನಿಗೆ ಅವಶ್ಯಕವಾಗಿ ದೊರೆಯಲೇಬೇಕಿರುವ ಸೌಕರ್ಯವಾಗಿದೆ. ಜೆರೋಸ ಲೇಮ್‌ನಿಂದ ಮೊದಲ್ಗೊಂಡ ಕ್ರೈಸ್ತ ಧರ್ಮವಾಗಲಿ, ಅರೇಬಿಯಾದಿಂದ ಮೊದಲ್ಗೊಂಡ ಇಸ್ಲಾಮ್ ಆಗಲಿ, ಇಲ್ಲವೇ ಭಾರತದಲ್ಲೇ ಹುಟ್ಟಿದ ಬೌದ್ಧಧರ್ಮವಾಗಲಿ ವಿಶ್ವವ್ಯಾಪಿಯೆನ್ನಿಸಿರುವುದು ಮತಾಂತರಗಳ ಮೂಲಕವೇ. ಪರ್ಶಿಯಾದಿಂದ ಭಾರತಕ್ಕೆ ಆರ್ಯರ ಆಗಮನದೊಂದಿಗೆ ಇಲ್ಲಿನ ಮೂಲ ನಿವಾಸಿಗಳ ಬುಡಕಟ್ಟು ಸಂಸ್ಕೃತಿ ಹಿಂದೂ ಸಂಸ್ಕೃತಿಯಾಗಿ (ಮತ) ಬದಲಾದಾಗಲೂ ಇದೇ ಪ್ರಕ್ರಿಯೆ ನಡೆಯಿತೆನ್ನುವುದನ್ನು ಯಾರೂ ನಿರಾಕರಿಸುವಂತಿಲ್ಲ. ಇದನ್ನು ಸಮಾಜ ಶಾಸ್ತ್ರಜ್ಞ ಜಿ.ಎಸ್.ಘುರ್ಯೆಯವರ ಮಾತಿನಲ್ಲಿ ವಿಶ್ಲೇಷಿಸುವುದಾದರೆ, ವೇದಗಳಲ್ಲಿ ಹೇಳಲ್ಪಟ್ಟ ದ್ರಾವಿಡರು ವೈದಿಕರ ಕರೆಗೆ. ಓಗೊಟ್ಟಾಗ ಶೂದ್ರರಾದವರು ಮತ್ತು ನಿರಾಕರಿಸಿದವರನ್ನು ಅಸ್ಪೃಶ್ಯರೆಂದು ಕರೆಯಲಾಯಿತು. ಈಗಲೂ ಕೆಲವು ಅಸ್ಪೃಶ್ಯರಲ್ಲಿ ಮೂಲ ಬುಡಕಟ್ಟು ಸಂಸ್ಕೃತಿಯನ್ನು ಕಾಣಲು ಸಾಧ್ಯವಿದೆ.

ಈ ಮತಾಂತರಗಳು ನಮ್ಮಲ್ಲಿ ಹೇಗೆ ಪ್ರಸಕ್ತವಾದವು ಎನ್ನುವಾಗ ಅಸಮಾನತೆಯೇ ಅದರ ಮೂಲ ಕಾರಣವೆನ್ನಬೇಕು. ಮೇಲು ಕೀಳು, ಸ್ಪೃಶ್ಯ-ಅಸ್ಪೃಶ್ಯವೆಂಬ ತಾರತಮ್ಯವನ್ನು ವಿರೋಧಿಸಿ ಗೌರವದ ಬಾಳು ಬಾಳುವುದಕ್ಕಾಗಿ ಜನ ಬೇರೆ ಮತಗಳತ್ತ ವಲಸೆ ಹೋದರು. ಈಗಲೂ ಹೋಗುತ್ತಿದ್ದಾರೆ. ಸೈದ್ಧಾಂತಿಕವಾಗಿ ದುರ್ಬಲವಾದ ಮತ ಧರ್ಮಗಳು ತಮ್ಮ ತಪ್ಪಿನಿಂದಾಗಿಯೇ ಸೊರಗುತ್ತವೆ. ಯಾವುದು ಮನುಷ್ಯನಿಗೆ ಎಲ್ಲ ವಿಧದಿಂದ ತೆರೆದುಕೊಂಡಿದೆ, ಅದು ಬೆಳವಣಿಗೆ ಕಾಣುತ್ತಿದೆಯೆನ್ನುವಾಗ ಮತಾಂತರ ತಡೆಯುವುದಕ್ಕೆ ಬಲಾತ್ಕಾರದ ದಾರಿ ಹುಡುಕುವುದರ ಬದಲು ತಪ್ಪನ್ನು ತಿದ್ದಿಕೊಳ್ಳುವ ಬಗ್ಗೆ ಆಲೋಚಿಸುವ ಅಗತ್ಯವಿದೆ. ಒರಿಸ್ಸಾದಲ್ಲಿ ಸ್ಟೈನ್ಸ್ ಎನ್ನುವ ಪಾದ್ರಿಯನ್ನು ಸುಟ್ಟು ಕೊಂದು ಅಥವಾ ತಮಿಳ್ನಾಡಿನಂತೆ ಮತಾಂತರ ತಡೆ ಕಾನೂನನ್ನು ಇತರ ಕಡೆ ತಂದು ಮನುಷ್ಯನ ವ್ಯಕ್ತಿ ಸ್ವಾತಂತ್ರ್ಯದ ಹರಣ ಮಾಡಿಯಾದರೂ ತಮ್ಮ ಪರಮಾಧಿಕಾರ ಸ್ಥಾಪಿಸುವ ಕೆಲವರ ಕುಪ್ರಯತ್ನ ಎಗ್ಗಿಲ್ಲದೆ ಸಾಗಿದೆ. ಆದರೆ ಅದು ಬರೇ ಪ್ರಯತ್ನಕ್ಕಿಂತ ಹೆಚ್ಚಿನದ್ದನ್ನು ಸಾಧಿಸಲಾರದೆನ್ನುವುದು ಅಷ್ಟೇ ಸತ್ಯ. ಈಗ ಗುಜರಾತ್ ಸರಕಾರ ತಮಿಳ್ನಾಡಿನದ್ದೇ ಹೆಜ್ಜೆ ಹಾಕುತ್ತಿದೆ. ಸಂಸತ್ತಿನಲ್ಲಿ ಒಂದು ಖಾಸಗಿ ಮಸೂದೆಯ ಮಂಡನೆಯೂ ಆಗಿದೆ. ಕಳೆದ ಸಪ್ಟೆಂಬರ್‌ನಲ್ಲಿ ಮಧ್ಯ ಪ್ರದೇಶದ ರೆವೆರೆಂಡ್ ಸ್ಟೆನಿಲೂಸ್ ಪ್ರಕರಣದಲ್ಲಿ ತೀರ್ಪಿತ್ತ ಸರ್ವೋಚ್ಚ ನ್ಯಾಯಾಲಯ, ಬಲಾತ್ಕಾರದ ಹಾಗೂ ಆಮಿಷದ ಮತಾಂತರಗಳನ್ನು ಒಪ್ಪುವಂಥದ್ದಲ್ಲ ಎಂಬರ್ಥದ ವಿಶ್ಲೇಷಣೆ ನೀಡಿದೆ. ಆದರೆ ಅದೇ ವೇಳೆ ಈ ದೇಶದ ಪ್ರತಿ ನಾಗರಿಕನಿಗೂ ತನ್ನ ಮನಸಾಕ್ಷಿಯಂತೆ ನಡೆದುಕೊಳ್ಳುವ ಅಧಿಕಾರವಿದೆ. ಆದರೆ ಬೇರೆ ಮತದ ವ್ಯಕ್ತಿಗಳ ಹೇಳಿಕೆಯಂತಲ್ಲವೆಂದು ಸಂಬಂಧಿತ ವ್ಯಕ್ತಿಗಳಿಗೆ ಸ್ವಯಂ ನಿರ್ಣಾಯಾಧಿಕಾರವನ್ನು ಬಿಟ್ಟು ಕೊಟ್ಟಿದೆ. ಇಷ್ಟನ್ನೇ ಮತಾಂತರ ವಿರುದ್ಧದ ಗೆಲುವೆಂದು ಕೆಲವರು ಭಾವಿಸುತ್ತಿದ್ದಾರೆ.

ಬಲಾತ್ಕಾರ ಹಾಗೂ ಆಮಿಷದ ಮತಾಂತರಗಳನ್ನು ನ್ಯಾಯಾಲಯ ಮಾತ್ರವಲ್ಲ, ಯಾವುದೇ ಧರ್ಮ ಒಪ್ಪುವುದಿಲ್ಲ ಎಂಬ ಸತ್ಯಕ್ಕೆ ಈ ರೀತಿ ಪ್ರಚಾರ ಮಾಡುವವರು ಅಜ್ಞಾತವಾಗಿಯೇ ಇದ್ದಾರೆ. ಮತಗಳನ್ನು ತಾಯಿಗೆ ಹೋಲಿಸಬಹುದು. ನೈಜ ಸತ್ಯಮತವೊಂದು ಆಶ್ರಯಿಸಿ ಬಂದ ಎಲ್ಲರನ್ನು ತನ್ನ ಕಂದ(ಸೃಷ್ಟಿ)ನೆಂದು ಮಡಿಲಲ್ಲಿರಿಸುತ್ತದೆಯೇ ಹೊರತು ಬಲಾತ್ಕಾರವಾಗಿ ಯಾರನ್ನೂ ಅಕ್ರಮವಾಗಿ ಕೂಡಿ ಹಾಕುವುದಿಲ್ಲ. ಅದು ಮಾನವರಿಗೆ ತನ್ನ ಆಶಯವನ್ನು ತಲುಪಿಸಲು ಆದೇಶಿಸುತ್ತದೆಯೇ ಹೊರತು ಆಕ್ರಮಿಸಲು ಹೇಳುವುದಿಲ್ಲ. ಇಂತಹ ಧರ್ಮ ಪ್ರಚಾರ ಕಾರ್ಯಕ್ಕೆ ಸಾಂವಿಧಾನಿಕ ಅನುಮತಿಯೂ ಇದೆ. ಕೆಲವು ವಿದೇಶಿ ರಾಷ್ಟ್ರಗಳಲ್ಲೂ ಧರ್ಮ ಪ್ರಚಾರ ಕಾನೂನು ಬದ್ಧವಾಗಿದೆ. ಭಾರತದ ವೈದಿಕ ಯತಿಗಳು ಇಂಗ್ಲೆಂಡ್ ಅಮೆರಿಕಾಗಳಲ್ಲಿ ದೇವಸ್ಥಾನದಂಥ ಆರಾಧನಾಲಯಗಳನ್ನು ಸ್ಥಾಪಿಸಿದ್ದಾರೆ. ಅಥವಾ ಆ ರಾಷ್ಟ್ರದ ಮೂಲ ನಿವಾಸಿಗಳಲ್ಲಿ ಅನುಯಾಯಿಗಳನ್ನು ಹೊಂದಿದ್ದಾರೆ ಎನ್ನುವುದು ಈ ಧರ್ಮ ಪ್ರಚಾರದಿಂದ ಅಥವಾ ಮತಾಂತರಗಳಿಂದ ಸಾಧ್ಯವಾಗಿದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಮಾತಾ ಅಮೃತಾನಂದಮಯಿಯಂತವರು ವಿಶ್ವದುದ್ದಗಲಕ್ಕೂ ಜನಪ್ರಿಯರಾಗಿರುವುದು ತಮ್ಮ ತತ್ವ ಪ್ರಚಾರಗಳಿಂದ.

ಮತವೊಂದು ಹಲವರಿಗೆ ತನ್ನದೇ ಆದ ಕಾರಣಗಳಿಂದ ಬೇಡವೆನ್ನಿಸಬಹುದು. ಸಂವಿಧಾನ ಕರ್ತೃ ಬಾಬಾ ಸಾಹೇಬ ಅಂಬೇಡ್ಕರರು ೧೯೫೬ರಲ್ಲಿ ತಮ್ಮ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದರು. ಅವರಿಗೆ ತಾವು ಮೊದಲಿದ್ದ ಧರ್ಮದಲ್ಲಿ ಎಷ್ಟು ಅಸಹನೆಯಿತ್ತು ಎನ್ನುವುದನ್ನು ಮನುಸ್ಮೃತಿ ದಹಿಸಿ ತೋರ್ಪಡಿಸಿದರು. ಇತ್ತೀಚೆಗೆ ಇದೇ ರೀತಿ ಇದೆಯೆನ್ನಲಾದ ಅರುಣ್ ಶೌರಿಯವರ 'ವರ್‌ಶಿಪ್ ಫಾಲ್ಸ್ ಗಾಡ್ಸ್' ಎಂಬ ಕೃತಿಯನ್ನು ದಲಿತರು ದಹಿಸಿದ್ದನ್ನು ಕೂಡಾ ಇಲ್ಲಿ ನೆನಪಿಸಿಕೊಳ್ಳಬಹುದು. ಇಂಥಹ ಅಸಹನೆಗಳೇ ಮತಾಂತರಕ್ಕೆ ಪೂರಕವಾದ ಕಾರಣಗಳೆನ್ನುವುದನ್ನು ಅರಿಯಬೇಕಾಗುತ್ತದೆ. ಜಗದ್ವಿಖ್ಯಾತ ಕವಯತ್ರಿ ಕಮಲದಾಸ್ ಹಲವು ವರ್ಷಗಳ ಅರಸಾಹಸದ ನಂತರ ಇಸ್ಲಾಮ್ ಮತ ಸ್ವೀಕರಿಸಿ ಮಾನಸಿಕ ಸ್ವಾಸ್ಥ್ಯ ಕಂಡೆನೆಂದು ವಿವರಿಸುತ್ತಾರೆ. ಅಮೆರಿಕಾದ ಪಾಪ್ ಗಾಯಕ ಕ್ಯಾಟ್ ಸ್ಟೀವನ್ಸ್ ಯೂಸುಫ್ ಇಸ್ಲಾಲ್ ಆಗಿ ಧರ್ಮ ಪ್ರಚಾರದಲ್ಲಿ ತೊಡಗಿರುವುದು, ಇತ್ತೀಚೆಗಿನ ವರದಿಯಂತೆ ಪಾಪ್ ಗಾಯಕ ಮೈಕಲ್ ಜಾಕ್ಸನ್ ಇಸ್ಲಾಮ್‌ನ ಬಗ್ಗೆ ಒಲವು ತೋರಿಸಿರುವುದು ತಮ್ಮ ಆಧ್ಯಾತ್ಮಿಕ ಹುಡುಕಾಟದಲ್ಲಿ ಗುರುತಿಸಿಕೊಂಡ ಮೋಕ್ಷದ ದಾರಿದ ಎನ್ನುವುದು ಗಮನಿಸುವಾಗ ಮತಾಂತರವನ್ನು ನಿರ್ಬಂಧಿಸಿ ತಡೆಯಬಹುದೆನ್ನುವುದು ಕನಸಿನ ಮಾತು.

ಹಿಟ್ಲರ್‌ನಿಂದಲೂ ಅಂಥಾದ್ದೊಂದು ಸಾಧನೆಯನ್ನು ಮಾಡಲಾಗಲಿಲ್ಲ, ಫರೋವನಿಂದಲೂ ಸಾಧ್ಯವಾಗಲಿಲ್ಲ ಅನ್ನುವಾಗ ಆಧುನಿಕ ಆಡಳಿತಗಾರರು ಸಾಧಿಸುವುದು ಬರೇ ಅಷ್ಟರಲ್ಲಿಯೇ ಉಳಿಯುತ್ತದೆ. ಎಷ್ಟೇ ಕಷ್ಟ ಬಂದರೂ ಮಾನವೋನ್ನತಿ (ಆಧ್ಯಾತ್ಮಿಕ ಏಳಿಗೆ)ಗೆ ತುಡಿಯುವ ಕ್ರಿಯಾಶೀಲ ವಿಚಾರಶೀಲ ವ್ಯಕ್ತಿ ತನ್ನ ಆಧ್ಯಾತ್ಮಿಕ ದಾಹವನ್ನು ತಣಿಸುವ ದಾರಿಯನ್ನು ಹುಡುಕಿ ಸಾಗಿಯೇ ಸಾಗುತ್ತಾನೆ. ತನ್ನ ಆತ್ಮಾನುಭವಕ್ಕೆ ಯಾವುದು ಸರಿಯೆನ್ನಿಸುತ್ತದೋ ಅದನ್ನು ಅನುಸರಿಸಿಯೇ ತೀರುತ್ತಾನೆ. ಆದ್ದರಿಂದ ಯಾವುದೇ ಅಡೆ ತಡೆಯ ಹೊರತಾಗಿಯೂ ಜಗತ್ತಿನ ಅಸ್ತಿತ್ವ ಇರುವವರೆಗೆ ಮತಾಂತರ ಜೀವಂತವಿದ್ದೇ ಇರುತ್ತದೆ ಎಂಬುದು ನಿರ್ವಿವಾದ.

(ಸೌಜನ್ಯ: ಸನ್ಮಾರ್ಗ)

ಪ್ರಧಾನಿಗೊಂದು ಪತ್ರ :

(೨೪ನೇ ಪುಟದಿಂದ)

ಅನಾಗರಿಕ ಐಡಿಯಾಲಜಿಯ ಬಗ್ಗೆ ಮಾಧ್ಯಮವು ಭಾರತೀಯ ಕೈಗಾರಿಕೋದ್ಯಮಿಗಳನ್ನು ಬಯಲುಗೊಳಿಸಬೇಕು. ಪರಿವರ್ತನಾಶೀಲ ಸಮಾಜವು ಭಾರತ ಗಣರಾಜ್ಯದ ಹಿತಾಸಕ್ತಿಗನುಗುಣವಾಗಿರಬೇಕು.

ಆದ್ದರಿಂದ, ಸಹಮತ ಕಟ್ಟುವ ನಿಟ್ಟಿನಲ್ಲಿ ಮಾಧ್ಯಮ ಮತ್ತು ಶಿಕ್ಷಣರಂಗವು ಮತ್ತಷ್ಟು ವೈರತ್ವವನ್ನು ಸಾಧಿಸಬಹುದು. ಶಿಕ್ಷಣರಂಗದ ಪ್ರಕಾರ ಗಣರಾಜ್ಯವೆಂದರೆ ಅನುದಾನ ನೀಯುವ ಸಂಸ್ಥೆಯಷ್ಟೇ. ಅನುದಾನ, ಮತ್ತಷ್ಟು ಅನುದಾನಗಳನ್ನು ನೀಡಲಾಗುತ್ತಿದೆಯೇ ಹೊರತು, ಶುದ್ಧ ವಿಜ್ಞಾನದಲ್ಲಾಗಲಿ ಅಥವಾ ಸಾಮಾಜಿಕ ವಿಜ್ಞಾನದಲ್ಲಾಗಲಿ ಯಾವುದೇ ರೀತಿಯ ಆವಿಷ್ಕಾರ ಮಾತ್ರ ಹೊರಹೊಮ್ಮುವುದಿಲ್ಲ. ಭಾರತೀಯ ಗಣರಾಜ್ಯವೆಂಬುದು ಜಾತಿ ಸಮಾಜವನ್ನು ನಾಗರಿಕ ಸಂಸ್ಥೆಯಲ್ಲವೆಂದೇ ಶಿಕ್ಷಣರಂಗವು ನಂಬುತ್ತದೆ. ಉದ್ಯಮ, ಮಾಧ್ಯಮ, ಶೈಕ್ಷಣಿಕ ವಲಯಗಳು ಭಯಂಕರ ಮತ್ತಿನಿಂದ ಕೂಡಿದ್ದು ವರ್ಣವ್ಯವಸ್ಥೆಯನ್ನು ನಾಗರಿಕ ಸಮಾಜವಾಗಿ ಪರಿವರ್ತಿಸುವ ಗಣರಾಜ್ಯದ ಉದ್ದೇಶವನ್ನು ಅಪಹರಿಸಲು ತುದಿಗಾಲಲ್ಲಿ ನಿಂತಿದೆ. ಆದ್ದರಿಂದ ರಾಜ್ಯಾಂಗವು, ಮಾಧ್ಯಮ ಮತ್ತು ಶೈಕ್ಷಣಿಕ ವಲಯವನ್ನು ಇಂದಿರಾಗಾಂಧಿಯಂತೆ ದಂಡಿಸಬೇಕಾಗಿದೆ. ಯಾಕೆಂದರೆ ಇವೆರಡು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಸಂಸ್ಥೆಗಳಾಗಿವೆ. ರಾಜ್ಯಾಂಗ ಅಥವಾ ಸರ್ಕಾರದ ವಿರುದ್ಧ ಮಾಧ್ಯಮ ಬಿದ್ದಲ್ಲಿ, ಅದಕ್ಕಾಗಿ ಹೆಚ್ಚು ತಲೆಕೆಡಿಸಿ ಕೊಳ್ಳಬೇಕಾಗಿಲ್ಲ, ಕೆಲವೊಮ್ಮೆ ಮಾಧ್ಯಮದಿಂದ ದೂಷಿತರಾದವರಿಗೆ ಅತ್ಯಂತ ಬೆಂಬಲವೂ ದೊರೆತಂತಾಗಿ ಜನಮನ್ನಣೆಯನ್ನು ಗಳಿಸಿಕೊಡುತ್ತದೆ. ಹೀಗಿರುವಲ್ಲಿ ಸರ್ಕಾರವು ಈ ಕೂಡಲೇ ದಲಿತ ವೈವಿಧ್ಯತಾ ನಿಗಮವನ್ನು ಸ್ಥಾಪಿಸಿ, ದಲಿತರನ್ನು ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ಒಳಗೊಳ್ಳುವಂತೆ ಗಮನಹರಿಸಬೇಕಾಗುತ್ತದೆ. ಹಲವು ಖಾಸಗಿ ರಂಗಗಳು ರಾಜ್ಯಾಂಗದೊಡನೆ ಸರಬರಾಜು/ ಡೀಲರ್‌ಶಿಪ್ ಪಾಲು ದಾರಿಕೆಯಿಂದಾಗಿ ಮುಂಚೂಣಿಗೆ ಬಂದವು. ಇಂಥ ಖಾಸಗಿ ವಲಯದ ಸರಬರಾಜುದಾರರಿಗೆ/ ಗುತ್ತಿಗೆದಾರರಿಗೆ ರಾಜ್ಯಾಂಗದ ಬಿಲಿಯನ್‌ಗಟ್ಟಲೆ ಹಣವು ಸಂದಾಯವಾಗುತ್ತಿರುತ್ತದೆ. ಕಾರಣ ರಾಜ್ಯಾಂಗವು ಸರಕುಗಳು ಮತ್ತು ಸೇವೆಗಳನ್ನು ಕೊಳ್ಳುವ ಗ್ರಾಹಕನಾಗಿದೆ. ಹಾಗಾದರೆ ದಲಿತರು ರಾಜ್ಯಾಂಗದ ಖಜಾನೆಯ ಮೇಲೆ ಯಾವುದೇ ಹೊರೆ ಬೀಳದಂತೆ ತಮ್ಮ ಪಾಲನ್ನು ಏಕೆ ಪಡೆದುಕೊಳ್ಳಬಾರದು? □

ಮಹಿಳೆ

ಮಹಿಳೆ ಮತ್ತು ಸಾರ್ವಜನಿಕ ಜೀವನ

ಮಹಿಳೆಗೆ ತನ್ನದೇ ಆದ ಸಾರ್ವಜನಿಕ ಬದುಕು ಎಂಬುದಿದೆಯೇ? ಅಥವಾ ಅದು ಪುರುಷ ರೂಪಿತ ಸಾರ್ವಜನಿಕ ಜೀವನವೇ? ಪುರುಷ ರೂಪಿತ ಸಾರ್ವಜನಿಕ ಜೀವನವನ್ನು ತನ್ನದೆಂದು ಭಾವಿಸಿಕೊಂಡು ತಾನು ಸ್ವತಂತ್ರವೆಂದು ಭಾವಿಸಿದ್ದಾಳೆಯೇ ಅಥವಾ ತನ್ನದೇ ಆದ ಸಾರ್ವಜನಿಕ ಬದುಕನ್ನು ಕಟ್ಟುವ ಪ್ರಯತ್ನದಲ್ಲಿದ್ದಾಳೆಯೇ? ಸಾರ್ವಜನಿಕ ಬದುಕಿನಲ್ಲಿ ಮಹಿಳೆ ಸ್ವಾಯತ್ತತೆ ಕಂಡುಕೊಳ್ಳುವ ಬಗೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಅಡಕವಾಗಿದೆ.

○ ಕೆ. ವಿದ್ಯಾ

ಮಹಿಳೆ ಎಂದರೆ ಯಾರು? ಮತ್ತು ಯಾವ ಮಹಿಳೆ ಇಂದು ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ ಎಂಬುದನ್ನು ನಾನಿಲ್ಲಿ ಮೊದಲಿಗೆ ಸ್ಪಷ್ಟಪಡಿಸಬೇಕಾಗುತ್ತದೆ. ಮಹಿಳೆಯನ್ನು ಕೇವಲ ದೈಹಿಕ ಮತ್ತು ಜೈವಿಕ ಆಧಾರಗಳಿಂದ ಮಹಿಳೆ ಎಂದು ಕರೆಯಲಾಗುವುದಿಲ್ಲ. ಮಹಿಳೆ ಪುರುಷ ಸಮಾಜದಲ್ಲಿ ರೂಪುಗೊಂಡವಳು. ಜೊತೆಗೆ ಆಕೆಯ ಆಲೋಚನೆ, ಭಾವನೆ, ಕನಸುಗಳು ಅವಳದಲ್ಲ. ಅವು ಕೂಡಾ ಅಲ್ಲಿಂದಲೇ ರೂಪು ಪಡೆದಿವೆ. ಹೇರಿಕೆ ಮತ್ತು ಸಾಮಾಜೀಕರಣ ಪ್ರಕ್ರಿಯೆಯಿಂದಾಗಿ ಅವಳು ಅವುಗಳನ್ನು ಕ್ರಮೇಣ 'ಸಹಜ' ಎಂದು ಒಪ್ಪಿಕೊಂಡು ಬಿಟ್ಟಿದ್ದಾಳೆ. ಮಾತ್ರ ವಲ್ಲದೆ ಸಾರ್ವಜನಿಕ ಜೀವನದಲ್ಲಿ ಮೇಲ್ಜಾತಿ, ಶ್ರೀಮಂತ ಹಾಗೂ ಮೇಲ್‌ಮಧ್ಯಮವರ್ಗದ ಮಹಿಳೆಯರೇ ಕಾಣಿಸಿ ಕೊಳ್ಳುತ್ತಿರುವವರು ಎಂಬುದನ್ನು ಗಮನಿಸಬೇಕಾಗಿದೆ.

ಸಾರ್ವಜನಿಕತೆಯು ಕೂಡಾ ಜಾತಿ, ವರ್ಗ ಮತ್ತು ಪುರುಷತ್ವದ ಮೂಲಕ ರೂಪುಗೊಂಡ ಸಂಘಟಿತ ವ್ಯವಸ್ಥೆಯೇ ಆಗಿದೆ ಎಂಬುದು ಗಮನಿಸಬೇಕಾದ ವಿಚಾರವಾಗಿದೆ. ಶಾಲೆ, ಕಾಲೇಜು, ಹೊಟೇಲು, ಕಛೇರಿ, ಸಂಘಸಂಸ್ಥೆಗಳು, ರಾಜಕೀಯ-ಇವೆಲ್ಲ ಸಾರ್ವಜನಿಕ ಅಧಿಕಾರ ಕ್ಷೇತ್ರಗಳಾಗಿವೆ. ಈ ಸಾರ್ವಜನಿಕ ಕ್ಷೇತ್ರಗಳು ಆಧುನಿಕತೆಯಿಂದ ರೂಪುಗೊಂಡಿದ್ದು ಒಂದು ರೀತಿಯ ಮುಕ್ತ ಅವಕಾಶ(secular)ವನ್ನು ಒದಗಿಸುತ್ತದೆ ಎಂದು ನಂಬಲಾಗಿದೆ.

ಇಂಥ ಸಂದರ್ಭದಲ್ಲಿ ಈ ಕ್ಷೇತ್ರಗಳಿಗೆ ಸಾಮಾಜಿಕ ಬದಲಾವಣೆ ಹಾಗೂ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಹಿಳೆ ಪ್ರವೇಶಿಸಲೇಬೇಕಾದ ಅನಿವಾರ್ಯತೆ ಇದೆ. ಮಹಿಳೆ ಈ ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದ್ದಾಳೆ. ಸಾಮಾಜಿಕ ನ್ಯಾಯ,

ನಾನು, ಮೇಲೆ ಹೇಳಿದ ಮಹಿಳೆ ಇಂದು ಎಲ್ಲ ಕ್ಷೇತ್ರಗಳಿಗೂ ಪ್ರವೇಶಿಸುತ್ತಿದ್ದಾಳೆ. ಈ ಮೂಲಕ ತನ್ನ ವ್ಯಕ್ತಿತ್ವವನ್ನು ಕಂಡು ಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ಈ ಮಹಿಳೆ ಮನೆಯೊಳಗೆ ಬಂಧಿಯಾಗಲು ಬಯಸುವುದಿಲ್ಲ, ತನ್ನ ಕ್ರಿಯಾಶೀಲತೆಯನ್ನು ಹೊರಜಗತ್ತಿನಲ್ಲಿ ಸಾದರಪಡಿಸುವ ಪ್ರಯತ್ನ ಅವಳದು. ಈ ಮಹಿಳೆಯನ್ನು (ಸಣ್ಣ ಗುಂಪನ್ನು) ದೃಷ್ಟಿಯಲ್ಲಿಟ್ಟುಕೊಂಡು ಇಡೀ ಮಹಿಳಾ ಸಮುದಾಯವನ್ನು ಸಾರ್ವತ್ರೀಕರಿಸಿಕೊಂಡು ವಿವರಿಸಿಕೊಳ್ಳಲು ಖಂಡಿತಾ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯ ಸಾರ್ವಜನಿಕ ಜೀವನದಲ್ಲಿನ ಪಾತ್ರ ಏನು? ಈ ಸಂದರ್ಭದಲ್ಲಿ ಆಕೆ ಎದುರಿಸುತ್ತಿರುವ ಸಮಸ್ಯೆಗಳಾವುವು ಎಂಬುದನ್ನು ಅರಿತುಕೊಳ್ಳವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸಾರ್ವಜನಿಕ ಜೀವನ ಎಂದರೆ ವ್ಯಕ್ತಿಯೊಬ್ಬ(ಳು) ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು, ವ್ಯಕ್ತಿತ್ವ ಅರಳಿಸಿಕೊಳ್ಳಲು ನಡೆಸುವ ಸಂವಾದ. ಇಲ್ಲಿ ಸಮಾನ ಸ್ವಾತಂತ್ರ್ಯವನ್ನು ನೀಡುವ, ಪಡೆಯುವ, ಗೌರವಿಸುವ ಶಕ್ತಿ ಇಂದು ಮಹಿಳೆಗೆ ಮಾತ್ರವಿರುವುದು. ಆದ್ದರಿಂದ ಇಂದು ಮಹಿಳೆ ಸಾರ್ವಜನಿಕ ಜೀವದಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಬೇಕಾದ ಸಂದಿಗ್ಧ ಸ್ಥಿತಿ ನಿರ್ಮಾಣವಾಗಿದೆ. ಮಹಿಳೆ ಸಾರ್ವಜನಿಕ ಜೀವನದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ ಎನ್ನುವಾಗಲೂ ಅಂಕಿ-ಅಂಶಗಳ ಕಡೆಗೆ ಗಮನಹರಿಸಿದಾಗ ನಮಗೆ ನಿರಾಶೆಯಾಗುತ್ತದೆ. ಮಹಿಳಾ ಜನಸಂಖ್ಯೆಯ ಶೇ. ೫ರಷ್ಟನ್ನೂ ಇದು ಮೀರಿಲ್ಲದಿರುವುದು ಮಹಿಳಾ ಸ್ಥಿತಿಗತಿಯ ಬಗೆಗಿನ ಕನ್ನಡಿಯಾಗಿದೆ.

ಇಡೀ ಜಗತ್ತಿನಲ್ಲಿ ಶೇ. ²/₃ ರಷ್ಟು ಶ್ರಮ ಮಹಿಳೆಯದ್ದು. ಆದಾಯವನ್ನು ನೋಡಿದಾಗ, ಇದು ಪುರುಷರ ಆದಾಯಕ್ಕಿಂತ ತುಂಬಾ ಕಡಿಮೆಯಿದೆ ಎಂಬುದು ಗಮನಿಸತಕ್ಕ ವಿಚಾರವೇ. ಇಂದು ಕೂಡಾ ಗ್ರಾಮಾಂತರ ಪ್ರದೇಶದಲ್ಲಿ ಅಸಂಖ್ಯಾತ ಹೆಣ್ಣು ಮಕ್ಕಳು ಶಿಕ್ಷಣದಿಂದಲೇ ವಂಚಿತರಾಗಿದ್ದಾರೆ. ಈ ಪರಿಸ್ಥಿತಿಯನ್ನು ಅವಲೋಕಿಸಿದಾಗ, ೨೧ನೇ

ಶತಮಾನದ ವೈಜ್ಞಾನಿಕ ಯುಗದಲ್ಲಿ ಬದುಕತ್ತಿದ್ದೇವೆ, ಆಧುನೀಕರಣದ ಪ್ರಕ್ರಿಯೆಗೆ ಒಳಗಾಗಿದ್ದೇವೆ ಎಂಬುದು ಭ್ರಮೆಯೇನೋ ಎಂದೆನ್ನಿಸುತ್ತಿದೆ. ಯಾಕೆಂದರೆ ಮಹಿಳೆಯ ತೊಡಗಿಸಿಕೊಳ್ಳುವಿಕೆ ನಂಬಿಲಸಾಧ್ಯವಾಗುವಷ್ಟು ಕಡಿಮೆ ಮಟ್ಟಗಿದೆ.

ಇಂಥ ಪರಿಸ್ಥಿತಿಯಲ್ಲಿ ಸಾರ್ವಜನಿಕ ಜೀವನದಲ್ಲಿ ಮಹಿಳೆಯ ಸಂಪೂರ್ಣ ತೊಡಗಿಸಿಕೊಳ್ಳುವಿಕೆಯನ್ನು ಅರ್ಥೈಸುವುದಾದರೂ ಹೇಗೆ? ಮೇಲು ಜಾತಿಯ, ಮೇಲು ವರ್ಗದ ಸ್ತ್ರೀಯರು ಮಾತ್ರ ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿರುವವರು. ಕೆಳವರ್ಗ, ಕೆಳಜಾತಿಯ/ಹಿಂದುಳಿದ ಜಾತಿಯ ಮಹಿಳೆಯರಿಗೆ ಇಂಥ ಅವಕಾಶಗಳು ಇಂದು ಕೂಡಾ ಲಭ್ಯವಾಗುತ್ತಿಲ್ಲ. ಉದಾಹರಣೆಗೆ ಶ್ರೀಮತಿ ಇಂದಿರಾ ಗಾಂಧಿ ದೇಶದ ಪ್ರಧಾನಿಯಾದ ಹಾಗೇ ಶೂದ್ರ/ದಲಿತ ಮಹಿಳೆಯೊಬ್ಬಳಿಗೆ ಪ್ರಧಾನಿಯಾಗುವ ಅವಕಾಶ ಭಾರತದಲ್ಲಿ ಸಿಗುವ ಸಾಧ್ಯತೆ ತುಂಬಾ ಕಡಿಮೆ. ಶ್ರೀಮತಿ ಇಂದಿರಾಗಾಂಧಿ ಶ್ರೀಮಂತ, ಮೇಲ್ಜಾತಿ ಕುಟುಂಬದಲ್ಲಿ ಜನಿಸಿದವಳು. ಪ್ರಧಾನಿ ದಿವಂಗತ ಶ್ರೀ ಜವಾಹರಲಾಲ್‌ರವರ ಮಗಳು. ಈ ಕಾರಣದಿಂದ ಅನಾಯಾಸವಾಗಿ ಅವಕಾಶ ಸಿಕ್ಕಿತು. ಇಂಥ ಅವಕಾಶ ಎಷ್ಟೇ ಪ್ರಯತ್ನಪಟ್ಟರೂ, ಬಡ, ಶೂದ್ರ/ದಲಿತ ಮಹಿಳೆಗೆ ಸಿಗಬಹುದೇ? ಸಿಕ್ಕಿದರೂ ಮೇಲ್ಜಾತಿ/ಮೇಲುವರ್ಗಗಳ ರಾಜಕೀಯ ತಂತ್ರದ ಫಲವಾಗಿ ಸಿಗಬೇಕಾಗುತ್ತದೆ. ತಾವು secularistಗಳು ಎಂಬುದನ್ನು ತೋರಿಸಿಕೊಡಲು, ಚುನಾವಣಾ ರಾಜಕೀಯಕ್ಕೆ ದಾಳವಾಗಿ ಬಳಸಿಕೊಳ್ಳುತ್ತಾರೆ. ಜೊತೆಗೆ ಇಂಥವರನ್ನು ರಬ್ಬರ್‌ಸ್ಟಾಂಪುಗಳಾಗಿ ಉಪಯೋಗಿಸಿಕೊಳ್ಳಲಾಗುತ್ತದೆ. ರಾಜಕೀಯದಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವಲ್ಲಿ ಆಗುತ್ತಿರುವ ವಾದ ವಿವಾದಗಳು, ವಿಳಂಬವನ್ನು ಗಮನಿಸಿದರೆ ಪರಿಸ್ಥಿತಿಯ ಗಂಭೀರತೆಯ ಅರಿವಾಗುತ್ತದೆ. ಆದ್ದರಿಂದ ಎಲ್ಲ ಮಹಿಳೆಯರಿಗೆ ಈ ಅವಕಾಶಗಳು ಲಭ್ಯವಾಗುವುದಾದರೂ ಹೇಗೆ? ಈ ಬಗ್ಗೆ ಚಿಂತನೆ ನಡೆಸಬೇಕಾಗುತ್ತದೆ. ಹೀಗಿರುವಲ್ಲಿ ಈ ಗ್ರಹೀತದ secularist ಧೋರಣೆಯನ್ನು ಹಾಗೂ ಸಾರ್ವತ್ರೀಕರಿಸುವಿಕೆಯನ್ನು ನಿರ್ದಿಷ್ಟಗೊಳಿಸಿ ಗ್ರಹಿಸಿದಲ್ಲಿ ಮಹಿಳೆಯ ಸ್ವಾಯತ್ತತೆ ಬಗ್ಗೆ ತಿಳಿಯಬಹುದೆಂಬುದು ನನ್ನ ನಂಬಿಕೆ.

ಸಾರ್ವಜನಿಕ ಜೀವನದಲ್ಲಿ ಇಂದು ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಅವಳ ಆಗಮನವನ್ನು ಪುರುಷ ಸಮಾಜ ಸುಲಭವಾಗಿ ಸ್ವೀಕರಿಸಿಲ್ಲ. ಮಹಿಳೆ ಸಾರ್ವಜನಿಕ ಕ್ಷೇತ್ರಗಳಿಗೆ ಕಾಲಿಡುವಾಗ ಈ ಮೊದಲೇ ಆ ಕ್ಷೇತ್ರವನ್ನು ಆಕ್ರಮಿಸಿಕೊಂಡಿರುವವರ (ಪುರುಷರ) ಸ್ಥಾನವನ್ನು ಪಡೆದುಕೊಂಡಾಗ ಅವರಿಗೆ ತಳಮಳವಾಗುವುದು ಸಹಜ. ಅದನ್ನು ಬಿಟ್ಟುಕೊಡುವ ಸಮಯದಲ್ಲಿ ಆಗುವ ಸಂಕಟ, ಕಳಕೊಳ್ಳುವ ಅನುಭವವು ಆ ಕ್ಷೇತ್ರವನ್ನು ಪ್ರವೇಶಿಸಿದ ಮಹಿಳೆಯ ಮೇಲೆ ಯಾವುದೇ ರೂಪದಲ್ಲಿ ಬಾಣವಾಗಿ ಎರಗಬಹುದು. ಇತ್ತೀಚೆಗೆ ಮಹಿಳಾ ಮೀಸಲಾತಿಯಿಂದಾಗಿ ಮಂಡಲ ಪಂಚಾಯತ್, ತಾಲೂಕು ಬೋರ್ಡುಗಳಲ್ಲಿ ಅಧ್ಯಕ್ಷ, ಸದಸ್ಯ ಸ್ಥಾನವನ್ನು ಪಡೆದ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳು ಮತ್ತು ನಡೆದಿರುವ ಕೊಲೆಗಳನ್ನು ಗಮನಿಸಬಹುದು. ಇವುಗಳನ್ನು ತುಂಬಾ ಸರಳೀಕರಿಸಿ ನೋಡಲಾಗುತ್ತದೆ. ಇಲ್ಲಿ ರಾಜಕೀಯ ಸಂಕೀರ್ಣತೆಯೊಂದಿಗೆ ಪುರುಷಾಧಿಪತ್ಯದ ಭೀಕರತೆಯನ್ನು ನೋಡಬೇಕಾಗುತ್ತದೆ. ಮಹಿಳೆಯ ಪ್ರವೇಶವನ್ನು ನೇರವಾಗಿ ತಿರಸ್ಕರಿಸಲಾಗದೆ, ಬೇರೆ ರೂಪದಲ್ಲಿ ಆಕೆಯ ಮೇಲೆ ಒತ್ತಡ ಹೇರಿ ಆಕೆಯನ್ನು ಸಾರ್ವಜನಿಕ ಜೀವನದಿಂದ ದೂರವಿರಿಸುವ ತಂತ್ರವಿದು. ಮಹಿಳೆ (ಶೂದ್ರ/ದಲಿತ) ಸಾರ್ವಜನಿಕ ಜೀವನಕ್ಕೆ ಕಾಲಿಡುತ್ತಿರುವುದು ಇದೇ ಮೊದಲ ಬಾರಿಗೆ. ಸಾರ್ವಜನಿಕ ಜೀವನದ ಅನುಭವವೇ ಇಲ್ಲದಿರುವುದರಿಂದ ಆಕೆಯ ದ್ವಂದ್ವ ಸ್ಥಿತಿಯನ್ನು ಅರಿತುಕೊಳ್ಳುವ ಪ್ರಯತ್ನವನ್ನು ಪುರುಷ ಸಮಾಜ ಮಾಡುತ್ತಿಲ್ಲ ಎಂಬುದು ಖೇದಕರ. ಸಾಮಾನ್ಯವಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ ಮಹಿಳೆಯನ್ನು ಆಕೆಯ ಚಾರಿತ್ರ್ಯವಧೆಮಾಡುವ ಮೂಲಕ, ಆಕೆಯ ಕ್ರಿಯಾಶೀಲತೆಯನ್ನು ನಾಶಗೊಳಿಸಲು ಪ್ರಯತ್ನಿಸುವುದು ಸಾಮಾನ್ಯ ಸಂಗತಿಯೆಂಬಂತಾಗಿದೆ. ಮಹಿಳೆ ಮನೆಯೊಳಗಿದ್ದರೆ ಗೃಹಿಣಿ, ಪತಿವ್ರತೆ; ಆಕೆ ಹೊರಗಿನ ಸಮಾಜಕ್ಕೆ ಕಾಲಿಟ್ಟಾಗ ಆಕೆಯನ್ನು ಒಂದು ರೀತಿಯಾಗಿ ಸಂಶಯದಿಂದ ನೋಡುತ್ತಾ ಆಕೆಯ ಶೀಲದ ಬಗ್ಗೆ ಮುಖ್ಯವಾಗಿ ಗಮನ ಕೇಂದ್ರೀಕರಿಸಲಾಗುತ್ತದೆ. ಯಾಕೆಂದರೆ ಪುರುಷ ಸಮಾಜಕ್ಕೆ ಶೀಲವೇ ಹೆಣ್ಣಿಗೆ ಭೂಷಣವೆಂದು ಕಟ್ಟಿಕೊಟ್ಟಿದೆ. ಹೆಣ್ಣು ಅದನ್ನು 'ಸಹಜ'ವೆಂದು ಭಾವಿಸಿಕೊಂಡಿದ್ದಾಳೆ. ಇದನ್ನೇ ಹೆಣ್ಣಿನ ವಿರುದ್ಧ ಒಂದು ಅಸ್ತ್ರವಾಗಿ ಬಳಸಲಾಗುತ್ತಿದೆ. ಯಾಕೆಂದರೆ 'ಸಹಜ' ಅನುಕೂಲ ಸೌಕರ್ಯಗಳನ್ನು ಅನುಭವಿಸುವವರು ಅದನ್ನು ಬಿಟ್ಟುಕೊಡುವುದು ಕಷ್ಟವೇ. ಇದರಿಂದ ಪುರುಷಾಧಿಕಾರದ ಅಹಮಿಕೆಗೆ ಹೊಡೆತ ಬೀಳುತ್ತದೆ. ಮುಕ್ತ ಅವಕಾಶವಿದೆ ಎಂದಾಗಲೂ ಅಲ್ಲೂ ಕೂಡಾ ಲಿಂಗ ತಾರತಮ್ಯವಿದೆ.ಈ ಲಿಂಗ ಅಸಮಾನತೆಯು ಇರುವ ತನಕ ಮಹಿಳಾ ಸ್ವಾತಂತ್ರ್ಯ, ಸಮಾನತೆಗೆ ಅರ್ಥವಿರುವುದಿಲ್ಲ. ಆದ್ದರಿಂದ ಮಹಿಳೆ ಜಾಗರೂಕಳಾಗಿ ಮುಂದಡಿಯಿಡಬೇಕಾಗುತ್ತದೆ. ಸಂದರ್ಭವನ್ನು ಎದುರಿಸುವ ಚಾಕಚಕ್ಯತೆಯನ್ನು ಗಳಿಸಿಕೊಳ್ಳಬೇಕು. ಮುಯ್ಯಿಗೆ ಮುಯ್ಯಿ ತತ್ವವಾಗಬಾರದು. ದುಡಿಯುತ್ತಿರುವ ಮಹಿಳೆ ಇಂದು ಮನೆ ಹಾಗೂ ದುಡಿಯುವ ಕ್ಷೇತ್ರಗಳೆರಡರಲ್ಲೂ ನಿಭಾಯಿಸಿಕೊಳ್ಳಬೇಕಾದ ಪರಿಸ್ಥಿತಿಯಿದೆ. ಮನೆ ಜವಾಬ್ದಾರಿ ಮತ್ತು ಕೆಲಸದ ಜವಾಬ್ದಾರಿ ಇವೆರಡರಿಂದ ದಣಿದ ಮಹಿಳೆ ಬಹುಷಃ ಮನೆಯಲ್ಲೇ ಆರಾಮವಾಗಿ ಇರುವ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಗಳಿವೆ. ಬರೀ ಆರ್ಥಿಕ ಸ್ವಾವಲಂಬನೆಯಿಂದ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನಲೂ ಸಾಧ್ಯವಿಲ್ಲ. ಆದ್ದರಿಂದ ಹೆಣ್ಣು ಸ್ವಾಯತ್ತತೆ ಕಡೆ ಸಾಗುವಲ್ಲಿ ಪುರುಷನ ಸಹಕಾರವು ಬೇಕಾಗುತ್ತದೆ. ಆತನ ಆಲೋಚನೆಗಳು ಬದಲಾಗಬೇಕಾಗುತ್ತದೆ.

ಮಹಿಳೆಗೆ ತನ್ನದೇ ಆದ ಸಾರ್ವಜನಿಕ ಬದುಕು ಎಂಬುದಿದೆಯೇ? ಅಥವಾ ಅದು ಪುರುಷ ರೂಪಿತ ಸಾರ್ವಜನಿಕ ಜೀವನವೇ? ಪುರುಷ ರೂಪಿತ ಸಾರ್ವಜನಿಕ ಜೀವನವನ್ನು ತನ್ನದೆಂದು ಭಾವಿಸಿಕೊಂಡು ತಾನು ಸ್ವತಂತ್ರವೆಂದು ಭಾವಿಸಿದ್ದಾಳೆಯೇ ಅಥವಾ ತನ್ನದೇ ಆದ ಸಾರ್ವಜನಿಕ ಬದುಕನ್ನು ಕಟ್ಟುವ ಪ್ರಯತ್ನದಲ್ಲಿದ್ದಾಳೆಯೇ? ಸಾರ್ವಜನಿಕ ಬದುಕಿನಲ್ಲಿ ಮಹಿಳೆ ಸ್ವಾಯತ್ತತೆ ಕಂಡುಕೊಳ್ಳುವ ಬಗೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಅಡಕವಾಗಿದೆ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಇನ್ನು ಮುಂದೆ ಪ್ರತಿ ತಿಂಗಳ ೨೭ರಂದು ಅಂಚೆಗೆ ಹಾಕಲಾಗುತ್ತದೆ. (ಈ ಹಿಂದೆ ಪ್ರತಿ ತಿಂಗಳ ೧೩ರಂದು ಹಾಕಲಾಗುತ್ತಿತ್ತು.) ಅಂದರೆ ಮಾರ್ಚ ತಿಂಗಳ ಸಂಚಿಕೆ ಫೆಬ್ರವರಿ ೨೭ರಂದು ಅಂಚೆಗೆ ಹೋಗುತ್ತದೆ. ಹಾಗಾಗಿ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿಯೇ 'ಸಂವಾದ' ತಮಗೆ ತಲುಪುತ್ತದೆ.

ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ. ನಿಮ್ಮ ದೂರಿನ ಆಧಾರದ ಮೇಲೆ ಇಲ್ಲಿನ ಅಂಚೆ ಕಛೇರಿಯಲ್ಲಿ ನಾವು ವಿಚಾರಿಸಿ ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

ಸಾಮಾನ್ಯವಾಗಿ ಎಲ್ಲ ಚಂದಾದಾರರಿಗೂ ಸಕಾಲದಲ್ಲಿ ಪತ್ರಿಕೆ ಸಿಗುತ್ತಿದೆಯಾದರೂ ಕೆಲವರಿಗೆ ಕಾರಣಾಂತರದಿಂದ ಪತ್ರಿಕೆ ಕೈ ಸೇರುತ್ತಿಲ್ಲ. ಈ ಅನಾನುಕೂಲಕ್ಕೆ 'ಸಂವಾದ' ಬಳಗ ವಿಷಾಧಿಸುತ್ತದೆ. ಚಂದಾದಾರರು ಪತ್ರಿಕೆ ಸಿಗದಿದ್ದಾಗ ಕೂಡಲೇ ಮೇಲೆ ನಾವು ಸೂಚಿಸಿರುವಂತೆ ಅಂಚೆ ಕಛೇರಿಗೆ ದೂರು ನೀಡುವ ಮೂಲಕ ಹಾಗೂ ಆ ಮಾಹಿತಿಯನ್ನು ನಮಗೆ ತಿಳಿಸುವ ಮೂಲಕ ಸಹಕರಿಸಬೇಕೆಂದು ವಿನಂತಿಸುತ್ತೇವೆ.

-ವ್ಯವಸ್ಥಾಪಕ

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) **ಕಾಡಿನ ದಾವೇದಾರ** ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) **ಉಮರಾವ್ ಜಾನ್ ಅದಾ** ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) **ಹಾವಿನ ಡೊಂಕು** ರೂ. 50/-
(ಸ್ವೀಡಿಸ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)

4) **ಕಾರ್ಮೆಲೀನ** ರೂ. 100/-
(ಕೊಂಕಣಿ ಮೂಲ: ದಾಮೋದರ ಮಾವಜೊ, ಅನುವಾದ: ಶಾ.ಮಂ. ಕೃಷ್ಣರಾಯ)

ಕಥೆಗಳು

1) **ಕೊಂಕಣಿ ಕಥಾ ಸಂಗ್ರಹ** ರೂ. 125/-
(ಸಂಪಾದಕ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ.ಮಂ. ಕೃಷ್ಣರಾಯ)

2) **ಒಂದು ಪೀಳಿಗೆಯ ತೆಲುಗು ಕಥೆಗಳು** ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) **ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು** ರೂ. 150/-
(ಸಂಪಾದಕ : ಗೋಪಿ ಚಂದ್ ನಾರಂಗ್, ಅನುವಾದ : ಡಿ.ಎ. ಶಂಕರ್)

4) **ಮಧುರಾಂತಕಂ ರಾಜಾರಾಂ ಕಥೆಗಳು** ರೂ. 150/-
(ತೆಲುಗು ಮೂಲ : ಮಧುರಾಂತಕಂ ರಾಜಾರಾಂ
ಅನುವಾದ : ಲಕ್ಷ್ಮೀಪತಿ, ಕೋಲಾರ)

5) **ದಕ್ಷಿಣ ಕಾಮರೂಪದ ಒಂದು ಕಥಾನಕ** ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ,
ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) **ಯಕೃತ್ತು** ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) **ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು** ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್,
ಅನುವಾದ : ಶ್ರೀನಿವಾಸ್ ವಿ. ಸುತ್ತಾವೆ)

ಕಾವ್ಯ

1) **ಆಡು ಹಾವೇ** ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್ , ಅನುವಾದ : ಡಾ. ಬಸವರಾಜ ಕಲ್ಗುಡಿ)

2) **ಶ್ರೀರಾಧಾ** ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್.)

3) **ಶ್ರೀ ಬಸವಣ್ಣನವರ ವಚನ ಸಂಗ್ರಹ** ರೂ. 65/-
(ಸಂಪಾದಕ : ಸ.ಸ. ಮಾಳವಾಡ)

4) **ಎರಡು ದಶಕದ ಕವಿತೆ** ರೂ. 65/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ ಚನ್ನವೀರ ಕಣವಿ)

5) **ತೆಲುಗು ಕಾವ್ಯಮಾಲೆ** ರೂ. 125/-
(ಸಂಪಾದಕ : ದೇವುಲಪಲ್ಲಿ ರಾಮಾನುಜರಾವ್,
ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) **ಗೊರೂರು ರಾಮಸ್ವಾಮಿ ಅಯ್ಯಂಗಾರ್** ರೂ. 25/-
(ಲೇಖಕರು : ಸಿ.ಜಿ. ವೆಂಕಟಯ್ಯ)

2) **ಶಂಬಾ ಜೋಶಿ** ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) **ಭೀಮಾಭೋಯಿ** ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ್ ಪಿಸೆ)

4) **ಮೋಹನ್ ರಾಕೇಶ್** ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್.ಜಿ. ಶ್ರೀಮತಿ)

5) **ಚಿಲಕಮರ್ತಿ ಲಕ್ಷ್ಮೀನರಸಿಂಹಮ್** ರೂ. 25/-
(ಲೇಖಕರು : ವಿ.ವಿ.ಎಲ್. ನರಸಿಂಹರಾವ್, ಅನುವಾದ : ಕೆ.ಮರುಳಸಿದ್ದಪ್ಪ)

6) **ಅನ್ನಮಾಚಾರ್ಯ** ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) **ಶಾಂತಿನಾಥ ದೇಸಾಯಿ** ರೂ. 25/-
(ಲೇಖಕರು : ಜಿ.ಎಸ್. ಆಮೂರ್)

8) **ಎಂ.ಎಸ್. ಪುಟ್ಟಣ್ಣ** ರೂ. 25/-
(ಲೇಖಕರು : ಎಸ್.ಎಸ್. ಸುಜಾತ)

9) **ದೇವುಡು** ರೂ. 25/-
(ಲೇಖಕರು : ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) **ಕುಮಾರವ್ಯಾಸ** ರೂ. 25/-
(ಲೇಖಕರು : ಕೀರ್ತಿನಾಥ ಕುರ್ತುಕೋಟಿ)

11) **ಸಂ.ಶಿ. ಭೂಸನೂರಮಠ** ರೂ. 25/-
(ಲೇಖಕರು : ಶಾಂತಾ ಇಮ್ರಾಪುರ)

12) **ಸೇಡಿಯಾಪು ಕೃಷ್ಣಭಟ್ಟ** ರೂ. 25/-
(ಲೇಖಕರು : ಎಂ. ರಾಮಚಂದ್ರ)

13) **ಅಭಿನವಗುಪ್ತ** ರೂ. 75/-
(ಲೇಖಕರು : ಜಿ.ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) **ಮಂದಾರ ರಾಮಾಯಣ** ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) **ಕಲಾಪೂರ್ಣೋದಯ** ರೂ. 100/-
(ಅನುವಾದ : ಆರ್. ಶೇಷಶಾಸ್ತ್ರಿ, ಜಿ. ಸದಾನಂದ)

3) **ನನ್ನ ಜೀವಾವಧಿಯ ಶಿಕ್ಷೆ** ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ,
ಅನುವಾದ : ವಿರೂಪಾಕ್ಷ ಕುಲಕರ್ಣಿ)

4) **ವನದೇವತೆ** ರೂ. 25/-
(ಲೇಖಕರು : 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ , ಸೆಂಟ್ರಲ್ ಕಾಲೇಜು ಆವರಣ,
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 2245152

ಹೊಸ ಪುಸ್ತಕ



ಲಿಯೋಪಾಲ್ಡ್ ಇನ್‌ಫೆಲ್ಡ್ ರವರ ಆತ್ಮಕಥೆ 'ಶೋಧ'

ಅನು. ಜೀವೂಬಾಯಿ ಲಕ್ಷಣರಾವ್

ಬೆಲೆ: ರೂ. ೧೮೦/-

ಐನ್‌ಸ್ಟೈನನ ಜತೆ ಸಂಶೋಧನೆಯಲ್ಲಿ ಯಶಸ್ಸು ಸಾಧಿಸಿದ ಮಹಾನ್ ವಿಜ್ಞಾನಿ ಲಿಯೋ ಪಾಲ್ಡ್ ಇನ್‌ಫೆಲ್ಡ್ ಯುದ್ಧದ ಸಂದರ್ಭ ಮತ್ತು ಜನಾಂಗ ದ್ವೇಷಗಳ ಪರಿಣಾಮ ಗಳನ್ನು ಹೃದಯಂಗಮವಾಗಿ ವಿವರಿಸುವ ಇನ್‌ಫೆಲ್ಡ್‌ರವರ ಈ ಆತ್ಮಕಥ 'ಯನ್ನು ಜೀವೂ ಬಾಯಿ ಲಕ್ಷಣ್‌ರಾವ್ ರವರು ಕನ್ನಡೀಕರಿಸಿ ಓದುಗರಿಗೆ ನೀಡಿದ್ದಾರೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - ೫೬೦ ೦೦೦

ಯೋಗ ಪ್ರವೇಶ

ಲೇ. ಡಾ|| ಜಿ. ರಾಮಕೃಷ್ಣ

ಬೆಲೆ: ರೂ. ೫೦/-

ಒಂದು ಕಾಲಕ್ಕೆ ದೇವರನ್ನು ಕಾಣುವ ಅಥವಾ ಮೋಕ್ಷವನ್ನು ಪಡೆಯುವ ಪವಿತ್ರ ಮಾರ್ಗವೆಂದು ನಂಬಿಸಲಾಗುತ್ತಿದ್ದ 'ಯೋಗ' ಹಣ-ಅಧಿಕಾರ ಮತ್ತು ಕೀರ್ತಿ ಸಂಪಾದನೆಗಳ ಬೆನ್ನತ್ತಿರುವ ಇಂದಿನ ಮಾನವ ಕುಲಕ್ಕೆ ಇಂದು ಮಾರಾಟದ ಸರಕಾಗಿ ಹೋಗಿದೆ. ಈ ಒತ್ತಡದಿಂದ ಹೊರಬರಲು, ಆ ಮೂಲಕ ದೇಹ ಮತ್ತು ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಳ್ಳಲು ಯೋಗ ಎಷ್ಟು ಅನಿವಾರ್ಯ ಎಂಬುದನ್ನು ವೈಜ್ಞಾನಿಕವಾಗಿ ಈ ಕೃತಿಯಲ್ಲಿ ತಿಳಿಸಲಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - ೫೬೦ ೦೦೧



ಅನಾತ್ಮ

ಲೇ. ಕೆ.ಬಿ.ಸಿದ್ದಯ್ಯ

ಬೆಲೆ: ರೂ. ೭೦/-

ತಮ್ಮ ವಿಶಿಷ್ಟ ಶೈಲಿಯ ಬರವಣಿಗೆ ಮೂಲಕ ಕ್ರಿಯಾಶಾಲಿಯಾದ ಶಬ್ದಜಗತ್ತನ್ನು ತೆರೆದಿಡುವ ಕವಿ-ಚಿಂತಕ ಕೆ.ಬಿ.ಸಿದ್ದಯ್ಯ ನವರ ಕವನ ಸಂಕಲನ ಅನಾತ್ಮ. ಖಂಡಕಾವ್ಯ ದಂತೆ ಕಾಣುವ ಈ ದೀರ್ಘ ಕವಿತೆಗಳು ನಾಟ್ಯರಂಗದ ವಿವಿಧ ಭಂಗಿಗಳನ್ನು ನೆನಪಿಸಿ; ಕ್ರೂರ ಸಾಮಾಜಿಕ ವ್ಯವಸ್ಥೆಯನ್ನು ಬಿಚ್ಚಿಡುವ ಜತೆ-ಜತೆಗೆ, ಜಾಗತಿಕ ಸಂದರ್ಭದ ಬಗೆಗಿನ ಎಚ್ಚರವನ್ನೂ ನೀಡುತ್ತವೆ. ತನ್ನ ಸರಳ ಭಾಷೆ ಮತ್ತು ಜೀವಪರ ಆಶಯದೊಂದಿಗೆ 'ಕೃತಿ' ಓದುಗರ ಗಮನ ಸೆಳೆಯುತ್ತದೆ.

ಪ್ರಕಾಶಕರು: ನೆಲಸಿರಿ ಪ್ರಕಾಶನ, ಬಸವ ಸದನ, ಗಾಂಧಿನಗರ, ತುಮಕೂರು-೦೧



ಹಿಂದೂಧರ್ಮ ರಕ್ಷಕ ಟೀಪೂ ಸುಲ್ತಾನ್

ಸಂಗ್ರಹ-ಸಂಪಾದನೆ: ಕೋ. ಚನ್ನಬಸಪ್ಪ

ಬೆಲೆ: ರೂ. ೩/-

ಕರ್ನಾಟಕದ ಅಂದಿನ ಮೈಸೂರು ಪ್ರಾಂತ್ಯದ ಮೂಲಕ ಪರಂಗಿಯವರ ವಿರುದ್ಧ ಸಿಡಿದೆದ್ದು ಇಡೀ ಜಗತ್ತಿನ ಗಮನ ಸೆಳೆದಿದ್ದ ವರು, ಅಪ್ರತಿಮ ದೇಶಪ್ರೇಮಿ, ಪರಧರ್ಮ ಸಹಿಷ್ಣುವೂ, ಜನೋಪಕಾರಿಯೂ ಆದ ಮೈಸೂರು ಹುಲಿ ಟೀಪೂ ಸುಲ್ತಾನ್. ಟೀಪೂರವರ ಸಮಗ್ರ ವ್ಯಕ್ತಿ --ಚಿತ್ರಣದ ಬಗ್ಗೆ ಲೇಖಕರು ಅಪರೂಪದ ದಾಖಲೆಗಳ ಸಮೇತ ಈ ಕೃತಿ ಹೊರಬಂದಿದೆ. ಆ ಮೂಲಕ ಟೀಪೂ ಹಿಂದು ವಿರೋಧಿ ಎಂಬ ಸಂಘಪರಿವಾರದವರ ಟೀಕೆಗೆ ಸಮರ್ಥ ಉತ್ತರ ನೀಡಲಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು - ೫೬೦ ೦೦೧

ಕೃಷ್ಣಾರ್ಪಣ

ಲೇ. ಶ್ರೀರಾಮದಿವಾಣ

ಬೆಲೆ: ರೂ. ೪೦/-

ತಮ್ಮೆದುರಿನ ವಿದ್ಯಮಾನಗಳ ಬಗ್ಗೆ ಕೆಲವರು ವಜ್ರಮೌನಿಗಳಾದರೆ ಮತ್ತೆ ಕೆಲವರು ತಮಗಿರುವ ಇತಿ-ಮಿತಿಗಳಲ್ಲೇ ಆ ಬಗ್ಗೆ ಪ್ರತಿಕ್ರಿಯಿಸುತ್ತಾರೆ-ಪ್ರತಿಭಟಿಸುತ್ತಾರೆ. ಅಂತಹ ಪ್ರಯತ್ನಕ್ಕೆ ಹಿಡಿದ ಕನ್ನಡಿ ಈ ಕೃಷ್ಣಾರ್ಪಣ. ದೇವರು-ಧರ್ಮ-ನ್ಯಾಯ-ಜಾತ್ಯಾತೀತತೆ ಮತ್ತು ಜನರ ಮೂಲಭೂತ ಅಗತ್ಯತೆಗಳಲ್ಲಿ ಆಗಾಗ ಎದುರಾದ ಬಿಕ್ಕಟ್ಟು ಗಳಿಗೆ ಲೇಖಕರು ಮುಲಾಜಿಲ್ಲದೆ ಪ್ರತಿಕ್ರಿಯಿ ಸಿದ ಲೇಖನಗಳು ಈ ಸಂಕಲನದಲ್ಲಿವೆ. ಈಚೆಗೆ ಪೊಲೀಸರ ಗುಂಡಿಗೆ ಬಲಿಯಾದ ನಕ್ಸಲೀಯರಿಗೆ ಈ ಕೃತಿ ಅರ್ಪಣೆಯಾಗಿದೆ.

ಪ್ರಕಾಶಕರು: ದಿವಾಣಶ್ರೀ ಪ್ರಕಾಶನ, ಉಡುಪಿ-೫೭೬ ೧೦೩

ಬುದ್ಧ ಸಾಸನ

ಲೇ. ವೈ.ಬಿ. ನಂದನ

ಬೆಲೆ: ರೂ. ೨೦೦/-

ಒಂದು ಕಾಲಕ್ಕೆ ಆಡುಭಾಷೆಯಾಗಿದ್ದ ಪಾಳಿ ಭಾಷೆಯ ಮೂಲಕ ಬೌದ್ಧ ಸಾಹಿತ್ಯ ವನ್ನು ಉನ್ನತಿಗೆ ತಂದವರು ಬುದ್ಧ ಮತ್ತು ಆತನ ಶಿಷ್ಯಂದಿರು. ಬುದ್ಧ ಬೋಧಿಸಿದ ಅನೇಕ ಜೀವಪರ ಚಿಂತನೆಗಳು, ಸಂದೇಶ ಗಳು, ಕನ್ನಡದ ಮಟ್ಟಿಗೆ ಗಣನೀಯ ಪ್ರಮಾಣ ದಲ್ಲಿ ಆಗಿಲ್ಲವೆಂಬ ಕೊರತೆಯನ್ನು 'ಬುದ್ಧ ಸಾಸನ'ದಂತಹ ಕೃತಿಗಳು ನೀಗಿಸುತ್ತವೆ. ಲೇಖಕರು ವಿಶ್ವವ್ಯಾಪಿಯಾದ ಬುದ್ಧನ ಚಿಂತನೆಗಳ ತಿರುಳನ್ನು ಆಧಾರದೊಂದಿಗೆ ಸರಳವಾಗಿ-ಆಕರ್ಷಕವಾಗಿ ನಿರೂಪಿ ಸಿದ್ದಾರೆ.

ಪ್ರಕಾಶಕರು : ಪ್ರಸಾರಾಂಗ, ಕನ್ನಡ ವಿವಿ., ಹಂಪಿ, ವಿದ್ಯಾರಣ್ಯ-೫೮೩ ೨೭೬

ಇತಿಹಾಸ



ನಮ್ಮ ಗ್ರಾಮಗಳ ಪ್ರತಿ ಕೇರಿಗಳಲ್ಲಿ ನಾಗ ಪ್ರತಿಮೆಯ ಕಲ್ಲುಗಳು, ಕಟ್ಟೆಗಳು ಮಾಮೂಲು. ನಾಗರ ಪಂಚಮಿ ಹಬ್ಬ ಜೀವಂತವಿದ್ದು 'ಹಿಂದೂ' ಜಾತಿಗಳೆಲ್ಲವೂ ಆಚರಿಸುತ್ತವೆ. ದಲಿತರಲ್ಲಿ ಇದು ತುಂಬ ವಿಶೇಷ ವಾಗಿರುವುದು ಆಕಸ್ಮಿಕವಲ್ಲ. ಅಂಕಿತನಾಮ ಮತ್ತು ಗ್ರಾಮನಾಮಗಳಲ್ಲಿ 'ನಾಗ'ದ ಬಳಕೆ ಸಾಕಷ್ಟು, ನಾಗಶಿಲ್ಪ ಶಿಲೆಗಳು ತುಂಬ ಪ್ರಾಚೀನ. ಅವುಗಳ ಕಥೆ, ಪುರಾಣ, ಐತಿಹ್ಯ, ಆರಾಧನೆ ಎಲ್ಲ ಮರೆತು ಹೋಗಿದ್ದೇ ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆಯಂಥ ಕಡೆ ನಾಗಾರಾಧನೆ, ಕಾಡ್ಯಾನಾಟ, ನಾಗಮಂಡಲ ಹೀಗೆ ಕೆಲವು ಆಚರಣೆಗಳುಳಿದಿವೆ. ಬರಮದೇವರ ಗುಂಡುಕಲ್ಲುಗಳ ಜತೆ ನಾಗಪ್ರತಿಮೆಗಳಿರುತ್ತವೆ.

○ಎಸ್.ಎಸ್. ಹಿರೇಮಠ

ದಲಿತ ಸಂಸ್ಕೃತಿ, ಪರಂಪರೆ, ಇತಿಹಾಸ:

ದಲಿತರು ನಾಗರೇ ?

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಸ್ಟಾನ್ಲಿ ರೈಸ್, ದಲಿತರು ದ್ರಾವಿಡರಿಂದ; ದ್ರಾವಿಡರು ಆರ್‍ಯರಿಂದ ನಿಗ್ರಹಿಸಲ್ಪಟ್ಟ ಅಸ್ಪೃಶ್ಯರು ಮತ್ತು ಶೂದ್ರರಿಂದ ಹುಟ್ಟಿದರೆಂದು ಆರೆ ಸತ್ಯವನ್ನು ಹೇಳುವುದನ್ನು ಡಾ.ಅಂಬೇಡ್ಕರ್ ಅವರು ಉಲ್ಲೇಖಿಸಿದ್ದಾರೆ. (ಸಂಪುಟ ೭, ಪುಟ ೩೪೮ ಇತ್ಯಾದಿ)

ಅಂಬೇಡ್ಕರ್ ಅವರು ನಾಗರು, ದಾಸರು ಒಂದೇ ಎನ್ನುತ್ತಾರೆ. ಋಗ್ವೇದದಲ್ಲಿ 'ಅಹಿವೃತ' ಎಂಬ ನಾಗದೇವತೆಯ ಪ್ರಸ್ತಾಪವಿದೆ. ಈತ ಇಂದ್ರನ ವೈರಿ.

ಕದಂಬ ಕೃಷ್ಣವರ್ಮನ ದೇವಗಿರಿ ಶಾಸನದಂತೆ ಕದಂಬರು ನಾಗರೇ (ಅದೇ:೪೦೪). ಪಲ್ಲವ, ಚೋಳ, ವಾಕಾಟಕ, ಪರಮಾರ ಮೊದಲಾದ ವಂಶಗಳ ಅರಸರು ನಾಗ ಕುಲದ ಮಹಿಳೆಯರನ್ನು ವಿವಾಹವಾಗುತ್ತಿದ್ದ ಉಲ್ಲೇಖಗಳಿವೆ. (ಅದೇ) ಮಹಾರಾಷ್ಟ್ರ ನಾಗರ ಮೂಲ ವಾಸಸ್ಥಾನ. (ಅದೇ:೪೦೫) ಶಾತವಾಹನ ಮತ್ತು ಚುಟು ಕುಲದವರು ನಾಗವಂಶೀಯರು. (ಅದೇ) ಇಡೀ ಭಾರತದ ತುಂಬ ನಾಗರು ಹಬ್ಬಿದ್ದರು. ಸಿಲೋನ ಮುಂತಾದ ದೇಶಗಳಲ್ಲೂ ಇದ್ದರು. ಅವರಲ್ಲಿ ರಾಜವಂಶಗಳು ಹುಟ್ಟಿ ಆಳಿದ್ದ ದಾಖಲೆಗಳಿವೆ. ಈ ಎಲ್ಲ ವಿವರಗಳನ್ನು ಡಾ.ಬಾಬಾ ಸಾಹೇಬರು ನೀಡಿದ್ದಾರೆ. ಕುರುಗೋಡು ದೊರೆಗಳು, ಗುತ್ತಲದ ಸಿಂದರು ನಾಗವಂಶೀಯರೇ.

ದ್ರಾವಿಡರೇ ನಾಗರು ಎಂದು ಡಾ.ಅವರ ಅಭಿಪ್ರಾಯ. (ಅದೇ ೪೯೯) ಚೇರರು ನಾಗರು ಒಂದೇ. (೪೧೦) 'ಚೇರ'ವು ನಾಗ ಎಂಬುದಕ್ಕೆ ದ್ರಾವಿಡ ಪದ. ದ್ರಾವಿಡರು ನಾಗರು ಅಸುರರು.(೪೧೦) ಗಂಗಾಕಣಿವೆಯ ನಾಗರು ಚೇರುಗಳು ಮತ್ತು ಸೆಯೋರಿಗಳೆಂದು ಹೇಳಿಕೊಳ್ಳುತ್ತಾರೆ. (೪೧೦) ನೇಪಾಳದ ಲಿಚ್ಛವಿ ಮತ್ತು ನೇವಾರರು ಈ ಚೇರರು. (೪೧೧) ನೇವಾರರು ಮಾತ್ರ ಮೂಲೀಯರು. ನಾಗರಿಗೆ ಸರ್ಯಾ ಎಂಬ ಹೆಸರಿತ್ತು. (೪೧೨)

ಡಾ.ಅಂಬೇಡ್ಕರರು ಹೇಳುತ್ತಿರುವ ಸೆಯೋರಿ, ಸಯಾನ್‌ಗಳು ಇಂದಿನ 'ಸವರೊ'ಗಳಾಗಿರುವ ಸಾಧ್ಯತೆ ಯಿದೆ. ಸವರೊಗಳು ಮುಂಡಾ ಭಾಷಿಕರು. ಚೇರರೇ ಚೆರುಮಾನರು (ಹೊಲೆಯರು). ಕೇರಳದ ದಲಿತ ಜಾತಿಯ ಹೆಸರಿದು. ಹೀಗೆ ಸುತ್ತು ಬಳಸಿ ನಾವು ಮತ್ತೆ ದಲಿತ ಮೂಲಕ್ಕೆ ಬರುತ್ತೇವೆ. ನಾಗ, ಸರ್ಪದೇವತೆ, ಜಲದೇವತೆ ಗಳು ಪ್ರೊಟೊ ಆಸ್ಟ್ರಲೈಡ್ ಸಂಸ್ಕೃತಿಯಿಂದ ಬಂದಿವೆ ಎಂದು ಎಸ್.ಕೆ.ಚಟರ್ಜಿ ಹೇಳುತ್ತಾರೆ. ('ವೇದಯುಗ', ಪು. ೧೮೧)

ಹಿಮಾಲಯದ ಕೀರರು, ಚೇರರು, ಕೇರಳರು ಒಂದೇ (ಸಂ.೭, ಬಾಬಾಸಾಹೇಬರು ಪು.೪೧೩) ಉತ್ತರ ಭಾರತದ ನಾಗರು ತಮ್ಮ ತಮಿಳು ಭಾಷೆ ಬಿಟ್ಟು ಸಂಸ್ಕೃತ ಅಳವಡಿಸಿ ಕೊಂಡರು. ದಕ್ಷಿಣದವರು ತಮಿಳು ಉಳಿಸಿಕೊಂಡರು. (ಅದೇ ೪೧೭) 'ನಾಗರು' ಜನಾಂಗೀಯ ಅಥವಾ ಸಾಂಸ್ಕೃತಿಕ ಹೆಸರು. 'ದ್ರಾವಿಡ' ಅವರ ಭಾಷೆಯ ಹೆಸರು. (೪೧೮) ರೈಸ್ ಅವರ ಅಭಿಪ್ರಾಯವನ್ನು ಡಾ.ಅಂಬೇಡ್ಕರರು ಒಪ್ಪುವುದಿಲ್ಲ. ಆರ್‍ಯ ಮತ್ತು ದ್ರಾವಿಡ (ನಾಗ) ಎರಡೇ ಜನಾಂಗಗಳು ಎನ್ನುತ್ತಾರೆ ಅವರು.

ಆದರೆ ನಾವಾಗಲೇ ಚರ್ಚಿಸಿರುವಂತೆ ತಾಮ್ರಶಿಲಾ ಯುಗದ ಪ್ರೊಟೊ ಆಸ್ಟ್ರಲೈಡರೆ(ಮುಂಡಾಭಾಷಿಕರು) ನಾಗರು(ದಲಿತರು) ಇದ್ದಿರುವ ಸಾಧ್ಯತೆಯಿದೆ. ಇವರ ನಂತರ ಭಾರತಕ್ಕೆ ಬಂದವರು ದ್ರಾವಿಡರು. ಬಹುಶಃ ಇವರು ಎರಡು ಮಾರ್ಗಗಳ ಮೂಲಕ ಪ್ರತ್ಯೇಕ ಗುಂಪುಗಳಾಗಿ ಬಂದಿರಬೇಕು. ಒಂದು ಗುಂಪು ಇರಾಣ್ ಮೂಲಕ ಅಫಘಾನಿಸ್ಥಾನ ಮತ್ತು ಭಾರತಕ್ಕೆ ಬಂದಿದೆ. ಇನ್ನೊಂದು ಸಮುದ್ರದ ಮೂಲಕ ದಕ್ಷಿಣ ಭಾರತಕ್ಕೆ ಕಾಲಿಟ್ಟಿದೆ. ದ್ರಾವಿಡರು ನಾಗರನ್ನು ಸೋಲಿಸಿ ಅಸ್ಪೃಶ್ಯರನ್ನಾಗಿ ಮಾಡಿದರೆಂಬ ರೈಸರ ಮಾತು ಸರಿಯಲ್ಲ. ಏಕೆಂದರೆ ದ್ರಾವಿಡರು ಮತ್ತು ನಾಗರು ಇಬ್ಬರೂ ಬುಡಕಟ್ಟು ಹಂತದಲ್ಲಿದ್ದರು. ಅವರ ಮಧ್ಯೆ ಸಂಘರ್ಷ ಗಳಿದ್ದುವೆಂಬುದಕ್ಕೆ ಆಧಾರಗಳಿವೆ. ಆದರೆ ಬಹುಬೇಗನೆ ಅವರು ಸಹಜೀವನಕ್ಕೆ ನಿಂತರು. ಸಿಂಧೂ ನಾಗರಿಕತೆಯಂಥ ಬೃಹತ್ ಸಂಸ್ಕೃತಿ ನಿರ್ಮಾತೃಗಳಾದರು. ದ್ರಾವಿಡರು ಪ್ರಬಲರಾಗಿದ್ದರೂ ನಾಗರು ಗುಲಾಮರೋ, ಅಸ್ಪೃಶ್ಯರೋ ಆಗಿರಲಿಲ್ಲ. ನಂತರದ ದಾಖಲೆಗಳೆಲ್ಲ ಇದನ್ನೇ ಸಮರ್ಥಿಸುತ್ತವೆ. ಇದೇ ರೀತಿ ರೈಸ್ ಅವರು ಊಹಿಸಿರುವಂತೆ ದ್ರಾವಿಡರೆಲ್ಲರೂ ಶೂದ್ರರಾಗಿರಲಿಲ್ಲ. ಈಚೆಗೆ ಆರ್.ಎಸ್.ಶರ್ಮಾ ಅವರು ('ಶೂದ್ರಾಸ್ ಇನ್ ಎನ್ಷಿಯಂಟ್ ಇಂಡಿಯಾ') ಮತ್ತಿತರರು ಶೂದ್ರರ ಉಗಮದ ಕುರಿತು ಬರೆದಿದ್ದಾರೆ. ಶೂದ್ರರಾದ ನಿರ್ದಿಷ್ಟ ಜನಕುಲವೊಂದೇ ಇರಲಿಲ್ಲ.

ನಾಗ ಸಂಸ್ಕೃತಿ ವ್ಯಾಪಕವಾಗಿರುವುದನ್ನು ಈಗಲೂ ಕಾಣಬಹುದು. ನಮ್ಮ ಗ್ರಾಮಗಳ ಪ್ರತಿ ಕೇರಿಗಳಲ್ಲಿ ನಾಗ ಪ್ರತಿಮೆಯ ಕಲ್ಲುಗಳು, ಕಟ್ಟೆಗಳು ಮಾಮೂಲು. ನಾಗರ ಪಂಚಮಿ ಹಬ್ಬ ಜೀವಂತವಿದ್ದು 'ಹಿಂದೂ' ಜಾತಿಗಳೆಲ್ಲವೂ ಆಚರಿಸುತ್ತವೆ. ದಲಿತರಲ್ಲಿ ಇದು ತುಂಬ ವಿಶೇಷವಾಗಿರುವುದು ಆಕಸ್ಮಿಕವಲ್ಲ. ಅಂಕಿತನಾಮ ಮತ್ತು ಗ್ರಾಮನಾಮಗಳಲ್ಲಿ 'ನಾಗ'ದ ಬಳಕೆ ಸಾಕಷ್ಟು, ನಾಗಶಿಲ್ಪ ಶಿಲೆಗಳು ತುಂಬ ಪ್ರಾಚೀನ. ಅವುಗಳ ಕಥೆ, ಪುರಾಣ, ಐತಿಹ್ಯ, ಆರಾಧನೆ ಎಲ್ಲ ಮರೆತು ಹೋಗಿದ್ದೇ ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆಯಂಥ ಕಡೆ ನಾಗಾರಾಧನೆ, ಕಾಡ್ಯಾನಾಟ, ನಾಗಮಂಡಲ ಹೀಗೆ ಕೆಲವು ಆಚರಣೆಗಳುಳಿದಿವೆ. ಬರಮದೇವರ ಗುಂಡುಕಲ್ಲುಗಳ ಜತೆ ನಾಗಪ್ರತಿಮೆಗಳಿರುತ್ತವೆ. ಬಹಳಷ್ಟು ಕಡೆ ಅಮ್ಮನ ದೇಗುಲದ ಎದುರು ಅಂಗಳದ ಕಟ್ಟೆಯಲ್ಲಿ ಇವು ಇರುವುದು ಕೂಡ ಅರ್ಥಪೂರ್ಣ ಮತ್ತು ತಾರ್ಕಿಕ. ಬರಮ ವೈದಿಕರ ಬ್ರಹ್ಮನಲ್ಲ. ನಾಗರಕಲ್ಲುಗಳಿಗೇ ಬರಮಪ್ಪನ ಕಲ್ಲು ಎಂದು ಕೆಲವು ಕಡೆ ಕರೆಯುತ್ತಾರೆ. ನಾಗಶಿಲೆಗಳ ಬಗ್ಗೆ ಜನರ ಅವಜ್ಞೆ ಆ ಪಂಥದ ಪ್ರಾಚೀನತೆಗೆ ಸಾಕ್ಷಿ. ಎಸ್.ಕೆ.ಚಟರ್ಜಿ ಹೇಳುವಂತೆ ('ವೇದಯುಗ', ಪು. ೧೩೯, ೧೬೦) ಭಾರತಕ್ಕೆ ಬಂದ ಮೊದಲಿಗರು ಆಹಾರ ಸಂಗ್ರಾಹಕರಾಗಿದ್ದ ನಿಗ್ರಿಟೋ ಜನ. ನಂತರ ಬಂದ ಪ್ರೊಟೊ ಆಸ್ಟ್ರಲೈಡರಿಂದ ಅವರು ನಾಶವಾದರು ಅಥವಾ ಅವರಲ್ಲಿ ಬೆರೆತು ಹೋದರು.

ಅಸ್ಸಾಂನ ನಾಗಾ, ದಕ್ಷಿಣದ ಕೆಲವು ಬುಡಕಟ್ಟು ಮಲಯ, ಫಿಲಿಪೈನ್ಸ ಇಂಡೋನೇಶ್ಯ ಮತ್ತು ಅಂದಮಾನ್ ದ್ವೀಪಗಳಲ್ಲಿ ಅವರ ಗುರುತುಗಳಿವೆ. 'ನಾಗರು' ಈ ಜನಾಂಗ ಮೂಲದವರಾಗಿದ್ದರೇ ಎಂಬುದು ವಿಚಾರಣೀಯಾಂಶ. ನಂತರ ಬಂದ ಮುಂಡಾ ಭಾಷಿಕ ಕೃಷಿಕರ ಜತೆ ನಾಗರು ಬೆರೆತು ಹೋಗಿದ್ದರೆ ದಲಿತ ಸಂಸ್ಕೃತಿ ಈ ಸಂಕರ ಸ್ಥಿತಿಯ ಕಾರಣದಿಂದ ಹುಟ್ಟಿದುದೆಂದು ನಿರ್ಧರಿಸಬೇಕಾಗುತ್ತದೆ. ಆಫ್ರಿಕಾದ ಜನಕುಲಗಳ ಮತ ಪಂಥಗಳ ವಿವರಗಳು ನಮ್ಮ ನಾಡಿನ ವಿವಿಧ ಕೃಷಿಕ ಸಂಸ್ಕೃತಿಗಳ ಜತೆ, ವಿಶೇಷವಾಗಿ ದಲಿತ ಸಂಸ್ಕೃತಿಯ ಜತೆ ಹೋಲುವುದನ್ನು ನೋಡಿದರೆ ಆಫ್ರಿಕಾ ಮೂಲದ ನಿಗ್ರಿಟೋ(ನಾಗಾ) ಜನಗಳ ಭಾರತೀಯ ಕೊಡುಗೆಯ ಅಂದಾಜು ಸಿಗುತ್ತದೆ.

ಸಿಂಧೂ ನಾಗರಿಕತೆಯಲ್ಲೇ ನಾಗರ ಕೊಡುಗೆಯ ಗಮನಾರ್ಹ ಅಂಶಗಳಿವೆ. 'ಕೆಲವು ಮುದ್ರೆಗಳ ಮೇಲೆ ಹಾವು-ಮನುಷ್ಯ, ಹಾವು-ಎತ್ತು, ಹಾವು-ಆನೆ ಹೀಗೆ ಸಂಯುಕ್ತ ಸಮುದಾಯ ಚಿಹ್ನೆಗಳಿವೆ. ಇಂಥ ಎರಡು ಮೂರು ಚಿಹ್ನೆಗಳ ಜೋಡಿಗಳು ಸಮುದಾಯಗಳ ವಿಲೀನತೆಯನ್ನು ಸೂಚಿಸುತ್ತವೆ' ಎಂದು ಡಿ.ಡಿ.ಕೋಸಾಂಬಿ ('ಪ್ರಾಚೀನ ಭಾರತದ ಚರಿತ್ರೆ', ಪು.೫೨) ಬರೆಯುತ್ತಾರೆ. ಆದರೆ ಹಾವು ಟೋಟೆಂ ಜನ ಪ್ರಬಲ ಬುಡಕಟ್ಟಿನವರಾಗಿದ್ದಿರಬಹುದು. ಅವರಲ್ಲೆ ಉಪಪಂಗಡಗಳಿದ್ದು ಅವುಗಳ ಗುರುತು ಹಾವಿನ ಜತೆ ಮನುಷ್ಯ, ಆನೆ, ಎತ್ತುಗ್ಗಳಿರುವುದು.

ಮಹಾಭಾರತಾದಿ ವೈದಿಕ ಗ್ರಂಥಗಳಲ್ಲಿ 'ನಾಗ'ರ ಪ್ರಸ್ತಾಪ ಬಹಳಷ್ಟು ಸಲ ಬರುತ್ತದೆ. ಅಸುರರಿಗಿಂತ ಬಹುಶಃ ಭಿನ್ನರಾಗಿದ್ದ ನಾಗರು ಪಾಂಡವ ವೈರಿಗಳಾಗಿದ್ದುದನ್ನು ಮಹಾಭಾರತದ ಜನಮೇಜಯನ ಸರ್ಪಯಜ್ಞವೇ ಸೂಚಿಸುತ್ತದೆ. ಆದರೆ ಶಂ.ಬಾ.ಜೋಷಿಯವರು, ಪಾಂಡವರು ನಾಗರೇ ಎಂದು ತಮ್ಮ 'ನಾಗ ಪ್ರತಿಮಾ ವಿಚಾರ'ದಲ್ಲಿ (ಪು. ೪೨೮) ವಾದಿಸುತ್ತಾರೆ. ಅನೇಕ ನಾಗರು ಬ್ರಾಹ್ಮಣರಾಗುತ್ತಿದ್ದ ಬಗ್ಗೆಯೂ ಸೂಚನೆಗಳಿವೆ. ಮಹಾಭಾರತದ ನಾಗರ ಕುರಿತು ವಿವರಗಳ ವಿಶ್ಲೇಷಣೆಯಿಂದ ಅನೇಕ ಮಹತ್ವದ ಅಂಶಗಳು ಬೆಳಕಿಗೆ ಬರುತ್ತವೆ.

ಮಹರರ ರಾಷ್ಟ್ರ ಮಹಾರಾಷ್ಟ್ರ:

ಶಂ.ಬಾ.ಜೋಷಿಯವರು('ಮಹಾರಾಷ್ಟ್ರದ ಮೂಲ') ಮಹಾರರ(ಹೊಲೆಯರ) ರಾಷ್ಟ್ರವೇ ಮಹಾರಾಷ್ಟ್ರವಾಯಿತೆಂದು ವಿದ್ವಾಂಸರೊಬ್ಬರ (ಮೋಲ್ಸ್‌ವರ್ಥ್) ವಾದವನ್ನು ಚರ್ಚಿಸುತ್ತಾರೆ. ಮಡಿವಂತ ಪಂಡಿತರಿಗೆ ಈ ವಿಷಯ ರುಚಿಸಲಿಲ್ಲ. ಹಾಗಾಗಿ ಬೇರೆ ಮೂಲಗಳನ್ನು ಹುಡುಕುವುದಕ್ಕೆ ಅವರೆಲ್ಲ ವ್ಯರ್ಥ ಪ್ರಯತ್ನಿಸುತ್ತಾರೆ. 'ಯಾರ ಹೆಸರನ್ನು (ಮಹಾರರು) ಕೇಳಿದ ಮಾತ್ರಕ್ಕೆ ತಮ್ಮ ಪಾವಿತ್ರ್ಯವು ಹಾಳಾಗುವುದೆಂದು ದೃಢವಾದ ನಂಬುಗೆಯೇ ಆ ಮಹಾರ(ಹೊಲೆಯ)ರ ಹೆಸರಿನ್ನೆಲ್ಲ ಇಡೀ ನಾಡಿಗೆಲ್ಲ ಇಡಲಿಕ್ಕೆ ವರ್ಣಾಭಿಮಾನಿಗಳಾದ ಆರ್ಯರು ಆ ಕಾಲಕ್ಕೆ ಮನಸು ಮಾಡಿದರೆಂದು ಭಾವಿಸುವುದು ಹೇಗೆ ತಾನೆ ಸಾಧ್ಯ?' ಎನ್ನುತ್ತಾರೆ ಶಂ.ಬಾ.(ಅದೇ ಪು.೩,೪) ಆದರೆ ಮಹಾರರು ಇನ್ನೂ ಅಸ್ಪೃಶ್ಯರಾಗಿರದಿದ್ದ ಕಾಲದಲ್ಲಿ ಗೌರವಾನ್ವಿತ ಮೂಲ ಕೃಷಿಕರಾಗಿದ್ದುದನ್ನು ಶಂ.ಬಾ ಕಂಡುಕೊಳ್ಳಲಿಲ್ಲ. ಡಾ. ಬಾಬಾ ಸಾಹೇಬರು ನಾಗರೇ ಮಹಾರಾಷ್ಟ್ರದ ಮೂಲ ಪುರುಷರೆಂದು ಹೇಳಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಡಾ.ಭಂಡಾರಕರ್‌ರು ಮಹಾರಾಷ್ಟ್ರದ ಮೂಲವನ್ನು ಹುಡುಕಿ 'ಮಹಾರಠಿ' ಮತ್ತು 'ಮಹಾರಠಿನಿ' ಎಂದಿರುವುದು (ಅದೇ ಪು. ೪) ಹೊಲೆಯ-ಹೊಲತಿಗಳಲ್ಲದೇ ಬೇರಾಗಲಾರವು. ಒಂದು ಪದ ಪುಲ್ಲಿಂಗ ಮತ್ತು ಸ್ತ್ರೀಲಿಂಗವಾಗುವುದು ದ್ರಾವಿಡ ಭಾಷಾ ವೈಶಿಷ್ಟ್ಯ.

ಮಹಾರರೇ ನಾಗರೆಂದಾಗುತ್ತದೆ. ಮಹಾರರಲ್ಲಿ ಇಲ್ಲದ ಯಾವ ಕುಲವೂ ಮರಾಠದಲ್ಲಿಲ್ಲ ಎಂಬ ಮಹತ್ವದ ಸಂಗತಿ ಬೇರೆನನ್ನು ಸೂಚಿಸೀತು? (ಡಾ. ಬಾಬಾಸಾಹೇಬ ಅಂಬೇಡ್ಕರ್, 'ಬರಹಗಳು ಮತ್ತು ಭಾಷಣಗಳು', ಸಂ.೭, ಪು.೪೨೪) ಮಹಾರರ ಕೇಂದ್ರ ಮೂಲವನ್ನಲ್ಲವೇ? ಮಹಾರಾಷ್ಟ್ರದ ಬಹುತೇಕ ಕೆಲವು ಪಶುಪಾಲಕ ಜಾತಿಗಳು (ಧನಗರ) ಕುರುಬರು ಮುಂತಾದ ಕನ್ನಡ ಕುಲಗಳೇ. ಒಂದೇ ಕುಲಲಾಂಛನ(ಟೋಟೆಂ)ವಿರುವ ಜಾತಿಗಳೆಲ್ಲ ಮೂಲದಲ್ಲಿ ಕುಲಸಂಬಂಧಿಗಳಾಗಿದ್ದವರು, (ಅದೇ ಪು.೪೨೪) ಎಂಬುದರಿಂದ ಮಹಾರರ ರಾಷ್ಟ್ರವೇ ಮಹಾರಾಷ್ಟ್ರವಾಗಿರುವುದು ತರ್ಕಬದ್ಧವಾಗಿಯೇ ಇದೆ. ದಲಿತರು ನುಚ್ಚುನೂರಾಗಿದ್ದ ಜನ ನಂತರ ಬೌದ್ಧರಾದರು. ಅದಕ್ಕೆನೇ ಬ್ರಾಹ್ಮಣರು ಅವರನ್ನು ವಿರೋಧಿಸಿದರು ಎಂದು ಬಾಬಾಸಾಹೇಬರು ವಾದಿಸುತ್ತಾರೆ. (ಅದೇ ಪು. ೪೨೪) ಆದರೆ ಮೊದಲ ಹಂತದಲ್ಲಿ ದಲಿತರು ಖಂಡ ತುಂಡರಾಗಿರಲಿಲ್ಲ. ಶೋಷಣೆಯ ವ್ಯವಸ್ಥೆ ಪ್ರಾರಂಭವಾದ ನಂತರ ನುಚ್ಚುನೂರಾಗಬೇಕಾಯಿತು.

ಚೇರರು ಆಳಿದ ನಾಡೇ ಕೇರಳ. ಇಂದಿನ ಅಲ್ಲಿಯ ಚೆರುಮಾನ್(ದಲಿತರು)ರೇ ಚೇರರು. ಚೇರರ ಉಲ್ಲೇಖ ಆಗಲೆ ಹಿಂದೆ ಪ್ರಸ್ತಾಪವಾಗಿದೆ. ನಂಬೂದಿರಿ, ನಾಯರ್‌ರಂಥ ಮೇಲ್ಜಾತಿಗಳು ಕೇರಳಕ್ಕೆ ಬರುವ ಮೊದಲೇ ಕೃಷಿಕ ದಲಿತರು ಇಡೀ ಕರಾವಳಿಯನ್ನು ತಮ್ಮ ನೆಲೆಯಾಗಿಸಿಕೊಂಡಿದ್ದರು. ಚೆರುಮನ್‌ರಿಗೆ ಚೆರುಮಕ್ಕಳ್ ಎಂಬ ಹೆಸರೂ ಇದೆ. ನೆಲದ ಮಕ್ಕಳು ಎಂದಿದರ ಅರ್ಥ. ಉತ್ತರ ಮಲಬಾರಿನಲ್ಲಿ ಇವರಿಗೆ ಪುಲಯನ್ (ಹೊಲೆಯ) ಎನ್ನುತ್ತಾರೆ. 'ಪೊಲಿ'ಯಿಂದ ಬಂದ ಪದ ಪುಲ. ಶಿವನಿಂದ ಪುಲಯರು ಸಲಿಕೆ ಮತ್ತು ಕೊಡಲಿಗಳನ್ನು ಪಡೆದು, ಅರಣ್ಯವನ್ನು ಕಡಿದು ಭೂಮಿ ಮಾಡಿ ಕೃಷಿಯನ್ನು ಪ್ರಾರಂಭಿಸುವ ವರ ಪಡೆದವರು ಎಂಬ ನಂಬಿಕೆಯಿದೆ.

ದಲಿತರ ನಾಡು ಕೇರಳ:

ಚೇರರು ಆಳಿದ ನಾಡೇ ಕೇರಳ. ಇಂದಿನ ಅಲ್ಲಿಯ ಚೆರುಮಾನ್(ದಲಿತರು)ರೇ ಚೇರರು. ಚೇರರ ಉಲ್ಲೇಖ ಆಗಲೆ ಹಿಂದೆ ಪ್ರಸ್ತಾಪವಾಗಿದೆ. ನಂಬೂದಿರಿ, ನಾಯರ್‌ರಂಥ ಮೇಲ್ಜಾತಿಗಳು ಕೇರಳಕ್ಕೆ ಬರುವ ಮೊದಲೇ ಕೃಷಿಕ ದಲಿತರು ಇಡೀ ಕರಾವಳಿಯನ್ನು ತಮ್ಮ ನೆಲೆಯಾಗಿಸಿಕೊಂಡಿದ್ದರು. ಚೆರುಮನ್‌ರಿಗೆ ಚೆರುಮಕ್ಕಳ್ ಎಂಬ ಹೆಸರೂ ಇದೆ. ನೆಲದ ಮಕ್ಕಳು ಎಂದಿದರ ಅರ್ಥ. ಉತ್ತರ ಮಲಬಾರಿನಲ್ಲಿ ಇವರಿಗೆ ಪುಲಯನ್ (ಹೊಲೆಯ) ಎನ್ನುತ್ತಾರೆ. 'ಪೊಲಿ'ಯಿಂದ ಬಂದ ಪದ ಪುಲ. ಶಿವನಿಂದ ಪುಲಯರು ಸಲಿಕೆ ಮತ್ತು ಕೊಡಲಿಗಳನ್ನು ಪಡೆದು, ಅರಣ್ಯವನ್ನು ಕಡಿದು ಭೂಮಿ ಮಾಡಿ ಕೃಷಿಯನ್ನು ಪ್ರಾರಂಭಿಸುವ ವರ ಪಡೆದವರು ಎಂಬ ನಂಬಿಕೆಯಿದೆ. (ಈ.ಥರ್‌ಸ್ಟನ್ ಪು.೪೮) ಕೇರಳದ ದಕ್ಷಿಣ ತ್ರಾವಣಕೋರ ಗುಡ್ಡಗಾಡಿನ ಕುಮ್ರಿ ಬೇಸಾಯಗಾರರಾದ ಕಾನಿಕರ್ ಎಂಬ ಆದಿವಾಸಿಗಳು ಹೇಳುವ ಕತೆಯಲ್ಲಿ ಶಿವ ಪಾರ್ವತಿಯರು ಬೆಳೆದ ಭತ್ತವನ್ನು ಮೊಟ್ಟಮೊದಲು ನೋಡಿದವರು ಪರೈಯಾನ್ ಮತ್ತು ಪುಲಯನ್‌ರು. ಅವರೇ ಮೊದಲು ಬತ್ತದ ರುಚಿ ಕಂಡು ಬಿತ್ತಿ ಬೆಳೆಯಲು ಪ್ರಾರಂಭಿಸಿದರು. ೧೮ ವಿಧದ ಅನ್ನವನ್ನು ಮಾಡು ಕಲಿತರು. (ಥರ್‌ಸ್ಟನ್, ಸಂ. ೨, ಪು. ೧೫೭)

ಬೇರೆಯವರು ಕೇರಳದ ದಲಿತರಿಂದ ಭೂಮಿಯ ಒಡೆತನ ಕಿತ್ತುಕೊಂಡಾಗ ಅವರು ಗುಲಾಮರಂತೆ ದುಡಿಯಬೇಕಾಯಿತು. ಚೇರರು ಕೃಷಿ ಭೂಮಿಗೆ ಅಂಟಿಕೊಂಡಿರುವ ರೀತಿ ಈ ಮಾತಿಗೆ ಸಾಕ್ಷಿ. ಚೇರ ಎಂದರೆ ಭತ್ತದ ಗದ್ದೆ ಎಂಬರ್ಥವೂ ಇದೆ. ಕೇರಳದ ಕೆಲವು ಪ್ರದೇಶಗಳಲ್ಲಿ ಪೊಲೆಯ ಕುಲದ ದೊರೆಗಳು ಆಳಿದ್ದನ್ನು ಸೂಚಿಸುವ ಗುರುತುಗಳು ಈಗಲೂ ಇವೆ. (ಆಯಿಕ್ಕರನಾಡು, ಪುಲಯನರ ಕೊಟ್ಟ ಮುಂತಾದವು, ಅದೇ)

ಕನ್ನಡ ನಾಡು:

ತುಳು ನಾಡಿನ ವಿದ್ವಾಂಸರ ಸರ್ವ ಸಾಮಾನ್ಯ ಅಭಿಪ್ರಾಯವೆಂದರೆ ಈ ಪ್ರದೇಶದ ಮೂಲ ಜನ ಹೊಲೆಯರೇ ಎಂದು ಡಾ.ಬಿ.ಎ.ವಿವೇಕ ರೈ ಬರೆಯುತ್ತಾರೆ. 'ಭೂತಾರಾಧನೆಯಲ್ಲಿ ಪ್ರಧಾನ ಪಾತ್ರ ವಹಿಸುವ ಪರವ, ಪಂಬದ, ನಲ್ಕೆಯವ ಮುಂತಾದ ಹರಿಜನ ವರ್ಗದವರು ತುಳು ನಾಡಿನ ಮೂಲ ನಿವಾಸಿಗಳು. ಅಲ್ಲಿ ಈಗ ಇರುವ ಹೆಚ್ಚಿನ ಜಾತಿ ವರ್ಗದವರು ಹೊರಗಿನಿಂದ ಅಲ್ಲಿಗೆ ಬಂದವರು'. (ತುಳು ಜಾನಪದ ಸಾಹಿತ್ಯ, ಕ.ಸಾ.ಪ., ೧೯೮೫, ಪು. ೩೧) ಹೊಲೆಯರಿಗೆ ಮೂಲೊಡಕಳು (ಮೂಲದವರು) ಎನ್ನುವಲ್ಲಿ ಮೂಲನಿವಾಸಿಗಳು ಎನ್ನುವ ಧ್ವನಿಯಿದೆ. (ಅದೇ).

ದಕ್ಷಿಣ ಕನ್ನಡ ಜಿಲ್ಲೆಯ ನಾಡವರು(ಬಂಟರು) ಎಂಬ ಕುಲದವರಲ್ಲಿ 'ಹೊಲೆಯಬಳಿ' ಇರುವುದು ಆಕಸ್ಮಿಕವಲ್ಲ. ದಲಿತ ಸಂಸ್ಕೃತಿಯ ಜತೆ ಈಗಲೂ ಗಾಢ ಸಂಬಂಧವಿರುವ ಬಂಟರು, ಮೂಲ ಕೃಷಿಕ ಕುಲದ ಸಂಬಂಧಿಗಳಾಗಿರುವುದರಿಂದಲೇ 'ಹೊಲೆಯ ಬಳಿ' ಅವರಲ್ಲಿ ಸೇರಿರಬೇಕು. ದಲಿತ ಮೂಲದಿಂದ ಹುಟ್ಟಿದ ಅನೇಕ ಜಾತಿಗಳಲ್ಲಿ ಇದೂ ಒಂದು ಎಂದು ಹೇಳಬೇಕಾಗುತ್ತದೆ. ಶಾಸನಗಳಲ್ಲಿ (SII VII, ಪು. ೧೭೭). 'ಹೊಲೆಯರ ಅಂಕಶೆಟ್ಟಿ', (SII. IX II, ಪು. ೧೬೫) 'ಹೊಲೆಯರ ಬಳಿಯ ಚಿತುಶೆಟ್ಟಿ', ಮುಂತಾದ ಉಲ್ಲೇಖಗಳು ಸಾಕಷ್ಟಿವೆ. ಬಂಟ ಬಿಲ್ಲವರ ಬಳಿಗಳೂ ದಲಿತರ ಬಳಿಗಳೂ ಒಂದೇ ಇರುವುದರಿಂದಲೂ; ಅವರೆಲ್ಲರೂ ಮಾತೃ ಮೂಲೀಯ ಸಮಾಜದವರಾಗಿರುವುದರಿಂದಲೂ, ಇವರೆಲ್ಲ ಒಂದೇ ಮೂಲದವರೆಂದು ಗೊತ್ತಾಗುತ್ತದೆ.

[illegible] ದಲಿತರ ನೆಲೆಯಾಗಿತ್ತು. ಎಲ್ಲಮ್ಮ (ಮಾತಂಗಿ)ಳ ಮಗನಾದ ಪರಶುರಾಮನ ಕ್ಷೇತ್ರ ಕೇರಳ ಮತ್ತು ತುಳುನಾಡು ಎಂಬಲ್ಲೂ ಅದು ದಲಿತರ ನಾಡು ಎಂದೇ. ಹೊಲೆಯರ ಸಂಸ್ಕೃತಿಗೆ ಗಾಢವಾದ ನಂಟಿರುವ ಎಮ್ಮೆ ಕೋಣಗಳ ನಾಡು ಎರಮ್ಮೆ-ನಾಡು, ಮಹಿಷಮಂಡಲ, ಮೈಸೂರು ಎಲ್ಲವೂ ನಿಚ್ಚಳವೇ ಇದೆ. ಹೊಲೆಯ-ಮಾದಿಗ ಘಟಿತ ಗ್ರಾಮನಾಮ ಗಳು ನಾಡಿನಲ್ಲೆಲ್ಲ ಪಸರಿಸಿವೆ. (ವಿವರಗಳಿಗೆ ನನ್ನ 'ದಲಿತ ಸಂಸ್ಕೃತಿ' ಗ್ರಂಥ ನೋಡಿ)

ಕೋಣಪಂಥ:

ದಕ್ಷಿಣ ಕನ್ನಡದ ಹೊಲೆಯರಲ್ಲಿ ಬಾಕುಡ (ಮುಂಡಾಲ), ಮೇರ(ಮುಗೇರ) ಮತ್ತು ಮಾರಿ(ಮನ್ಸರು) ಎಂಬ ವಿಭಾಗಗಳಿವೆ. ಮಾರಿ ಹೊಲೆಯರು ಎಮ್ಮೆ ಅಥವಾ ಕೋಣ ಟೋಟೆಂ ಜನಗಳಿರುವಂತೆ ತೋರುತ್ತದೆ. ಏಕೆಂದರೆ ಕಾಸರಗೋಡು ತಾಲೂಕಿನ ಪಶುಪಾಲಕರಾದ ಕೋಲಯನ್‌ರಲ್ಲಿ ಕೋಲ ಆಯನ್ ಮತ್ತು ಮಾರಿಯನ್ ಅಥವಾ ಎರುಮಾನ್ ಎಂಬ ವಿಭಾಗಗಳಿದ್ದು ಇಲ್ಲಿ ಮಾರಿಯನ್ನು ಎಮ್ಮೆ ಎಂದಿರುವುದನ್ನು ಗಮನಿಸಬೇಕು (ಥರ್‌ಸ್ಟನ್, ಪು. ೩೦೦).

ಇಡೀ ದಕ್ಷಿಣ ಭಾರತದ ಗ್ರಾಮೀಣ ಪ್ರದೇಶದಲ್ಲಿ ಊರಮ್ಮಗಳ ಹಬ್ಬ ಮಾಡುವಾಗ ಮಹತ್ವದ ಕೊನೆಯ ವಿಧಿಯಾಚರಣೆಯಾಗಿ ಕೋಣವನ್ನು ಬಲಿನೀಡಿ ಕರಸನ್ನು ಅನ್ನದಲ್ಲಿ ಬೆರೆಸಿ ಹುಲುಸೆಂದು ಊರಸುತ್ತ ಚರಗ ಚಲ್ಲುವವರು ಆ ಪ್ರದೇಶದ ದಲಿತರು. ಊರಮ್ಮ, ದಲಿತರು, ಕೃಷಿ ಆಚರಣೆಗಳು, ಗ್ರಾಮದ ಏಳ್ಗೆ ಇವೆಲ್ಲಕ್ಕೂ ಒಳ ನಂಟಿದ್ದು ಒಟ್ಟಂದದಲ್ಲಿ ಅಧ್ಯಯನಿಸಿದಾಗ ಮಾತ್ರ ಮಹತ್ವದ ಒಳನೋಟಗಳು ದೊರಕುವ ಸಾಧ್ಯತೆಯಿದೆ. ಕೋಣ ಬಹಳಷ್ಟು ಕಡೆ 'ಪೋತರಾಜ'. ಈತ ಕೆಲವು ಕಡೆ ಅಮ್ಮನ ಗಂಡ ಇಲ್ಲವೇ ಸೋದರ. ಮಾತೃಪ್ರಧಾನ ಸಮಾಜದ ಕೃಷಿ ಆಶಯದಲ್ಲಿ 'ಗಂಡು' ಬಲಿಯಾಗಬೇಕಾದದ್ದು ಅನಿವಾರ್ಯ. ಇದು ನೇರವಾಗಿ ದಲಿತರಿಗೆ ಸಂಬಂಧಪಟ್ಟ ಕರ್ತವ್ಯ. ಡಿ.ಡಿ. ಕೋಸಾಂಬಿ ಹೇಳುತ್ತಾರೆ; ಪ್ರಾಚೀನ 'ಮಾತೃದೇವತೆಗೆ ವರ್ಷಕ್ಕೊಮ್ಮೆ ಒಬ್ಬ ಗಂಡಸನ್ನು ಕೊಟ್ಟು ವಿವಾಹ ಮಾಡಲಾಗುತ್ತದೆ ಹಾಗೂ ಆ ಕೂಡಲೇ ಅವನನ್ನು ಬಲಿಕೊಟ್ಟು ಬಿಡಲಾಗುತ್ತದೆ' (ಪೂರ್ವೋಕ್ತ ಪು.೫೮).

ಕೋಣನಿಗೆ ಸಂಬಂಧಪಟ್ಟ ತುಂಬ ಸ್ವಾರಸ್ಯಕರವಾದ ಮಾಹಿತಿಗಳು ಪ್ರಾಚ್ಯ ಶೋಧನೆಯಲ್ಲೂ, ಚರಿತ್ರೆಯಲ್ಲೂ ದಾಖಲಾಗಿವೆ. ನೂತನ ಶಿಲಾಯುಗದ ನೆಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಗ್ರಹಿತವಾದ ದನಗಳ ಸಗಣಿಯನ್ನು ಸುಟ್ಟ ದೊಡ್ಡ ಬೂದಿದಿಣ್ಣೆಗಳನ್ನು ಕೃಷ್ಣಾ ತುಂಗಭದ್ರಾ ನದಿ ಪ್ರದೇಶಗಳ ನೆಲೆಗಳಲ್ಲಿ ಪ್ರಾಚ್ಯಶಾಸ್ತ್ರಜ್ಞರು ಕಂಡು ಹಿಡಿದಿದಾರೆ. ಇವು ಕ್ರಿ.ಪೂ.೨೮೮೦-೬೦೦ರವರೆಗಿನವು. ನಂತರ ಸಗಣಿಯನ್ನು ಕೃಷಿಗೆ ಗೊಬ್ಬರವಾಗಿ ಬಳಸುವುದು ಪ್ರಾರಂಭವಾಯಿತು. ಎಮ್ಮೆ ಕೋಣಗಳ ಶಗಣಿಯನ್ನು ಸುಡುವುದರಿಂದ ಮಾತ್ರ ಈ ಬೂದಿದಿಣ್ಣೆಗಳಾಗಿವೆ ಎಂದು ವಿದ್ವಾಂಸರ ಅಭಿಪ್ರಾಯ. ('ಕರ್ನಾಟಕ ಚರಿತ್ರೆ', ಹಂಪಿ ಕನ್ನಡ ವಿ.ವಿ., ಸಂ.-೧, ಪು.೧೮೭) ಕರ್ನಾಟಕದ ೪೨ ಕಡೆ, ಆಂಧ್ರದ ೧೫ ಕಡೆ ಇಂಥ ಬೂದಿಗುಡ್ಡೆಗಳನ್ನು ಶೋಧಕರು ಪತ್ತೆಮಾಡಿದ್ದು ಇವು ವಾಲಿ, ಹಿಡಿಂಬರಂಥ ರಾಕ್ಷಸರನ್ನು ಸುಟ್ಟ

ಇಡೀ ದಕ್ಷಿಣ ಭಾರತದ ಗ್ರಾಮೀಣ ಪ್ರದೇಶದಲ್ಲಿ ಊರಮ್ಮಗಳ ಹಬ್ಬ ಮಾಡುವಾಗ ಮಹತ್ವದ ಕೊನೆಯ ವಿಧಿಯಾಚರಣೆಯಾಗಿ ಕೋಣವನ್ನು ಬಲಿನೀಡಿ ಕರಸನ್ನು ಅನ್ನದಲ್ಲಿ ಬೆರೆಸಿ ಹುಲುಸೆಂದು ಊರಸುತ್ತ ಚರಗ ಚಲ್ಲುವವರು ಆ ಪ್ರದೇಶದ ದಲಿತರು. ಊರಮ್ಮ, ದಲಿತರು, ಕೃಷಿ ಆಚರಣೆಗಳು, ಗ್ರಾಮದ ಏಳ್ಗೆ ಇವೆಲ್ಲಕ್ಕೂ ಒಳ ನಂಟಿದ್ದು ಒಟ್ಟಂದದಲ್ಲಿ ಅಧ್ಯಯನಿಸಿದಾಗ ಮಾತ್ರ ಮಹತ್ವದ ಒಳನೋಟಗಳು ದೊರಕುವ ಸಾಧ್ಯತೆಯಿದೆ. ಕೋಣ ಬಹಳಷ್ಟು ಕಡೆ 'ಪೋತರಾಜ'. ಈತ ಕೆಲವು ಕಡೆ ಅಮ್ಮನ ಗಂಡ ಇಲ್ಲವೇ ಸೋದರ. ಮಾತೃಪ್ರಧಾನ ಸಮಾಜದ ಕೃಷಿ ಆಶಯದಲ್ಲಿ 'ಗಂಡು' ಬಲಿಯಾಗಬೇಕಾದದ್ದು ಅನಿವಾರ್ಯ. ಇದು ನೇರವಾಗಿ ದಲಿತರಿಗೆ ಸಂಬಂಧಪಟ್ಟ ಕರ್ತವ್ಯ. ಡಿ.ಡಿ. ಕೋಸಾಂಬಿ ಹೇಳುತ್ತಾರೆ; ಪ್ರಾಚೀನ 'ಮಾತೃದೇವತೆಗೆ ವರ್ಷಕ್ಕೊಮ್ಮೆ ಒಬ್ಬ ಗಂಡಸನ್ನು ಕೊಟ್ಟು ವಿವಾಹ ಮಾಡಲಾಗುತ್ತದೆ ಹಾಗೂ ಆ ಕೂಡಲೇ ಅವನನ್ನು ಬಲಿಕೊಟ್ಟು ಬಿಡಲಾಗುತ್ತದೆ' (ಪೂರ್ವೋಕ್ತ ಪು.೫೮).

ಸ್ಮಾರಕಗಳೆಂದು ಊಹಿಸುತ್ತಾರೆ. (ಅದೇ ಪು. ೧೮೭) ಅವು ನಮ್ಮ ಪ್ರಕಾರ ವಾಲಿ, ಹಿಡಿಂಬರನ್ನು ಸುಟ್ಟ ಸ್ಮಾರಕಗಳಲ್ಲ, ವಾಲಿ, ಹಿಡಿಂಬರಂಥ ರಾಕ್ಷಸರು ಆಚರಿಸುತ್ತಿದ್ದ ವಿಧಿಯಾಚರಣೆಯ ಸ್ಮಾರಕಗಳು.

ಇದು ಚರಿತ್ರಪೂರ್ವ ಕಾಲದ ಅನುಭವವಾದರೆ, ಚರಿತ್ರ ಯುಗದಲ್ಲಿ ವಿಶೇಷವಾಗಿ ಮಹಿಷಾಸುರಮರ್ದಿನಿ ಮೂರ್ತಿ ಶಿಲ್ಪಗಳು ಸುಮಾರು ಕ್ರಿ.ಶ.೪ನೇ ಶತಮಾನದ ನಂತರ ನಾಡಿನುದ್ದಕ್ಕೂ ಕಂಡುಬರುತ್ತವೆ. ಇವುಗಳಲ್ಲಿ ಕೋಣವನ್ನು ಅಥವಾ ಅಪರೂಪವಾಗಿ ಮನುಷ್ಯನನ್ನು (ಕೋಣ ಟೊಟೆಂ ಆಗಿರುವ ವ್ಯಕ್ತಿ) ದೇವಿ ಕಡಿದು ಹಾಕುತ್ತಿರುವ ಆಶಯ ವಿರುತ್ತದೆ. ದೇವಿ ಊಳಿಗಮಾನ್ಯ ದೊರೆಗಳ ವೇಷ ಭೂಷಣಗಳಿಂದ ಅಲಂಕೃತಳಾಗಿರುವುದು ಸಾಮಾನ್ಯ. ಇನ್ನೂ ಒಂದು ವಿಶೇಷವೆಂದರೆ ಧಾರವಾಡ ಜಿಲ್ಲೆಯ ಎಲವಟ್ಟಿ, ಆಸುಂಡಿ, ಹಿರೇ ಅಣಜಿ ಮುಂತಾದೆಡೆ ಕೋಣನ ಮುಖ ಮಾತ್ರ ಇರುವ ಪ್ರತ್ಯೇಕ ಮೂರ್ತಿಶಿಲ್ಪಗಳು ದೊರಕಿರುವುದು. ಕೋಣನ ಕೊಂಬುಗಳಿಂದ ಅಲಂಕೃತವಾದ ದೊರೆಯ ಚಿತ್ರ ಸಿಂಧೂ ನಾಗರಿಕತೆಯಲ್ಲಿ ಸಿಕ್ಕಿರುವುದರಿಂದ ಕೋಣ ಕುಲ ಲಾಂಛಾನದ (ಟೊಟೆಂ) ಜನರನ್ನು ರಾಜರನ್ನಾಗಿ ಮಾಡುತ್ತಿದ್ದರೆಂದು ಲೆವಿನ್ ಮತ್ತು ವಿಗಾಸಿನ್‌ರು ಊಹಿಸಿದ್ದಾರೆ. ('ದಿ ಇಮೇಜ್ ಆಫ್ ಇಂಡಿಯಾ' ಪು. ೧೯೭) ಆದರೆ ಇವನನ್ನು 'ಪಶುಪತಿ' ರುದ್ರನೆಂದೂ ಗುರುತಿಸಲಾಗಿದೆ ಮಹಿಷ ಎಂಬ ಪದದಿಂದ ಮಹಿಷಿ(ರಾಣಿ), ಮೈಸೂರು ಹುಟ್ಟಿವೆ. ಮೈಸೂರು ಕೋಣಗಳ ಕುಲಲಾಂಛನದವರ ಪ್ರದೇಶವಾಗಿತ್ತು. ಮಹಾಭಾರತ ಹೇಳುವ ಕನ್ನಡ ನಾಡುಗಳಲ್ಲಿ ಮಹಿಷಕ (ಬನವಾಸಿ, ಉನ್ನತ್ಯಕ) ಕೂಡ ಸೇರಿದೆ. ಮಹಾಭಾರತದ ಕಾಲ ಕ್ರಿ.ಪೂ. ೫೦೦ ಎಂದು ಹೇಳುತ್ತಾರೆ.. ಮಹಿಷಾಸುರಮರ್ದಿನಿಗೆ 'ಕೋಲಾಸುರ ಭಯಂಕರಿ' ಎಂಬ ವಿಶೇಷಣ ಪುರಾಣಗಳಲ್ಲಿರುವುದರಿಂದ ಕೋಲರು ಕೋಣ ಕುಲಲಾಂಛನದ ದಲಿತರೆಂಬ ನಮ್ಮ ವಾದಕ್ಕೆ ಬಲ ಬರುತ್ತದೆ. ಈ ದೇಶದ ದಲಿತರ ಮೂಲ ಜನ ಮುಂಡಾ ಕೋಲರೆಂಬ ವಾದ ಸಮರ್ಥಿತವಾಗುತ್ತದೆ. ಮಂಗನನ್ನು (ಹನುಮಾನ್) ಕುಲಲಾಂಛನವಾಗುಳ್ಳ ಕನ್ನಡ ಜನಪದವಿರುವುದನ್ನು ರಾಮಾಯಣವಂತೂ ಖಚಿತಪಡಿಸುತ್ತದೆ. ಮಹಾಭಾರತ ಮತ್ತು ಇತರ ವೈದಿಕ ವಾಙ್ಮಯದಲ್ಲಿಯೂ ಇದರ ಪ್ರಸ್ತಾಪಗಳಿವೆ. ಸಿಂಧೂ ನಾಗರಿಕತೆಯಷ್ಟು ಪ್ರಾಚೀನ, ಮಂಗಪಂಥ. ಅಲ್ಲಿ ಮಂಗನ ವಿಗ್ರಹಗಳು ಸಿಕ್ಕಿವೆ. ಇದೇ ರೀತಿ ದಲಿತ ಸಂಸ್ಕೃತಿಗೆ ಸಂಬಂಧಿಸಿದ ಈ ಕೋಣ ಟೊಟೆಂ ಜನ ಇಲ್ಲಿದ್ದರು. ಅಮ್ಮ ಪಂಥದ ಜನ ಇವರನ್ನು ಸೋಲಿಸಿರಬೇಕು. ಇದೇ ಮಹಿಷಾಸುರ ಮರ್ದಿನಿಯ ಆಶಯ. ಅಮ್ಮ ಪಂಥದ ಆಂಧ್ರಮೂಲದ ಮಾದಿಗರು, ಕರ್ನಾಟಕದ ಕೋಣ ಪಂಥದ ಹೊಲೆಯರನ್ನು ಸೋಲಿಸಿರುವ ಸಾಧ್ಯತೆ ಇದೆ. ಆದರೆ ಈ ಕೋಣ ಪೋತುರಾಜನಾಗಿ ಪೂಜೆಗೊಳ್ಳುವುದನ್ನು ಮರೆಯುವಂತಿಲ್ಲ. ಶಿಲ್ಪಗಳಲ್ಲಿ ಅಮ್ಮ, ಶಿವ, ವೀರಭದ್ರ, ಗಣೇಶ ಇವೆಲ್ಲ ಮಾನವ ಅಥವಾ ಅರೆಮಾನವಾಕೃತಿಯಲ್ಲಿದ್ದರೆ ಹಾವು, ಹೋರಿ, ಕೋಣ ಇವೆಲ್ಲ ಪ್ರಾಣಿರೂಪದಲ್ಲೇ ಇರುವುದನ್ನು ನೋಡಿದರೆ ನಾಗರಿಕತೆಯಲ್ಲಿ ಅಮ್ಮ ಶಿವ ಮೊದಲಾದ ಪಂಥಗಳ ಜನಕುಲಗಳು ಉನ್ನತಮಟ್ಟದಲ್ಲಿದ್ದರೆಂದು ಅರ್ಥವಾಗುತ್ತದೆ ಮತ್ತು ಇವು ನಂತರದ ಬೆಳವಣಿಗೆಯ ಫಲಿತವಾಗುತ್ತವೆ. ಕೋಣ, ಕರಡಿ ಬೆಡಗಿನ ಕಾಡುಗೊಲ್ಲರು ಆ ಪ್ರಾಣಿಗಳು ತಮಗೆ ಹೇಗೆ ಕುಲಲಾಂಛನ ವಾದವೆಂಬುದನ್ನು ಕತೆಯಾಗಿ ಹೇಳುತ್ತಾರೆ. ('ಕಾಡಗೊಲ್ಲರ ನಂಬಿಕೆಗಳು ಮತ್ತು ಸಂಪ್ರದಾಯಗಳು' ತೀ.ನಂ. ಶಂಕರನಾರಾಯಣ) ಕೃಷಿಕ ಮಾತೃಪ್ರಧಾನ ಸಮಾಜಗಳು ಕೋಣ ಬುಡಕಟ್ಟಿನವರ ಜತೆ ಮೊದಲು ಘರ್ಷಣೆಗಿಳಿದು ನಂತರ ಸಮೀಕರಣಗೊಂಡಿರುವುದನ್ನು ಹಬ್ಬ, ಜಾತ್ರೆಗಳು, ಶಿಲ್ಪಾಶಯಗಳು ಸೂಚಿಸುತ್ತವೆ. ಕಾಲಾಂತರದಲ್ಲಿ ಬಯಲು ಪ್ರದೇಶದಲ್ಲಿ ಕೃಷಿಗೆ ಹೋರಿ ಎತ್ತುಗಳನ್ನು ವ್ಯಾಪಕವಾಗಿ ಬಳಸತೊಡಗಿದರು. ಇದು ಈಶ್ವರ

ದೇಗುಲಗಳಲ್ಲಿ 'ನಂದಿ'ಯ ಸ್ಥಾಪನೆಯಲ್ಲಿ ಪ್ರತಿಬಿಂಬಿತವಾಯಿತು. ಲಿಂಗದಲ್ಲಿ ಮೇಲ್ಭಾಗದ ಪಿಂಡಿ ಶಿಶ್ನವನ್ನು, ಕೆಳಗಿನ ಪೀಠ ಯೋನಿಯನ್ನು ಅಂದರ್‍ಥೆ ಶೈವ ಶಾಕ್ತರು ಒಟ್ಟಾದುದನ್ನು ಸೂಚಿಸುತ್ತದೆಂದು ವಿದ್ವಾಂಸರ ಅಭಿಪ್ರಾಯ.

ಕೋಣ ಕುಲದವರನ್ನು ಶಿಷ್ಟ ಪರಂಪರೆ ರಾಕ್ಷಸ (ಮಹಿಷಾಸುರ)ರೆಂದಿರುವುದನ್ನು ಗಮನಿಸಬೇಕು. ಪುರಾಣಗಳಲ್ಲಿ 'ದುರ್ಗೆ'ಯ ಕತೆಯಂತೂ ಪ್ರಖ್ಯಾತವಾಯಿತು. ವೈದಿಕರು ತಮ್ಮ ಪಶುಪಾಲಕ ಸಂಸ್ಕೃತಿಗಿಂತ ಮುಂದಿದ್ದ ಕೃಷಿ ಸಂಸ್ಕೃತಿಯನ್ನು ತಮ್ಮಲ್ಲಿ ಸೇರಿಸಿಕೊಳ್ಳುವುದರ ಅನಿವಾರ್ಯ ಕ್ರಮವಾಗಿ ಮೂಲ ಕೃಷಿಕರ ಅಮ್ಮನನ್ನು ವೈದಿಕೀಕರಿಸಿದರು. ಆಕೆಯ ಮಕ್ಕಳ ವಿರುದ್ಧ ಆಕೆಯನ್ನೇ ಎತ್ತಿಕಟ್ಟಿದರು.

ವಾತಾಪಿ, ಇಲ್ವಲ(ಅಗಸ್ತ್ಯನ ಕತೆಯಲ್ಲಿ), ಮಣಿಮಲ್ಲಾಸುರರು(ಮೈಲಾರ ಪಂಥದಲ್ಲಿ), ಬಲಿ(ವಾಮನಾವತಾರದಲ್ಲಿ), ಬಕ, ಹಿಡಿಂಬ (ಭೀಮನ ಕತೆ), ಚಂಡ, ಮುಂಡ, ಮಹಿಷ(ಚಾಮುಂಡಿ, ದುರ್ಗೆಗೆ ಸಂಬಂಧಿಸಿ) ಹೀಗೆ ಅಸಂಖ್ಯ ರಾಕ್ಷಸರು ಶೈವರಾಗಿದ್ದುದನ್ನು, ಇವರೆಲ್ಲ ಶಿವಲಿಂಗ ಸ್ಥಾಪಿಸುತ್ತಿದ್ದುದನ್ನು ಅಥವಾ ಸ್ವತಃ ಇವರೇ ಲಿಂಗಗಳಾಗುತ್ತಿದ್ದುದನ್ನು ವೈದಿಕ ವಾಙ್ಮಯವೂ ಕೂಡ ದಾಖಲಿಸುತ್ತದೆ. ಇವರೆಲ್ಲ ಕೃಷಿ ಮೂಲದ ಹೊಲೆಯರು ಮತ್ತು ಮಾದಿಗರೇ.

ಮಾತಂಗಿ ದುರ್ಗೆಯಾಗಿ, ಎಲ್ಲಮ್ಮನಾಗಿ ಬೇರೆ ಬೇರೆ ಆಕಾರ ಪಡೆದ ಮಾದಿಗ ಕುಲದ ಮೂಲ ತಾಯಿ. ಮಾದಿಗರು ಅಮ್ಮನ ಪಂಥದವರು. ಚರಿತ್ರಯುಗದಲ್ಲಿ ಇವರ ಕತೆಗಳನ್ನು, ಆಚರಣೆಗಳನ್ನು ತಿರುಚಿ ಹಾಕಲು ಸಾಕಷ್ಟು ಯತ್ನ ನಡೆಯಿತು. 'ಮಾದಿಗ' ಪದದಿಂದ 'ಮಾತಂಗಿ' ಹುಟ್ಟಿದೆಯೆಂದು ಟಿ.ಬರೋ, ಎಮಿನೋ ('ದ್ರಾವಿಡಿಯನ್ ಎಟಿಮಾಲಾಜಿಕಲ್' ಕೋಶ) ಹೇಳುತ್ತಾರೆ. ಕ್ರಿ.ಪೂ.೧೦೦೦-೫೦೦ರ ಕಾಲಾವಧಿಯ ಬೃಹತ್ ಶಿಲಾ ಯುಗದಲ್ಲಿ ಬಂಡೆ ವರ್ಣ ಚಿತ್ರಗಳು ನಂತರದ ಲಜ್ಜಾ ಗೌರಿಯನ್ನು ಸಂಪೂರ್ಣ ಹೋಲುತ್ತಿದ್ದು (ನಾರಾಯಣ ಪೇಟೆ - ಗಂಗಾವತಿ ಹತ್ತಿರ) ತಾಂತ್ರಿಕ ಪಂಥದ ಉಗಮವನ್ನು ಸೂಚಿಸುತ್ತದೆ. ('ಅಧ್ಯಯನ', ಅ.ಸುಂದರ ಅವರ ಲೇಖನ) ತಾಯಿ ಪಂಥದ ಪ್ರಾಚೀನತೆಯ ಒಂದು ಗಡಿಗುರುತು ಇದು.

ಇನ್ನೊಂದನ್ನು ಇಲ್ಲಿ ನಮೂದಿಸುವುದಾದರೆ ಸಿಂಧೂ ನಾಗರಿಕತೆಯ ಮೊಹೆಂಜೊದಾರೊವಿನ ಬೃಹತ್ ಸ್ನಾನ ಗೃಹವೆಂದು ಖ್ಯಾತವಿರುವ ಪುಷ್ಕರಿಣಿ ಡಿ.ಡಿ.ಕೋಸಾಂಬಿಯವರ ಪ್ರಕಾರ ಮಾತೃದೇವತಾರಾಧನೆಗೆ ಸಂಬಂಧಿಸಿದ್ದು (ಪೂರ್ವೋಕ್ತ ಪು. ೫೮) ಮಾದಿಗ ಕುಲದ ಅಮ್ಮ ಪಂಥದ ಪ್ರಾಚೀನತೆ ಹೀಗೆ ಸಿಂಧೂ ನಾಗರಿಕತೆಗೆ ಸರಿಯುತ್ತದೆ.

ಅಗಸ್ತ್ಯನ ಕತೆ:

ದಕ್ಷಿಣ ಭಾರತವನ್ನು ಕುರಿತು ನೀಲಕಂಠಶಾಸ್ತ್ರಿಗಳು ಬರೆದ 'ಎ ಹಿಸ್ಟರಿ ಆಫ್ ಸೌತ್ ಇಂಡಿಯಾ' (೧೯೭೬) ತುಂಬ ಮಹತ್ವದ ಕೃತಿಯೆಂದು ಮನ್ನಣೆ ಪಡೆದಿದೆ. 'ದ್ರಾವಿಡರ ದೃಷ್ಟಿಕೋನ'ವೆಂಬುದು ಅಸಂಬದ್ಧ ಕಲ್ಪನೆಯಲ್ಲ. ಹೀಗೆ ನೋಡಿದರೆ ಶಾಸ್ತ್ರಿಗಳ ಗ್ರಂಥ ವೈದಿಕಪರವಾಗಿದೆ. ಚಿಕಿತ್ಸಕ, ವೈಜ್ಞಾನಿಕ, ತಾರ್ಕಿಕ ಮತ್ತು ಸತ್ಯದ ಪರವಾದುದು ದಲಿತ ದೃಷ್ಟಿಕೋನ. ಶಾಸ್ತ್ರಿಗಳ ಗ್ರಂಥದ ವಿವರವಾದ ಪರಾಮರ್ಶೆಗೆ ಇದು ಸ್ಥಳವಲ್ಲ. ದಕ್ಷಿಣವನ್ನು ಆರ್ಯೀಕರಣಗೊಳಿಸಿದ ವೈದಿಕ



ಮಾತಂಗಿ ದುರ್ಗೆಯಾಗಿ, ಎಲ್ಲಮ್ಮನಾಗಿ ಬೇರೆ ಬೇರೆ ಆಕಾರ ಪಡೆದ ಮಾದಿಗ ಕುಲದ ಮೂಲ ತಾಯಿ. ಮಾದಿಗರು ಅಮ್ಮನ ಪಂಥದವರು. ಚರಿತ್ರಯುಗದಲ್ಲಿ ಇವರ ಕತೆಗಳನ್ನು, ಆಚರಣೆಗಳನ್ನು ತಿರುಚಿ ಹಾಕಲು ಸಾಕಷ್ಟು ಯತ್ನ ನಡೆಯಿತು. 'ಮಾದಿಗ' ಪದದಿಂದ 'ಮಾತಂಗಿ' ಹುಟ್ಟಿದೆಯೆಂದು ಟಿ.ಬರೋ, ಎಮಿನೋ ('ದ್ರಾವಿಡಿಯನ್ ಎಟಿಮಾಲಾಜಿಕಲ್' ಕೋಶ) ಹೇಳುತ್ತಾರೆ. ಕ್ರಿ.ಪೂ.೧೦೦೦- ೫೦೦ರ ಕಾಲಾವಧಿಯ ಬೃಹತ್ ಶಿಲಾ ಯುಗದಲ್ಲಿ ಬಂಡೆ ವರ್ಣ ಚಿತ್ರಗಳು ನಂತರದ ಲಜ್ಜಾ ಗೌರಿಯನ್ನು ಸಂಪೂರ್ಣ ಹೋಲುತ್ತಿದ್ದು (ನಾರಾಯಣ ಪೇಟೆ - ಗಂಗಾವತಿ ಹತ್ತಿರ) ತಾಂತ್ರಿಕ ಪಂಥದ ಉಗಮವನ್ನು ಸೂಚಿಸುತ್ತದೆ. ('ಅಧ್ಯಯನ', ಅ.ಸುಂದರ ಅವರ ಲೇಖನ) ತಾಯಿ ಪಂಥದ ಪ್ರಾಚೀನತೆಯ ಒಂದು ಗಡಿಗುರುತು ಇದು.

ಋಷಿ ಅಗಸ್ತ್ಯನ ಕತೆಯನ್ನು ಶಾಸ್ತ್ರಿಗಳು ದೀರ್ಘವಾಗಿ ಬಳಸಿಕೊಂಡಿರುವ ಭಾಗವನ್ನಷ್ಟೇ ಇಲ್ಲಿ ನೋಡಬಹುದು. 'ದಿ ಡಾನ್ ಆಫ್ ಹಿಸ್ಟ್ರಿ: ಆರ್ಯನೈಜೇಶನ್' ಎಂಬ ನಾಲ್ಕನೇ ಅಧ್ಯಾಯದಲ್ಲಿ ಶಾಸ್ತ್ರಿಗಳು ವೈದಿಕ ಪರಶುರಾಮ, ಅಗಸ್ತ್ಯ ಮೊದಲಾದವರ ಕತೆಗಳನ್ನು ಬಳಸಿಕೊಂಡಿದ್ದಾರೆ.

ಮಹಾಭಾರತದಲ್ಲಿ ಬರುವ ಕತೆಯ ಪ್ರಕಾರ ತನ್ನ ಪಿತೃಗಳಿಗೆ ಸದ್ಗತಿಯನ್ನು ದೊರಕಿಸಿಕೊಡುವ ಉದ್ದೇಶದಿಂದ ಅಗಸ್ತ್ಯ ಮದುವೆಯಾಗುವ ಪ್ರಸಂಗ ಬರುತ್ತದೆ. ಈ ಋಷಿ ಆಗಲೆ ಆರ್ಯೀಕರಣಗೊಂಡಿದ್ದ ಆರ್ಯಾವರ್ತದ ದಕ್ಷಿಣಕ್ಕಿದ್ದ (ವಿಂಧ್ಯಪರ್ವತ) ವಿದರ್ಭ ದೇಶದ ಅರಸನ ಮಗಳನ್ನು ಕೇಳುತ್ತಾನೆ. ಋಷಿ ಶಾಪಕ್ಕೆ ಹೆದರಿ ಲೋಪಮುದ್ರೆ ಆತನನ್ನು ಮದುವೆಯಾದರೂ ಕೂಡುವುದಿಲ್ಲ. ಋಷಿ ಲೈಂಗಿಕ ಕ್ರಿಯೆಗೆ ಕರೆದಾಗ 'ಅರಮನೆಯಲ್ಲಿರುವ ಮಂಚ ವೇಷ ಭೂಷಣಾದಿಗಳಿದ್ದರೆ ಮಾತ್ರ' ಎಂದು ಕರಾರು ಹಾಕುತ್ತಾಳೆ. ಆಕೆ ಎಂಥ ಚಾಲೂಕು ನೋಡಿ. ಅವನ್ನೆಲ್ಲ ಪಡೆಯಲು ತಪಸ್ಸಿನ ಫಲ ಬಳಸಿ ಎಂದರೆ 'ವ್ಯರ್ಥ ಹಾಳಾಗುತ್ತೆ ಬೇಡ' ಎನ್ನುತ್ತಾನೆ. ಮೂವರು ಆರ್ಯ ಅರಸರನ್ನು ಕೇಳಿ, ಅವರ ಆದಾಯ ವೆಚ್ಚಗಳ ಪಟ್ಟಿ ಸಮವಿರುವುದನ್ನು ತಿಳಿದು ಮಣೀಮತೀ ಪಟ್ಟಣದ ಇಲ್ವಲ ಎಂಬ ರಾಕ್ಷಸ ದೊರೆಯ ಹತ್ತಿರ ನಾಲ್ವರೂ ಬರುತ್ತಾರೆ.

ಇಲ್ವಲನ ತಮ್ಮ ವಾತಾಪಿ, ಈ ವಾತಾಪಿಯೇ ನಮ್ಮ ನಾಡಿನ ಮೊದಲ ಸಾಮ್ರಾಜ್ಯದ ರಾಜಧಾನಿಯಾದ ಚಾಲುಕ್ಯರ ಬಾದಾಮಿ. (ಶಾಸ್ತ್ರಿಗಳು ಇದನ್ನೇ ಹೇಳಹೊರಟಿ ದ್ದಾರೆ) ವ್ಯಕ್ತಿಯಿಂದ ಗ್ರಾಮನಾಮ ಬರುವುದು ನಮ್ಮ ಪರಂಪರೆಯಲ್ಲಿರುವುದರಿಂದ ಸೈ ಎನ್ನೋಣ. ಪ್ರಶ್ನೆ ಇದಲ್ಲ. ಈ ವಾತಾಪಿಯನ್ನು ಆಡು ಮಾಡಿ ಇಲ್ವಲ ಋಷಿಗೆ ತಿನ್ನಿಸಿದಾಗ ಅದನ್ನು ಅರಗಿಸಿಕೊಂಡು ಋಷಿ ದೊಡ್ಡ ಹೂಸು ಬಿಡುತ್ತಾನೆ. ಈ ಮೊದಲಿನಂತೆ ಅಣ್ಣ ಕರೆದ ತಕ್ಷಣ ಋಷಿಯ ಹೊಟ್ಟೆ ಸೀಳಿ ವಾತಾಪಿ ಹೊರಬರುವುದಿಲ್ಲ. ಇದರರ್ಥವೇನಿರಬೇಕು?

ಋಷಿಯನ್ನು ಬಹುಶಃ ಮರೆಗೆ ನಿಂತು ಕೊಲ್ಲುವಲ್ಲಿ ವಿಫಲನಾದ ವಾತಾಪಿ ತಾನೇ ಸ್ವತಃ ಋಷಿಯಿಂದ ಹತನಾಗಿರಬೇಕು. ಇದಕ್ಕೆ ಹೆದರಿ ಅಣ್ಣ ಇಲ್ವಲ ಋಷಿ ಕೇಳಿದಷ್ಟು ಸಂಪತ್ತು ಸೂರೆ ಮಾಡುತ್ತಾನೆ. ತನ್ನ ಹೆಂಡತಿಯನ್ನು ರಾಜ ವೈಭವದಲ್ಲಿಟ್ಟು ಸಂಭೋಗಿಸುವ ಘನವಾದ ಉದ್ದೇಶದಿಂದ ಅಗಸ್ತ್ಯ ರಾಕ್ಷಸನ ಸಂಪತ್ತನ್ನು ಲಪಟಾಯಿಸುತ್ತಾನೆನ್ನುವ ಈ ಕತೆಯನ್ನು ಅತ್ಯಂತ ಗೌರವದಿಂದ ಶಾಸ್ತ್ರಿಗಳು ಉದ್ಧರಿಸುತ್ತಾರೆ. ಇಲ್ವಲನಿಗೆ ಬ್ರಾಹ್ಮಣರ ಮೇಲೆ ಸಿಟ್ಟು ಬರಲು ಕಾರಣವೇನೆಂದರೆ ಒಬ್ಬ ಬ್ರಾಹ್ಮಣ ಇವನಿಗೆ ಇಂದ್ರನಂಥ ಮಗ ಹುಟ್ಟಲು ವರ ನೀಡಲಿಲ್ಲವಂತೆ.

ಆಡಿನ ರೂಪದ ವಾತಾಪಿಯನ್ನು ತಿಂದ ಅಗಸ್ತ್ಯನರಭಕ್ಷಕನಾಗಲಿಲ್ಲವೇ? ಇಂಥ ಯೋಚನೆಯೇ ಶಾಸ್ತ್ರಿಗಳಂಥವರ ತಲೆಗೆ ಬರಲಾರದು. ಅಗಸ್ತ್ಯನಾದರೂ ಹುಟ್ಟಿದ್ದು ಹೇಗೆ? 'ಕುಂಭ'ದಲ್ಲಿ ಅಲ್ಲವೇ? (ಋಗ್ವೇದದ ಪ್ರಕಾರ). ಕುಂಭ ಆರ್ಯವೈದಿಕ ಸಂಸ್ಕೃತಿಯದೇ ಅಲ್ಲ. ದ್ರಾವಿಡ ಮೂಲದ ಈ ವ್ಯಕ್ತಿ ಬ್ರಾಹ್ಮಣೀಕರಣಗೊಂಡು ದ್ರಾವಿಡರನ್ನೇ (ರಾಕ್ಷಸರು) ವಂಚಿಸುತ್ತಾನೆ. ಆರ್ಯ ವೈದಿಕ ರಾಜರು ಜಮಾಖರ್ಚಿನಲ್ಲಿ ಸಮವಿದ್ದು ಬಡವರಾಗಿದ್ದರೆ, ವಾತಾಪಿ ಇಲ್ವಲರಂಥ ರಾಕ್ಷಸರು ಸಾಕಷ್ಟು ಶ್ರೀಮಂತ ದೊರೆಗಳಾಗಿದ್ದರು ಎಂದು ಕಥೆ ಸ್ಪಷ್ಟಪಡಿಸುತ್ತದೆ. ಹಾಗಾಗಿ ಅಗಸ್ತ್ಯನಂಥ ಋಷಿ ಸಂಪತ್ತಿನಿಂದ ತುಂಬಿದ ದಕ್ಷಿಣಕ್ಕೆ ಪ್ರವೇಶಿಸುತ್ತಾನೆಂದೇ ವಿದಿತವಾಗುತ್ತದೆ. ಆತ ವಂಚನೆಯ ತಂತ್ರವನ್ನು ಅನುಸರಿಸಿ ದಕ್ಷಿಣಕ್ಕೆ ಬಂದಿದ್ದಾನೆ. ಇವನನ್ನು ಶಿಷ್ಟ ತಮಿಳರು ಪವಿತ್ರ, ಪ್ರಸಿದ್ಧ ಪಿತಾಮಹ ಎಂದು ಭಾವಿಸಿದ್ದಾರೆ. ಈತ ಪಾಂಡ್ಯರಿಗೆ ಕುಲಗುರುವಾಗಿದ್ದ

(೪೧ನೇ ಪುಟಕ್ಕೆ)

ಶಂಕರಾಚಾರ್ಯ, ಮತಾಂತರ ಇತ್ಯಾದಿ

ವಿವೇಕಾನಂದರ ವಿಚಾರಗಳು

ಸ್ಮೃತಿ ಪುರಾಣಗಳೆಲ್ಲ ಅಲ್ಪಮತಿಗಳಿಂದ ರಚಿತ ವಾದುವು. ಅವುಗಳಲ್ಲಿ ಬೇಕಾದಷ್ಟು ತಪ್ಪುಗಳಿವೆ, ಜಾತಿ ಕುಲಗಳ ಹೆಮ್ಮೆ ಅಸೂಯೆ ಇವೆ...ಉಪನಿಷತ್ತು ಮತ್ತು ಗೀತೆ ಇವುಗಳು ಮಾತ್ರ ನಿಜವಾದ ಶಾಸ್ತ್ರಗಳು- ರಾಮ, ಕೃಷ್ಣ ಬುದ್ಧ ಚೈತನ್ಯ, ನಾನಕ್, ಕಬೀರ್ ಮುಂತಾದವರು ನಿಜವಾದ ಹೃದಯವಂತರು. ಏಕೆಂದರೆ ಅವರ ಹೃದಯ ಆಕಾಶದಷ್ಟು ವಿಶಾಲವಾಗಿತ್ತು. ಇವರೆಲ್ಲರಿಗಿಂತ ಹೆಚ್ಚು ಶ್ರೀರಾಮಕೃಷ್ಣರು. ರಾಮಾನುಜ ಮತ್ತು ಶಂಕರ ಹೆಚ್ಚು ಹೃದಯ ಸಂಕುಚಿತರಾದ ಪಂಡಿತರಂತೆ ತೋರುವರು.

ಸಂಗ್ರಹ:
ಜ.ಹೂ. ನಾರಾಯಣಸ್ವಾಮಿ

ಶಂಕರಾಚಾರ್ಯ ಮುಂತಾದ ಯುಗಾವತಾರ ವ್ಯಕ್ತಿಗಳು ಹಲವು ಜಾತಿಗಳನ್ನು ಸೃಷ್ಟಿಸಿದರು. ಅವರು ಮಾಡಿರುವ ವಿಚಿತ್ರ ಘಟನೆಗಳನ್ನೆಲ್ಲಾ ಹೇಳಲಾರೆ. ನಿಮ್ಮಲ್ಲಿ ಹಲವರು ಅದನ್ನು ಒಪ್ಪದೆ ಇರಬಹುದು. ಆದರೆ ನನ್ನ ಪ್ರಯಾಣದಲ್ಲಿ ಮತ್ತು ಅನುಭವದಲ್ಲಿ ಇದನ್ನೆಲ್ಲಾ ನಾನು ಕಂಡು ಹಿಡಿದು ಒಂದು ಅದ್ಭುತ ನಿರ್ಣಯಕ್ಕೆ ಬಂದಿರುವೆನು. ಶಂಕರಾಚಾರ್ಯರಿಗೆ ಕತ್ತಿಯ ಧಾರೆಯಂಥ ಬುದ್ಧಿ- ವಿಚಾರಕರೂ ಹೌದು, ಪಂಡಿತರೂ ಹೌದು. ಆದರೆ ಅವರ ಉದಾರತೆಯು ತುಂಬ ಗಂಭೀರವಾದದ್ದಾಗಿರಲಿಲ್ಲ..ಬ್ರಾಹ್ಮಣ ಅಭಿಮಾನವೂ ಹೆಚ್ಚಾಗಿತ್ತು. ದಕ್ಷಿಣ ದೇಶದ ವೈದಿಕ ಬ್ರಾಹ್ಮಣರ ಮಗ, ಮತ್ತೇನು? ಬ್ರಾಹ್ಮಣೇತರರಿಗೆ ಬ್ರಹ್ಮಜ್ಞಾನವಾಗುವುದಿಲ್ಲ ಎಂಬೀ ಅಂಶವನ್ನು ವೇದಾಂತ ಭಾಷ್ಯದಲ್ಲಿ ಹೇಗೆ ಸಮರ್ಥನೆ ಮಾಡಿಕೊಂಡು ಹೋಗಿದ್ದಾರೆ! ಎಂಥ ಡಾಂಭಿಕ ವಿಚಾರ ! ವಿದುರನ ಸಂಗತಿಯನ್ನು ಎತ್ತಿಕೊಂಡು, ಅವನ ಪೂರ್ವಜನ್ಮದ ಬ್ರಾಹ್ಮಣ ಶರೀರ ಫಲದಿಂದ ಅವನು ಬ್ರಹ್ಮಜ್ಞನಾದನೆಂದು ಹೇಳಿದ್ದಾರೆ. ಹಾಗಾದರೆ ನಾನು ಕೇಳುವುದೇನೆಂದರೆ, ಈಗಿನ ಕಾಲದಲ್ಲಿ ಹೀಗೆ ಯಾವನಿಗಾದರೂ ಶೂದ್ರನಿಗೆ ಬ್ರಹ್ಮಜ್ಞಾನವಾದರೆ ಅವನಿಗೆ ಶಂಕರಾಚಾರ್ಯರು ಹೇಳಿರುವಂತೆ ಪೂರ್ವಜನ್ಮದಲ್ಲಿ ಬ್ರಾಹ್ಮಣ್ಯವಿದ್ದುದರಿಂದ ಈಗ ಹೀಗೆ ಆಯಿತು ಎಂದು ಹೇಳಬೇಕೆ? ಬ್ರಾಹ್ಮಣತ್ವವನ್ನು ಹೀಗೆ ಎಳೆದಾಡುವುದರಿಂದ ಬಂದ ಫಲವೇನಪ್ಪಃ ವೇದವೇನೋ ತ್ರಿವರ್ಣದವರಿಗೆ ಮಾತ್ರ ವೇದ ಪಾಠ ಮತ್ತು ಬ್ರಹ್ಮಜ್ಞಾನಗಳ ಅಧಿಕಾರವನ್ನು ಕೊಟ್ಟಿದೆ. ಆದ್ದರಿಂದ ಈ ವಿಷಯಗಳನ್ನು ತೆಗೆದುಕೊಂಡು ವೇದದ ಮೇಲೆ ತಮ್ಮ ಅದ್ಭುತ ವಿದ್ಯೆಯನ್ನು ಉಪಯೋಗಿಸುವ ಅವಶ್ಯಕತೆ ಏನೂ ಕಾಣಲಿಲ್ಲ. ಅಲ್ಲದೆ ಅವರ ಹೃದಯವೆಂತಾದ್ದೆಂದರೆ, ಅವರು ಎಷ್ಟೋ ಜನ ಬೌದ್ಧ ಶ್ರವಣರನ್ನು ಬೆಂಕಿಯಲ್ಲಿ ಬೀಳಿಸಿ ಕೊಲ್ಲಿಸಿ ದರು-ತಮ್ಮ ತರ್ಕದಿಂದ ಸೋಲಿಸಿಬಿಟ್ಟು! ಬುದ್ಧಿ ಹೀನ ರಾದ ಬೌದ್ಧರು ಕೂಡ ತರ್ಕದಲ್ಲಿ ಸೋಲನ್ನು ಒಪ್ಪಿಕೊಂಡು ಬೆಂಕಿಯಲ್ಲಿ ಬಿದ್ದು ಸಾಯುವುದಕ್ಕೆ ಮೊದಲು ಮಾಡಿದರು. ಶಂಕರಾಚಾರ್ಯರ ಈ ರೂಪವಾದ ಕಾರ್ಯವನ್ನು ಧರ್ಮಾಂಧತೆ ಎನ್ನದೆ ಮತ್ತೇನೆನ್ನ ಬಹುದು? ಆದರೆ ಬುದ್ಧದೇವನ ಹೃದಯವನ್ನು ನೋಡು! 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ಈ ಮಾತನ್ನು ಹೇಳಬೇಕಾದ್ದೆ ಇಲ್ಲ. ಸಾಮಾನ್ಯ ಒಂದು ಆಡಿನ ಮರಿಯನ್ನು ಕಾಪಾಡುವುದಕ್ಕಾಗಿ ತನ್ನ ಪ್ರಾಣವನ್ನು ಕೊಡುವುದಕ್ಕೆ ಸರ್ವದಾ ಸಿದ್ಧನಾಗಿರುತ್ತಿದ್ದನು. ನೋಡು ಎಂಥ ಉದಾರತೆ, ಎಂಥ ದಯೆ.

ಉಪನಿಷತ್ತಿನಿಂದಲೇ ಬೌದ್ಧಧರ್ಮ ಬೆಳೆದಿರುವುದು. ಅದೇ ಶಂಕರನಿಗೆ ಬುದ್ಧನಷ್ಟು ಅನುಕಂಪದ ಹೃದಯವಿರಲಿಲ್ಲ. ಬರಿಯ ಬುದ್ಧಿಯ ಒಣ ಪಾಂಡಿತ್ಯ. ತಂತ್ರಕ್ಕೆ ಜನ ಸಮುದಾಯಕ್ಕೆ ಅಂಜಿ, ಒಂದು ಕುರುವನ್ನು ಗುಣ ಮಾಡಲು ಹೋಗಿ ಅದಿದ್ದ ಕೈಯನ್ನೇ ಕತ್ತರಿಸಿದನು.

ಭಾಷ್ಯವನ್ನು ಬರೆದ ದೊಡ್ಡ ಆಚಾರ್ಯರೆಲ್ಲ ಕೆಲವು ವೇಳೆ ತಮ್ಮ ಸಿದ್ಧಾಂತಕ್ಕೆ ಸರಿಯಾದ ಅರ್ಥವನ್ನು ಸೂತ್ರದಲ್ಲಿ ಬರುವಂತೆ ಮಾಡುವಾಗ ತಿಳಿದೇ ಸುಳ್ಳನ್ನು ಹೇಳುತ್ತಿದ್ದರು. ನೋಡಿ ಬಲಾತ್ಕಾರದಿಂದ ಹೇಗೆ ಕೋಟ್ಯಾಂತರ ಜನರು ತಮಗೆ ವಿರೋಧವಾದ ಅಭಿಪ್ರಾಯವನ್ನು ಸ್ವೀಕರಿಸುವಂತೆ ಮಾಡಿರುವರು. ಇದು ಋಷಿಗಳ ಅನ್ಯಾಯ, ಬುದ್ಧಿವಂತರ ಅನ್ಯಾಯ, ಘೋರವಾದದ್ದು. ಪಂಡಿತರು, ಬುದ್ಧಿವಂತರು, ಮತ್ತೊಬ್ಬರ ಮೇಲೆ ತಮ್ಮ ಅಭಿಪ್ರಾಯವನ್ನು ಬಲಾತ್ಕರಿಸುವುದಕ್ಕೆ, ಪಾಮರರು ಪಾರಾಗಲು ಅಸಾಧ್ಯವಾದ ಸಾವಿರಾರು ಬಂಧನಗಳನ್ನು ಅವರ ಮಾರ್ಗದಲ್ಲಿ ತಂದೊಡ್ಡ ಬಲ್ಲರು.

ಸ್ಮೃತಿ ಪುರಾಣಗಳೆಲ್ಲ ಅಲ್ಪಮತಿಗಳಿಂದ ರಚಿತ ವಾದುವು. ಅವುಗಳಲ್ಲಿ ಬೇಕಾದಷ್ಟು ತಪ್ಪುಗಳಿವೆ, ಜಾತಿ ಕುಲಗಳ ಹೆಮ್ಮೆ ಅಸೂಯೆ ಇವೆ...ಉಪನಿಷತ್ತು ಮತ್ತು ಗೀತೆ ಇವುಗಳು ಮಾತ್ರ ನಿಜವಾದ ಶಾಸ್ತ್ರಗಳು- ರಾಮ, ಕೃಷ್ಣ ಬುದ್ಧ ಚೈತನ್ಯ, ನಾನಕ್, ಕಬೀರ್ ಮುಂತಾದವರು ನಿಜವಾದ ಹೃದಯವಂತರು. ಏಕೆಂದರೆ ಅವರ ಹೃದಯ ಆಕಾಶದಷ್ಟು ವಿಶಾಲವಾಗಿತ್ತು. ಇವರೆಲ್ಲರಿಗಿಂತ ಹೆಚ್ಚು ಶ್ರೀರಾಮಕೃಷ್ಣರು. ರಾಮಾನುಜ ಮತ್ತು ಶಂಕರ ಹೆಚ್ಚು ಹೃದಯ ಸಂಕುಚಿತರಾದ ಪಂಡಿತರಂತೆ ತೋರುವರು. ಆ ಪ್ರೇಮದಲ್ಲಿ ಮತ್ತೊಬ್ಬರ ದುಃಖಕ್ಕೆ ಮರುಗುವ ಹೃದಯವೆಲ್ಲಿ? ಪಂಡಿತನ ನಿಸ್ಸಾರ ವಿದ್ಯೆಯ ಅಲಂಕಾರ. ತಾವೊಬ್ಬರೇ ಮುಕ್ತಿಯನ್ನು ಗಳಿಸಬೇಕೆಂಬ ತವಕದ ಭಾವನೆ. ಆದರೆ ಅದು ನಿಜವಾಗಿ ಸಾಧ್ಯವೇ? ಹಾಗೆ ಎಂದಾದರೂ ಇತ್ತೆ? ಅಥವಾ ಮುಂದೆ ಹೇಗಾದರಾಗಲಿರುವುದೋ? ನಾನು ಎಂಬುವ ಅಹಂಕಾರ ಉಳಿಯುವ ತನಕ ಏನನ್ನಾದರೂ ನಾವು ಸಾಧಿಸಬಹುದೆ?

ಮತಾಂತರ

ಭರತಖಂಡದಲ್ಲಿ ಮಹಮ್ಮದೀಯರ ವಿಜಯ ದೀನರಿಗೆ ದುರ್ಬಲರಿಗೆ ಮುಕ್ತಿಯಂತೆ ಬಂತು. ಆದ ಕಾರಣವೇ ನಮ್ಮ ದೇಶದಲ್ಲಿ ೧/೫ ಪಾಲು ಮಹಮ್ಮದೀಯರಾದರು...ನೀವು ಜೋಪಾನವಾಗಿಲ್ಲದೇ ಇದ್ದರೆ ೧/೫ ಪಾಲು ಅಲ್ಲ, ಮದ್ರಾಸಿನಲ್ಲಿ ೧/೪ ಪಾಲು ಜನರು ಕ್ರೈಸ್ತರಾಗುವರು. ಮಲಬಾರಿನಲ್ಲಿ ನಾನು ನೋಡಿರುವುದಕ್ಕಿಂತ ಹಾಸ್ಯಾಸ್ಪದವಾದುದು ಮತ್ತೆಲ್ಲಿಯಾದರೂ ಇರುವುದೇ? ಸತ್ಕುಲ ಪ್ರಸೂತನಿರುವ ಬೀದಿಯಲ್ಲಿ ಪರೆಯನಿಗೆ ನಡೆಯಲು ಅವಕಾಶವಿಲ್ಲ. ಅವನು ತನ್ನ ಹೆಸರನ್ನ ಬದಲಾಯಿಸಿ ಒಂದು ಇಂಗ್ಲೀಷ್ ಹೆಸರನ್ನೋ ಅಥವಾ ಮಹಮ್ಮದೀಯರ ಹೆಸರನ್ನೋ ಇಟ್ಟುಕೊಂಡರೆ ಪರವಾಯಿಲ್ಲ. ಇದರಿಂದ ನೀವು ಅವರನ್ನು ಯಾರು ಎಂದು ಊಹಿಸಬೇಕಾಗಿದೆ. ಮಲೆಯಾಳಿಗಳೆಲ್ಲಾ ಹುಚ್ಚರು. ಅವರ ಮನೆ ಹುಚ್ಚರ ಆಸ್ಪತ್ರೆ. ಭರತಖಂಡದ ಇತರರೆಲ್ಲಾ ಇವರು ತಮ್ಮ ನಡೆಯನ್ನು ಸರಿಮಾಡಿಕೊಂಡು ಬುದ್ಧಿವಂತರಾಗುವವರೆಗೆ ಇವರನ್ನು ನಿಕೃಷ್ಟ ದೃಷ್ಟಿಯಿಂದ ಕಾಣಬೇಕು, ನಾಚಿಕೆಗೇಡು! ಇಂತಹ ಕ್ರೂರ ಅನಾಗರಿಕ ಆಚಾರ ಅವರಲ್ಲಿದೆ. ಅವರ ಮಕ್ಕಳು ಉಪವಾಸದಿಂದ ಸಾಯುವರು. ಅವರು ಧರ್ಮವನ್ನು ಬದಲಾಯಿಸಿದರೆ ಹೊಟ್ಟೆ ತುಂಬಾ ಊಟ ಸಿಕ್ಕುವುದು.

ಭರತ ಖಂಡದಲ್ಲಿ ೧/೫ ಭಾಗ ಮಹಮ್ಮದೀಯರಾಗಿರು ವರು. ಸ್ವಲ್ಪ ಹಿಂದಿನ ಕಾಲಕ್ಕೆ ಹೋದರೆ ೨/೩ ಭಾಗ ಬೌದ್ಧರಾಗಿದ್ದರು. ಈಗ ೧/೫ ಭಾಗ ಮಹಮ್ಮದೀಯರು, ಕ್ರೈಸ್ತರಾಗಲೇ ಹತ್ತು ಲಕ್ಷದ ಮೇಲಿರುವರು. ಇದು ಯಾರ ತಪ್ಪು? ಎಂದೂ ಮರೆಯದ ಭಾಷೆಯಲ್ಲಿ ಇತಿಹಾಸಜ್ಞರೊಬ್ಬರು 'ಎಂದಿಗೂ ಬತ್ತದ ಅಮೃತ ಪ್ರವಾಹ ಪಕ್ಕದಲ್ಲೇ ಹರಿಯುತ್ತಿರುವಾಗ ಈ ದುರ್ಭಾಗಿಗಳು ಏಕೆ ಉಪವಾಸದಿಂದ ನರಳಿ ಸಾಯಬೇಕು. ನಮ್ಮ ಧರ್ಮವನ್ನು ತ್ಯಜಿಸಿದ ಈ ಜನರಿಗೆ ನಾವು ಏನು ಮಾಡಿದೆವು? ಅವರು ಏತಕ್ಕೆ ಮಹಮ್ಮದೀಯರಾದರು?' ಎಂದಿರುವರು. ಇಂಗ್ಲಂಡಿನಲ್ಲಿ ವೇಶ್ಯಾವೃತ್ತಿಗೆ ಕೈಹಾಕುವುದರಲ್ಲಿದ್ದ ಒಬ್ಬಳು ಹುಡುಗಿಗೆ ಯಾರೋ ಹಾಗೆ ಮಾಡಬೇಡವೆಂದಾಗ ಅವಳು ಹೀಗೆ ಹೇಳಿದಳು. 'ಜನರ ಸಹಾನುಭೂತಿಯನ್ನು ಪಡೆಯುವುದಕ್ಕೆ ಅದೊಂದೇ ಮಾರ್ಗ. ಈಗ ಯಾರೂ ನನ್ನ ಸಹಾಯಕ್ಕೆ ಬರುವುದಿಲ್ಲ, ನಾನು ಪತಿತಳಾದ ಮೇಲೆ ನನಗಾಗಿ ಮರುಗುವ ಸ್ತ್ರೀಯರು ನನ್ನ ನೆರವಿಗೆ ಬಂದು, ಎಲ್ಲ ಸಹಾಯವನ್ನು ಒದಗಿಸುವರು'. ನಮ್ಮ ಧರ್ಮದಿಂದ ಹೋದವರಿಗಾಗಿ ನಾವಿಂದು ಅಳುತ್ತಿರುವೆವು. ಅವರಿಗೆ ಹಿಂದೆ ಏನು ಮಾಡಿದೆವು? ನಾವು ಏನು ಕಲಿತಿರುವೆವು? ಈ ಪ್ರಶ್ನೆಯನ್ನು ಪ್ರತಿಯೊಬ್ಬನೂ ಹಾಕಿಕೊಳ್ಳಲಿ.

ಭರತಖಂಡದ ಮಹಮ್ಮದೀಯರಲ್ಲಿ ಅನೇಕರು ಹೇಗೆ ಮಹಮ್ಮದೀಯರಾಗಿರುವರು? ಬಲಪ್ರಯೋಗದಿಂದ ಅವರನ್ನು ಮುಸಲ್ಮಾನ ಮತಕ್ಕೆ ಸೇರಿಸಿದರು ಎನ್ನುವುದು ಶುದ್ಧ ತಪ್ಪು. ಜಮೀನ್‌ದಾರರ ಉಪಟಳದಿಂದ, ಪುರೋಹಿತರ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದು ಮುಸಲ್ಮಾನರಾದರು. ಆದ ಕಾರಣವೇ ಬಂಗಾಳ ದೇಶದ ರೈತರಲ್ಲಿ ಹಿಂದೂಗಳಿಗಿಂತ ಮುಸಲ್ಮಾನರೇ ಹೆಚ್ಚು.

ಅರ್ಧಪ್ರಪಂಚವನ್ನು ಸೂರೆ ಮಾಡಿದ ಜನರು ಅನ್ಯಮತೀಯರನ್ನು ಕ್ರೈಸ್ತಧರ್ಮಕ್ಕೆ ಸೇರಿಸುವುದಕ್ಕಾಗಿ ಇಪ್ಪತ್ತು ಸಾವಿರ ಡಾಲರುಗಳನ್ನು ಕೊಟ್ಟಿರುವುದನ್ನು ನಾನು ನೋಡಿರುವೆನು. ಇದು ಏತಕ್ಕೆ? ಅನ್ಯಧರ್ಮೀಯರ ಸಹಾಯಕ್ಕೋ ಅಥವಾ ತಮ್ಮ ಹಿತಕ್ಕೋ? ಆಲೋಚಿಸಿ ನೋಡಿ. ಬ್ರಾಹ್ಮಣರ ಬಂಧನದಿಂದ ಪಾರಾಗಲು ಯತ್ನಿಸಿದ ಜನ ಸಾಮಾನ್ಯರು ಕ್ರೈಸ್ತಧರ್ಮ ಮುಂತಾದ ದೇಶದ ಒಳಗೆ ಇರುವ ವಿರೋಧ ಧಾರ್ಮಿಕ ಹಾವಳಿಗೆ ಸಿಕ್ಕಿದರು.

ಮೂಢನಂಬಿಕೆ:

ಸತ್ಯವನ್ನು ಮಾತ್ರ ನಂಬುವುದು ನಮ್ಮ ಕರ್ತವ್ಯ. ಮೂಢ ನಂಬಿಕೆಗಳನ್ನು ಅಥವಾ ಹಿಂದಿನಿಂದ ಬಂದ ಕಂದಾಚಾರಗಳನ್ನು ವಿವೇಚನೆ ಇಲ್ಲದೆ ನಂಬುವುದು ನಮ್ಮಲ್ಲಿ ಎಷ್ಟು ಬಲವಾಗಿದೆ ಎಂದರೆ, ನಾವು ಮುಂದೆ ಹೋಗದಂತೆ ಇಲ್ಲಿಯೇ ಕೈಕಾಲುಗಳನ್ನು ಕಟ್ಟಿದಂತೆ ಆಗಿಹೋಗಿದೆ. ಏಸು, ಕ್ರಿಸ್ತ ಮಹಮ್ಮದ್ ಮುಂತಾದ ಮಹಾಪುರುಷರೂ ಇಂತಹ ಹಲವು ಮೂಢನಂಬಿಕೆಗಳನ್ನು ನಂಬಿದ್ದರು. ಅವರೂ ಕೂಡ ಅವುಗಳಿಂದ ಪಾರಾಗಿಲ್ಲ. ನಿಮ್ಮ ದೃಷ್ಟಿ ಯಾವಾಗಲೂ ಸತ್ಯದ ಕಡೆಯೇ ಇರಬೇಕು. ಎಲ್ಲ ಬಗೆಯ ಮೂಢನಂಬಿಕೆಗಳನ್ನೂ ನಿರ್ಲಕ್ಷಿಸಬೇಕು.

ಸತ್ಯವನ್ನು ಮಾತ್ರ ನಂಬುವುದು ನಮ್ಮ ಕರ್ತವ್ಯ. ಮೂಢ ನಂಬಿಕೆಗಳನ್ನು ಅಥವಾ ಹಿಂದಿನಿಂದ ಬಂದ ಕಂದಾಚಾರಗಳನ್ನು ವಿವೇಚನೆ ಇಲ್ಲದೆ ನಂಬುವುದು ನಮ್ಮಲ್ಲಿ ಎಷ್ಟು ಬಲವಾಗಿದೆ ಎಂದರೆ, ನಾವು ಮುಂದೆ ಹೋಗದಂತೆ ಇಲ್ಲಿಯೇ ಕೈಕಾಲುಗಳನ್ನು ಕಟ್ಟಿದಂತೆ ಆಗಿ ಹೋಗಿದೆ. ಏಸು, ಕ್ರಿಸ್ತ ಮಹಮ್ಮದ್ ಮುಂತಾದ ಮಹಾಪುರುಷರೂ ಇಂತಹ ಹಲವು ಮೂಢನಂಬಿಕೆಗಳನ್ನು ನಂಬಿದ್ದರು. ಅವರೂ ಕೂಡ ಅವುಗಳಿಂದ ಪಾರಾಗಿಲ್ಲ.

ಆಧ್ಯಾತ್ಮಿಕ ಭಾವನೆಯಿಂದ ಪ್ರಪಂಚವನ್ನು ಗೆಲ್ಲುವುದೆಂದರೆ ಜೀವದಾನ ಮಾಡುವಂತಹ ಮಹಾಭಾವನೆಯನ್ನು ಹೊರಗೆ ಕಳುಹಿಸಬೇಕು. ಶತಮಾನಗಳಿಂದ ಆಲಂಗಿಸಿದ, ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನು ಕಳುಹಿಸುವುದಲ್ಲ, ಇಂತಹ ಕಳೆಯನ್ನು ನಮ್ಮ ದೇಶದಿಂದಲೇ ಕಿತ್ತು ಆಚೆಗೆ ಒಗೆಯಬೇಕು. ಅವು ಎಂದಿಗೂ ನಾಶವಾಗಲಿ; ಅವೇ ಜನಾಂಗದ ಅಧೋಗತಿಗೆ ಕಾರಣ. ಅವು ನಮ್ಮನ್ನು ಹುಚ್ಚರನ್ನಾಗಿ ಮಾಡುವುದು. ಯಾವ ಮಿದುಳು ಉದಾತ್ತ ಉಚ್ಛಭಾವನೆ ಆಲೋಚಿಸಲಾರದೋ, ತನ್ನ ಸ್ವಾತಂತ್ರ್ಯವನ್ನೆಲ್ಲ ಕಳೆದುಕೊಂಡಿದೆಯೋ, ಧರ್ಮದ ಹೆಸರಿನಲ್ಲಿರುವ ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನೆಲ್ಲಾ ಸ್ವೀಕರಿಸಿ ವಿಷ ರೂಪಕ್ಕೆ ಬರುತ್ತಿದೆಯೋ ಅಂತಹ ಮಿದುಳು ಉಳ್ಳವರ ಹತ್ತಿರ ಬಹಳ ಜಾಗರೂಕರಾಗಿರಬೇಕು. ಭರತಖಂಡದಲ್ಲಿ ನಮ್ಮ ಕಣ್ಣೆದುರು ಕಾಣುವಂತೆಯೇ ಹಲವು ಅಪಾಯಗಳಿವೆ. ಇತ್ತ ಬಂದರೆ ಹುಲಿ, ಅತ್ತ ಸರಿದರೆ ದರಿ ಎಂಬಂತೆ ಇರುವ ಎರಡು ದೋಷಗಳೇ ಶುದ್ಧ ಜಡವಾದ ಮತ್ತು ಅದಕ್ಕೆ ವಿರುದ್ಧವಾದ ಮೂಢನಂಬಿಕೆಗಳು. ಇವುಗಳಿಂದ ನಾವು ಪಾರಾಗಬೇಕು. ಪಾಶ್ಚಾತ್ಯ ಜ್ಞಾನ ಸುರೆಯನ್ನು ಹೀರಿ ತಾನು ಸರ್ವಜ್ಞ ಎಂದು ಮನುಷ್ಯ ಹೇಳಿಕೊಳ್ಳುವನು. ಹಿಂದಿನ ಋಷಿಗಳನ್ನು ಅಣಕಿಸುವನು. ಅವನ ಪಾಲಿಗೆ ಭಾರತೀಯ ಭಾವನೆಯೆಲ್ಲ ಕೆಲಸಕ್ಕೆ ಬಾರದುದು.

ತತ್ವ ಕೇವಲ ಹಸುಳೆಗಳ ಹರಟೆ, ಧರ್ಮ ಮೂಢರ ನಂಬಿಕೆಯಾಗಿದೆ. ಮತ್ತೊಂದು ಅತಿರೇಖಕ್ಕೆ ಹೋಗುವ ಕೃತಕ ವಿದ್ಯಾವಂತನಿರುವನು. ಪ್ರತಿಯೊಂದು ಶಕುನವನ್ನು ಶಾಸ್ತ್ರೀಯವಾಗಿ ವಿವರಿಸಲು ಯತ್ನಿಸುವನು. ತನ್ನ ವಿಚಿತ್ರ ಜಾತಿಗೆ, ದೇವರಿಗೆ, ಹಳ್ಳಿಗೆ ಸೇರಿದ ಪ್ರತಿಯೊಂದು ಮೂಢ 'ನಂಬಿಕೆಗೂ ದಾರ್ಶನಿಕ, ತಾತ್ವಿಕ ಮತ್ತು ಇನ್ನೂ ಎಂತಹದೋ ವಿವರಣೆ ಕೊಡಲು ಯತ್ನಿಸುವನು. ಅವನಿಗೆ ಪ್ರತಿಯೊಂದು ಗ್ರಾಮದ ಆಚಾರವೂ ಒಂದು ವೇದವಾಕ್ಯ. ಅದನ್ನು ಜಾರಿಗೆ ತರುವುದರ ಮೇಲೆ ತಮ್ಮ ಜನಾಂಗದ ಜೀವನ ನಿಂತಿದೆ ಎಂದು ಭಾವಿಸುವನು. ನೀವು ಆಗ ತುಂಬಾ ಜೋಪಾನವಾಗಿರಬೇಕು. ನೀವೆಲ್ಲಾ ಇಂತಹ ಮೂರ್ಖರಾಗುವುದಕ್ಕಿಂತ ಶುದ್ಧ ನಾಸ್ತಿಕರಾಗುವುದು ಮೇಲು. ನಾಸ್ತಿಕ ಜೀವಂತನಾಗಿರುವನು. ಅವನಿಂದ ಏನಾದರೂ ಉಪಯೋಗ ಪಡೆಯಬಹುದು. ಮೂಢನಂಬಿಕೆ ಪ್ರವೇಶಿಸಿದರೆ ತಲೆ ಕೆಡುವುದು, ಹುಚ್ಚನಾಗುವನು, ಅವನತಿ ಪ್ರಾರಂಭವಾಗುವುದು. ಇವೆರಡರಿಂದಲೂ ಪಾರಾಗಿ ನಿರ್ಭೀತ ಸಾಹಸಿಗಳು ನಮಗೆ ಬೇಕಾಗಿರುವುದು. ನಮಗೆ ಇಂದು ಬೇಕಾಗಿರು ವುದು ರಕ್ತದಲ್ಲಿ ಪುಷ್ಟಿ ನರಗಳಲ್ಲಿ ಶಕ್ತಿ, ಕಬ್ಬಿಣದಂತಹ ಮಾಂಸ ಖಂಡಗಳು, ಉಕ್ಕಿನಂತಹ ನರಗಳು, ಕೆಲಸಕ್ಕೆ ಬಾರದ ಜೊಳ್ಳು ಭಾವನೆಗಳಲ್ಲ. ಇವುಗಳನ್ನು ನಿರಾಕರಿಸಿ. ಎಲ್ಲಾ ರಹಸ್ಯಗಳನ್ನು ನಿರಾಕರಿಸಿ.... ರಹಸ್ಯಾಚರಣೆ ಮತ್ತು ಮೂಢನಂಬಿಕೆ ಯಾವಾಗಲೂ ದುರ್ಬಲತೆಯ ಚಿಹ್ನೆ ಅವನತಿ ಮತ್ತು ಮೃತ್ಯು ಚಿಹ್ನೆ. ಜೋಪಾನವಾಗಿರಿ. ಧೀರರಾಗಿ, ನಿಮ್ಮ ಕಾಲ ಮೇಲೆ ನಿಲ್ಲಿ. ಎಷ್ಟೋ ಮಹದಾಲೋಚನೆಗಳಿವೆ. ಅದ್ಭುತ ಭಾವನೆ ಗಳಿವೆ. ನಮಗೆ ಈಗ ಪ್ರಪಂಚ ತಿಳಿದಿರುವ ಮಟ್ಟಿಗೆ ಅದನ್ನು ಅತೀಂದ್ರಿಯವೆನ್ನಬಹುದು. ಆದರೆ ಇದರಲ್ಲಿ ಯಾವುದೊಂದು ರಹಸ್ಯವಿಲ್ಲ. ಧಾರ್ಮಿಕ ಸತ್ಯ ರಹಸ್ಯವೆಂದಾಗಲೀ ಅಥವಾ ಹಿಮಾಲಯದ ಮೇಲೆ ಇರುವ ಕೆಲವು ಗುಪ್ತ ಸಂಸ್ಥೆಗಳಿಗೆ ಆ ಸತ್ಯ ಮೀಸಲು ಎಂದಾಗಲೀ ನಮ್ಮ ಧರ್ಮದಲ್ಲಿ ಎಂದೂ ಬೋಧಿಸಿಲ್ಲ. ನಾನು ಹಿಮಾಲಯದಲ್ಲಿದ್ದೆ. ನಾನು ಸನ್ಯಾಸಿ, ಕಳೆದ ಹದಿನಾಲ್ಕು ವರ್ಷಗಳಿಂದಲೂ ಸಂಚರಿಸುತ್ತಿರುವೆನು. ಈ ರಹಸ್ಯ ಸಂಸ್ಥೆಗಳು ಎಲ್ಲಿಯೂ ಇಲ್ಲ. ಈ ಮೂಢನಂಬಿಕೆಯನ್ನು ಹಿಂಬಾಲಿಸಬೇಡಿ. ಅದಕ್ಕಿಂತ ನೀವು ಶುದ್ಧ ನಾಸ್ತಿಕರಾಗುವುದು ನಿಮಗೆ ಮತ್ತು ದೇಶಕ್ಕೆ ಒಳ್ಳೆಯದು.

ನಾಸ್ತಿಕತೆಯಲ್ಲಾದರೂ ಸ್ವಲ್ಪ ಶಕ್ತಿ ಇದೆ. ಆದರೆ ಮೂಢನಂಬಿಕೆಯಲ್ಲಿರುವುದು ಅವನತಿ ಮತ್ತು ಮರಣ ಮಾತ್ರ. ಬಲಾಢ್ಯರು ಇಂತಹ ಮೂಢನಂಬಿಕೆಯ ಮೇಲೆ ಕಾಲ ಕಳೆಯುವುದು, ಕೆಲಸಕ್ಕೆ ಬಾರದ ಕುಲಗೆಟ್ಟ ಮಾನವ ಕೋಟಿಗೆ ನಾಚಿಗೇಡು. ನಿಜವಾಗಿ ನಮ್ಮಲ್ಲಿ ಹಲವು ಮೂಢನಂಬಿಕೆಗಳಿವೆ. ದೇಹದಲ್ಲಿ ಎಷ್ಟೋ ವ್ರಣಗಳಿವೆ; ಅವನ್ನು ಕತ್ತರಿಸಬೇಕು; ನಾಶಮಾಡಬೇಕು. ಅವುಗಳಿಂದ ನಮ್ಮ ಸಂಸ್ಕೃತಿ, ಧರ್ಮ, ಆಧ್ಯಾತ್ಮ ನಾಶವಾಗುವುದಿಲ್ಲ. ಧರ್ಮದ ಮುಖ್ಯ ತತ್ವಗಳೆಲ್ಲಾ ಸುರಕ್ಷಿತವಾಗಿರುವುವು. ಕೆಲಸಕ್ಕೆ ಬಾರದ ಈ ವ್ರಣಗಳನ್ನು ಎಷ್ಟು ಬೇಗ ತೊಡೆದು ಹಾಕಿದರೆ ಅಷ್ಟು ಒಳ್ಳೆಯದು, ಅಷ್ಟು ಹೆಚ್ಚಾಗಿ ಆಧ್ಯಾತ್ಮಿಕ ನಿಯಮಗಳು ಪ್ರಕಾಶಿಸುವುವು.

ಮನುಷ್ಯನು ಸ್ವಾರ್ಥಪರನಾದಷ್ಟು ಅಧರ್ಮಿಯಾಗುವನು. ಅದರಂತೆ ಜನಾಂಗವೂ ಕೂಡ. ತನ್ನ ಸುಖವೇ ಪರಮಾವಧಿ ಎಂದು ತಿಳಿದುಕೊಂಡ ಜನಾಂಗವು ಪ್ರಪಂಚದಲ್ಲೆಲ್ಲ ಅತಿ ಕ್ರೂರವಾದುದು ಮತ್ತು ಹೀನಾಯವಾದುದು. ಅರೆಬಿಯಾದ ದೇವದೂತನಿಂತ ಸ್ಥಾಪಿತವಾದ ಧರ್ಮದ ಅನುಯಾಯಿಗಳಷ್ಟು ಹೆಚ್ಚಾಗಿ ಈ ದ್ವೈತದಲ್ಲಿ ನಂಬಿದ್ದ ಮತ್ತೊಬ್ಬರಿಲ್ಲ. ಇತರರನ್ನು ಕಂಡರೆ ಇವರಷ್ಟು ನಿರ್ದಯರಾಗಿ ವರ್ತಿಸಿದ, ಇವರಷ್ಟು ರಕ್ತಕಾಲುವೆಯನ್ನು ಹರಿಸಿದ ಮತ್ತೊಂದು ಧರ್ಮದವರಿಲ್ಲ. ಯಾರು ಅವರ ಉಪದೇಶಗಳನ್ನು ನಂಬುವುದಿಲ್ಲವೋ ಅವರನ್ನು ಕೊಲ್ಲಬೇಕೆಂಬ ಸಿದ್ಧಾಂತ ಖೊರಾನಿನಲ್ಲಿಯೇ ಇದೆ. ಅಂತಹವರನ್ನು ಕೊಲ್ಲುವುದೊಂದು ದಯೆಯಿಂದ ಪ್ರೇರಿತವಾದ ಪರೋಪಕಾರ. ಚಿರಯೌವನದಲ್ಲಿರುವ ಸ್ತ್ರೀಯರಿಂದ ಮತ್ತು ಎಲ್ಲಾ ವಿಧದ ವಿಷಯ ಭೋಗಗಳಿಂದ ತುಂಬಿ ತುಳುಕಾಡುತ್ತಿರುವ ಸ್ವರ್ಗಕ್ಕೆ ನಿಸ್ಸಂಶಯವಾಗಿ ಹೋಗಲು ಮಹಮ್ಮದೀಯ ಧರ್ಮದಲ್ಲಿ ನಂಬದವರನ್ನು ಕೊಲ್ಲುವುದೊಂದೇ ನೇರವಾದ ಹಾದಿ. ಇಂತಹ ನಂಬಿಕೆಗಳ ಪರಿಣಾಮವಾಗಿ ಎಷ್ಟೊಂದು ರಕ್ತ ಹರಿದಿದೆ ಎಂದು ನೀವೇ ಆಲೋಚಿಸಿ ನೋಡಿ.

'ಇದು ಶಾಸ್ತ್ರದಲ್ಲಿ ಹೇಳಿದೆ. ಆದುದರಿಂದ ಇದನ್ನು ನಂಬಬೇಕು' ಎಂಬ ಮೂಢನಂಬಿಕೆಯಿಂದ ಪಾರಾಗಬೇಕು. ಎಲ್ಲವನ್ನೂ ಎಂದರೆ, ವಿಜ್ಞಾನ, ಧರ್ಮ, ತತ್ವ ಇವನ್ನೆಲ್ಲ ಯಾವುದೋ ಒಂದು ಶಾಸ್ತ್ರ ಹೇಳುತ್ತದೆ ಎಂದು ಹೇಳಿ ಅದಕ್ಕೆ ಹೊಂದಿಸಿಕೊಂಡು ಹೋಗುವಂತೆ ಮಾಡಲೆತ್ನಿಸುವುದು ಒಂದು ಮಹಾಪರಾಧ. ಗ್ರಂಥ ಆರಾಧನೆಯೆ ವಿಗ್ರಹಾರಾಧನೆಯಲ್ಲೆಲ್ಲ ಭಯಂಕರವಾದುದು...ಶಾಸ್ತ್ರನಿಯಮಗಳೆಂಬ ಕಹಳೆಯ ಧ್ವನಿಯನ್ನು ಕೇಳಿದೊಡನೆಯೇ ಹಳೆಯ ಮೂಢನಂಬಿಕೆ ಆಚಾರಗಳು ನಮ್ಮನ್ನು ಮೆಟ್ಟಿಕೊಳ್ಳುವುವು. ನಮಗೆ ಅದು ಗೊತ್ತಾಗುವುದಕ್ಕೆ ಮುಂಚೆಯೇ ಸ್ವಾತಂತ್ರ್ಯವೆಂಬ ನಮ್ಮ ನೈಜ ಸ್ವಭಾವವನ್ನು ಮರೆತು ಹಳ್ಳಿಯ ಆಚಾರಕ್ಕೆ ಮತ್ತು ಮೂಢನಂಬಿಕೆಗಳಿಗೆ ಒಳಗಾಗುವೆವು.

ಧರ್ಮದ ಪ್ರತಿಯೊಂದು ಮೂಢನಂಬಿಕೆಯನ್ನೂ, ನೀವು ಒಪ್ಪಬೇಕು ಎಂದು ಹೇಳುವುದು ಮಾನವನಿಗೆ ಅವಮಾನ ಮಾಡಿದಂತೆ. ಪ್ರತಿಯೊಂದನ್ನು ನಂಬಬೇಕೆಂದು ಹೇಳುವವನೂ ಅಧೋಗತಿಗೆ ಇಳಿಯುವನು, ಕೇಳಿದರೆ ನೀವೂ ಅಧೋಗತಿಗೆ ಇಳಿಯುವಿರಿ...ಸಾಧಾರಣವಾಗಿ ಧರ್ಮವನ್ನು ವಿರೋಧಿಸುವ ಶೇ. ೯೯ ಮಂದಿ ತಮ್ಮ ಮನಸ್ಸನ್ನು ಎಂದೂ ವಿಭಜನೆ ಮಾಡಿಲ್ಲ. ಸತ್ಯವನ್ನು ಕಂಡುಹಿಡಿಯುವುದಕ್ಕೆ ಎಂದಿಗೂ ಪ್ರಯತ್ನ ಪಟ್ಟಿಲ್ಲ ಎಂಬುದನ್ನು ನೀವು ನೆನಪಿನಲ್ಲಿಡಬೇಕು.

ಮೂಢನಂಬಿಕೆ ಮಾನವನ ದೊಡ್ಡ ಶತ್ರು. ಆದರೆ ಸ್ವಮತಭ್ರಾಂತಿ ಅದಕ್ಕಿಂತಲೂ ಘೋರ.

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ) □

ನಿವೇದನೆ

ಸಮಾಜ ಹಾಗೂ ತನ್ನದೇ ವರ್ಗದ ಇತರೆ ಜನಾಂಗಗಳ ಅನಾದರದಿಂದಾಗಿ ೨೧ ನೇ ಶತಮಾನದ ಆಧುನಿಕ ಜಗತ್ತಿನ ಎಲ್ಲ ಸೌಲಭ್ಯಗಳಿಂದ ವಂಚಿತವಾಗಿರುವ ಜನಾಂಗವೊಂದು ಕರ್ನಾಟಕ ದಲ್ಲಿ ಇದೆ ಎಂದರೆ ಆಶ್ಚರ್ಯವಾಗಬಹುದಲ್ಲವೇ? ಹಸಿವು-ಅಸ್ಪೃಶ್ಯತೆಗಳಲ್ಲಿ ನಿರಂತರ ನಲುಗಿರುವ ಕೊರಗ ಸಮುದಾಯವು ನಾಗರಿಕ ಸಮಾಜದತ್ತ ಹೊರಳಲು ಪ್ರಯತ್ನಿಸುತ್ತಾ, ತನ್ನ ಜನಾಂಗದ ಸ್ಥಿತಿ-ಗತಿಯ ಬಗ್ಗೆ ನೀಡುವ ಈ ಮಾಹಿತಿ ಮನಕರಗಿಸುತ್ತದೆ. ದಲಿತ ಚಳವಳಿಯೂ ಸೇರಿದಂತೆ ನಾಡಿನ ಎಲ್ಲಾ ಪ್ರಗತಿಪರ ಚಳವಳಿಗಳೂ ಸಹ ಮರೆತು ಮೂಲೆಗುಂಪು ಮಾಡಿರುವ ಈ ಕೊರಗರನ್ನು ದಲಿತ ಸಂಘರ್ಷ ಸಮಿತಿಯೂ ಸೇರಿದಂತೆ ಎಲ್ಲರೂ ಕೈಬಿಟ್ಟಿರುವುದರ ಮರ್ಮವೇನು?

○ ಬಿರಿಬಿಲಿ, ಬಚ್ಚಿ ಮತ್ತು ಬೊಗ್ರ, ಉಡುಪಿ ತಾಲೂಕು

ಪ್ರಿಯ ಗ್ರಾಮ ಭಾಂದವರೇ,

ನಾವು ನಮ್ಮ ಅಜಲು ಕೆಲಸಗಳನ್ನು ನಿಲ್ಲಿಸುವ ದಿಸೆಯಲ್ಲಿ ಮಾಡುತ್ತಿರುವ ಪ್ರಯತ್ನಗಳು ನಮ್ಮ ಗ್ರಾಮ ಬಾಂಧವರಲ್ಲಿ ಹಲವು ರೀತಿಯ ತಪ್ಪು ಅಭಿಪ್ರಾಯಗಳಿಗೆ ಕಾರಣವಾಗಿದೆ ಯೆಂದು ತಿಳಿಯುತ್ತಿದೆ. ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವರೇ ಈ ಪ್ರಕಟಣೆಯನ್ನು ಹೊರತರುತ್ತಿದ್ದೇವೆ.

ನಾವು ಎಲ್ಲರ ಮುಂದೆ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ ನಾವು ಅಜಲು ಬಗ್ಗೆ ತೆಗೆದುಕೊಂಡಿರುವ ನಿಲುವುಗಳು ಯಾರದೇ ವಿರುದ್ಧದ ನಿಲುವುಗಳು ಅಲ್ಲ ಅದು ಏನಿದ್ದರೂ ನಾವೆಲ್ಲರೂ ಒಪ್ಪಿಕೊಂಡಿರುವ ಒಂದು ಮೌಲ್ಯವನ್ನು ವಾಸ್ತವಕ್ಕೆ ತರುವ ಪ್ರಯತ್ನ, ಇದು ನಮ್ಮಿಂದ ಮಾತ್ರ ಸಾಧಿಸಲಿಕ್ಕೆ ಆಗುವಂತಹದು ಅಲ್ಲ, ಇದರಲ್ಲಿ ನಮಗಿಂತಲೂ ಕೊರಗರಲ್ಲದವರು ವಹಿಸುವ ಪಾತ್ರ ಬಹಳ ಮುಖ್ಯವಾದುದೆಂದು ನಾವು ಸ್ಪಷ್ಟವಾಗಿಯೇ ತಿಳಿದಿದ್ದೇವೆ. ಇಲ್ಲಿ ಯಾವುದೇ ಸಂಘರ್ಷ ಅಥವಾ ಚಳವಳಿ ಇಲ್ಲ, ಅಸ್ಪೃಶ್ಯತೆರಹಿತ ಗ್ರಾಮ್ಯ ಜನಜೀವನವನ್ನು ರೂಢಿಸುವ ಬದುಕಿನ ತುಡಿತವಿದೆ. ಅಸ್ಪೃಶ್ಯತೆ ಮನುಷ್ಯತ್ವಕ್ಕೆ ಕಳಂಕ ಮತ್ತು ಅತ್ಯಂತ ದೂಷಿತ ಮೌಲ್ಯವೆಂದು ನಾವೆಲ್ಲರೂ ನಮ್ಮ ಅಂತಃಕರಣದಲ್ಲಿ ಒಪ್ಪಿ ಕೊಳ್ಳುವುದಾದರೆ ನಮ್ಮ ಮಾತಿನಲ್ಲಿ ತಪ್ಪು ಕಾಣಿಸಲಾರದು. ಆದ್ದರಿಂದ ನಮ್ಮ ಆಶಯವೇನಿದ್ದರು ಗ್ರಾಮೀಣ ಬದುಕಿನ ಒಟ್ಟು ಗುಣಮಟ್ಟವನ್ನು ನಮ್ಮ ರಾಷ್ಟ್ರ ಮೌಲ್ಯಗಳ ಮಟ್ಟಕ್ಕೆ ತರುವುದಾಗಿದೆ. ಆ ನಿಟ್ಟಿನಲ್ಲಿ ನಮ್ಮ ಕೆಲಸ ರಾಷ್ಟ್ರ ನಿರ್ಮಾಣದ ಮಹತ್ ಉದ್ದೇಶವನ್ನು ಹೊಂದಿದೆ.

ಶಿಕ್ಷಣವೆಂದು ಗುರುತಿಸಿಕೊಂಡಿರುವುದು ಅಸ್ಪೃಶ್ಯತಾ ರಹಿತ ಸಮಾಜ ಮತ್ತು ಸಮಾನತೆಯ ಮೌಲ್ಯಗಳು. ವೈಜ್ಞಾನಿಕ ಮನೋಭಾವ ಇವು ಮೂಲಭೂತ ಹಕ್ಕುಗಳು, ಕರ್ತವ್ಯಗಳು ಆಗಿವೆ ಎಂದು ನಾವು ಕೂಡಾ ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ.

ಕೊರಗರ ಅಭಿವೃದ್ಧಿ ಈವರೆಗೆ ಯಾಕೆ ಸಾಧ್ಯವಾಗಿಲ್ಲ ಎನ್ನುವುದನ್ನು ಅಧ್ಯಯನ ಮಾಡಿದ ಡಾ॥ ಫೀರ್ ವರದಿ ಈ ರೀತಿ ಹೇಳುತ್ತದೆ. 'ಅಜಲು ಎನ್ನುವುದು ಅತೀ ಕೆಟ್ಟ ರೀತಿಯ ಸಾಂಸ್ಕೃತಿಕ ಶೋಷಣೆಯಾಗಿದೆ. ಅದು ಅಸ್ಪೃಶ್ಯತೆ, ಗುಲಾಮೀತನ ಮತ್ತು ಪ್ರಾಣಿ ಮನುಷ್ಯರ ನಡುವಿನ ಮಧ್ಯಂತರ ಸ್ಥಿತಿಯಲ್ಲಿ ನಡೆಯುತ್ತದೆ' (ನಾವು ಒಂದು ಶಿಷ್ಟ ನಾಗರಿಕತೆಯಾಗಿದ್ದು ಮುಲ್ಕಿ ಕಂಬಳದಲ್ಲಿ ಕೊರಗರು ಸಲಿಂಗ ರತಿಯಲ್ಲಿ ತೊಡಗುತ್ತಿರುವುದು ವಿಶಿಷ್ಟವಾಗಿರುತ್ತದೆ ಎಂದು ಹೇಳಿರುವುದನ್ನು ಗಮನಿಸಿ; ಕನ್ನಡ ಜನ ಅಂತರಂಗ ೧೩-೧೨-೧೯೯೮. ಈ ಬಗ್ಗೆ ಇನ್ನೂ ಏನಾದರೂ ಹೇಳಲಿಕ್ಕಿದೆಯೇ? ನಮ್ಮ ನೆಲದ ಸುಸಂಸ್ಕೃತ ಮನಸ್ಸು ನಮ್ಮನ್ನು ಗ್ರಹಿಸಿರುವುದು ಹೀಗೆ) ಡಾ॥ ಫೀರ್ ವರದಿ ನಮ್ಮ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಈ ರೀತಿ ಹೇಳುತ್ತದೆ.

ಅ. ಕೊರಗರ ಬದುಕು ಅತ್ಯಂತ ಸಾಂಪ್ರದಾಯಿಕವಾದುದು.
ಆ. ಮನುಷ್ಯ ಜನ್ಮದಲ್ಲಿಯೇ ಅವರು ಅತ್ಯಂತ ಕೀಳು ಮಟ್ಟದ ಜನ ಎಂದು ಭಾವಿಸುವಂತಾಗಿದೆ.
ಇ. ಅವರು ಅಂತರ್ಮುಖಿಗಳೂ, ಕರ್ಮವಾದಿಗಳೂ ಆಗಿದ್ದಾರೆ.

ಅಸ್ಪೃಶ್ಯತೆರಹಿತ ಸಾಮಾಜಿಕ ಸಾಮರಸ್ಯಕ್ಕೆ ಉಡುಪಿ ತಾಲೂಕಿನ ಕೊರಗರ ಮನವಿ

ನಾವೇನೂ ಬಹಳ ಓದಿದವರಲ್ಲ, ಆದರೆ ನಮ್ಮಲ್ಲಿರುವ ಅಸ್ಪೃಶ್ಯತೆ ಮತ್ತು ಜಾತೀಯತೆ ಜಗತ್ತಿನ ಬೇರೆಲ್ಲಿಯೂ ಇಲ್ಲ, ಮನುಷ್ಯರ ಸಮಾನತೆಯ ವಾದವೊಂದೇ ಮಾನವರೆಲ್ಲರೂ ಪರಸ್ಪರ ಶೋಷಣೆಗೆ ಅನುವು ಮಾಡಿಕೊಳ್ಳುವ ವ್ಯವಸ್ಥೆಯೆಂದು ಸಮಾಜ ಶಾಸ್ತ್ರಜ್ಞರು ಎಂದೋ ಗುರುತಿಸಿದ್ದಾರೆ. ಎಲ್ಲಿ ಇಂತಹ ಜಾತಿ ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆ ಯಾಗಬೇಕೋ ಅದೇ ನಮ್ಮ ಸಮಾಜದಲ್ಲಿ ಅಭಿಮಾನದ ವಿಷಯವಾಗಿ ಪರಿವರ್ತಿತವಾಗಿರುವುದು ಒಂದು ಮಾನವ ದುರಂತವೆಂದು ಅದರ ಅತ್ಯಂತ ಕೆಟ್ಟ ಪರಿಣಾಮಗಳನ್ನು ಸಾವಿರ ವರುಷಕ್ಕೂ ಮೀರಿ ಅನುಭವಿಸಿಕೊಂಡು ಬಂದ ಕೊರಗ ಜನಾಂಗ ಭಾವಿಸುತ್ತದೆ. ಆದ್ದರಿಂದಲೇ ನಮ್ಮದು ಕನಿಷ್ಟ ಬೇಡಿಕೆ, ನಮ್ಮ ಮಟ್ಟಿಗೆ ಅಸ್ಪೃಶ್ಯತೆ ಮತ್ತು ಜೀತ ವ್ಯವಸ್ಥೆಯ ಮೂಲದಿಂದ ಬಂದ ಯಾವುದೇ ಸಾಮಾಜಿಕ ಸಾಂಸ್ಕೃತಿಕ ಆಚರಣೆಗಳು ಇನ್ನು ಮುಂದೆ ನಮಗೆ ಬೇಡ. ಆ ರೀತಿಯ ನಂಬಿಕೆಗಳನ್ನು ಮೀರಿ ನಾವು ಬೆಳೆಯದಿದ್ದರೆ ನಮ್ಮ ಬದುಕು ಹಸನಾಗುವುದಿಲ್ಲ, ಈಗ ನಮಗೆ ಹಸನಾದ ಮತ್ತು ಮೌಲ್ಯಯುಕ್ತ ಬದುಕಿನ ಹಂಬಲವಿದೆ. ಅದನ್ನು ನಾವು ಎಲ್ಲಿಗೋ ಹೋಗಿ ಸಾಧಿಸುವುದಿಲ್ಲ, ಇದ್ದ ನೆಲದಲ್ಲಿ, ಬೆಳೆದು ಬಂದ ಜನರೊಂದಿಗೆ ಅವರ ಒಡನಾಟದಿಂದ ಕಲಿತ ವಿಷಯಗಳ ಮೂಲಕ ಸಾಧಿಸಿಕೊಳ್ಳಬೇಕಾಗಿದೆ. ಆದ್ದರಿಂದ ನಾವು ಹೇಳುತ್ತಿರುವ ವಿಷಯ ಸರ್ವಥಾ ಹೊಸತಲ್ಲ, ಇದನ್ನು ಶಾಲೆಗಳಲ್ಲಿ, ನಮ್ಮ ಪಂಚಾಯತ್ ವ್ಯವಸ್ಥೆಯಲ್ಲಿ ಮತ್ತು ಸಾರ್ವಜನಿಕ ಜೀವನದ ಸಂದರ್ಭದಲ್ಲಿ ಪದೇ ಪದೇ ಹೇಳಲಾಗುತ್ತದೆ. ನಮ್ಮ ಜನರ ಸಾಂಪ್ರದಾಯಿಕ ಮನಸ್ಸು ಏನೇ ಇರಲಿ, ನಾವು ಇವತ್ತು ಸಮಾಜದ

ಈ. ಅವರಲ್ಲಿ ಸಾಧನೆಯ ಯಾವುದೇ ಛಲ ಉಳಿದು ಕೊಂಡಿಲ್ಲ.
ಉ. ಅವರು ಅತ್ಯಂತ ಮೃದುವೂ, ನಿರ್ವೀರ್ಯರೂ ಆಗಿದ್ದಾರೆ.
ಊ. ಅವರನ್ನು ಸದಾ ಶೋಷಣೆಗೆ ಅನುಕೂಲವಾಗುವಂತೆ ತಯಾರಿಸಿಕೊಂಡು ಬರಲಾಗಿದೆ.
ಋ. ಮದ್ಯಪಾನ ಪ್ರವೃತ್ತಿ ಅವರಲ್ಲಿ ಮಿತಿಮೀರಿ ಬೆಳೆದುಕೊಂಡು ಬರುತ್ತಿದೆ.
ೠ. ಸಾಮಾನ್ಯ ಸಮಾಜದೊಂದಿಗಿನ ಅವರ ಸಂಬಂಧ ಯಜಮಾನ ಮತ್ತು ಗುಲಾಮರ ಸಂಬಂಧವಾಗಿ ಉಳಿದುಕೊಂಡು ಬಂದಿದೆ.
ಎ. ಮಕ್ಕಳನ್ನು ಅಜಲು ವ್ಯವಸ್ಥೆಯಲ್ಲಿ ಸಾಮಾಜೀಕರಣಗೊಳಿಸಲಾಗುತ್ತಿದ್ದು ಮಕ್ಕಳು ಶಾಲಾ ವ್ಯವಸ್ಥೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.
ಏ. ಮಹಿಳೆಯರ ಸ್ವಬಿಂಬ ಸಂಪೂರ್ಣ ನಾಶವಾಗಿದೆ.
ಐ. ಕೊರಗರು ತನ್ನ ಹಕ್ಕು ಘನತೆಗಳನ್ನು ಕಾಪಾಡಿಕೊಳ್ಳುವಲ್ಲಿ ಯಾವುದೇ ನಿಷ್ಠೆಯನ್ನು ಹೊಂದಿಲ್ಲ.
ಒ. ಅವರು ಗ್ರಾಮಗಳಲ್ಲಿ ಯಾವುದೇ ಖಾಯಂ ಉದ್ಯೋಗವನ್ನು ಮಾಡುವಂತಿಲ್ಲ.
ಓ. ಕೊರಗ ಯುವ ಜನರಿಗೆ ಪೇಟೆಗಳಲ್ಲಿ ಸ್ವಚ್ಛತೆಯ ಕೆಲಸಗಳು ಮಾತ್ರ ಸಿಗುವುದು ಸಾಧ್ಯವಾಗುತ್ತದೆ.
ಅಂ. ಕೊರಗರಿಗೆ ಎಲ್ಲಾ ಮುಖಗಳಲ್ಲಿ ಸಾಮಾಜಿಕ ಬದಲಾವಣೆಯನ್ನು ತಂದುಕೊಳ್ಳುವುದು ಅತ್ಯಂತ ಕಷ್ಟ ಸಾಧ್ಯ.

ನಮ್ಮ ಸಮಾಜದ ಈ ಸಮಸ್ಯೆಗಳಿಗೆ ಯಾರು ಕಾರಣ ಹೇಗೆ ಕಾರಣವಾಗಿದ್ದರೂ ಕೂಡ ಈ ಸ್ಥಿತಿಯನ್ನು ಬದಲಾಯಿಸಿಕೊಳ್ಳುವ

ಅನಿವಾರ್ಯತೆಯನ್ನು ನೀವೆಲ್ಲರೂ ಒಪ್ಪುತ್ತೀರಿ ಎಂದು ನಾವು ಭಾವಿಸುವುದಕ್ಕೆ ಕಾರಣಗಳಿವೆಯೇ? ಹಾಗೆ ಒಪ್ಪಿಕೊಳ್ಳುವುದಾದರೆ ನಿಮ್ಮಿಂದ ಯಾವ ರೀತಿಯ ಸಹಕಾರ ದೊರೆಯಬೇಕು ಎನ್ನುವುದರ ಬಗ್ಗೆ ನಾವೆಲ್ಲರೂ ಕೂಡಿ ಚಿಂತಿಸಬೇಕಾಗುತ್ತದೆ. ನಾವು ಅಜಲು ಕೆಲಸಗಳಿಗೆ ಬರಲಿಲ್ಲವೆಂದು ದೂಷಿಸುವುದಕ್ಕಾಗಲೀ, ದ್ವೇಷಿಸುವುದಕ್ಕಾಗಲೀ ಯಾವುದೇ ಕಾರಣಗಳಿವೆಯೇ?

ನಾವು ಒಂದು ಮೂಲನಿವಾಸಿ ಪಂಗಡವಾಗಿದ್ದು ಈ ಸಾಮಾಜಿಕ ರಚನೆಗಳು ನಮ್ಮ ಬೆಳವಣಿಗೆಗೆ ಅಡ್ಡಿಯಾಗುತ್ತಿರುವುದನ್ನು ಪರಿಶೀಲಿಸಿ ಕನಿಷ್ಠ ಪಕ್ಷ ಈ ರಚನೆಗಳಲ್ಲಿ ಇರುವ ಅಸ್ಪೃಶ್ಯತೆಯನ್ನು ಗುರುತಿಸಬೇಕೆಂದು ಸರಕಾರಕ್ಕೆ ಮನವಿ ಮಾಡಿದಾಗ ಈ ಕೆಳಗಿನ ಕಾರಣಗಳನ್ನು ಕಂಡುಕೊಂಡಿದ್ದೇವೆ.

೧. ಕೊರಗರ ಅಜಲು ಅಸ್ಪೃಶ್ಯತೆಯ ಪ್ರದರ್ಶನದೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುತ್ತದೆ.

೨. ಇದರಲ್ಲಿ ಕೊರಗರನ್ನು ನಿರ್ಬಂಧಿಸಿ ಸಾಂಕೇತಿಕ ಪರಿಹಾರಗಳಿಗೆ ದುಡಿಸಿಕೊಳ್ಳುವ ಜೀತದ ಅಂಶಗಳಿವೆ.

೩. ದಾನ(ನೀಚ ಅನ್ನದಾನ) ದಲ್ಲಿ ಆಹಾರ ಯೋಗ್ಯವಲ್ಲದ ಮಾನವ ಅಂಗಾಂಶಗಳನ್ನು ತಿನ್ನುವಂತೆ ಮಾಡುತ್ತಾನೆ.

೪. ಅಜಲು ವ್ಯಾಪ್ತಿಯಲ್ಲಿ ನಿರ್ದೇಶಿತ, ನಿಯಂತ್ರಿತ ಬೇಡುವ ಪ್ರವೃತ್ತಿಗೆ ಒತ್ತಾಸೆ ಮಾಡುವ ಕಟ್ಟುಪಾಡುಗಳಿವೆ.

೫. ನೀಚ, ಪಂಚಮ ಶಬ್ದಗಳ ಮೂಲಕ ಕೊರಗರ ಮಾನ ಹಾನಿ, ಅತ್ಯಾಚಾರ ನಿರಂತರ ನಡೆಯುತ್ತದೆ.

೬. ಕೊರಗರ ಡೋಲು ಉಪಯೋಗವಾಗುವಲ್ಲೆಲ್ಲಾ ಅದಕ್ಕೆ ಬ್ಲ್ಯಾಕ್ ಮ್ಯಾಜಿಕ್‌ನ ಸಂಕೇತಗಳನ್ನು ಕೊಟ್ಟು ಅದರ ಕಲಾ ಮೌಲ್ಯವನ್ನು ವಿಕೃತಗೊಳಿಸಲಾಗಿದೆ.

೭. ಕೊರಗರಿಗೆ ಶನಿಗ್ರಹಚಾರ ಪೀಡೆಗಳನ್ನು ತಡೆದುಕೊಳ್ಳುವ ಶಕ್ತಿ ಇದೆಯೆಂದು ಬ್ಲ್ಯಾಕ್ ಮ್ಯಾಜಿಕ್‌ನ ಆರೋಪ ಹೊರಿಸಿ ಧನಾತ್ಮಕ ಸಾಮಾಜಿಕ ಸಂಬಂಧಗಳು ಬೆಳೆಯದಂತೆ ಮಾಡಿದೆ.

ನಾವು ಕೇಳುವ ಒಂದು ಪ್ರಶ್ನೆಗೆ ನೀವು ನೇರವಾಗಿ ಉತ್ತರಿಸುವುದು ಸಾಧ್ಯವಿದ್ದರೆ ನೋಡಿ. ನಿಮ್ಮ ಒಂದು ಮಗುವನ್ನು ನಿಮ್ಮ ಕಣ್ಣ ಮುಂದೆಯೇ ಕೊರಗನಾಗಿ ಸಾಮಾಜೀಕರಣಗೊಳಿಸಿ ದುಡಿಸಿಕೊಳ್ಳುವುದಾಗಿದ್ದರೆ ಏನು ಬೆಲೆ ಕೊಡಬೇಕು ಮತ್ತು ನೀವೇನು ಮಾಡುತ್ತೀರಿ? ನಾವಿದನ್ನು ಸಾವಿರ ವರುಷ ಮೀರಿ ಅದಕ್ಕಾಗಿ ಬದುಕಿ ಮಾಡಿಕೊಂಡು ಬಂದಿದ್ದೇವೆ. ನಮ್ಮ ಬದುಕಿನಲ್ಲಿ ಬೇರೆ ಏನು ಸಾಧನೆ ಇದೆ. ಹೇಳಿ. ನಮ್ಮೊಂದಿಗೆ ಈ ಅಸ್ಪೃಶ್ಯತೆಯ ಆಚರಣೆ ಧರ್ಮದ ರೀತಿಯಿಂದ, ನ್ಯಾಯದ ರೀತಿಯಿಂದ, ರಾಷ್ಟ್ರ ನಿರ್ಮಾಣದ ರೀತಿಯಿಂದ ಅಥವಾ ಯಾವ ರೀತಿಯಿಂದ ಇದು ಸಮರ್ಥನೀಯ ಎಂದು ತಿಳಿಸಿ.

ನಮ್ಮ ಸಂಗೀತ ಸಮಾಜದ ಉಪಯೋಗಕ್ಕೆ ಇರಬೇಕು ಎನ್ನುವ ಕಾಳಜಿ ನಮ್ಮಲ್ಲಿಯೂ ಇದೆ. ನಮ್ಮ ಒಂದೇ ಒಂದು ಆಸ್ತಿ ಅದು. ಅದನ್ನು ನುಡಿಸದೆ ನಮಗೆ ತೃಪ್ತಿ ಇರುವುದಿಲ್ಲ. ಆದರೆ ಅದಕ್ಕೂ ಮೊದಲು ನಮ್ಮ ಸಾಮಾಜೀಕರಣ ವಿಧಾನಗಳು ಸಮರ್ಪಕವಾಗಿದ್ದು ಅದು ನಾವು ಬೆಳೆಯುವುದಕ್ಕೆ ಮತ್ತು

ನಾವು ಕೇಳುವ ಒಂದು ಪ್ರಶ್ನೆಗೆ ನೀವು ನೇರವಾಗಿ ಉತ್ತರಿಸುವುದು ಸಾಧ್ಯವಿದ್ದರೆ ನೋಡಿ. ನಿಮ್ಮ ಒಂದು ಮಗುವನ್ನು ನಿಮ್ಮ ಕಣ್ಣ ಮುಂದೆಯೇ ಕೊರಗನಾಗಿ ಸಾಮಾಜೀಕರಣಗೊಳಿಸಿ ದುಡಿಸಿಕೊಳ್ಳುವುದಾಗಿದ್ದರೆ ಏನು ಬೆಲೆ ಕೊಡಬೇಕು ಮತ್ತು ನೀವೇನು ಮಾಡುತ್ತೀರಿ? ನಾವಿದನ್ನು ಸಾವಿರ ವರುಷ ಮೀರಿ ಅದಕ್ಕಾಗಿ ಬದುಕಿ ಮಾಡಿಕೊಂಡು ಬಂದಿದ್ದೇವೆ. ನಮ್ಮ ಬದುಕಿನಲ್ಲಿ ಬೇರೆ ಏನು ಸಾಧನೆ ಇದೆ. ಹೇಳಿ. ನಮ್ಮೊಂದಿಗೆ ಈ ಅಸ್ಪೃಶ್ಯತೆಯ ಆಚರಣೆ ಧರ್ಮದ ರೀತಿಯಿಂದ, ನ್ಯಾಯದ ರೀತಿಯಿಂದ, ರಾಷ್ಟ್ರ ನಿರ್ಮಾಣದ ರೀತಿಯಿಂದ ಅಥವಾ ಯಾವ ರೀತಿಯಿಂದ ಇದು ಸಮರ್ಥನೀಯ ಎಂದು ತಿಳಿಸಿ. ನಮ್ಮ ಸಂಗೀತ ಸಮಾಜದ ಉಪಯೋಗಕ್ಕೆ ಇರಬೇಕು ಎನ್ನುವ ಕಾಳಜಿ ನಮ್ಮಲ್ಲಿಯೂ ಇದೆ. ನಮ್ಮ ಒಂದೇ ಒಂದು ಆಸ್ತಿ ಅದು. ಅದನ್ನು ನುಡಿಸದೆ ನಮಗೆ ತೃಪ್ತಿ ಇರುವುದಿಲ್ಲ.

ಸಮಾಜದಲ್ಲಿ ಸಮರ್ಪಕವಾಗಿ ಭಾಗವಹಿಸುವುದಕ್ಕೆ ಸಮನಾದ ಅವಕಾಶಗಳು ಬೇಕು. ಆ ರೀತಿಯ ಹೊಸ ವ್ಯವಸ್ಥೆಯೊಂದು ನಮ್ಮೊಳಗೆ ಅಸ್ತಿತ್ವಕ್ಕೆ ಬರಬೇಕು. ನಾವು ಮನಸ್ಸು ತುಂಬಿ ನಮ್ಮ ಡೋಲನ್ನು ನುಡಿಸಬೇಕು. ಭಾವ ತುಂಬಿ ಹಾಡಬೇಕು. ಈ ಬಗ್ಗೆ ನೀವೆಲ್ಲರೂ ಸೂಕ್ತವಾಗಿ ಚಿಂತಿಸಿ ನಮ್ಮ ಸಾಮಾಜಿಕ ಬದಲಾವಣೆಗೆ ಅನುವು ಮಾಡಿಕೊಡುವಿರೆಂಬ ಆಶಯ ಇನ್ನೂ ನಮ್ಮಲ್ಲಿ ಇದೆ.

ಈಗ ನಾವು ನಮ್ಮೊಂದಿಗಿನ ಅಸ್ಪೃಶ್ಯತೆಯ ದಾಖಲಾತಿಗಳನ್ನು ಮಾಡಹೊರಟಿದ್ದೇವೆ. ನಮ್ಮ ಊರಿನಲ್ಲಿ ನಮ್ಮೊಂದಿಗಿನ ವ್ಯವಹಾರಗಳನ್ನು ಕ್ರೋಢೀಕರಿಸುವ ಸಿದ್ಧತೆ ಮಾಡುತ್ತಿದ್ದೇವೆ. ನಮ್ಮ ಊರಿನ ಅಂಗಡಿ, ಹೋಟೆಲು, ಶಾಲೆ, ಭೂತಸ್ಥಾನ, ದೇವಸ್ಥಾನ, ಪಂಚಾಯತಿಗಳಲ್ಲಿ ಕೆಲಸಕ್ಕೆ ಹೋಗುವ ಮನೆಗಳಲ್ಲಿ ಕಳೆದ ೧೦ ವರುಷದಿಂದ ನಡೆದ ಅಸ್ಪೃಶ್ಯತೆಯ ಘಟನೆ, ವರ್ತನೆಗಳನ್ನು ದಾಖಲು ಮಾಡುತ್ತಿದ್ದೇವೆ. ಇದನ್ನು ಗಣ್ಯಮಾನ್ಯ ವ್ಯಕ್ತಿಗಳ ಮುಂದೆ ಇಟ್ಟು ಪರಿಹಾರ ಪಡೆಯೋಣ. ಅಲ್ಲಿಯವರೆಗೆ ಯಾವುದೇ ಅಜಲು ಕೆಲಸಗಳಿಗೆ ನಮ್ಮನ್ನು ಒತ್ತಾಯಿಸಬಾರದೆಂದು ವಿನಂತಿ ಮಾಡುತ್ತೇವೆ ಮತ್ತು ನಾವು ನಿಮ್ಮ ಒತ್ತಾಯಕ್ಕೆ ಮಣಿಯದಿದ್ದರೆ ಅದನ್ನು ಅವಿಧೇಯತೆಯೆಂದು ತಿಳಿದುಕೊಳ್ಳಬೇಕಾಗಿಲ್ಲ.

ನಮ್ಮ ಡೋಲು ನುಡಿಸುವುದು ಒಂದು ಕಲೆ. ಕಲೆಗೆ ಸಮಾಜದ ಪೋಷಣೆ ಅಗತ್ಯ. ಒಂದು ಕಲೆಯನ್ನು ಕಲೆಯಾಗಿಯೇ ಗುರುತಿಸುವ, ಗೌರವಿಸುವ ಗುಣವನ್ನು ನಾವು ಬೆಳೆಸಿಕೊಳ್ಳಬೇಕಾಗುತ್ತದೆ. ಕಲೆ ಮತ್ತು ಕಲಾವಿದನನ್ನು ಅಜಲು, ಜೀತ, ಅಸ್ಪೃಶ್ಯತೆ, ಬ್ಲ್ಯಾಕ್‌ಮ್ಯಾಜಿಕ್ ಮಾನಹಾನಿಗಳಿಂದ ವಿಮೋಚನೆಗೊಳಿಸಬೇಕಾಗುತ್ತದೆ. ನಮ್ಮ ನಿಲುವನ್ನು ಹಣದ ಲೆಕ್ಕಾಚಾರದಲ್ಲಿ ಅಳೆಯುವುದು ಬೇಡ. ನಮ್ಮ ಕೆಲಸಕ್ಕೆ ಸಂಬಳ ೧೦೦ ರೂಪಾಯಿ ಇರಬೇಕೇ ಸಾವಿರ ರೂಪಾಯಿ ಇರಬೇಕೇ ಎನ್ನುವ ಚರ್ಚೆಯಲ್ಲಿ ನಾವು ಸಧ್ಯ ಇಲ್ಲ.

ಕಲೆ ಮತ್ತು ಕಲಾವಿದನ ವಿಮೋಚನೆ ಹೇಗೆ ಸಾಧ್ಯ ಎನ್ನುವುದು ಕೇಂದ್ರ ಪ್ರಶ್ನೆ. ಈ ಬಗ್ಗೆ ತಾವೆಲ್ಲರೂ ಸಕಾರಣವಾಗಿ ಚಿಂತಿಸಿ ನಮ್ಮೊಳಗೆ ಒಂದು ಹೊಸ ಒಡಂಬಡಿಕೆ ಬಂದು, ಹೊಸ ಮಾನವೀಯ ಸಂಬಂಧಗಳು ರೂಪುಗೊಳ್ಳುವಂತಾಗಬೇಕೆಂದು ನಮ್ಮ ದೃಢ ಸಂಕಲ್ಪ. ಇದರಿಂದ ಹಿಂದೆ ಸರಿಯುವುದಿಲ್ಲ. ನೆಲ್ಸನ್ ಮಂಡೇಲ ೨೬ ವರುಷಗಳ ಕಾಲ ಏಕಾಂತವಾಗಿ ಜೈಲಿನಲ್ಲಿದ್ದು ಆರೋಗ್ಯಕರವಾಗಿಯೇ ಹೊರ ಬಂದರೆ ನಾವು ಸಮಾಜದ ಹಿತದೃಷ್ಟಿಯಿಂದ ನಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದು ಕೊಳ್ಳುವ ಪ್ರಯತ್ನದಲ್ಲಿ ಇರುತ್ತೇವೆ. ಒಂದಾಗಿ ಬಾಳುವುದು ಬದುಕು. ಸಮರಸವೇ ಜೀವನ. ಅದನ್ನು ಸಾಧಿಸಿಕೊಳ್ಳುವುದು ನಮ್ಮ ಗ್ರಾಮಗಳಿಗೆ ಸಾಧ್ಯವೇ ಎನ್ನುವುದಕ್ಕೆ ನಮ್ಮ ಗ್ರಾಮಗಳೇ ಮಾದರಿಯಾಗಲಿ.

ನಮ್ಮ ಈ ನಿರ್ಧಾರಗಳಿಂದ ಭಯದ ವಾತಾವರಣ ನಿರ್ಮಾಣ ಆಗಿದೆ. ರಕ್ಷಣೆ ಕೇಳುವುದಿಲ್ಲ. ಎಲ್ಲರ ಸಹೃದಯತೆಗೆ ಮಾತ್ರ ಮನವಿ ಮಾಡುತ್ತೇವೆ.

ಉದಾರ ಚರಿತಾನಾಂ ವಸುಧೈವ ಕುಟುಂಬಕಂ, ಈ ಹಳೇ ವಾಕ್ಯಕ್ಕೆ ಅರ್ಥವನ್ನು ತುಂಬಿಸಬೇಕಾದವರು ನಾವು ಎನ್ನುವ ಹೊಣೆಗಾರಿಕೆಯೊಂದಿಗೆ ನಿಮ್ಮ ವಿಶ್ವಾಸಿಗರು. □

ಕವಲುದಾರಿಯಲ್ಲಿ ಯುವಜನಾಂಗ

ಕಾಳಜಿ

ಪ್ರಸುತ್ತ ಭಾರತದ ಸಂದರ್ಭದಲ್ಲಿ ಅನೇಕ ಇಕ್ಕಟ್ಟು- ಬಿಕ್ಕಟ್ಟುಗಳಿದ್ದರೂ ಅವು ಹಿಂದಿಗಿಂತ ಹೆಚ್ಚು ಸಂಕೀರ್ಣವೂ, ಗಂಭೀರವೂ ಆಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದ ಯುವ ಜನಾಂಗದ ಒಟ್ಟು ಜೀವನಕ್ರಮ, ಅವರ ಆಶಯ, ಒಲವು- ನಿಲುವುಗಳನ್ನೇ ಬದಲಾಯಿಸಿದೆ. ಇದರಿಂದಾಗಿ ಯುವಪೀಳಿಗೆ ತಮ್ಮ ಕನಸು ನಿರೀಕ್ಷೆಗಳನ್ನು ಕಳೆದುಕೊಂಡ 'ಶೂನ್ಯಸ್ಥಿತಿ'ಗೆ ತಲುಪುತ್ತಿದೆ.

ನಾಗವೇಂದ್ರ ಸ್ವಾಮಿ ಚಿದರವಳ್ಳಿ

ಒಂದು ದೇಶದ ಅಭಿವೃದ್ಧಿಯು ಆ ದೇಶದ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವ ಸದೃಢ, ಕ್ರಿಯಾಶೀಲ ಮಾನವ ಸಂಪನ್ಮೂಲಗಳನ್ನು ಅದರಲ್ಲೂ ಯುವ ಜನಾಂಗವನ್ನು ಅವಲಂಬಿಸಿದೆ. ಹಾಗಿಯೇ, ಆ ದೇಶದ, ರಾಜ್ಯದ ತಲಾ ವರಮಾನವು ಹೇಗೆ ಹಂಚಿಕೆಯಾಗುತ್ತಲಿದೆ ಎಂಬುದು- ಅಭಿವೃದ್ಧಿಯ ಜೊತೆಗೆ ಜನರ ಕಲ್ಯಾಣವನ್ನೂ ಬಿಂಬಿಸುತ್ತದೆ.

ಪ್ರಸುತ್ತ ಭಾರತದ ಸಂದರ್ಭದಲ್ಲಿ ಅನೇಕ ಇಕ್ಕಟ್ಟು- ಬಿಕ್ಕಟ್ಟುಗಳಿದ್ದರೂ ಅವು ಹಿಂದಿಗಿಂತ ಹೆಚ್ಚು ಸಂಕೀರ್ಣವೂ, ಗಂಭೀರವೂ ಆಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದ ಯುವ ಜನಾಂಗದ ಒಟ್ಟು ಜೀವನಕ್ರಮ, ಅವರ ಆಶಯ, ಒಲವು- ನಿಲುವುಗಳನ್ನೇ ಬದಲಾಯಿಸಿದೆ. ಇದರಿಂದಾಗಿ ಯುವಪೀಳಿಗೆ ತಮ್ಮ ಕನಸು ನಿರೀಕ್ಷೆಗಳನ್ನು ಕಳೆದುಕೊಂಡ 'ಶೂನ್ಯಸ್ಥಿತಿ'ಗೆ ತಲುಪುತ್ತಿದೆ.

ದಾರಿ ತಪ್ಪುತ್ತಿರುವರೇ?

ಹದಿಮೂರದಿಂದ ಹತ್ತೊಂಬತ್ತನೆಯ ವಯಸ್ಸಿನವರಿಗೆ 'ಟೀನೇಜ್' ಎಂದು ಕರೆಯುವ ಕಾಲವು ಹೆಚ್ಚು ಒತ್ತಡದ, ದಣಿವ, ವಾಸ್ತವ- ಭ್ರಮೆಗಳ ನಡುವಿನ ಗೆರೆ ತಿಳಿಯದ 'ಮಂಗ ಮನಸ್ಸಿನ ಹಂತ'. ಈ ಸಂದರ್ಭದಲ್ಲೇ ಯುವ ಜನಾಂಗವನ್ನು ಸಿನಿಮಾ, ಜಾಹಿರಾತುಗಳು, ರೋಚಕ ವರದಿ ಪ್ರಕಟಿಸುವ ವಾರಪತ್ರಿಕೆಗಳು, ರಾಜಕಾರಣಿಗಳು ದಾರಿತಪ್ಪಿಸುತ್ತಿರುವುದು ಮನನೀಯ.

ಏಡ್ಸ್ ರೋಗಿಗಳು ಹಾಗೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು ಯುವ ಜನಾಂಗದವರೇ ಎಂಬುದು ಯುವ ಸಮೂಹ ದಾರಿ ತಪ್ಪುತ್ತಿರುವುದನ್ನು ಪುಷ್ಟೀಕರಿಸುತ್ತದೆ.

ನಿರುದ್ಯೋಗವೆಂಬ ಪೆಡಂಭೂತ:

ಯುವ ಮನಸ್ಸುಗಳಿಗೆ ತಾವು ದೈಹಿಕವಾಗಿ ಸದೃಢವಾಗಿರಬೇಕು, ಚೆನ್ನಾಗಿ ಕಾಣಬೇಕು, ಇತರರು ತನ್ನನ್ನು ಗುರುತಿಸಿ ಗೌರವಿಸಬೇಕು, ಪ್ರೀತಿಸಬೇಕು. ಹೀಗೆ ಎಲ್ಲ 'ಬೇಕು'ಗಳೆಂಬ ಪಟ್ಟಿಯ ಆಸೆಗಳು ಗರಿಗೆದುರುತ್ತಾ ಇರುತ್ತವೆ. ಅದರ ಜೊತೆಗೆ ಫ್ಯಾಶನ್ ಪ್ರೇಮ, ತನಗಿಷ್ಟವಾದ ಸಿನಿಮಾತಾರೆ, ಲೇಖಕ, ಕ್ರೀಡಾಪಟು, ರಾಜಕಾರಣಿ, ಹಿರಿಯರುಗಳನ್ನು ಆರಾಧಿಸುವ ಆದರ್ಶದ ಬೆನ್ನು ಹತ್ತುವ ಕಾಲವೂ ಹೌದು. ಇವೆಲ್ಲದರ ಒಟ್ಟಂದದಲ್ಲಿರುವುದು ಉದ್ಯೋಗದ ಭದ್ರತೆ, ಅದಕ್ಕಾಗಿ ಮಾಡುವ ಹುಡುಕಾಟ.

ಆದರೆ ಎಸ್.ಎಸ್.ಎಲ್.ಸಿ/ಪಿ.ಯು.ಸಿಗಳಲ್ಲಿ ಉತ್ತೀರ್ಣರಾದ ಇಲ್ಲವೇ ಅನುತ್ತೀರ್ಣರಾದ ಹಾಗೂ ಸಾಮಾನ್ಯ ಪದವೀಧರರ ಸಂಖ್ಯೆ ಹೆಚ್ಚುತ್ತಿರುವುದರಿಂದ ಅವರು (ನಿಜ 'ವಿದ್ಯಾವಂತರಲ್ಲ'!) ಅಕ್ಷರಸ್ಥರೆಂದು ಹೆಮ್ಮೆ ಪಡುವಂಥದ್ದಲ್ಲದ (ದು)ಸ್ಥಿತಿಗೆ ತಲುಪಿರುವುದು ಚಿಂತನಾರ್ಹ.

ಏಕೆಂದರೆ, ಶೈಕ್ಷಣಿಕವಾಗಿ ಸಂಪೂರ್ಣ ಅರ್ಹತೆ ಪಡೆಯದ ವಿದ್ಯಾವಂತರು ರೈತರು ಹಾಗೂ ಕಾರ್ಮಿಕರಂತೆ ಕೆಲಸ ಮಾಡಲು ಅವರ ಒಣ ಜಂಭ, ಭ್ರಮಾತ್ಮಕವಾದ ಪ್ರತಿಷ್ಠೆ ಅಡ್ಡಿ ಬರುತ್ತದೆ. ಇವರ ವಿದ್ಯಾಭ್ಯಾಸಕ್ಕೆ ತಕ್ಕಂತೆ (ಗುಮಾಸ್ತರ ಹುದ್ದೆ ಗಳು ಖಾಲಿಯಿಲ್ಲ, ಅವನ್ನೆಲ್ಲ ಕಂಪ್ಯೂಟರ್ ಆಕ್ರಮಿಸಿದೆ) ಉದ್ಯೋಗ ಸಿಗದೆ ಇವರು ಕಾಡುಹರಟೆ ಹೊಡೆಯುತ್ತಾ 'ದಂಡ ಪಿಂಡ'ಗಳೆಂದು ಕರೆಸಿಕೊಳ್ಳುತ್ತಿರುವುದು ನೋವಿನ ಸಂಗತಿಯಾದರೂ ವಾಸ್ತವ. ಇಂಥವರು ತಾವೂ ನೆಮ್ಮದಿಯಾಗಿರದೆ ಹೆತ್ತವರನ್ನೂ ನೆಮ್ಮದಿಯಿಂದಿರಲು ಬಿಡುತ್ತಿಲ್ಲ.

ಇನ್ನು ಪದವಿ/ಸಾತ್ನಕೋತ್ತರ ಪದವಿಗಳನ್ನು ಪಡೆದ ಯುವಜನಾಂಗಕ್ಕೆ ಸರಿಯಾದ ಉದ್ಯೋಗವೇ ಸಿಗುತ್ತಿಲ್ಲ. ಇದಕ್ಕೆ ಜಾಗತೀಕರಣವು ಒಂದು ಕಾರಣವಾದರೆ, ನಮ್ಮ ಆಡಳಿತ ನೇತಾರರಲ್ಲಿನ ನಿಷ್ಕ್ರಿಯತೆ, ಬೇಜವಾಬ್ದಾರಿತನ, ಗಾಂಧೀ ಮಾದರಿಯ ಹಾಗೂ ಭಾರತಕ್ಕೆ ಹೊಂದಿಕೊಳ್ಳುವ ಅರ್ಥವ್ಯವಸ್ಥೆ ವಿಕೇಂದ್ರೀಕರಣಗಳನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳದಿರುವುದು ಇತರ ಕಾರಣಗಳಾಗಿವೆ.

ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನದ ಭರಾಟೆಯಲ್ಲಿ ಆ ಕ್ಷೇತ್ರದ ಯುವ ಸಮೂಹವನ್ನು ಹಗಲು- ರಾತ್ರಿಯೆನ್ನದೆ ಯಥೇಚ್ಛ ಸಂಬಳದೊಂದಿಗೆ ದುಡಿಸಿಕೊಳ್ಳುತ್ತಿರುವುದು ಒಂದೆಡೆಯಾದರೆ, ಇತರ ಅನ್ವಯಿಕ ವಿಜ್ಞಾನ (Applied Science) ಗಳು, ಮಾನವಿಕ ವಿಜ್ಞಾನಗಳು ಇಂದು ಕೆಲಸಕ್ಕೆ ಬಾರದ ವಲಯಗಳೆನ್ನಿಸಿಕೊಂಡಿವೆ. ಈ ರೀತಿಯ ನಿರುದ್ಯೋಗಿಗಳು ಕೆಲಸವಿಲ್ಲದೆ ತುಕ್ಕು ಹಿಡಿಯುತ್ತಾ ಅತಂತ್ರದ 'ಕವಲು ದಾರಿ'ಯಲ್ಲಿದ್ದಾರೆ. ತೀರ ಇತ್ತೀಚೆಗೆ ಇಂಜಿನಿಯರಿಂಗ್ ಪದವೀಧರರೂ ನಿರುದ್ಯೋಗ ಬವಣೆ ಯಿಂದಾಗಿ 'ಕಾಲ್‌ಸೆಂಟರ್'ಗಳಲ್ಲಿ ರಾತ್ರಿಯಿಡೀ ದುಡಿಯುತ್ತಿರುವುದು ನಿರುದ್ಯೋಗದ ಗಂಭೀರತೆಯನ್ನು ತೋರಿಸುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿವೃತ್ತಿಯಾದ ಖಾಲಿ ಹುದ್ದೆಗೆ ಹೊಸ ನೇಮಕಾತಿ ಮಾಡುತ್ತಿಲ್ಲ. ಅದಲ್ಲದೆ ಇರುವ ಉದ್ಯೋಗಗಳಲ್ಲೇ ಕಡಿತ ಮಾಡಿವೆ, ನಿವೃತ್ತರು ಈಗಾಗಲೇ ಜೀವನದಲ್ಲಿ ಸಕಲ ಸೌಲಭ್ಯ ಅನುಭವಗಳನ್ನು ಪಡೆದಿದ್ದರೂ ಸರ್ಕಾರ ಅಂತಹ ನಿವೃತ್ತರನ್ನೇ ಪುನಃ ತಾತ್ಕಲಿಕವಾಗಿ (ಅದರಲ್ಲೂ ಶಿಕ್ಷಣ ಇಲಾಖೆ) ನೇಮಕ ಮಾಡಿಕೊಳ್ಳುತ್ತಿರುವುದು, ಶೇ. ೮೦-೯೦ರಷ್ಟು 'ಮುಂಬಡ್ತಿ' ಮೂಲಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳುತ್ತಿರುವುದು, ಪಂಚ ವಾರ್ಷಿಕ ಯೋಜನೆಗಳಂತೆ ಕರ್ನಾಟಕ ಲೋಕಸೇವಾ ಆಯೋಗ ಕೆ.ಎ.ಎಸ್. ಮೊದಲಾದ ನೇಮಕಾತಿಗಳನ್ನು ಮಾಡಿಕೊಳ್ಳುತ್ತಿರುವುದು ಬಿಸಿರಕ್ತದ ಯುವ ನಿರುದ್ಯೋಗಿಗಳಿಗೆ ಮಾಡುತ್ತಿರುವ ಅನ್ಯಾಯ. ಇದರಿಂದಾಗಿ ಯುವ

ಜನಾಂಗದ ಕ್ರಿಯಾಶೀಲತೆ, ಪ್ರತಿಭೆ, ಉತ್ಸಾಹ, ದಕ್ಷತೆಗಳು ನಶಿಸುತ್ತಿಲ್ಲವೇ?

ಹಾರ್‍ನಳ್ಳಿ ರಾಮಸ್ವಾಮಿಯವರ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನಂತೆ ಒಂದು ಲಕ್ಷ ಎಂಬತ್ತು ಸಾವಿರಕ್ಕೂ ಮಿಗಿಲಾದ ಸರ್ಕಾರೀ ಹುದ್ದೆಗಳನ್ನು ಸದ್ದುಪಡಿಸಿರುವ ರಾಜ್ಯ ಸರ್ಕಾರ, ಅವರೇ ನೀಡಿದ ಮಹತ್ವದ ಶಿಫಾರಸ್ಸಾದ 'ಚಿಕ್ಕ-ಚೊಕ್ಕ-ಸಂಪುಟ'ವನ್ನು ಜಾರಿಗೊಳಿಸಿಲ್ಲವೇಕೆ? ಜಿಲ್ಲೆಗೊಂದರಂತೆ ೨೭ ಸಚಿವರನ್ನು ಉಳಿಸಿಕೊಂಡು ಅನಗತ್ಯ ನಿಷ್ಕ್ರಿಯ ಮಂತ್ರಿಗಳನ್ನು ತೆಗೆದು ಹಾಕಬೇಕು. ರಾಜಕೀಯ ಪುನರ್ವಸತಿ ಕೇಂದ್ರಗಳೆನಿಸಿರುವ ಅನಗತ್ಯ ನಿಗಮ- ಮಂಡಳಿಗಳನ್ನು ಮುಚ್ಚಬೇಕು. ಅಲ್ಲದೆ ಸಚಿವರುಗಳಿಗೆ ದುಬಾರಿ ಕಾಂಟೆಸ್ಸಾ, ಸಿಯೆರಾ ಮೊದಲಾದ ಕಾರುಗಳ ಬದಲಾಗಿ 'ಮಿತವ್ಯಯಿ' ಅಂಬಾಸಿಡರ್ ಕಾರುಗಳನ್ನು ಉಪಯೋಗಿಸಬೇಕು. ತನ್ಮೂಲಕ ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸಿದರೆ ಆ ಹಣದಿಂದ ಬೇಕಾದಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬಹುದಾಗಿದೆ.

ಅಸಮಾನತೆ : ಒಂದೆಡೆ ಇಂಗ್ಲೀಷ್/ಮಾಹಿತಿ ತಂತ್ರಜ್ಞಾನ/ಕಂಪ್ಯೂಟರ್ ಕಲಿತ-ಕಲಿಯದವರ ನಡುವೆ, ನಗರ-ಹಳ್ಳಿಗಳ ನಡುವೆ ಅಸಮಾನತೆ ಅಗಾಧವಾಗಿ ಹೆಚ್ಚಾಗುತ್ತಿದೆ. ಇನ್ನೊಂದೆಡೆ ಸಮಾನ ಶಿಕ್ಷಣ ಪಡೆದವರಲ್ಲೇ ಅಸಮಾನತೆ ಯಿದೆ. ಉದಾ: ಅರೆಕಾಲಿಕ ಉಪನ್ಯಾಸಕರಿಗೆ ಮಾಸಿಕ ೧,೨೦೦/-ರೂಗಳು, ಖಾಯಂ ಅಲ್ಲದ ಪೂರ್ಣಕಾಲಿಕ ಉಪನ್ಯಾಸಕರಿಗೆ ಮಾಸಿಕ ೨,೫೦೦/- ರೂಗಳ ಸಂಬಳವಿದೆ. ಆದರೆ ಅದೇ ಸರ್ಕಾರಿ ಕಾಲೇಜಿನ ಖಾಯಂ ಪೂರ್ಣಾವಧಿ ಪದವಿ ಕಾಲೇಜಿನ ಉಪನ್ಯಾಸಕರಿಗೆ ತಿಂಗಳಿಗೆ ೧೮,೦೦೦ ರೂ (ಯು.ಜಿ.ಸಿ)ಗಳ ವೇತನ. ಸಮಾನ ವಿದ್ಯಾರ್ಹತೆ, ಸಮಾನ ಕೆಲಸವಿದ್ದಾಗ್ಯೂ ಇಷ್ಟೊಂದು ಅಂತರವೇಕೆ?

ಬದಲಾಗುತ್ತಿರುವ ವಿದ್ಯಮಾನಗಳಿಂದಾಗಿ ಏರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಗಳ ಬಿಸಿ ಖಾಯಂ ಅಲ್ಲದ ಯುವ ಉಪನ್ಯಾಸಕರಿಗೆ ತಟ್ಟುವುದಿಲ್ಲವೆ? ಅವರಿಗೂ ಮನೆ-ಮಕ್ಕಳು ಇಲ್ಲವೆ?

ಓಬಿರಾಯನ ಕಾಲದಲ್ಲಿ ನಿಗದಿಪಡಿಸಿದ ಭತ್ಯೆ ನೀಡುವ ಸರ್ಕಾರ, ಅದನ್ನಾಳುವ ತಮ್ಮ ನಾಯಕರು ಮಾತ್ರ ಕಾಲಕಾಲಕ್ಕೆ ಲೋಕಸಭೆ, ವಿಧಾನ ಸಭೆಗಳಲ್ಲಿ ತಮ್ಮ ಸಂಬಳ ಸಾರಿಗೆ ಭತ್ಯೆ ಗಳನ್ನು ಯಾವ ಭಿನ್ನಮತ/ಪಕ್ಷಭೇದವಿಲ್ಲದೆ ಹೆಚ್ಚಿಸಿಕೊಳ್ಳು ವುದು ಸರಿಯೇ? ಆತ್ಮಾವಲೋಕನಕ್ಕೆ ಇದು ಸಕಾಲ.

'ಯುವಕರೇ ಏಳಿ ಎದ್ದೇಳಿ' ಎಂದರು ವಿವೇಕಾನಂದರು. ಆದರೆ ಇಂದು ಎಲ್ಲದಕ್ಕೂ ನಿಸ್ತೇಜತೆ, ನಿರುತ್ಸಾಹ, ಸಿನಿಕತೆ ಗಳನ್ನು ತೋರಿಸುತ್ತಿರುವ ಯುವ ಜನಾಂಗವನ್ನು ನೋಡಿದಾಗ ಸಂವೇದನಾಶೀಲರಿಗೆ ಕರುಳು ಕತ್ತರಿಸಿದಂತಾಗುತ್ತದೆ.

ದುಡಿಯುವ ಕೈಗಳಿಗೆ ಉದ್ಯೋಗ ಸಿಗುವಂತೆ ಮಾಡುವ ದೂರದೃಷ್ಟಿಯಿಂದ ಈಗಿನಿಂದಲೇ 'ವೃತ್ತಿ ಮತ್ತು ಶಿಕ್ಷಣ'ದ ಸಂಯೋಜನಾಧರಿತ ಶಿಕ್ಷಣ ಜಾರಿಗೆ ಬರಲು ಯೋಜನೆ ಗಳನ್ನು ಕೈಗೊಳ್ಳಬೇಕಾಗಿದೆ. ತನ್ಮೂಲಕ 'ಕಲಿಕೆ-ಗಳಿಕೆ' ಯಾಧಾರಿತ ಶಿಕ್ಷಣ ನೀಡಲು ಸಾಧ್ಯವಿರುವ ಕ್ರಮಗಳನ್ನು 'ಕಾಲಮಿತಿ'ಯಲ್ಲಿ ಜಾರಿಗೊಳಿಸಬೇಕಾಗಿದೆ.

ಇವೆಲ್ಲದಕ್ಕೂ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಆಡಳಿತ ಗಾರರು ಸಕಾರಾತ್ಮಕವಾಗಿ ಸ್ಪಂದಿಸಿ ಯುವ ಜನಾಂಗವನ್ನು ರಾಷ್ಟ್ರ ನಿರ್ಮಾಣಕ್ಕೆ ಸಜ್ಜುಗೊಳಿಸಬೇಕಾಗಿದೆ. ಇದಕ್ಕೆ ಸರ್ಕಾರ, ಯುವಕರು, ಶಿಕ್ಷಣತಜ್ಞರು ಸೇರಿದಂತೆ ಪ್ರಜ್ಞಾವಂತರೆಲ್ಲ ಸೇರಿ ನಿರ್ದಿಷ್ಟ ಮಾದರಿ ಯೋಜನೆಗಳನ್ನು ಹಮ್ಮಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಇಲ್ಲದಿದ್ದರೆ ಪರಿಣಾಮ ಭೀಕರವಾಗುವ ಅಪಾಯವಿದೆ. ☐

ದಲಿತ ಸಂಸ್ಕೃತಿ, ಪರಂಪರೆ, ಇತಿಹಾಸ :

ದಲಿತರು ನಾಗರೇ ?

(೩೫ನೇ ಪುಟದಿಂದ)

ಎಂಬುದು ದಕ್ಷಿಣದ ದೊರೆಗಳಿಗೆ ಶೋಷಕ ಸಿದ್ಧಾಂತದ ಪರಿಚಯವನ್ನು ಮಾಡಿಕೊಟ್ಟ ಎಂದೇ ಅರ್ಥ. ತಮಿಳಿನ ತಂದೆ ಅಗಸ್ತ್ಯ ಎನ್ನುವ ಅತಿರೇಕಕ್ಕೆ ತಮಿಳು ಶಿಷ್ಟ ಪರಂಪರೆ ತಲುಪುತ್ತದೆ. ನೀಲಕಂಠಶಾಸ್ತ್ರಿಗಳು ರಾಕ್ಷಸರ ಪರವಾಗಿ ಯೋಚಿಸದೇ ಆರ್ಯವೈದಿಕರ ಪಕ್ಷಪಾತಿಯಾಗಿ ಬರೆಯುತ್ತಾರೆ. ದಕ್ಷಿಣ ಭಾರತದ ಚರಿತ್ರೆಯ ದುರಂತ ಇದು.

ಆದರೆ ದಕ್ಷಿಣದ ದಲಿತರು ಇಂಥ ಕುತಂತ್ರಗಳ ವಿರುದ್ಧ ತಮ್ಮದೇ ಆದ ಸಾಂಸ್ಕೃತಿಕ ನೆಲೆಯಲ್ಲಿ ತಕ್ಕನಾಗಿ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಇಲ್ಲಿ ಸಿಂದ್ ಮಾದಿಗರು ಹೇಳುವ ಕತೆಯನ್ನು ಉದಾಹರಿಸಬಹುದು. (ವಿವರಗಳಿಗೆ ಕೆ. ರಾಮಯ್ಯ ಅವರ 'ಸಿಂದ್ ಮಾದಿಗರ ಸಂಸ್ಕೃತಿ', ಕ.ಸಾ.ಅ. ಪ್ರಕಟಣೆ)

ಶಿವ ಪಾರ್ವತಿಯರ ಮದುವೆ ಇನ್ನೂ ಆರು ತಿಂಗಳಿರು ವಾಗಲೇ ಕೂಳಬಾಕ ಅಗಸ್ತ್ಯ ಏಳೂರಗಲದ ಆಲದ ಎಲೆ ಹೊಲಿದು ಊಟಕ್ಕೆ ರೆಡಿ ಮಾಡಿಕೊಳ್ಳುತ್ತಾನೆ. ಮಾಡಿದ ಅಡುಗೆಯನ್ನೆಲ್ಲ ತಾನೇ ತಿನ್ನಬೇಕೆಂದು ಅವನ ಪ್ಲ್ಯಾನು. ಈತ ಹಿಂದೊಮ್ಮೆ ಇಡೀ ಕಡಲನ್ನೇ ಕುಡಿದವನಲ್ಲವೇ? ವಿಶ್ವಬ್ರಹ್ಮ ಬ್ರಾಹ್ಮಣ ವೇಷದಲ್ಲಿ ಬಂದು ಮದುವೆ ಮುಗಿದುಹೋಯಿ ತೆಂದು ಸುಳ್ಳು ಹೇಳಿದ್ದು ಗೊತ್ತಾಗಿ ಅಗಸ್ತ್ಯ ಅವನಿಗೆ, ಅವನು ಇವನಿಗೆ ಪರಸ್ಪರ ಶಪಿಸಿಕೊಳ್ಳುತ್ತಾರೆ.

ಅದರ ಪ್ರಕಾರ ಅಗಸ್ತ್ಯ ಮರವಾಗುತ್ತಾನೆ. ವಿಶ್ವಬ್ರಹ್ಮ ತನ್ನ ಜ್ಞಾನವನ್ನೆಲ್ಲ ಕಳೆದು ಕೊಳ್ಳುತ್ತಾನೆ. ಕೊನೆಗೆ ಕೆ.ರಾಮಯ್ಯ ಸಮರ್ಪಕವಾಗಿಯೇ ಹೀಗೆ ಹೇಳುತ್ತಾರೆ: 'ವಿನಾಶಕಾರಿ ಸಂಸ್ಕೃತಿಯ ಪ್ರತೀಕ ಅಗಸ್ತ್ಯ

ವೀರಶೈವ ಮತಗ್ರಂಥವೆಂದು ಪ್ರಖ್ಯಾತವಿರುವ ಶಿವಯೋಗಿ ಶಿವಾಚಾರ್ಯನ 'ಸಿದ್ಧಾಂತ ಶಿಖಾಮಣಿ' ಎಂಬ ಸಂಸ್ಕೃತ ಗ್ರಂಥವನ್ನು ರೇಣುಕರು ಅಗಸ್ತ್ಯಮುನಿಗೆ ಬೋಧಿಸಿ ದರೆಂದು ಈ ಗ್ರಂಥವೇ ಹೇಳುತ್ತದೆ. ಗ್ರಂಥದ ಕೊನೆಗೆ ರೇಣುಕ ಅಗಸ್ತ್ಯ ಮುನಿಗೆ ಸಮಸ್ತ ಪ್ರಪಂಚದಲ್ಲಿ ವೀರಶೈವ ಶಾಸ್ತ್ರವನ್ನು ಪ್ರಕಾಶ ಪಡಿಸಲು ಅಜ್ಞಾಪಿಸುತ್ತಾನೆ. ಇದೆಲ್ಲ ಬರೀ ಕತೆಗೆ ಸೀಮಿತ. ಏಕೆಂದರೆ ನಂತರ ಯಾವ ಕಾಲದಲ್ಲೂ ಅಗಸ್ತ್ಯ ವೀರಶೈವವನ್ನು ಪ್ರಚಾರ ಮಾಡಿದ ದಾಖಲೆ ಸಿಗುವುದಿಲ್ಲ. ಹಾಗಿದ್ದರೆ ವಚನಕಾರರಾದರೂ ಈ ಮಾತನ್ನು ಹೇಳದೇ ಇರುತ್ತಿದ್ದರೇ?

ರಾಕ್ಷಸರು ದುರುಳರು, ನೀಚರು, ವಂಚಕರೆಂದು ಉದ್ದಕ್ಕೂ ಸುಳ್ಳು ಹೇಳಿಕೊಂಡು ಬಂದಿರುವ ವೈದಿಕ ವಾಙ್ಮಯ ಹೇಳುವ ರಾಕ್ಷಸರ ಕತೆಗಳನ್ನೇ ಸರಿಯಾಗಿ ವಿಶ್ಲೇಷಿಸಿದರೆ ತದ್ವಿರುದ್ಧ ಫಲಿತಾಂಶ ಹೊರಬರುತ್ತದೆ.

ಇನ್ನೂ ಒಂದು ಮಹತ್ವದ ನಿದರ್ಶನವನ್ನು ತಮಿಳು ಪರಂಪರೆಯಲ್ಲೆ ಕಾಣುತ್ತೇವೆ. ದ್ರಾವಿಡ ಕ್ಷತ್ರಿಯರೆಂದು ಹೇಳಿಕೊಳ್ಳುವ ತಮಿಳು ಪಳ್ಳಿ(ಲ್ಲಿ) ಅಥವಾ ವನ್ನಿಯರ್ ಕುಲದ ಬಗ್ಗೆ ವಿವರಿಸುವಾಗ ಥರ್‍ಸ್ಟನ್ ಒಂದು ಕತೆಯನ್ನು ದಾಖಲಿಸುತ್ತಾನೆ. ಹಿಂದೆ ವಾತಾಪಿ ಮತ್ತು ಮಾಹಿ ಎಂಬ ರಾಕ್ಷಸರಿದ್ದರು. ಬ್ರಹ್ಮನನ್ನು ಪೂಜಿಸಿ ಸಾವಿಲ್ಲದ ವರ ಪಡೆದರು. ವಾತಾಪಿ ವಾಯುವನ್ನು, ಮಾಹಿ ಸೂರ್ಯನನ್ನು ನುಂಗಿದರು. ಭೂಮಿ ಕತ್ತಲಲ್ಲಿ ಸ್ತಬ್ಧವಾಯಿತು.ದೇವತೆಗಳು ಬ್ರಹ್ಮನ ಮೊರೆಹೊಕ್ಕರು.

ಬ್ರಹ್ಮ ಜಾಂಬವ ಮುನಿಗೆ ಯಾಗ ಮಾಡಲು ಸೂಚಿಸಿದ. ಮುನಿಯ ಯಜ್ಞದ ಬೆಂಕಿ ಜ್ವಾಲೆಯಿಂದ ಅಸ್ತ್ರಸಹಿತ ಕುದುರೆಯೋಧರು ಹುಟ್ಟಿ ವಾತಾಪಿ ಮಾಹಿತರ ವಿರುದ್ಧ ೧೭ ಸಲ ಹೋರಾಡಿ (ಪರಶು ರಾಮನ ನೆನಪು) ಕೊಂದು ವಾಯು, ಸೂರ್ಯರನ್ನು ಮುಕ್ತಗೊಳಿಸಿದರು. ಇವರ ನೇತಾರನೇ ದೇಶದ ದೊರೆಯಾದ. ಅವನು ರುದ್ರವನ್ನಿಯ ಮಹಾರಾಜ. ಇವನಿಗೆ ೫ ಮಕ್ಕಳು. ಇವರೇ ವಹ್ನಿ ಕುಲದ ಮೂಲಪುರುಷರು.

ಜಾಂಬವಮುನಿ ದಲಿತರ ಅಜ್ಜ. ಅವನ ಯಜ್ಞದ ಬೆಂಕಿ ಯಲ್ಲಿ ವಣ್ಣಿಯರು ಹುಟ್ಟಿದರೆಂದರೇನು? ಪಲ್ಲಿಗಳು ದಲಿತ ಮೂಲದವರೆಂದೇ ಆಯಿತಲ್ಲ? ಜಾಂಬವಮುನಿ ಇಲ್ಲದಿದ್ದರೆ ವಣ್ಣಿಯರೇ ಇರುತ್ತಿರಲಿಲ್ಲ. ಬ್ರಹ್ಮ ಸ್ವತಃ ಯಜ್ಞಮಾಡಬಹು ದಿತ್ತು. ಮಾಡಲಿಲ್ಲ. ದಲಿತ ಮೂಲದವರೇ ಆದ ಪಲ್ಲಿಗಳನ್ನು ಜಾಂಬವಮುನಿಯ ಯಜ್ಞಕ್ಕೆ ಅಂಟಿಸಿ ಹೇಳುವುದು ತಾರ್ಕಿಕವೇ.

ಶಿವ ವಣ್ಣಿಯನ್ನನನ್ನು ಹುಟ್ಟಿಸಿದ ಕತೆಯಲ್ಲೂ ವೈದಿಕಶಾಹಿ ಮೂಗು ತೂರಿಸಿದೆ. ಅಲ್ಲಿ ಇಂದ್ರನ ಮಗಳ ಮೂಲಕ ಹುಟ್ಟಿದ ಐವರನ್ನು ಪಲ್ಲಿ ಕುಲದ ಆದಿಪುರುಷರೆನ್ನಲಾಗಿದೆ. ಈ ಕಥೆ ಯಲ್ಲೂ ಬಾದಾಮಿ-ವಾತಾಪಿ ರಾಕ್ಷಸನ ರೂಪದಲ್ಲೇ ಬಂದಿದೆ.

ಕನ್ನಡದ ಅಂದಿನ ಪ್ರಮುಖ ಕೇಂದ್ರವಾಗಿದ್ದ ಬಾದಾಮಿ ಅತ್ತ ವೈದಿಕರಿಂದಲೂ, ಇತ್ತ ದ್ರಾವಿಡರಿಂದಲೂ(ತಮಿಳು) ರಾಕ್ಷಸ ನೆಲೆಯೆಂದೇ(ಅಥವಾ ಸ್ವತಃ ರಾಕ್ಷಸನೆಂದೇ) ಗ್ರಹಿತ ವಾಯಿತು. ಕಂಚಿಯನ್ನು ನಾಶ ಮಾಡಿದ ಚಾಲುಕ್ಯರ ಬಾದಾಮಿ ತಮಿಳರ ದೃಷ್ಟಿಯಲ್ಲಿ ರಾಕ್ಷಸನಾದುದು ಸಹಜ.

ನಿಜ, ಕರ್ನಾಟಕ ರಾಕ್ಷಸರ ನೆಲೆಬೀಡು. ಪುರಾಣ ಕಾಲದ ವಾತಾಪಿ ರಾಕ್ಷಸೀಯವಾಗಿದ್ದರೆ ಚರಿತ್ರಕಾಲದ ಬಾದಾಮಿ ಬ್ರಾಹ್ಮಣರ ಅಗ್ರಹಾರವಾಯಿತು. ಬಹುಶಃ ದಲಿತರಾದ ಚಾಲುಕ್ಯರು (ನೋಡಿ: 'ದಲಿತ ಸಂಸ್ಕೃತಿ') ಬ್ರಾಹ್ಮಣರ ನೆರಳಿನಲ್ಲಿ ಚಕ್ರವರ್ತಿಗಳಾಗಲು ಅನೇಕ ಯಜ್ಞಯಾಗಾದಿ ಗಳನ್ನು ಮಾಡಿದರು. ತಮ್ಮ ಲೂಟಿಯಲ್ಲಿ ಬ್ರಾಹ್ಮಣರಿಗೆ ಪಾಲು ನೀಡಿದರು. ತಾವು ಕ್ಷತ್ರಿಯ ವಂಶಜರೆಂದು ಅವರಿಂದ ಸನ್ಮಾನಿತರಾದರು. ☐

ವಿವೇಕ, ಅನುಕಂಪ, ಪ್ರಜ್ಞೆ

ಬೋಧಿವೃಕ್ಷ

ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ, ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕದ ಕನ್ನಡಾನುವಾದವನ್ನು ಓದುಗರಿಗಾಗಿ ನೀಡುತ್ತಿದೆ.

ಅನುವಾದ:

ಡಾ|| ಪಿ.ವಿ. ನಾರಾಯಣ್

೧) ಬೌದ್ಧರು ವಿವೇಕ ಮತ್ತು ಅನುಕಂಪಗಳ ಬಗ್ಗೆ ಮಾತಾಡುವುದನ್ನು ಅನೇಕ ಬಾರಿ ಕೇಳಿದ್ದೇನೆ. ಈ ಪದಗಳ ಅರ್ಥವೇನು?

ಸಹಾನುಭೂತಿ ಅಥವಾ ಪ್ರೇಮ (ಈ ಎರಡೂ ಒಂದೇ ಬಗೆಯವು) ಅತ್ಯಂತ ಪ್ರಮುಖ ಆಧ್ಯಾತ್ಮಿಕ ಲಕ್ಷಣವೆಂದು ಅನೇಕ ಮತಗಳು ಪ್ರತಿಪಾದಿಸಿದರೂ, ವಿವೇಕವನ್ನೂ ಬೆಳೆಸಿಕೊಳ್ಳಲು ಹೇಳುವುದಿಲ್ಲ. ಇದರ ಪರಿಣಾಮವೆಂದರೆ, ಒಳ್ಳೆಯ ಹೃದಯವಿರುವ ಮೂರ್ಖನು ಸೃಷ್ಟಿತನಾಗು ವುದು, ತುಂಬ ಸಹಾನುಭೂತಿಯನ್ನು ಪಡೆಯದಿದ್ದರೂ ಸ್ವಲ್ಪ ಅಥವಾ ಶೂನ್ಯ ತಿಳುವಳಿಕೆಯನ್ನು ಹೊಂದುವುದು. ವಿಜ್ಞಾನದಂತಹ ಇತರ ಆಲೋಚನಾ ಪದ್ಧತಿಗಳು ಅನುಕಂಪದಂತಹ ಎಲ್ಲ ಭಾವನೆಗಳನ್ನೂ ದೂರ ಇರಿಸುವುದರಿಂದ ಮಾತ್ರವೇ ವಿವೇಕ ಬೆಳೆಯುವುದೆಂದು ನಂಬಿದವು. ಇದರ ಪರಿಣಾಮವಾಗಿ ವಿಜ್ಞಾನಕ್ಕೆ ಫಲಿತಾಂಶ ಮುಖ್ಯವಾಗಿ ಬಿಟ್ಟು, ವಿಜ್ಞಾನವು ಮನುಷ್ಯನ ನೆರವಿಗೆ ಬರಬೇಕೇ ಹೊರತು ಅವನನ್ನು ನಿಯಂತ್ರಣದಲ್ಲಿಟ್ಟುಕೊಂಡು ಸವಾರಿ ಮಾಡಬಾರದು ಎಂಬುದನ್ನೇ ಮರೆತುಬಿಟ್ಟಿದೆ. ಇಲ್ಲದಿದ್ದರೆ, ವಿಜ್ಞಾನಿಗಳು ಅಣುಬಾಂಬಿನಂತಹ ಮಾರಕಾಸ್ತ್ರ ಮಾಡಲು, ರೋಗಾಣುಯುದ್ಧ ಮುಂತಾದವಕ್ಕೆ ತಮ್ಮ ಕೌಶಲವನ್ನು ಹೇಗೆ ವಿನಿಯೋಗಿಸುತ್ತಿದ್ದರು? ತಾರ್ಕಿಕತೆ ಹಾಗೂ ವಿವೇಕಗಳನ್ನು ಮತ ಧರ್ಮವು ಪ್ರೇಮ ವಿಶ್ವಾಸಗಳಂತಹ ಭಾವನೆಗಳ ಶತ್ರುಗಳು ಎಂದೇ ಎಲ್ಲ ಕಾಲದಲ್ಲೂ ಪರಿಗಣಿಸಿವೆ. ವಿಜ್ಞಾನವಾದರೋ ಪ್ರೇಮ ವಿಶ್ವಾಸಗಳಂತಹ ಭಾವನೆಗಳನ್ನು ತಾರ್ಕಿಕತೆ ಮತ್ತು ವಸ್ತುನಿಷ್ಠತೆಗಳ ಶತ್ರುಗಳೆಂಬಂತೆ ಪರಿಗಣಿಸಿವೆ. ಹೀಗಾಗಿ, ವಿಜ್ಞಾನ ಬೆಳೆದಷ್ಟೂ ಮತಧರ್ಮ ಕ್ಷೀಣವಾಗುತ್ತದೆ. ಇದಕ್ಕೆ ವಿರುದ್ಧವಾಗಿ, ನಿಜವಾದ ಸಮತೋಲನವುಳ್ಳ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ವ್ಯಕ್ತಿಯು ಸಹಾನುಭೂತಿ ಮತ್ತು ಪ್ರೇಮಗಳನ್ನು ಬೆಳೆಸಿಕೊಳ್ಳುವುದು ಅವಶ್ಯಕ ಎಂದು ಬೌದ್ಧಧಮ್ಮವು ಪ್ರತಿಪಾದಿಸುತ್ತದೆ. ಇದು ಕೇವಲ ತತ್ವಬದ್ಧವಾಗದೆ ಅನುಭವ ವನ್ನು ಅವಲಂಬಿಸುವುದರಿಂದ, ಬೌದ್ಧಧಮ್ಮಕ್ಕೆ ವಿಜ್ಞಾನವೆಂದರೆ ಭಯವಿಲ್ಲ.

೨) ಹಾಗಾದರೆ ಬೌದ್ಧಧಮ್ಮದ ಪ್ರಕಾರ, ಪ್ರಜ್ಞೆ ಎಂದರೆ ಯಾವುದು ?

ಅತ್ಯಂತ ಉನ್ನತ ಮಟ್ಟದ ಪ್ರಜ್ಞೆಯು ವಾಸ್ತವವಾಗಿ ಯಾವ ಪ್ರಾಕೃತಿಕ ವಿದ್ಯಮಾನವೂ ಅಪೂರ್ಣವಲ್ಲ, ಅಶಾಶ್ವತ ಮತ್ತು ಸ್ವಂತದಲ್ಲ ಎಂಬುದನ್ನು ಕಾಣುತ್ತದೆ. ಇದು ಸಂಪೂರ್ಣವಾಗಿ ಮುಕ್ತಗೊಳಿಸಬಲ್ಲದು ಮತ್ತು ನಿರ್ಮಾಣವೆಂಬ ಅತ್ಯಂತ ಸುಭದ್ರ ಹಾಗೂ ಸಂತೋಷಕರ ಸ್ಥಿತಿಗೆ ತಲುಪಿಸಬಲ್ಲದು. ಆದರೆ ಬುದ್ಧನು ಈ ಮಟ್ಟದ ಪ್ರಜ್ಞೆಯ ಬಗ್ಗೆ ಹೆಚ್ಚಾಗಿ ಮಾತನಾಡುವುದಿಲ್ಲ. ಹೇಳಿದ್ದನ್ನು ನಂಬಿಬಿಡುವುದು ಪ್ರಜ್ಞೆಯ ಲಕ್ಷಣವಲ್ಲ. ನಿಜವಾದ ಪ್ರಜ್ಞೆಯೆಂದರೆ ತಾವೇ ನೇರವಾಗಿ ನೋಡಿ ಅರ್ಥಮಾಡಿಕೊಳ್ಳುವುದು. ಆದ್ದರಿಂದ ಈ ನೆಲೆಯಲ್ಲಿ ಮನಸ್ಸನ್ನು ಮುಚ್ಚುವುದಕ್ಕಿಂತ ಮುಕ್ತವಾಗಿರಿಸಿಕೊಳ್ಳಬೇಕು; ತನ್ನ ಮೂಗಿನ ನೇರವೇ ಸರಿ ಎಂಬುದಕ್ಕಿಂತ ಇತರರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕು; ತಲೆಯನ್ನು ಮರಳಿನಲ್ಲಿ ಹುದುಗಿಸುವುದರ ಬದಲು ನಮ್ಮ ನಂಬಿಕೆಗಳಿಗೆ ವಿರೋಧವೆನಿಸುವ ವಸ್ತುಸ್ಥಿತಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು; ಪೂರ್ವಾಗ್ರಹ ಪೀಡಿತವೂ ಪಕ್ಷಪಾತಪೂರ್ಣವೂ ಆಗಿರುವುದರ ಬದಲು ವಸ್ತುನಿಷ್ಠವಾಗಿರಬೇಕು; ನಮ್ಮೆದುರಿಗೆ ಎದುರಾಗುವ ಮೊದಲನೆಯದೂ ಭಾವನಾತ್ಮಕವೂ ಆದುದನ್ನು ಒಪ್ಪಿಬಿಡುವುದಕ್ಕಿಂತ ನಮ್ಮ ಅಭಿಪ್ರಾಯ ಹಾಗೂ ನಂಬಿಕೆಯನ್ನು ಸಾವಧಾನವಾಗಿ ರೂಪಿಸಿಕೊಳ್ಳಬೇಕು; ನಮ್ಮ ನಂಬಿಕೆಗಳಿಗೆ ವಿರೋಧವಾದ ವಸ್ತುಸ್ಥಿತಿಯನ್ನು ಮುಂದಿರಿಸಿದಾಗ ಅವನ್ನು ಬದಲಿಸಿಕೊಳ್ಳಲು ತಯಾರಾಗಿರಬೇಕು. ಇವನ್ನೆಲ್ಲ ಮಾಡುವವನು ಖಂಡಿತವಾಗಿ ವಿವೇಕಿ; ಇವನು ನಿಜವಾದ ತಿಳುವಳಿಕೆಯನ್ನು ಪಡೆಯಬಲ್ಲ, ಹೇಳಿದ್ದನ್ನೆಲ್ಲ ನಂಬಿಬಿಡುವುದು ಸುಲಭಮಾರ್ಗ. ಆದರೆ ಬೌದ್ಧಮಾರ್ಗಕ್ಕೆ ಧೈರ್ಯ, ತಾಳ್ಮೆ, ನಮ್ರತೆ ಮತ್ತು ಜಾಣ್ಮೆಗಳು ಅವಶ್ಯಕ.

೩) ಹೀಗೆ ಮಾಡಬಹುದಾದವರ ಸಂಖ್ಯೆ ತೀರ ಕಡಿಮೆ. ಕೆಲವರು ಮಾತ್ರ ಅನುಸರಿಸಬಹುದಾದರೆ ಬೌದ್ಧಧಮ್ಮಾವಲಂಬಿಯಾಗುವುದರಿಂದ ಉಪಯೋಗವೇನು?

ಎಲ್ಲರೂ ಬೌದ್ಧಮಾರ್ಗವನ್ನು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ ಎಂಬುದು ನಿಜವೇ. ಆದರೆ ಇದರಿಂದ ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲ ಸುಳ್ಳು ಧರ್ಮವನ್ನು ಉಪದೇಶ ಮಾಡಿದರೆ ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ ಎನ್ನುವುದು ಹಾಸ್ಯಾಸ್ಪದವಾಗುತ್ತದೆ. ಸತ್ಯವೇ ಬೌದ್ಧಮತದ ಗುರಿ. ಅದನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಎಲ್ಲರಿಗೂ ಇಲ್ಲದಿದ್ದರೆ, ಪ್ರಾಯಶಃ ಅದಕ್ಕೆ ಅವರು ಮುಂದಿನ ಜನ್ಮದಲ್ಲಿ ಸಿದ್ಧರಾಗುತ್ತಾರೆ. ಆದರೂ, ಸಮರ್ಪಕವಾದ ಮಾತುಗಳನ್ನು ಹೇಳಿದರೆ ಅಥವಾ ಪ್ರೋತ್ಸಾಹ ನೀಡಿದರೆ, ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವ ಸಾಮರ್ಥ್ಯವಿರುವವರು ಅನೇಕರಿದ್ದಾರೆ. ಈ ಕಾರಣಕ್ಕಾಗಿಯೇ, ಬೌದ್ಧಧಮ್ಮದ ಒಳನೋಟಗಳನ್ನು ಇತರರೊಡನೆ ಹಂಚಿಕೊಳ್ಳಲು ಬೌದ್ಧರು ವಿನಯ ಮತ್ತು ಪ್ರಶಾಂತತೆಯಿಂದ ಪ್ರಯತ್ನಪಡುತ್ತಿದ್ದಾರೆ. ಬುದ್ಧನು ನಮಗೆ ಅನುಕಂಪದಿಂದ ಉಪದೇಶ ಮಾಡಿದ; ಹಾಗೆಯೇ ನಾವು ಬೇರೆಯವರಿಗೆ ಕರುಣೆಯಿಂದ ಹೇಳಿಕೊಡುತ್ತೇವೆ.

೪) ಅಂದರೆ ನಾವು ಕರುಣೆಯ ಬಳಿ ಬಂದಂತಾಯಿತು. ಬೌದ್ಧಧಮ್ಮದ ಪ್ರಕಾರ ಕರುಣೆ ಎಂದರೇನು?

ಪ್ರಜ್ಞೆಯು ಹೇಗೆ ನಮ್ಮ ಬೌದ್ಧಿಕ ಅಂದರೆ ನಮ್ಮ ಸ್ವಭಾವ ಅರ್ಥಮಾಡಿಕೊಳ್ಳುವ ಮಗ್ಗುಲನ್ನು ಒಳಗೊಳ್ಳುವ ಹಾಗೆಯೇ, ಕರುಣೆಯ ನಮ್ಮ ಭಾವನಾತ್ಮಕ ಅಥವಾ ಸಂವೇದನೆಯ ಮಗ್ಗುಲನ್ನು ಒಳಗೊಳ್ಳುತ್ತದೆ. ಪ್ರಜ್ಞೆಯಂತೆಯೇ ಕರುಣೆಯೂ ಮಾನವನಿಗೆ ಮಾತ್ರ ವಿಶಿಷ್ಟವಾದುದ್ದು. ಕರುಣೆಯಲ್ಲಿ ಎರಡು ಭಾಗಗಳಿವೆ: 'ಸಹ' ಅಂದರೆ ಜೊತೆಯಲ್ಲಿ ಮತ್ತು 'ಅನುಭೂತಿ' ಅಂದರೆ ಪ್ರಬಲವಾದ ಸಂವೇದನೆ. ಕರುಣೆ ಎಂದರೆ ಇದೇ. ನಾವು ಯಾರಾದರೂ ಸಂಕಷ್ಟದಲ್ಲಿರುವವರನ್ನು ಕಂಡಾಗ, ಅವರ ನೋವು ನಮ್ಮದೇ ಎಂದು ಭಾವಿಸುತ್ತೇವೆ; ಆದ್ದರಿಂದ ಅವರ ನೋವನ್ನು ಹೋಗಲಾಡಿಸಲು ಅಥವಾ ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ. ಇದೇ ಕರುಣೆ. ಅಂದರೆ, ಮನುಷ್ಯನಲ್ಲಿರುವ ಎಲ್ಲ ಶ್ರೇಷ್ಠ ಗುಣಗಳು ಹಾಗೂ ಕಷ್ಟಗಳನ್ನು ಹಂಚಿಕೊಳ್ಳುವುದು, ಇತರರಿಗೆ ಸಾಂತ್ವನ ಮಾಡುವ ಗುಣ, ಅನುಕಂಪೆ, ಇತರರ ಬಗ್ಗೆ ಕಾಳಜಿ ಮತ್ತು ಜಾಗೃತಿ–ಮುಂತಾದ ಬುದ್ಧತನದಿಂದ ಕೂಡಿದ ಗುಣಗಳೆಲ್ಲ ಕರುಣೆಯ ಅಭಿವ್ಯಕ್ತಿಗಳು. ಸಹಾನುಭೂತಿಪರ ವ್ಯಕ್ತಿಯಲ್ಲಿ ಇತರರ ಬಗ್ಗೆ ತೋರಿಸುವ ಎಚ್ಚರ ಮತ್ತು ಪ್ರೇಮಗಳು ತನ್ನ ಬಗ್ಗೆಯೇ ಹೊಂದಿರುವ ಎಚ್ಚರ ಮತ್ತು ಪ್ರೇಮಗಳಲ್ಲಿಯೇ ನೆಲೆಗೊಂಡಿರುತ್ತವೆ ಎಂಬುದನ್ನೂ ನೀವು ಗಮನಿಸಬಹುದು. ನಮ್ಮನ್ನು ನಾವು ಸರಿಯಾಗಿ ಅರ್ಥಮಾಡಿ ಕೊಂಡಾಗಲೇ ನಾವು ಇತರರನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಲು ಸಾಧ್ಯ. ನಮಗೆ ಯಾವುದು ಅತ್ಯಂತ ಸೂಕ್ತ ಎಂದು ತಿಳಿದುಕೊಳ್ಳುತ್ತೇವೆಯೋ ಆಗಲೇ ಇತರರಿಗೆ ಯಾವುದು ಅತ್ಯಂತ ಸೂಕ್ತವಾದದ್ದು ಎಂದು ತಿಳಿಯಲು ಸಾಧ್ಯ. ನಮ್ಮ ಬಗ್ಗೆ ನಾವು ಸಂವೇದನಾಪೂರ್ಣವಾಗಿದ್ದರೆ ಮಾತ್ರ ನಾವು ಇತರರ ಬಗ್ಗೆ ಸಂವೇದನೆಯನ್ನು ಹೊಂದಲು ಸಾಧ್ಯ. ಹಾಗಾಗಿ ಬೌದ್ಧಧಮ್ಮದ ಪ್ರಕಾರ, ಒಬ್ಬನ ಆಧ್ಯಾತ್ಮಿಕ ಬೆಳವಣಿಗೆಯು ಸಹಜವಾಗಿಯೇ

ಇತರರ ಕಲ್ಯಾಣದ ಬಗ್ಗೆ ಚಿಂತನೆಯನ್ನು ಅರಳಿಸುತ್ತದೆ. ಇದಕ್ಕೆ ಅತ್ಯುತ್ಕೃಷ್ಟ ನಿದರ್ಶನವೆಂದರೆ ಬುದ್ಧನ ಜೀವನವೇ. ತನ್ನ ಕಲ್ಯಾಣಕ್ಕಾಗಿ ಆತ ಆರು ವರ್ಷಗ್ಗಳ ಕಾಲ ಹೋರಾಡಿದ, ಆಮೇಲೆ ಆತ ಇಡೀ ಮಾನವ ಜನಾಂಗಕ್ಕೆ ಒಳಿತನ್ನು ಮಾಡಲು ಸಾಧ್ಯವಾಯಿತು.

೫) ಅಂದರೆ ನಮಗೆ ನಾವು ಉಪಕಾರ ಮಾಡಿಕೊಂಡರೆ ಮಾತ್ರ ಇತರರಿಗೆ ಉಪಕಾರ ಮಾಡಲು ಸಾಧ್ಯ ಎಂದು ಹೇಳಿದಂತಾಯಿತು. ಇದು ಸ್ವಾರ್ಥ ಎನ್ನಿಸಿಕೊಳ್ಳುವುದಿಲ್ಲವೇ?

ಪರಹಿತಚಿಂತನೆ, ಎಂದರೆ ತನ್ನ ಹಿತಕ್ಕಿಂತ ಇತರರ ಬಗ್ಗೆ ಕಾಳಜಿ ವಹಿಸುವುದು, ಸ್ವಾರ್ಥಕ್ಕೆ, ಎಂದರೆ ಇತರರಿಗಿಂತ ಮುಂಚೆ ನಮ್ಮ ಹಿತಸಾಧನೆ ಮಾಡುವುದಕ್ಕೆ ವಿರುದ್ಧವಾದುದು ಎಂಬ ಭಾವನೆ ನಮ್ಮಲ್ಲಿದೆ. ಬೌದ್ಧಧಮ್ಮವು ಇವೆರಡನ್ನೂ ಪ್ರತ್ಯೇಕ ಎಂದೇ ಪರಿಗಣಿಸುವುದಿಲ್ಲ, ಎರಡೂ ಪರಸ್ಪರ ಪೂರಕವಾದವು ಎಂದು ಭಾವಿಸುತ್ತದೆ. ಅಪ್ಪಟ ಸ್ವಹಿತಚಿಂತನೆಯು ಕ್ರಮೇಣವಾಗಿ ಪರಹಿತಚಿಂತನೆಯಾಗಿ ಪಕ್ವಗೊಳ್ಳುತ್ತದೆ; ಏಕೆಂದರೆ ಇತರರು ತನ್ನಿಂದ ಬೇರೆಯೇ ಅಲ್ಲ ಎಂಬ ಭಾವನೆ ಮೂಡುತ್ತದೆ. ಇದೇ ನಿಜವಾದ ಕರುಣೆ. ಬುದ್ಧನ ಉಪದೇಶಗಳೆಲ್ಲೆಲ್ಲ ಕರುಣೆ ಎಂಬುದು ರತ್ನವಿದ್ದ ಹಾಗೆ.

೬) ಬೌದ್ಧರು ಸಸ್ಯಹಾರಿಗಳಾಗಿರಬೇಕು, ಅಲ್ಲವೇ?

ಹಾಗೇನಿಲ್ಲ ಬುದ್ಧನೇ ಸಸ್ಯಾಹಾರಿಯಾಗಿರಲಿಲ್ಲ. ಸಸ್ಯಾಹಾರಿಗಳಾಗುವಂತೆ ಆತನೇನೂ ತನ್ನ ಶಿಷ್ಯರಿಗೆ ಬೋಧಿಸಲಿಲ್ಲ. ಇವತ್ತಿಗೂ, ಅನೇಕ ನಿಷ್ಠಾವಂತ ಬೌದ್ಧರು ಸಸ್ಯಾಹಾರಿಗಳಲ್ಲ.

೭) ಆದರೆ ಮಾಂಸ ಸೇವನೆ ಮಾಡಿದರೆ ಪ್ರಾಣಿಹತ್ಯೆಗೆ ನೀವು ಪರೋಕ್ಷವಾಗಿ ಕಾರಣರಾಗುವಿರಲ್ಲ? ಇದು ಮೊದಲ ಶೀಲವನ್ನೇ ಮುರಿದಂತಾಗುವುದಿಲ್ಲವೇ?

ಮಾಂಸ ಸೇವನೆ ಮಾಡಿದರೆ, ಪ್ರಾಣಿಹತ್ಯೆಗೆ ನಾವು ಪರೋಕ್ಷವಾಗಿಯೇ ಭಾಗಶಃವೂ ಜವಾಬ್ದಾರರಾಗುತ್ತೇವೆ ಎಂಬ ಮಾತು ಸಮಂಜಸವಾಗಿಯೇ ಇದೆ. ಆದರೆ ಈ ಮಾತು ಸಸ್ಯಾಹಾರಕ್ಕೂ ಅನ್ವಯಿಸುತ್ತದೆ. ನಿಮ್ಮ ಆಹಾರವಾಗಲು ಸಸ್ಯಗಳು ಸೊಂಪಾಗಿ ಬೆಳೆಯಬೇಕಾದರೆ ರೈತನು ಪೈರುಪಚ್ಚೆಗಳ ಮೇಲೆ ಕೀಟನಾಶಕವನ್ನೋ ವಿಷವಸ್ತುಗಳನ್ನೋ ಸಿಂಪಡಿಸಿರುತ್ತಾನಲ್ಲ. ಅಲ್ಲದೆ, ನಿಮ್ಮ ಬೆಲ್ಟ್ ಕೈಚೀಲ ಮುಂತಾದ ವಸ್ತುಗಳ ನಿರ್ಮಾಣಕ್ಕೆ ಬೇಕಾದ ಚರ್ಮಕ್ಕಾಗಿ, ಸಾಬೂನಿನ ಕೊಬ್ಬಿಗಾಗಿ ಹಾಗೂ ಇಂತಹ ಸಾವಿರಾರು ಉತ್ಪನ್ನಗಳಿಗೆ ಪ್ರಾಣಿಹತ್ಯೆ ಮಾಡಿರುತ್ತಾರಲ್ಲ? ಒಂದಲ್ಲ ಒಂದು ವಿಧದಲ್ಲಿ ಪರೋಕ್ಷವಾಗಿಯಾದರೂ ಇತರ ಪ್ರಾಣಿಗಳ ಸಾವಿಗೆ ಕಾರಣವಾಗದೆ ಬದುಕಲು ಸಾಧ್ಯವೇ ಇಲ್ಲ. ಇದು ಮೊದಲ ಉದಾತ್ತ ಸತ್ಯದ ನಿದರ್ಶನ. ಅಂದರೆ, ಸಾಮಾನ್ಯ ಜೀವನವು ಯಾತನಾಮಯ ಮತ್ತು ಅತೃಪ್ತಿಕರ ಎಂಬುದು. ಮೊದಲ ಶೀಲವನ್ನು ಅನುಸರಿಸಿದರೆ, ಪ್ರಾಣಿಹತ್ಯೆಗೆ ನೇರವಾಗಿ ಹೊಣೆಗಾರರಾಗುವುದನ್ನು ನೀವು ನಿವಾರಿಸಿಕೊಳ್ಳುತ್ತೀರಿ.

೮) ಮಹಾಯಾನ ಬೌದ್ಧರು ಮಾಂಸ ಸೇವನೆ ಮಾಡುವುದಿಲ್ಲ.

ಆ ಭಾವನೆ ಸರಿಯಲ್ಲ. ಚೈನಾ ದೇಶದ ಮಹಾಯಾನವು ಸಸ್ಯಾಹಾರಕ್ಕೆ ವಿಶೇಷ ಮಹತ್ವ ನೀಡಿದೆ, ನಿಜ. ಆದರೆ

ಬೌದ್ಧರು ಕೇವಲ ಸಸ್ಯಾಹಾರಿಗಳಾಗಿರಬೇಕೆ?

ಜಪಾನ್ ಮತ್ತು ಟಿಬೆಟ್‌ಗಳ ಸನ್ಯಾಸಿ-ಸನ್ಯಾಸಿಯರೂ ಸಾಮಾನ್ಯ ಜನರೂ ಸಾಧಾರಣವಾಗಿ ಮಾಂಸಾಹಾರಿಗಳೇ.

೯) ಆದರೂ ಬೌದ್ಧಧಮ್ಮಾವಲಂಬಿಯು ಸಸ್ಯಾಹಾರಿಯಾಗಿರಬೇಕೆಂಬುದೇ ನನ್ನ ಅಭಿಪ್ರಾಯ.

ಸ್ವಾರ್ಥಿಯೂ ಅಪ್ರಾಮಾಣಿಕನೂ ಕ್ಷುದ್ರನೂ ಆದ ಒಬ್ಬ ಅಪ್ಪಟ ಸಸ್ಯಾಹಾರಿ, ಪರಹಿತಚಿಂತಕನೂ ಪ್ರಾಮಾಣಿಕನೂ ಉದಾರಿಯೂ ಕರುಣಾಮಹಿಯೂ ಆದ ಮತ್ತೊಬ್ಬ ಮಾಂಸಾಹಾರಿ-ಈ ಇಬ್ಬರಲ್ಲಿ ಯಾರು ಉತ್ತಮ ಬೌದ್ಧನೆನಿಸಿಕೊಳ್ಳುತ್ತಾನೆ?

೧೦) ಯಾರು ಪ್ರಾಮಾಣಿಕನೂ ಕರುಣಾಮಹಿಯೂ ಆಗಿರುವನೋ ಅವನು.

ಉತ್ತರ : ಏಕೆ?

೧೧) ಏಕೆಂದರೆ ಅಂಥವನಿಗೆ ಒಳ್ಳೆಯ ಹೃದಯವಿರುತ್ತದೆ.

ಸರಿಯಾಗಿ ಹೇಳಿದಿರಿ. ಮಾಂಸ ತಿನ್ನುವವನಿಗೆ ಶುದ್ಧ ಹೃದಯವಿರಬಹುದು. ಹಾಗೆಯೇ ಮಾಂಸ ತಿನ್ನದವನಿಗೆ ಅಶುದ್ಧ ಹೃದಯವಿರಬಹುದು. ಬುದ್ಧನ ಉಪದೇಶದ ಪ್ರಕಾರ, ಮುಖ್ಯವಾದದ್ದು ಹೃದಯಶುದ್ಧತೆಯೇ ಹೊರತು ನೀವು ತಿನ್ನುವ ಆಹಾರವಲ್ಲ. ಯಾವತ್ತೂ ಮಾಂಸ ತಿನ್ನದೇ ಇರಲು ಅನೇಕ ಬೌದ್ಧರು ತುಂಬಾ ಎಚ್ಚರ ವಹಿಸುತ್ತಾರೆ; ಆದರೆ ತಮ್ಮ ಸ್ವಾರ್ಥ, ಅಪ್ರಾಮಾಣಿಕತೆ, ಕ್ರೌರ್ಯ ಅಥವಾ ಮಾತ್ಸರ್ಯಗಳ ಬಗ್ಗೆ ಅವರಿಗೆ ತುಸುವಾದರೂ ವಿಷಾದವಿಲ್ಲ. ತಮ್ಮ ಆಹಾರವನ್ನು ಬದಲಾಯಿಸುವುದು ಅವರಿಗೆ ಸುಲಭ. ಆದರೆ ತಮ್ಮ ಹೃದಯ ಪರಿವರ್ತನೆಯ ಬಗ್ಗೆ ಅವರು ಯೋಚಿಸುವುದಿಲ್ಲ. ಯಾಕೆಂದರೆ ಅದು ಕಷ್ಟಸಾಧ್ಯ.. ಆದ್ದರಿಂದ ನೀವು ಸಸ್ಯಾಹಾರಿಯೋ ಅಲ್ಲವೋ ಎಂಬುದಲ್ಲ ಮುಖ್ಯ. ಬೌದ್ಧಧಮ್ಮದ ಪ್ರಕಾರ ಅತ್ಯಂತ ಮುಖ್ಯವಾದದ್ದು ಮನಸ್ಸಿನ ಶುದ್ಧತೆ.

೧೨) ಮಂತ್ರತಂತ್ರ ಮತ್ತು ಭವಿಷ್ಯಗಳ ಬಗ್ಗೆ ಬುದ್ಧ ಹೇಳಿದ್ದೇನು?

ಭವಿಷ್ಯ ನುಡಿಯುವುದು, ರಕ್ಷಣೆಗಾಗಿ ತಾಯಿತಗಳನ್ನು ಕಟ್ಟಿಕೊಳ್ಳುವುದು, ಕಟ್ಟಡಗಳಿಗೆ ಅದೃಷ್ಟದ ನಿವೇಶನಗಳನ್ನು ನಿರ್ದಿಷ್ಟಪಡಿಸುವುದು, ಒಳ್ಳೆಯ ದಿನಗಳನ್ನು ಲೆಕ್ಕಾಚಾರ ಹಾಕಿ ನಿಗದಿಪಡಿಸುವುದು ಮುಂತಾದವನ್ನು ಬುದ್ಧನು ಕೆಲಸಕ್ಕೆ ಬಾರದ ಕಂದಾಚಾರಗಳೆಂದು ಹೇಳುತ್ತಾನೆ. ಅಂಥ ಆಚರಣೆಗಳನ್ನು ಅನುಸರಿಸುವುದನ್ನು ತನ್ನ ಶಿಷ್ಯರಿಗೆ ಖಡಾಖಂಡಿತವಾಗಿ ನಿಷೇಧಿಸುತ್ತಾನೆ. ಇವನ್ನೆಲ್ಲ ಬುದ್ಧನು 'ಕೀಳು ಕಲೆ'ಗಳು ಎಂದು ಕರೆಯುತ್ತಾನೆ.

'ಭಾವುಕರು ಕೊಟ್ಟ ಆಹಾರವನ್ನು ತಿನ್ನುವ ಕೆಲವು ಮತಧಾರ್ಮಿಕ ವ್ಯಕ್ತಿಗಳು ಹಸ್ತಸಾಮುದ್ರಿಕ, ದೈವಸಂಜ್ಞೆ, ಕನಸುಗಳಿಗೆ ಅರ್ಥ ಹೇಳುವುದು, ಮುಂತಾದವುಗಳ ಒಳ್ಳೆ ಅಥವಾ ಕೆಟ್ಟ ಅದೃಷ್ಟವನ್ನು ವಿವರಿಸಿ, ಒಳ್ಳೆಯ ಅದೃಷ್ಟಕ್ಕಾಗಿ ದೇವತೆಗಳನ್ನು ಪ್ರಾರ್ಥಿಸಿಕೊಳ್ಳುವ, ಕಟ್ಟಡಗಳಿಗೆ ಒಳ್ಳೆಯ ನಿವೇಶನಗಳನ್ನು ತೋರಿಸುವ...ಮೂಲಕ ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುತ್ತಾರೆ. ಭಿಕ್ಕು ಗೋತಮನು ಅಂತಹ ಕೀಳು ಕಲೆಗಳಿಂದ, ಅಂತಹ ತಪ್ಪು ಜೀವನೋಪಾಯಗಳಿಂದ ದೂರ ವಿರುತ್ತಾನೆ.

-ಡಿಐ ೯-೧೨

೧೩) ಆದರೂ ಏಕೆ ಹಲವರು ಅಂತಹುಗಳನ್ನು ಅನುಸರಿಸುತ್ತಾರೆ, ಅವುಗಳಲ್ಲಿ ನಂಬಿಕೆಯಿಡುತ್ತಾರೆ?

ದುರಾಸೆ, ಭಯ ಮತ್ತು ಅಜ್ಞಾನಗಳಿಂದಾಗಿ. ಬುದ್ಧನ ಉಪದೇಶಗಳನ್ನು ಅರ್ಥಮಾಡಿಕೊಂಡ ಜನರು, ಕಾಗದದ ಚೂರುಗಳು, ಲೋಹಗಳ ತುಂಡುಗಳು ಹಾಗೂ ಕೆಲವು ಮಣಮಣಿಸುವ ಮಂತ್ರಗಳು ಇವುಗಳಿಗಿಂತ ಶುದ್ಧ ಹೃದಯವು ಚೆನ್ನಾಗಿ ರಕ್ಷಣೆಯೊದಗಿಸುವುದೆಂದು ಅರಿತುಕೊಳ್ಳುತ್ತಾರೆ; ಅಂತಹವುಗಳನ್ನು ಅವರು ಅವಲಂಬಿಸುವುದೇ ಇಲ್ಲ. ಬುದ್ಧನ ಉಪದೇಶಗಳ ಪ್ರಕಾರ, ರಕ್ಷಣೆ ಮತ್ತು ನಿಜವಾದ ಏಳಿಗೆಯು ಪ್ರಾಪ್ತವಾಗುವುದು ಪ್ರಾಮಾಣಿಕತೆ, ಕರುಣೆ, ತಿಳುವಳಿಕೆ, ತಾಳ್ಮೆ, ಕ್ಷಮಾಗುಣ, ಔದಾರ್ಯ, ನಿಷ್ಠೆ ಮುಂತಾದ ಒಳ್ಳೆಯ ಗುಣಗಳಿಂದ ಮಾತ್ರ.

೧೪) ಆದರೆ ಕೆಲವು ತಾಯಿತಗಳು ಪರಿಣಾಮಕಾರಿ ಯಾಗುವುದಲ್ಲ?

ತಾಯಿತಗಳನ್ನು ಮಾರುವ ಒಬ್ಬ ವ್ಯಕ್ತಿ ನನಗೆ ಗೊತ್ತು. ತನ್ನ ತಾಯಿತಗಳಿಂದ ಅದೃಷ್ಟದ ಬಾಗಿಲು ತೆರೆಯುತ್ತದೆ. ಸಮೃದ್ಧಿ ಉಂಟಾಗುತ್ತದೆಂದು ಆತ ಕೊಚ್ಚಿಕೊಳ್ಳುತ್ತಾನೆ; ಮೂರು ಸಂಖ್ಯೆಗಳನ್ನು ಆಯ್ಕೆ ಮಾಡಿಕೊಳ್ಳಲೂ ಆತ ಹೇಳುತ್ತಾನೆ. ಅವನು ಹೇಳುವುದು ನಿಜವಾದರೆ, ತಾನೇ ಏಕೆ ಕೋಟ್ಯಾಧಿಪತಿಯಾಗಲು ಸಾಧ್ಯವಾಗಲಿಲ್ಲ? ಈ ತಾಯಿತಕ್ಕೆ ಅಷ್ಟು ಪ್ರಭಾವವಿರುವುದಾದರೆ, ಪ್ರತಿ ವಾರವೂ ತಾನೇ ಏಕೆ ಲಾಟರಿಯಲ್ಲಿ ಜಯಶೀಲನಾಗಲಿಲ್ಲ? ಅವನಿಗಿರುವ ಅದೃಷ್ಟವೆಂದರೆ ಅವನ ತಾಯಿತಗಳನ್ನು ಕೊಳ್ಳುವ ಮೂರ್ಖ ಜನರಿರುವುದು.

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ

ಬುದ್ಧ ಜೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ.ನರಸೀಪುರ ತಾಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು
ಬೆಲೆ ರೂ. ೩೦/-

ಮಂತ್ರ-ತಂತ್ರ, ಭವಿಷ್ಯ, ಅದೃಷ್ಟ ಮತ್ತು ವಿಧಿ?

With Best Compliments From :



ALANKAR PEARL PLAZA SHOP OWENR'S ASSOCIATION

 # 410, 2nd Floor,
Alankar Pearl Plaza,
K.G. Road,
Bangalore- 560 009

With Best Compliments From :



A WELL WISHER

FROM
MYSORE